ಸೋಮವಾರ, ಆಗಸ್ಟ್ 25, 2025 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗಣಪ ಬಂದ...

ಹಬ್ಬದ ಪ್ರಯುಕ್ತ ಕೋಲ್ಕತ್ತದಲ್ಲಿ ಮಹಿಳೆಯೊಬ್ಬರು ಗಣೇಶ ಮೂರ್ತಿಯನ್ನು ಭಾನುವಾರ ಮನೆಗೆ ಕೊಂಡೊಯ್ದರು

ಕೋಚ್ ಆದ 'ದಾದಾ'

ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರು 2026ರಲ್ಲಿ ನಡೆಯುವ ದಕ್ಷಿಣ ಆಫ್ರಿಕಾ ಟಿ20 ಲೀಗ್‌ನಲ್ಲಿ ಆಡುವ ಪ್ರಿಟೋರಿಯಾ ಕ್ಯಾಪಿಟಲ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿ ಭಾನುವಾರ ನೇಮಕಗೊಂಡಿದ್ದಾರೆ

ಇಂದಿನಿಂದ ಮನೋರಂಜನೆಯ ಹೊಸ ಅಧ್ಯಾಯಕ್ಕೆ ಮುನ್ನುಡಿ

Z ಪವರ್

ಭವಿಷ್ಯದರ್ಶನ
ಪ್ರತಿದಿನ | ಬೆಳಗ್ಗೆ 7.30ಕ್ಕೆ

ರಾಜಕುಮಾರಿ
ಪ್ರತಿದಿನ | ರಾತ್ರಿ 7ಕ್ಕೆ

ಗೌರಿ
ಪ್ರತಿದಿನ | ರಾತ್ರಿ 7.30ಕ್ಕೆ

ಪ್ರತಿದಿನ ರಾತ್ರಿ 8ಕ್ಕೆ

ಪ್ರತಿದಿನ | ರಾತ್ರಿ 8.30ಕ್ಕೆ

ಹಳ್ಳಿ ಪವರ್
ಆಗಸ್ಟ್ 30 ರಿಂದ
ಪ್ರತಿದಿನ | ರಾತ್ರಿ 9ಕ್ಕೆ

ಹೊಸ ಚಾನೆಲ್, ಹೊಸ Vibes!!!
Powerful Entertainmentನ
ಅಪ್‌ಡೇಟ್ಸ್‌ಗಾಗಿ
QR Code Scan ಮಾಡಿ

CHANNEL PARTNERS

BHIMA RKG ASHWASURYA REALITIES

ಜೀ ಪವರ್ ನಿಮಗಾಗಿ ಕೆಳಗಿನ ನೆಟ್‌ವರ್ಕ್‌ಗಳಲ್ಲಿ ಲಭ್ಯವಿದೆ

hathway	GTPL	KCL	UDIGITAL	DEN	NXT DIGITAL	DIGITAL	SUN DIRECT	Digital TV	TATA PLAY
197	44	21	121	732	878	22	280	975	1634

ಚಿಟಿಕೆ ಸುದ್ದಿ

ಹೆದ್ದಾರಿ ಮೇಲ್ಸೇತುವೆ ಕೆಳಭಾಗದ ತಡೆಗೋಡೆ ಕುಸಿತ

ಮೇಲ್ಸೇತುವೆ ಕೆಳಭಾಗದ ತಡೆಗೋಡೆ ಕುಸಿದಿರುವುದನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ವೀಕ್ಷಿಸಿದರು

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಉತ್ತಂಬಳ್ಳಿ ಬಳಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ–948ರ ಮೇಲ್ಸೇತುವೆ ಕೆಳಭಾಗದ ತಡೆಗೋಡೆ ಭಾನುವಾರ ಕುಸಿದಿದೆ. ಪರಿಣಾಮ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ತಿಳಿಸಲಾಗಿದೆ.

ಈ ಹೆದ್ದಾರಿಯು ಬೆಂಗಳೂರು, ಮೈಸೂರು, ತಮಿಳುನಾಡಿಗೆ ಸಂಪರ್ಕ ಕಲ್ಪಿಸುತ್ತದೆ. ಬೆಳಿಗ್ಗೆ 10.55ರ ವೇಳೆಗೆ ಕುಸಿಯಿತು. ಸಂಚಾರ ನಿರ್ಬಂಧಿಸಿ ರಸ್ತೆಗೆ ಅಡ್ಡಲಾಗಿ ಹಗ್ಗ ಕಟ್ಟಿ ಎಚ್ಚರಿಕೆ ಫಲಕ ಅಳವಡಿಸಲಾಯಿತು.

ಶಾಸಕ ಎ.ಆರ್.ಕೃಷ್ಣಮೂರ್ತಿ ಸ್ಥಳಕ್ಕೆ ಭೇಟಿ ನೀಡಿದ್ದು, 'ಗುತ್ತಿಗೆದಾರರು, ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಸೇತುವೆ ಪುನರ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಜಿಲ್ಲಾಧಿಕಾರಿಗೆ ಒತ್ತಾಯಿಸಿದರು.

ಸಂಗೀತ, ನೃತ್ಯ ಪರೀಕ್ಷೆ ಫಲಿತಾಂಶ ಪ್ರಕಟ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ನಡೆಸಿದ 2024–25ನೇ ಸಾಲಿನ ರಾಜ್ಯಮಟ್ಟದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಲಾಗಿದೆ. ಜೂನಿಯರ್, ಸೀನಿಯರ್ ವಿದ್ವತ್‌ಪೂರ್ವ ಹಾಗೂ ವಿದ್ವತ್ ಅಂತಿಮ ಶಾಸ್ತ್ರ ಪತ್ರಿಕೆ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಫಲಿತಾಂಶ ಇದಾಗಿದ್ದು, ವಿ.ವಿಯ ಜಾಲತಾಣದಲ್ಲಿ (https://musicuniversity.ac.in/) ವೀಕ್ಷಿಸಬಹುದಾಗಿದೆ. ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರ ವಿತರಣೆ ಸಮಾರಂಭವನ್ನು ಆ.30ರಂದು ಬೆಳಿಗ್ಗೆ 11.30ಕ್ಕೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಷರತ್ತುಗಳಿಗೆ ಮಣಿದ ಕೆಐಒಸಿಎಲ್

ದೇವದಾರಿ ಗಣಿ ದಕ್ಕಿಸಿಕೊಳ್ಳಲು ಪ್ರಯತ್ನ • ಸಿಇಸಿ ಶಿಫಾರಸುಗಳಿಗೆ ಸಮ್ಮತಿ

• ಹರಿಶಂಕರ್ ಆರ್.

ಬಳ್ಳಾರಿ: ಸಂಡೂರು ತಾಲ್ಲೂಕಿನ ದೇವದಾರಿ ಕಬ್ಬಿಣದ ಅದಿರು ಗಣಿಯ ಅರಣ್ಯ ಗುತ್ತಿಗೆ ಒಪ್ಪಂದವನ್ನು ಶತಾಯಗತಾಯ ಕಾರ್ಯಗತಗೊಳಿಸಲು ನಿರ್ಧರಿಸಿರುವ 'ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್)' ರಾಜ್ಯ ಅರಣ್ಯ ಇಲಾಖೆಯ ಬೇಡಿಕೆಗಳಿಗೆ ಸಮ್ಮತಿ ಸೂಚಿಸಿದೆ.

ಸಂಡೂರಿನ ಸ್ವಾಮಿ ಮಲೈ ಅರಣ್ಯದ ಒಟ್ಟು 338 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಕೆಐಒಸಿಎಲ್ ಉದ್ದೇಶಿಸಿದೆ. ದಟ್ಟಅರಣ್ಯದಲ್ಲಿರುವ ಈ ಗಣಿಗೆ ಈಗಾಗಲೇ ಕೇಂದ್ರ ಅರಣ್ಯ ಇಲಾಖೆಯಿಂದ ಅಂತಿಮ ಹಂತದ ಅನುಮೋದನೆ ಪಡೆದಿದೆ.

ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖದಲ್ಲಿ ಗಣಿಗಾರಿಕೆ ನಡೆಸಿದ್ದ ಕೆಐಒಸಿಎಲ್, ಅಲ್ಲಿ ಆಗಿದ್ದ ಅರಣ್ಯ ನಾಶಕ್ಕೆ ಸಂಬಂಧಿಸಿ ಕೇಂದ್ರದ ಉನ್ನತಾಧಿಕಾರ ಸಮಿತಿ (ಸಿಇಸಿ) ಶಿಫಾರಸು ಜಾರಿಗೊಳಿಸುವವರಿಗೆ ಸಂಡೂರಿನಲ್ಲಿ ಅರಣ್ಯ ಭೂಮಿ ಹಸ್ತಾಂತರಿಸದೇ ಇರಲು ರಾಜ್ಯ ಅರಣ್ಯ ಇಲಾಖೆ ನಿರ್ಧರಿಸಿತ್ತು.

ಈ ನಡುವೆ ಸರ್ಕಾರದೊಂದಿಗೆ ಎರಡು ಸಭೆಗಳನ್ನು ನಡೆಸಿರುವ ಕೆಐಒಸಿಎಲ್ ಮತ್ತು ಕೇಂದ್ರ ಉಕ್ಕು ಸಚಿವಾಲಯ, ಸಿಇಸಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸುವುದಾಗಿ ಮತ್ತು ರಾಜ್ಯ ಅರಣ್ಯ ಇಲಾಖೆ ಪ್ರಸ್ತಾಪಿಸಿರುವ ಹೆಚ್ಚುವರಿ ವಿಷಯಗಳನ್ನು ಪಾಲಿಸುವುದಾಗಿ ವಾಗ್ದಾನ (ಅಂಡರ್ ಟೇಕಿಂಗ್) ನೀಡಿದೆ.

'ಲಕ್ಯಾ ಅಣೆಕಟ್ಟೆ ಎತ್ತರ ಹೆಚ್ಚಿಸಿದ್ದರಿಂದ ಆದ 340 ಹೆಕ್ಟೇರ್ ಅರಣ್ಯ ಭೂಮಿ ಮುಳುಗಡೆ ಕುರಿತು ಸಿಇಸಿ ಶಿಫಾರಸುಗಳನ್ನು ಪಾಲಿಸಲಾಗುವುದು, ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿನ, ಕೆಐಒಸಿಎಲ್ ಒಡೆತನದ 114.3 ಹೆಕ್ಟೇರ್ ಭೂಮಿ ಮತ್ತು ಅಲ್ಲಿನ ನಿರ್ಮಾಣಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗುವುದು, 53.82 ಎಕರೆ ಭೂಮಿ ಬಳಕೆಗೆ ಸಂಬಂಧಿಸಿದ ಅರಣ್ಯ ಇಲಾಖೆ ಸೂಚನೆ ಪಾಲಿಸಲಾಗುವುದು' ಎಂದು ಕೆಐಒಸಿಎಲ್ ಸರ್ಕಾರಕ್ಕೆ ಸಲ್ಲಿಸಿರುವ ಪತ್ರದಲ್ಲಿ ಹೇಳಿದೆ.

ದೇವದಾರಿ ಗಣಿಗಾರಿಕೆಯಿಂದ 99,330 ಮರಗಳು ನಾಶವಾಗಲಿವೆ ಎಂದು ಅರಣ್ಯ ಇಲಾಖೆ ಹೇಳಿದೆ.

ದೇವದಾರಿ ಗಣಿಗೆ ಇಲ್ಲ ದಾರಿ: ಸಂಡೂರಿನ ಸ್ವಾಮಿ ಮಲೈ ಅರಣ್ಯದ 338 ಹೆಕ್ಟೇರ್ ಪ್ರದೇಶದ ದೇವದಾರಿ ಗಣಿಗೆ ಕೆಐಒಸಿಎಲ್ ಬಹುತೇಕ ಎಲ್ಲ ಅನುಮತಿ ಪಡೆದಿದೆ. ಆದರೆ, ಗಣಿಗೆ ತಲುಪಲು ರಸ್ತೆಗಳೇ ಇಲ್ಲ. ಗಣಿಗೆ ತಲುಪಲು ಅರಣ್ಯ ಭೂಮಿ ಬಳಸಲು ಇಲಾಖೆಗೆ ಆಗಸ್ಟ್ 20ರಂದು ಅರ್ಜಿ ಸಲ್ಲಿಸಿದೆ.

ಪ್ರಧಾನಿ ಅಂಗಳಕ್ಕೆ ವಿವಾದ: ಕೆಐಒಸಿಎಲ್‌ಗೆ ಅರಣ್ಯ ಭೂಮಿ ಹಸ್ತಾಂತರ ಮಾಡುವ ವಿಷಯದಲ್ಲಿ ಉಕ್ಕು ಸಚಿವಾಲಯ ಮತ್ತು ರಾಜ್ಯ ಸರ್ಕಾರದ ನಡುವೆ ಉದ್ಭವಿಸಿರುವ ವಿವಾದವು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆಯುವ 'ಪ್ರಗತಿ' ಸಭೆಯಲ್ಲಿ ಇತ್ಯರ್ಥವಾಗಬೇಕಿದೆ.

> **ಕುದುರೆಮುಖದಲ್ಲಿನ ಅರಣ್ಯ ನಾಶವನ್ನು ಸರಿಪಡಿಸುವುದಾಗಿ ಕೆಐಒಸಿಎಲ್ ಹೇಳುತ್ತಿದೆ. ಆದರೆ, ಸಂಡೂರಿನಲ್ಲಿ ಹೊಸದಾಗಿ ಒಂದು ಲಕ್ಷ ಮರ ಕಡಿಯಲು ಮುಂದಾಗಿದೆ**
> **ಶ್ರೀಶೈಲ ಆಲದಹಳ್ಳಿ,** ಮುಖಂಡ, ಜನಸಂಗ್ರಾಮ ಪರಿಷತ್

ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಅರಣ್ಯದಲ್ಲಿರುವ ದೇವದಾರಿ ಗಣಿ

ಏಕಿಷ್ಟು ತರಾತುರಿ?

ಕೆಐಒಸಿಎಲ್ 50 ವರ್ಷಗಳ ಅವಧಿಗೆ ದೇವದಾರಿ ಗಣಿಯನ್ನು ಗುತ್ತಿಗೆಗೆ ಪಡೆದಿದೆ. ಗುತ್ತಿಗೆ ಕರಾರು ನೋಂದಣಿಯಾದ ಎರಡು ವರ್ಷಗಳ ಒಳಗೆ ಕಂಪನಿ ನಿರ್ದಿಷ್ಟ ಪ್ರದೇಶದಲ್ಲಿ ಗಣಿಗಾರಿಕೆ ಆರಂಭಿಸಿ, ಅದಿರು ಉತ್ಪಾದನೆ ಮಾಡಬೇಕಿತ್ತು.

ಎಂಎಂಡಿಆರ್ ಕಾಯ್ದೆ ಪ್ರಕಾರ ಗಣಿ ಗುತ್ತಿಗೆ 2025ರ ಜ.17ಕ್ಕೆ ಅಂತ್ಯವಾಗಬೇಕಾಗಿತ್ತು. ಕಂಪನಿ 2024ರ ಡಿ. 30ರಂದು ಗುತ್ತಿಗೆ ನವೀಕರಿಸಿಕೊಂಡಿದೆ. ಆ ಪ್ರಕಾರ, ಡಿಸೆಂಬರ್ 30ರ ಒಳಗಾಗಿ ಕೆಐಒಸಿಎಲ್ ದೇವದಾರಿ ಗಣಿ ಕಾರ್ಯಾಚರಣೆ ಆರಂಭಿಸಬೇಕಾದ ಅನಿವಾರ್ಯ ಇದೆ. ಇಲ್ಲವಾದರೆ, ಗುತ್ತಿಗೆ ಒಪ್ಪಂದ ರದ್ದಾಗುವ ಸಾಧ್ಯತೆ ಇದೆ.

ದಸರಾ ಉದ್ಘಾಟನೆ ಆಹ್ವಾನಕ್ಕೆ ವಿರೋಧ • ಸಿ.ಎಂ ಪರಂಪರೆ ಹಾಳು ಮಾಡುತ್ತಿದ್ದಾರೆ: ಪ್ರತಾಪ

ಚಾಮುಂಡಿ ದೇವರೆಂದು ಬಾನು ಒಪ್ಪುತ್ತಾರಾ?

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಸರಾ ಉದ್ಘಾಟನೆಗೆ ಹಿಂದೂ ಧಾರ್ಮಿಕ ನಂಬಿಕೆ ವಿರೋಧಿಗಳನ್ನೇ ಏಕೆ ಆಹ್ವಾನಿಸುತ್ತಾರೆ? ಈ ಮೂಲಕ ಅವರು ಮಹಾರಾಜರ ಪರಂಪರೆಯನ್ನು ಹಾಳು ಮಾಡುತ್ತಿದ್ದಾರೆ' ಎಂದು ಮಾಜಿ ಸಂಸದ ಪ್ರತಾಪ ಸಿಂಹ ಆರೋಪಿಸಿದರು.

ಭಾನುವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಬಾನು ಮುಷ್ತಾಕ್ ಬಗ್ಗೆ ನಮಗೆ ಹೆಮ್ಮೆ ಇದೆ. ಅವರು ಮುಸ್ಲಿಂ ಎಂಬ ಕಾರಣಕ್ಕೆ ನಾನು ಅಪಸ್ವರ ಎತ್ತುತ್ತಿಲ್ಲ. ಅವರ ಸಾಹಿತ್ಯದ ಬಗ್ಗೆ ಗೌರವವಿದೆ. ಆದರೆ, ದಸರಾ ಜಾತ್ಯತೀತತೆಯ ಪ್ರತೀಕವಲ್ಲ. ಇದು ಧಾರ್ಮಿಕ ಆಚರಣೆ' ಎಂದು ಪ್ರತಿಪಾದಿಸಿದರು.

'ದಸರೆಯಲ್ಲಿ ದುರ್ಗಾ ಪೂಜೆ, ನವರಾತ್ರಿ ಉತ್ಸವ ಇರುತ್ತದೆ. ಯದುವಂಶವು ಆರಂಭಿಸಿದ ಧಾರ್ಮಿಕ ಹಬ್ಬವಿದು. ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಚಾಲನೆ ಕೊಡಲಾಗುತ್ತದೆ. ಬಾನು ಅವರಿಗೆ ಚಾಮುಂಡೇಶ್ವರಿ ಮೇಲೆ ನಂಬಿಕೆ ಇದೆಯೇ? ನಾನು ಚಾಮುಂಡಿ ಭಕ್ತೆ ಎಂದು ಹೇಳಿದ್ದಾರೆಯೇ?' ಎಂದು ಕೇಳಿದರು.

'ಧಾರ್ಮಿಕ ಸಂಕೇತವಾದ ದಸರಾ ಉದ್ಘಾಟನೆಗೆ ಬಾನು ಹೇಗೆ ಸೂಕ್ತ ವ್ಯಕ್ತಿ ಎಂಬುದೇ ನನ್ನ ಪ್ರಶ್ನೆ. ಅಲ್ಲಾ ಬಿಟ್ಟರೆ ಬೇರೆ ದೇವರಿಲ್ಲ ಎನ್ನುತ್ತದೆ ಇಸ್ಲಾಂ. ಹಾಗಾದರೆ ಬಾನು ಚಾಮುಂಡಿಯನ್ನು ದೇವರೆಂದು ಒಪ್ಪುತ್ತಾರೆ? ಅವರ ಧರ್ಮ ಒಪ್ಪುತ್ತದೆಯೇ? ಎಂದು ಪ್ರಶ್ನಿಸಿದರು.

'ಕಾಂತಾರ' ಚಲನಚಿತ್ರದ ನಟನೆಗಾಗಿ ರಿಷಬ್ ಶೆಟ್ಟಿ ಅವರಿಗೆ ರಾಷ್ಟ್ರೀಯ ಪ್ರಶಸ್ತಿ ಬಂತು. ಅವರನ್ನು ದಸರಾ ಉದ್ಘಾಟನೆಗೆ ಕರೆಯುತ್ತೀರಾ? ಪ್ರಶಸ್ತಿ ಬಂದವರನ್ನೆಲ್ಲಾ ಆಹ್ವಾನಿಸಲು ಆಗುತ್ತದಾ' ಎಂದು ಪ್ರಶ್ನಿಸಿದರು.

'ಬರಗೂರು ರಾಮಚಂದ್ರಪ್ಪ ದಸರಾ ಉದ್ಘಾಟನೆಗೆ ಬಂದು, ನಾನು ದೀಪ ಹಚ್ಚುವುದಿಲ್ಲ' ಎಂದಿದ್ದರು. ಇದು ದಸರಾ ಮಹೋತ್ಸವಕ್ಕೆ ಮಾಡಿದ್ದ ಅಪಮಾನವಲ್ಲವೇ?' ಎಂದು ಕೇಳಿದರು.

ಬಾನುಗೆ ಆಹ್ವಾನ, ಯತ್ನಾಳ ತಕರಾರು

ವಿಜಯಪುರ: 'ಬಾನು ಮುಷ್ತಾಕ್ ಅವರು ನಾಡದೇವತೆ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಸಲ್ಲಿಸಿ, ದೀಪ ಬೆಳಗುವುದರ ಮೂಲಕ ದಸರಾ ಉದ್ಘಾಟಿಸುವುದು, ಅವರ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾಗಿದೆ' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಭಾನುವಾರ ಪೋಸ್ಟ್ ಮಾಡಿರುವ ಅವರು, ಆದರೆ ಲೇಖಕಿ ಹಾಗೂ ಹೋರಾಟಗಾರ್ತಿಯಾಗಿ ನಾನು ವೈಯಕ್ತಿಕವಾಗಿ ಗೌರವಿಸುತ್ತೇನೆ ಎಂದಿದ್ದಾರೆ.

'ಇಸ್ಲಾಂ ಮೂರ್ತಿ ಪೂಜೆ ಧಿಕ್ಕರಿಸಿ ಒಂದು ದೇವರು, ಒಂದು ಗ್ರಂಥವನ್ನು ಒಪ್ಪಿಕೊಳ್ಳುತ್ತದೆ ಎಂಬ ನಂಬಿಕೆಯಲ್ಲಿ ಅವರಿನ್ನೂ ಇದ್ದಾರೆಯೇ ಅಥವಾ ಎಲ್ಲ ಮಾರ್ಗಗಳೂ ಅಂತಿಮವಾಗಿ ಮೋಕ್ಷಕ್ಕೆ ದಾರಿ ಮಾಡಿಕೊಡುತ್ತವೆ ಎಂದು ನಂಬುತ್ತಾರೆಯೇ ಎಂಬ ಬಗ್ಗೆ ಅವರು ಸ್ಪಷ್ಟನೆ ನೀಡಬೇಕು' ಎಂದಿದ್ದಾರೆ.

'ಈ ಕುರಿತು ಸ್ಪಷ್ಟತೆ ಇಲ್ಲದೆ, ದಸರಾ ಉತ್ಸವ ಉದ್ಘಾಟಿಸುವುದು ಸರಿಯಲ್ಲ. ಆದರೆ, ದಸರಾ ಭಾಗವಾಗಿ ನಡೆಯುವ ಸಾಂಸ್ಕೃತಿಕ ಅಥವಾ ಕವಿಗೋಷ್ಠಿಯಂತಹ ಸಾಹಿತ್ಯ ಕಾರ್ಯಕ್ರಮಗಳನ್ನು ಉದ್ಘಾಟಿಸಲು ಅತಿಥಿಯಾಗಿ ಅವರು ಭಾಗವಹಿಸಬಹುದು' ಯತ್ನಾಳ ಅಭಿಪ್ರಾಯಪಟ್ಟಿದ್ದಾರೆ.

> **ಜಾತಿ ಮುಖ್ಯವಲ್ಲ, ಸಾಧನೆ ಮುಖ್ಯ. ದಸರಾ ಮಹೋತ್ಸವ ಉದ್ಘಾಟನೆ ವಿಷಯದಲ್ಲಿ ಜಾತಿ–ಧರ್ಮ ತರುವುದು ಶೋಭೆಯಲ್ಲ**
> **ಎನ್.ಚಲುವರಾಯಸ್ವಾಮಿ,** ಕೃಷಿ ಸಚಿವ

> **'ಬಾನು ಮುಷ್ತಾಕ್ ಅವರನ್ನು ದಸರಾ ಮಹೋತ್ಸವದ ಉದ್ಘಾಟನೆಗೆ ಆಹ್ವಾನಿಸಬಾರದು ಎಂದು ಸಂವಿಧಾನದಲ್ಲಿ ಇದೆಯೇ? ಎಲ್ಲದಕ್ಕೂ ಟೀಕೆ ಮಾಡುವುದು ಸರಿಯಲ್ಲ**
> **ಸಂತೋಷ ಲಾಡ್,** ಕಾರ್ಮಿಕ ಸಚಿವ

> **ಹಿಂದೂ ಧಾರ್ಮಿಕ ನಂಬಿಕೆ ಒಪ್ಪದ, ಅನ್ಯ ಮತೀಯ ಮಹಿಳೆಯಿಂದ ದಸರಾ ಉದ್ಘಾಟಿಸಲು ಮುಂದಾದ ರಾಜ್ಯ ಸರ್ಕಾರವು ಹಿಂದೂಗಳ ಭಾವನೆಗಳೊಂದಿಗೆ ಚೆಲ್ಲಾಟವಾಡುತ್ತಿದೆ**
> **ಯಶ್‌ಪಾಲ್ ಸುವರ್ಣ,** ಉಡುಪಿ ಶಾಸಕ

ಸುದ್ದಿ 2 ನಿಮಿಷ

'ದಲಿತ ಒಡಲು ಇಂದು ಪ್ರಕ್ಷುಬ್ಧ'

ಮೈಸೂರು: 'ಪ್ರಸ್ತುತ ಸನ್ನಿವೇಶ, ಒಳ ಮೀಸಲಾತಿಯ ವಿದ್ಯಮಾನಗಳನ್ನು ಗಮನಿಸಿದಾಗ ದಲಿತ ಒಡಲು ಪ್ರಕ್ಷುಬ್ಧವಾಗಿದೆ, ದೋಷವಿದೆ ಎನಿಸುತ್ತಿದೆ' ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

ಭಾನುವಾರ ಇಲ್ಲಿ ಜೋಳಿಗೆ ಪ್ರಕಾಶನ ಮತ್ತು ಅಭ್ಯಾಸಿ ಟ್ರಸ್ಟ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಂಜು ಕೋಡಿಉಗನೆ ಅವರ 'ಬೋಧಿ ವೃಕ್ಷದ ಹಾಡು' ಕವನಸಂಕಲನ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಒಂದೆಡೆ ಸಿ.ಎಂ ಫ್ಲೆಕ್ಸ್‌ಗೆ ಹಾಲಿನ ಅಭಿಷೇಕದಿಂದ ಒಳಮೀಸಲಾತಿ ವಿಜೃಂಭಣೆ, ಇನ್ನೊಂದೆಡೆ 'ಕೇಪಮಾರಿ' ಸಮುದಾಯದ ಮಹಿಳೆಯಿಂದ ಧಿಕ್ಕಾರ. ಅಂದುಕೊಂಡಂತೆ ಯಾವುದೂ ಇಲ್ಲ ಎನಿಸುತ್ತದೆ' ಎಂದರು.

'ದಲಿತರ ಅಸ್ತಿತ್ವವು ಬೇರೆ ದಿಕ್ಕಿಗೆ ಚಲಿಸಿದೆ. ಇವತ್ತು ನಾವು ಕಲ್ಮಶ ಇಲ್ಲದ ಒಡಲಾಗಿಲ್ಲ. ಒಂದು ತುತ್ತನ್ನು ಹಂಚಿಕೊಳ್ಳುವ ಪರಿಸ್ಥಿತಿಗೆ ಏಕೆ ಬಂದಿದ್ದೇವೆ ಎಂದು ಮನಗಾಣಬೇಕಿದೆ' ಎಂದು ಅಭಿಪ್ರಾಯಪಟ್ಟರು.

'ಕಳೆದ 50 ವರ್ಷ ದಲಿತರು ಒಂದೇ ಛತ್ರಿಯಡಿ ಹೋರಾಡಿದರು. ಅಸ್ತಿತ್ವವೀಗ ಬೇರೆ ದಿಕ್ಕಿನ ಕಡೆ ಚಲಿಸುತ್ತಿದೆ. ಇಷ್ಟು ದಿನ ನಾವುಗಳೆಲ್ಲ ಭ್ರಮೆಯಲ್ಲಿದ್ದೆವು. 50 ವರ್ಷಗಳ ದಲಿತ ಪ್ರಜ್ಞೆ, ಸಂವೇದನೆಯು ಈಗಿನ ಸಮಕಾಲೀನ ಸಂದರ್ಭದಲ್ಲಿ ಬೇರೆ ಏನನ್ನೋ ಬೇಡುತ್ತಿದೆ' ಎಂದರು.

'ನನಗೆ ಮಠ, ಪೀಠ ಮುಖ್ಯವಲ್ಲ'

ಬೆಂಗಳೂರು: 'ನನಗೆ ಮಠ, ಪೀಠ ಮುಖ್ಯವಲ್ಲ, ಧರ್ಮ ಹಾಗೂ ರಾಷ್ಟ್ರ ಮುಖ್ಯ' ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಅಧ್ಯಕ್ಷ ವಚನಾನಂದ ಸ್ವಾಮೀಜಿ ಹೇಳಿದರು.

ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ಭಾನುವಾರ ಇಲ್ಲಿ ಆಯೋಜಿಸಿದ್ದ ಧರ್ಮ ಸಂರಕ್ಷಣಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಕೆಲ ವಿದೇಶಿ ಮಾಧ್ಯಮಗಳು ನಮ್ಮ ಧರ್ಮಕ್ಕೆ ಕಳಂಕ ತರುವ ಕೆಲಸ ಮಾಡುತ್ತಿವೆ. ಪುಣ್ಯಕ್ಷೇತ್ರ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಇದರ ವಿರುದ್ಧ ನಾವೆಲ್ಲರೂ ಒಗ್ಗಟ್ಟಾಗಿ ಪಕ್ಷಾತೀತವಾಗಿ ಹೋರಾಟ ನಡೆಸಬೇಕು' ಎಂದು ಕರೆ ನೀಡಿದರು.

ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಮಾತನಾಡಿ' 'ಹಿಂದುತ್ವದ ವಿಚಾರಧಾರೆ ಹೊಂದಿರುವ ಹೋರಾಟಗಾರನ ಮೂಲಕ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಲಾಗುತ್ತಿದೆ. ಇದರ ವಿರುದ್ಧ ಜಾಗೃತಿ ಮತ್ತು ಹೋರಾಟ ನಡೆಸಬೇಕು' ಎಂದು ಹೇಳಿದರು.

ಸಮಿತಿ ಸಂಚಾಲಕ ವಸಂತ್ ಗಿಳಿಯಾರ್, ಶ್ರವಣ ಬೆಳಗೊಳದ ಕಂಬದಹಳ್ಳಿ ಜೈನಮಠದ ಬಾನು ಕೀರ್ತಿ ಭಟ್ಟಾರಕ ಸ್ವಾಮೀಜಿ, ಹಿಂದೂ ಜಾಗರಣ ವೇದಿಕೆಯ ದೋ ಕೇಶವಮೂರ್ತಿ ಇದ್ದರು.

ವಕೀಲ ಜಗದೀಶ್‌ಗೆ ಜಾಮೀನು

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ಜಾತಿ ನಿಂದನೆ ಹಾಗೂ ವೈಷಮ್ಯ ಮೂಡಿಸಿದ್ದ ಆರೋಪದಡಿ ದಾಖಲಾದ ಪ್ರಕರಣದಲ್ಲಿ ವಕೀಲ ಕೆ.ಎನ್.ಜಗದೀಶ್ ಕುಮಾರ್ ಅವರಿಗೆ ಕೋರ್ಟ್ ಜಾಮೀನು ನೀಡಿದೆ.

ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಶುಕ್ರವಾರ ರಾತ್ರಿ ಜಗದೀಶ್ ಅವರನ್ನು ಬಂಧಿಸಿದ್ದರು. ಕೆಂಚನಹಳ್ಳಿ ಮಂಜುನಾಥ್ ದೂರು ನೀಡಿದ್ದರು.

ಈ ಸಂಬಂಧ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿಕೊಂಡಿರುವ ಜಗದೀಶ್, 'ಧರ್ಮಸ್ಥಳ ಹತ್ಯಾಕಾಂಡದ ವಿರುದ್ಧ ಹೋರಾಟ ಮಾಡಿದ್ದಕ್ಕೆ ನನ್ನ ಮೇಲೆ ಸುಳ್ಳು ದೂರು ದಾಖಲಿಸಿ, ಪೊಲೀಸರು ವಶಕ್ಕೆ ಪಡೆದಿದ್ದರು. ಸಂವಿಧಾನ ಇನ್ನೂ ಬದುಕಿದೆ. ನ್ಯಾಯಕ್ಕೆ ಜಯ ಸಿಕ್ಕಿದ್ದು, ನನಗೆ ಜಾಮೀನು ಸಿಕ್ಕಿದೆ' ಎಂದಿದ್ದಾರೆ.

'ಆರ್‌ಎಸ್‌ಎಸ್ ವಿಷಕಾರಿ ಸಂಘಟನೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಜನಾಂಗೀಯ ದ್ವೇಷ, ವರ್ಣಾಶ್ರಮದ ಕ್ರೌರ್ಯವುಳ್ಳ ನಾಜಿವಾದ, ಮನುವಾದಗಳನ್ನೇ ನರನಾಡಿಗಳಲ್ಲಿ ಪ್ರವಾಹಿಸಿಕೊಂಡಿರುವ ಆರ್‌ಎಸ್‌ಎಸ್ ಎಂಬ ವಿಷಕಾರಿ ಸಂಘಟನೆಯನ್ನು ಕಾಂಗ್ರೆಸ್ ಪಕ್ಷ ಎಂದಿಗೂ ಶತ್ರುವಾಗಿಯೇ ನೋಡುತ್ತದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಪಾದಿಸಿದ್ದಾರೆ.

ಪ್ರಿಯಾಂಕ್ ಖರ್ಗೆ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸದನದಲ್ಲಿ ಆರ್‌ಎಸ್‌ಎಸ್ ಗೀತೆ ಹಾಡಿ, ಆರ್‌ಎಸ್‌ಎಸ್‌ನ ಶೈಕ್ಷಣಿಕ ಕಾರ್ಯಗಳನ್ನು ಮೆಚ್ಚಿಕೊಳ್ಳುವುದಾಗಿ ಹೇಳಿದ ಬೆನ್ನಲ್ಲೇ ಸಚಿವರ ಈ ಹೇಳಿಕೆ ಹೊರಬಿದ್ದಿದೆ.

ಈ ಬಗ್ಗೆ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿರುವ ಸಚಿವರು, 'ಪ್ರಬುದ್ಧ ಮತ್ತು ಸಮೃದ್ಧ ಭಾರತ ನಿರ್ಮಾಣಕ್ಕಾಗಿ ಭಾರತದ ಪ್ರತಿ ಪ್ರಜೆಯೂ 'ಆರ್‌ಎಸ್‌ಎಸ್‌ಗೆ ತಾಕಿದ ಗಾಳಿಯೂ ನಮಗೆ ಸೋಕಬಾರದು ಎಂಬ ಪ್ರತಿಜ್ಞೆ ಕೈಗೊಳ್ಳಬೇಕು' ಎಂದಿದ್ದಾರೆ.

'ಸಂವಿಧಾನಕ್ಕೆ, ಏಕತೆಗೆ, ರಾಷ್ಟ್ರ ಧ್ವಜಕ್ಕೆ, ರಾಷ್ಟ್ರಗೀತೆಗೆ, ದೇಶದ ಸಾರ್ವಭೌಮತೆಗೆ ಆರ್‌ಎಸ್‌ಎಸ್ ಶತ್ರು. ಆರ್‌ಎಸ್‌ಎಸ್ ಕಾಂಗ್ರೆಸ್ಸಿಗೆ ಮಾತ್ರವಲ್ಲ, ಈ ದೇಶದ ಏಕತೆಗೆ ಪರಮ ಶತ್ರು ಎನ್ನುವುದನ್ನು ಪ್ರತಿ ದೇಶಭಕ್ತನೂ ಗಮನದಲ್ಲಿ ಇರಿಸಿಕೊಳ್ಳಬೇಕು' ಎಂದು ಬರೆದುಕೊಂಡಿದ್ದಾರೆ.

'ಬಾಬಾಸಾಹೇಬರು, ಸರ್ದಾರ್ ವಲ್ಲಭಭಾಯಿ ಪಟೇಲರು ದಶಕಗಳ ಹಿಂದೆಯೇ ಆರ್‌ಎಸ್‌ಎಸ್ ಕುರಿತು ನಿಷ್ಠುರವಾಗಿ ಎಚ್ಚರಿಕೆಯ ಸಂದೇಶ ನೀಡಿ ಹೋಗಿದ್ದಾರೆ. ಆ ಮಹನೀಯರ ಸಂದೇಶವನ್ನು ಗಂಭೀರವಾಗಿ ಪರಿಗಣಿಸಿ ಮನುವಾದಿಗಳನ್ನು ದೂರ ಇಡಬೇಕಿದೆ' ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

> **ಆರ್‌ಎಸ್‌ಎಸ್ ಗೀತೆ ಹಾಡಿದರೆ ಸಿ.ಎಂ ಸ್ಥಾನ ಸಿಗುತ್ತದೆ ಎನ್ನುವುದಾದರೆ ನಾನು, ಶಾಸಕ ಚನ್ನಾರೆಡ್ಡಿ ಪಾಟೀಲ ಹಾಡುತ್ತೇವೆ. ಡಿಸಿಎಂ ಸಂದರ್ಭಾನುಸಾರ ಹಾಡಿದ್ದಾರೆ**
> **ಸತೀಶ ಜಾರಕಿಹೊಳಿ,**
> ಲೋಕೋಪಯೋಗಿ ಸಚಿವ

...ಸದಾ ವತ್ಸಲೆ: 'ಕೈ' ಶಾಸಕ ಗುಣಗಾನ

ಡಾ.ಎಚ್‌.ಡಿ. ರಂಗನಾಥ್

ಕುಣಿಗಲ್ (ತುಮಕೂರು): ಆರ್‌ಎಸ್‌ಎಸ್‌ನ 'ನಮಸ್ತೆ ಸದಾ ವತ್ಸಲೆ ಮಾತೃಭೂಮಿ...' ಪ್ರಾರ್ಥನಾ ಗೀತೆ ತುಂಬಾ ಚೆನ್ನಾಗಿದೆ ಎಂದು ಕಾಂಗ್ರೆಸ್ ಶಾಸಕ ಡಾ.ಎಚ್.ಡಿ. ರಂಗನಾಥ್ ಗುಣಗಾನ ಮಾಡಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಆರ್‌ಎಸ್‌ಎಸ್ ಗೀತೆ ಹಾಡಿದರೆ ತಪ್ಪೇನು ಎಂದು ಪ್ರಶ್ನಿಸಿದರು.

'ಅಧಿವೇಶನದಲ್ಲಿ ಉಪಮುಖ್ಯಮಂತ್ರಿ ಈ ಗೀತೆಯ ಕೆಲ ಸಾಲು ಹಾಡಿದ ನಂತರ ನಾನು ಓದಿದೆ. ಹುಟ್ಟಿದ ಭೂಮಿಗೆ ನಮಸ್ಕಾರ ಮಾಡಿ ಎಂಬರ್ಥದಲ್ಲಿದೆ. ಯಾವುದೇ ತಪ್ಪು ಕಾಣಿಸುತ್ತಿಲ್ಲ' ಎಂದರು.

'ಕಾಂಗ್ರೆಸ್ ಜಾತ್ಯತೀತ ಪಕ್ಷ. ಬಿಜೆಪಿ ಸಿದ್ಧಾಂತಕ್ಕೂ ನಮ್ಮ ಸಿದ್ಧಾಂತಕ್ಕೂ ಹೊಂದಾಣಿಕೆ ಆಗದು. ಆದರೆ, ಬೇರೆ ರಾಜಕೀಯ ಪಕ್ಷಗಳು ಮತ್ತು ಇತರ ಮನುಷ್ಯನಲ್ಲಿರುವ ಒಳ್ಳೆಯದನ್ನು ಸ್ವೀಕರಿಸಬೇಕು' ಎಂದು ತಿಳಿಸಿದರು.

ಜಾರಿ ನಿರ್ದೇಶನಾಲಯದ ಕಸ್ಟಡಿಗೆ ಶಾಸಕ ವೀರೇಂದ್ರ

ಪ್ರಜಾವಾಣಿ ವಾರ್ತೆ

ಕೆ.ಸಿ.ವೀರೇಂದ್ರ

ಬೆಂಗಳೂರು: ಅಕ್ರಮವಾಗಿ ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸಿದ ಪ್ರಕರಣದಲ್ಲಿ ಚಿತ್ರದುರ್ಗ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಅವರನ್ನು ನಗರದ 35ನೇ ಸಿಸಿಎಚ್ ನ್ಯಾಯಾಲಯವು ಇದೇ 28ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಗೆ ನೀಡಿದೆ.

ಬೆಟ್ಟಿಂಗ್ ಸಂಬಂಧ ಹಣ ಅಕ್ರಮ ವರ್ಗಾವಣೆ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ವೀರೇಂದ್ರ ಮತ್ತು ಅವರ ಕ್ಯಾಸಿನೊಗಳ ವಿರುದ್ಧ ಇ.ಡಿ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದರು. ಬೆಂಗಳೂರು, ಚಿತ್ರದುರ್ಗ, ಹುಬ್ಬಳ್ಳಿ, ಗೋವಾ, ಮುಂಬೈ, ಜೋಧಪುರ, ಗ್ಯಾಂಗ್ಟಕ್ ಸೇರಿ ದೇಶದ 31 ಸ್ಥಳಗಳಲ್ಲಿ ಶುಕ್ರವಾರ ದಾಳಿ ನಡೆಸಿದ್ದರು.

ಸಿಕ್ಕಿಂನ ಗ್ಯಾಂಗ್ಟಕ್‌ನಲ್ಲಿ ಶನಿವಾರ ಬೆಳಿಗ್ಗೆ ವೀರೇಂದ್ರ ಅವರನ್ನು ಬಂಧಿಸಿದ್ದ ಇ.ಡಿ ಅಧಿಕಾರಿಗಳು, ಅಲ್ಲಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಎದುರು ಹಾಜರುಪಡಿಸಿದ್ದರು. ಟ್ರಾನ್ಸಿಟ್ ರಿಮ್ಯಾಂಡ್ ಪಡೆದು, ಅಲ್ಲಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶನಿವಾರ ತಡರಾತ್ರಿ ಕರೆತಂದಿದ್ದರು.

ವಿಮಾನ ನಿಲ್ದಾಣದಿಂದ ನೇರವಾಗಿ, ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಕರೆತರಲಾಗಿತ್ತು. ಅಲ್ಲಿಯೇ ನಾಲ್ಕು ತಾಸು ವಿಚಾರಣೆ ನಡೆಸಿ, ನಗರದ 35ನೇ ಸಿಸಿಎಚ್ ನ್ಯಾಯಾಲಯದ ನ್ಯಾಯಾಧೀಶ ಸೈಯದ್ ಬಿ. ರೆಹಮಾನ್ ಅವರ ಎದುರು ಹಾಜರುಪಡಿಸಲಾಯಿತು. ಆರೋಪಿಯನ್ನು 14 ದಿನ ಕಸ್ಟಡಿಗೆ ನೀಡಬೇಕು ಎಂದು ಇ.ಡಿ ಪರ ವಕೀಲರು ಮನವಿ ಮಾಡಿದರು. ಆದರೆ, ಐದು ದಿನಗಳವರೆಗೆ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದರು ಎಂದು ಮೂಲಗಳು ಮಾಹಿತಿ ನೀಡಿವೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಯಾಸಿನೊ ಉದ್ಯಮಿ ಸಮುಂದರ್ ಸಿಂಗ್ ಅವರ ವಿಚಾರಣೆಯನ್ನು ಶಾಂತಿನಗರದ ಕಚೇರಿಯಲ್ಲಿ ನಡೆಸಲಾಗುತ್ತಿದೆ. ಅವರನ್ನೂ ಶೀಘ್ರವೇ ನ್ಯಾಯಾಲಯಕ್ಕೆ ಹಾಜರುಪಡಿಸಿ, ಕಸ್ಟಡಿಗೆ ಪಡೆಯಲಾಗುತ್ತದೆ.

'40 ಬೀದಿನಾಯಿ ದತ್ತು ಪಡೆದರು'

ಹುಬ್ಬಳ್ಳಿ: ಸರ್ಕಾರೇತರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ನಗರದಲ್ಲಿ ನಡೆದ 'ಸಮುದಾಯ ಶ್ವಾನ ದತ್ತು ಶಿಬಿರ'ದಲ್ಲಿ 40 ಬೀದಿನಾಯಿಗಳ ದತ್ತು ಪಡೆಯಲಾಯಿತು.

'ಏಳು ಸರ್ಕಾರೇತರ ಸಂಸ್ಥೆಗಳು ಪಾಲಿಕೆಯೊಂದಿಗೆ ಕೈಜೋಡಿಸಿವೆ. ಸದ್ಯ 40 ನಾಯಿಗಳನ್ನು ದತ್ತು ನೀಡಲಾಗಿದೆ' ಎಂದು ಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ಶ್ರೀಧರ ದಂಡಪ್ಪನವರ ತಿಳಿಸಿದರು.

ಬೀದಿ ನಾಯಿಗಳಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿರುವ ಪಾಲಿಕೆ ಈ ಕ್ರಮವಹಿಸಿದೆ ಎಂದರು.

ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಪಂ. ಬಸವರಾಜ ರಾಜಗುರು ಟ್ರಸ್ಟ್ ವತಿಯಿಂದ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪುಣೆಯ ಸಂಗೀತ ಕಲಾವಿದ ಪಂ. ಸುಹಾಸ ವ್ಯಾಸ ಅವರಿಗೆ 'ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿ', ಧಾರವಾಡದ ವಯೋಲಿನ್ ವಾದಕಿ ವೀಣಾ ಮಠ (ದಂಡಾವತಿಮಠ) ಮತ್ತು ರಾಯಚೂರಿನ ಹಾರ್ಮೋನಿಯಂ ವಾದಕ ಚಿದಂಬರ ಜೋಶಿ ಅವರಿಗೆ 'ರಾಷ್ಟ್ರೀಯ ಯುವಪ್ರಶಸ್ತಿ' ಪ್ರದಾನ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಟ್ರಸ್ಟ್ ಅಧ್ಯಕ್ಷ ಕೈವಲ್ಯಕುಮಾರ ಗುರವ, ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಪಾಲ್ಗೊಂಡಿದ್ದರು

ಗೊ.ರು.ಚನ್ನಬಸಪ್ಪ ವಿಷಾದ • 8 ತಿಂಗಳ ನಂತರ 'ನುಡಿಜಾತ್ರೆ' ಸ್ಮರಣ ಸಂಚಿಕೆ ಬಿಡುಗಡೆ

'ಕಸಾಪ ಘನತೆ ಬೀದಿ ಸರಕಾಗದಿರಲಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕನ್ನಡ ಸಾಹಿತ್ಯ ಪರಿಷತ್ತು ಗೊಂದಲದ ಗೂಡಾಗಬಾರದು, ಅದರ ಘನತೆ–ಗಾಂಭೀರ್ಯ ಹಾದಿ–ಬೀದಿಯಲ್ಲಿ ಚೆಲ್ಲಾಡುವ ಸರಕುಗಳಾಗಬಾರದು. ಪಾವಿತ್ರ್ಯ, ಪರಂಪರೆ, ಪ್ರಾಮುಖ್ಯತೆಗೆ ಕಳಂಕಬಾರದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ' ಎಂದು ಸಾಹಿತಿ ಗೊ.ರು.ಚನ್ನಬಸಪ್ಪ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಬೆಲ್ಲದಾರತಿ' ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನುಡಿಜಾತ್ರೆಯ ನಂತರ ಪರಿಷತ್ತಿಗೆ ಸಂಬಂಧಿಸಿ ಆಗಿರುವ ಬೆಳವಣಿಗೆಯಿಂದ ನಾನು ನೊಂದುಕೊಂಡಿದ್ದೇನೆ. ಪರಿಷತ್ತು ಕನ್ನಡದ ನುಡಿದೇಗುಲ ಮಾತ್ರವಲ್ಲ, ಕನ್ನಡಿಗರ ನಡೆದೇಗುಲವೂ ಆಗಿದೆ. ಕಾರ್ಯಭಾರದ ಹೊಣೆ ಹೊತ್ತಿರುವ ಅದರ ಪದಾಧಿಕಾರಿಗಳು ಹೆಚ್ಚು ಎಚ್ಚರ ವಹಿಸಬೇಕು' ಎಂದು ಕಿವಿಮಾತು ಹೇಳಿದರು.

'ಕಸಾಪ ಪದಾಧಿಕಾರಿಗಳಿಗೆ ದೊರೆತಿರುವುದು ಅಧಿಕಾರವಲ್ಲ, ಕನ್ನಡದ ಸೇವೆ ಸಲ್ಲಿಸುವ ದೊಡ್ಡ ಅವಕಾಶ. ಅಲ್ಲಿ ವ್ಯಕ್ತಿಪ್ರತಿಷ್ಠೆ, ಯುಕ್ತಿಜಾಡ್ಯ, ಶಕ್ತಿ ಪ್ರದರ್ಶನಗಳಿಗೆ ಅವಕಾಶ ಇರಬಾರದು' ಎಂದರು.

'ಪರಿಷತ್ತಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಉಂಟಾಗಿರುವ ವಿವಾದ ಮತ್ತು ಸರ್ಕಾರ ವಿಚಾರಣೆ ನಡೆಸಬೇಕಾಗಿ ಬರುವ ಹಂತ ತಲುಪಿದ್ದೇ ಒಂದು ವಿಷಾದಕರ. ಆದಷ್ಟು ಬೇಗ ಈ ವಿಚಾರಣೆ ಮುಗಿಸಿ, ಅಗತ್ಯ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ' ಎಂದು ಹೇಳಿದರು.

'ಬೆಲ್ಲದಾರತಿ' ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಮೀರಾ ಶಿವಲಿಂಗಯ್ಯ, ಎಡಿಸಿ ಬಿ.ಸಿ. ಶಿವಾನಂದಮೂರ್ತಿ, ಜಿ.ಪಂ. ಸಿಇಒ ಕೆ.ಆರ್‌.ನಂದಿನಿ, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾಧಿಕಾರಿ ಕುಮಾರ, ಶಾಸಕ ಪಿ.ರವಿಕುಮಾರ್, ಸಚಿವ ಎನ್‌.ಚಲುವರಾಯಸ್ವಾಮಿ, ನಿರ್ಮಲಾನಂದನಾಥ ಸ್ವಾಮೀಜಿ, ಸಾಹಿತಿ ಗೊ.ರು. ಚನ್ನಬಸಪ್ಪ, ಸೋಮನಾಥ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಮಹೇಶ ಜೋಶಿ ಮತ್ತೆ ಗೈರು

ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮಕ್ಕೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಗೈರು ಹಾಜರಾಗಿದ್ದರು. ಇದು, ಚರ್ಚೆಗೆ ಗ್ರಾಸವಾಗಿದೆ.

'ಸಮ್ಮೇಳನಕ್ಕೆ ಬಿಡುಗಡೆ ಆಗಿದ್ದ ₹30 ಕೋಟಿ ಅನುದಾನದಲ್ಲಿ ಕೇಂದ್ರ ಕಸಾಪಗೆ ₹2.50 ಕೋಟಿ ನೀಡಲಾಗಿತ್ತು. ಇದರ ಖರ್ಚು–ವೆಚ್ಚದ ಲೆಕ್ಕವನ್ನು ಜೋಶಿಯವರು ನೀಡಿಲ್ಲ. ಕಾರ್ಯಕ್ರಮಕ್ಕೆ ಅವರು ಬಂದರೆ ಪ್ರತಿಭಟಿಸುತ್ತೇವೆ' ಎಂದು ಇಲ್ಲಿನ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಎಚ್ಚರಿಕೆ ನೀಡಿದ್ದರು. ಸಾಹಿತ್ಯ ಸಮ್ಮೇಳನದ ಖರ್ಚು–ವೆಚ್ಚಗಳ ವಿವರ ನೀಡಲು ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನಡೆಸಿದ್ದ ಪತ್ರಿಕಾಗೋಷ್ಠಿಗೂ ಅವರು ಬಂದಿರಲಿಲ್ಲ.

ಯೂಟ್ಯೂಬರ್ ಎಂ.ಡಿ.ಸಮೀರ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಎಂ.ಡಿ. ಸಮೀರ್

ಮಂಗಳೂರು: ಧರ್ಮಸ್ಥಳ ಬೆಳವಣಿಗೆ ಕುರಿತು ಕೃತಕ ಬುದ್ಧಿಮತ್ತೆ ನೆರವಿನಿಂದ ತಯಾರಿಸಿದ ವಿಡಿಯೊವನ್ನು ಪ್ರಸಾರ ಮಾಡಿದ್ದಕ್ಕಾಗಿ ದಾಖಲಾಗಿದ್ದ ಪ್ರಕರಣ ಸಂಬಂಧ 'ದೂತ' ಯೂಟ್ಯೂಬ್ ಚಾನೆಲ್‌ನ ಎಂ.ಡಿ. ಸಮೀರ್ ಅವರನ್ನು ಬೆಳ್ತಂಗಡಿ ವೃತ್ತ ನಿರೀಕ್ಷಕ ನಾಗೇಶ್ ಕದ್ರಿ ಭಾನುವಾರ ವಿಚಾರಣೆಗೆ ಒಳಪಡಿಸಿದರು.

ನಾಲ್ವರು ವಕೀಲರ ಜೊತೆಗೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹಾಜರಾದ ಸಮೀರ್, 5 ಗಂಟೆ ಠಾಣೆಯಲ್ಲೇ ಇದ್ದರು. ಸೋಮವಾರವೂ ಠಾಣೆಗೆ ಬರುವಂತೆ ಪೊಲೀಸರು ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

'ಧರ್ಮಸ್ಥಳ ಪ್ರಕರಣದಲ್ಲಿ ಸಾಕ್ಷಿ ದೂರುದಾರ ನ್ಯಾಯಾಲಯದಲ್ಲಿ ನೀಡಿದ್ದ ಮಾಹಿತಿ ಹೊರತಾಗಿ ಇನ್ನಷ್ಟು ಮಾಹಿತಿಯನ್ನು ಕಾಲ್ಪನಿಕವಾಗಿ ಸೃಷ್ಟಿಸಿ 23.52 ನಿಮಿಷದ ವಿಡಿಯೊ ಪ್ರಸಾರ ಮಾಡಿದ್ದರು.

ಧರ್ಮಸ್ಥಳದ ಪಾಂಗಾಳ ರಸ್ತೆ ಬಳಿ ಯೂಟ್ಯೂಬರ್‌ಗಳ ಮೇಲೆ ಆ. 6ರಂದು ನಡೆದ ಹಲ್ಲೆಯ ಗಾಯಾಳುಗಳನ್ನು ಮಾತನಾಡಿಸಿ ವರದಿ ಮಾಡಲು ತೆರಳಿದ್ದ ಟಿ.ವಿ. ವಾಹಿನಿಯೊಂದರ ವರದಿಗಾರನಿಗೆ ಹಲ್ಲೆ ನಡೆಸಿದ ಆರೋಪದ ಮೇಲೆ ಬೆಳ್ತಂಗಡಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಹಾಗೂ ಉಜಿರೆಯ ಬೆನಕ ಆಸ್ಪತ್ರೆ ಬಳಿಕ ಅಕ್ರಮವಾಗಿ ಗುಂಪುಗೂಡಿದ ಬಗ್ಗೆ ಬೆಳ್ತಂಗಡಿ ಠಾಣೆಯ ಪೊಲೀಸರು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡ ಪ್ರಕರಣದಲ್ಲೂ ಸಮೀರ್ ಆರೋಪಿ.

'ಧರ್ಮಸ್ಥಳ ಪ್ರಕರಣ: ಎನ್‌ಐಎಗೆ ಒಪ್ಪಿಸಿದರೆ ಒಳ್ಳೆಯದು'

ಯಾದಗಿರಿ: 'ಧರ್ಮಸ್ಥಳ ಪ್ರಕರಣದ ಹಿಂದೆ ಯಾರಿದ್ದಾರೆ ಎಂದು ತಿಳಿಯಲು ಎನ್‌ಐಎ ಅಥವಾ ಅದಕ್ಕೂ ಉನ್ನತ ಮಟ್ಟದ ಸಂಸ್ಥೆಗೆ ತನಿಖೆ ಒಪ್ಪಿಸಿದರೆ ಒಳ್ಳೆಯದು' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಧರ್ಮಸ್ಥಳ ಪ್ರಕರಣಕ್ಕೆ ಮುಕ್ತಿ ಸಿಗಲು ಎನ್‌ಐಎಗೆ ಕೊಟ್ಟರೂ ತಪ್ಪಿಲ್ಲ' ಎಂದರು.

'ಧರ್ಮಸ್ಥಳ ಪ್ರಕರಣ ಒಂದು ಗ್ರಾಮಕ್ಕೆ ಸಂಬಂಧಿಸಿದ್ದು, ದೇಶಕ್ಕೆ ಅಲ್ಲ. ಇದಕ್ಕೆ ಕಾಂಗ್ರೆಸ್, ಎಡ–ಬಲಪಂಥಗಳ ಸಂಬಂಧವೂ ಇಲ್ಲ. ಕೋರ್ಟ್ ಆದೇಶದಂತೆ ಎಸ್‌ಐಟಿ ರಚನೆಯಾಗಿದೆ' ಎಂದು ಹೇಳಿದರು.

'ನ್ಯಾಯಾಂಗ ತನಿಖೆಯಾಗಲಿ'

ಗದಗ: 'ತಿರುಪತಿ, ಶಬರಿಮಲೆ ನಂತರ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಹಿಂದೂಗಳ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಬಗ್ಗೆ ಅಪಪ್ರಚಾರ ನಡೆಸಿರುವುದರ ಬಗ್ಗೆ ಹಾಲಿ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದರು.

'ಕೆಲವು ಶಕ್ತಿಗಳು ಜನರ ಧರ್ಮ ಶ್ರದ್ಧೆ ಕುಗ್ಗಿಸುವ ಕೆಲಸ ಮಾಡುತ್ತಿವೆ. ಇದರ ಹಿಂದೆ ಕೆಲವು ಎಡಪಂಥೀಯ ಸಂಸ್ಥೆಗಳು, ಎಸ್‌ಡಿಪಿಐ ಕೈವಾಡವೂ ಇದೆ. ಅಪಪ್ರಚಾರ ಮಾಡುವವರ ಹಿಂದಿರುವ ಜಾಲಗಳ ಬಗ್ಗೆಯೂ ತನಿಖೆ ಆಗಬೇಕು' ಎಂದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಕ್ಕಳಿಗೆ ಉಪಾಹಾರ

ತಮಿಳುನಾಡಿನಲ್ಲಿ 'ಮುಖ್ಯಮಂತ್ರಿ ಉಪಾಹಾರ ಯೋಜನೆ'ಯು ನಗರ ಪ್ರದೇಶದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೂ ವಿಸ್ತರಣೆಯಾಗಲಿದ್ದು, 20 ಲಕ್ಷ ಮಕ್ಕಳಿಗೆ ಪ್ರಯೋಜನವಾಗಲಿದೆ ಎಂದು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ತಿಳಿಸಿದ್ದಾರೆ

ಪರೀಕ್ಷೆ ಯಶಸ್ವಿ

'ಗಗನಯಾನ ಮಿಷನ್'ನ ಕ್ಯಾಪ್ಸೂಲ್ ಅನ್ನು ಪ್ಯಾರಾಚೂಟ್ ಮೂಲಕ ಸುರಕ್ಷಿತವಾಗಿ ಕೆಳಗಿಳಿಸುವ ಪರೀಕ್ಷೆಯನ್ನು (ಏರ್ ಡ್ರಾಪ್ ಟೆಸ್ಟ್) ಇಸ್ರೊ ಯಶಸ್ವಿಯಾಗಿ ಪೂರ್ಣಗೊಳಿಸಿದೆ

ಇ20 ಪೆಟ್ರೋಲ್: ಇಂಧನ ದಕ್ಷತೆ ಹಾಳು 8

ದೆಹಲಿಯಲ್ಲಿ ವಿಜಯೇಂದ್ರ ಕಸರತ್ತು 4

ಖಾಲಿ ಹುದ್ದೆ ಭರ್ತಿಗೆ ಆಮೆಗತಿ

ಕೆಪಿಎಸ್‌ಸಿಯಿಂದ ಐದು ವರ್ಷಗಳಲ್ಲಿ 6,055 ಹುದ್ದೆಗಳ ನೇಮಕಾತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಮಂಜೂರಾಗಿರುವ ಹುದ್ದೆಗಳು ವಯೋ ನಿವೃತ್ತಿ, ಸ್ವಯಂ ನಿವೃತ್ತಿ, ರಾಜೀನಾಮೆ, ನಿಧನ ಮತ್ತಿತರ ಕಾರಣಗಳಿಂದ ಖಾಲಿ ಆಗುತ್ತಿದ್ದರೂ ಆ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಆಮೆಗತಿಯಲ್ಲಿದೆ. ಹೀಗಾಗಿ, ಖಾಲಿ ಹುದ್ದೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ.

2022ರ ಅಂತ್ಯದವರೆಗೆ ಮಂಜೂರಾಗಿದ್ದ ಒಟ್ಟು 7,69,981 ಹುದ್ದೆಗಳ ಪೈಕಿ 2,58,709 ಹುದ್ದೆಗಳು ಖಾಲಿ ಇದ್ದವು. 2025–26ರವರೆಗೆ ವಿವಿಧ 43 ಇಲಾಖೆಗಳಲ್ಲಿ ಒಟ್ಟು 7,76,414 ಹುದ್ದೆಗಳು ಇವೆ ಎಂದು 'ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ'ನಲ್ಲಿ (ಎಚ್‌ಎಂಆರ್‌ಎಸ್ ತಂತ್ರಾಂಶ) ನಮೂದಿಸಲಾಗಿದೆ. ಈ ಪೈಕಿ, 4,91,533 ಹುದ್ದೆಗಳು ಭರ್ತಿಯಾಗಿದ್ದು, 2,84,881 ಖಾಲಿ ಇವೆ.

8

ಮುಖ್ಯಾಂಶಗಳು

- ರಾಜ್ಯದಲ್ಲಿ ಒಟ್ಟು 43 ಇಲಾಖೆಗಳು
- ಪ್ರಸ್ತುತ 2,84,881 ಹುದ್ದೆಗಳು ಖಾಲಿ
- 80 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಹೊರಗುತ್ತಿಗೆ ನೇಮಕ

ಸರ್ಕಾರಿ ಹುದ್ದೆಗಳು ಖಾಲಿ*

2022 (ಅಂತ್ಯಕ್ಕೆ)	2,58,709
2023 (ಅಂತ್ಯಕ್ಕೆ)	2,55,920
2024 (ಅಂತ್ಯಕ್ಕೆ)	2,76,386
2025 (ಆಗಸ್ಟ್)	2,84,881

*ವಿಧಾನ ಮಂಡಲ ಅಧಿವೇಶನಗಳಲ್ಲಿ ಸರ್ಕಾರ ನೀಡಿದ ಮಾಹಿತಿ

ಹೈಕೋರ್ಟ್ ಮೆಟ್ಟಿಲಲ್ಲಿ ಶೇ 56ರಷ್ಟು ಮೀಸಲು

ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಜಾತಿವಾರು ಶೇ 56 ಮೀಸಲಾತಿ ನೀಡುವ ಸವಾಲು ರಾಜ್ಯ ಸರ್ಕಾರಕ್ಕೆ ಎದುರಾಗಿದೆ.

1995 ಜ.31ರ ಸರ್ಕಾರದ ಆದೇಶದ ಅನ್ವಯ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಟಿ) ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ನೇರ ನೇಮಕಾತಿಯಲ್ಲಿ ಶೇ 50 (ಪ್ರವರ್ಗ 1–4, 2ಎ–15, 2ಬಿ–4, 3ಎ–4, 3ಬಿ–5, ಎಸ್‌ಸಿ–15, ಎಸ್‌ಟಿ–3) ಮೀಸಲಾತಿ ಪ್ರಮಾಣ ನಿಗದಿಪಡಿಸಲಾಗಿತ್ತು. 2022ರಲ್ಲಿ ರೂಪಿಸಿದ ಕಾಯ್ದೆಯ ಅನ್ವಯ ಎಸ್‌ಸಿ ಮೀಸಲಾತಿ ಶೇ 15ರಿಂದ 17, ಎಸ್‌ಟಿ ಮೀಸಲಾತಿ ಶೇ 3ರಿಂದ 7ಕ್ಕೆ ಹೆಚ್ಚಿಸಿ ಒಟ್ಟು ಮೀಸಲಾತಿ ಪ್ರಮಾಣವನ್ನು ಶೇ 50 ರಿಂದ ಶೇ 56ಕ್ಕೆ ಹೆಚ್ಚಿಸಲಾಗಿದೆ. ಅದರಂತೆ, 100 ಬಿಂದುಗಳ ರೋಸ್ಟರ್ (ನೇಮಕಾತಿಗೆ ಮೀಸಲು ಬಿಂದು ನಿಗದಿಪಡಿಸಿದ ಪಟ್ಟಿ) ಪರಿಷ್ಕರಿಸಿ ಸರ್ಕಾರವು 2022ರ ಡಿಸೆಂಬರ್ 28ರಂದು ಆದೇಶ ಹೊರಡಿಸಿತ್ತು.

ಈ ಆದೇಶವನ್ನು ಇದೇ ಮೇ 28ರಂದು ಅನೂರ್ಜಿತಗೊಳಿಸಿರುವ ಕೆಎಟಿ, ಈ ಆದೇಶದ ಅನ್ವಯ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಹುದ್ದೆಗಳನ್ನು ಪ್ರವರ್ಗವಾರು ವರ್ಗೀಕರಿಸಿ ಕೆಪಿಎಸ್‌ಸಿ ಹೊರಡಿಸಿದ್ದ ಅಧಿಸೂಚನೆಯನ್ನೂ ರದ್ದುಪಡಿಸಿದೆ (ಇಡೀ ನೇಮಕಾತಿ ಅಧಿಸೂಚನೆಯನ್ನು ಕೆಎಟಿ ರದ್ದು ಪಡಿಸಿಲ್ಲ). ಈ ಆದೇಶದಂತೆ ರೋಸ್ಟರ್ ಬಿಂದು ಗುರುತಿಸಿ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಎಲ್ಲ ನೇಮಕಾತಿ ಅಧಿಸೂಚನೆಗಳ ಮೇಲೂ ಕೆಎಟಿ ತೀರ್ಪು ಪರಿಣಾಮ ಬೀರಲಿರುವ ಕಾರಣ, ಈ ತೀರ್ಪಿನ ವಿರುದ್ಧ ಹೈಕೋರ್ಟ್‌ಗೆ ಸರ್ಕಾರ ಮೇಲ್ಮನವಿ ಸಲ್ಲಿಸಿದೆ. ಜುಲೈ 31ರಂದು ಈ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, '384 ಹುದ್ದೆಗಳ ಆಯ್ಕೆ ಪ್ರಕ್ರಿಯೆಯನ್ನು ಕೆಪಿಎಸ್‌ಸಿ ಮುಂದುವರಿಸಬಹುದು. ಆದರೆ, ಕೋರ್ಟ್ ಅನುಮತಿ ಇಲ್ಲದೆ ಆಯ್ಕೆ ಫಲಿತಾಂಶ ಪ್ರಕಟಿಸಬಾರದು' ಎಂದು ಮಧ್ಯಂತರ ಆದೇಶ ನೀಡಿದೆ. ಹೀಗಾಗಿ, ಪರೀಕ್ಷೋತ್ತರ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.



ಅಂಕಿ ಅಂಶಗಳು

67 5 ವರ್ಷಗಳಲ್ಲಿ ಕೆಪಿಎಸ್‌ಸಿ ಹೊರಡಿಸಿದ ಅಧಿಸೂಚನೆ

9,467 ಅಧಿಸೂಚಿಸಲಾದ ಒಟ್ಟು ಹುದ್ದೆಗಳು

6,055 ಲಿಖಿತ ಪರೀಕ್ಷೆ, ಸಂದರ್ಶನ ಪೂರ್ಣ

562 ಲಿಖಿತ ಪರೀಕ್ಷೆ ಮುಗಿದು ಸಂದರ್ಶನ ಬಾಕಿ

2,850 ಲಿಖಿತ ಪರೀಕ್ಷೆ ನಡೆದ ಹುದ್ದೆಗಳ ಸಂಖ್ಯೆ

2020–2024 ರವರೆಗೆ ಕೆಪಿಎಸ್‌ಸಿ ಹೊರಡಿಸಿರುವ ಅಧಿಸೂಚನೆ

ವರ್ಷ	ಅಧಿಸೂಚನೆ	ಹುದ್ದೆಗಳು
2020	9	3,527
2021	13	1,056
2022	22	1111
2023	17	2,383
2024	6	1,390
ಒಟ್ಟು	67	9,467

'ಅಂಗನವಾಡಿ: ಕಳಪೆ ಆಹಾರ'

ಬೆಂಗಳೂರು: ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಪೌಷ್ಟಿಕ ಆಹಾರದ ಗುಣಮಟ್ಟ ಕಳಪೆಯಾಗಿದೆ ಎಂದು ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಮಿತಿ ಹೇಳಿದೆ.

ವಿವರ 4

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕ್ರಿಕೆಟ್: ಪೂಜಾರ ನಿವೃತ್ತಿ

ನವದೆಹಲಿ (ಪಿಟಿಐ): ಟೆಸ್ಟ್ ಕ್ರಿಕೆಟ್ ಪರಿಣತ ಬ್ಯಾಟರ್ ಚೇತೇಶ್ವರ್ ಪೂಜಾರ ಅವರು ಎಲ್ಲ ಮಾದರಿಗಳ ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಘೋಷಿಸಿದರು.

'ಭಾರತ ತಂಡದ ಪೋಷಾಕು ಧರಿಸಿ, ರಾಷ್ಟ್ರ ಗೀತೆ ಹಾಡುತ್ತಾ, ಪ್ರತಿಬಾರಿ ಮೈದಾನಕ್ಕೆ ಕಾಲಿಟ್ಟಾಗಲೂ ನನ್ನಲ್ಲಿನ ಶ್ರೇಷ್ಠ ಸಾಮರ್ಥ್ಯ ಪಣಕ್ಕೊಡ್ಡಿದ್ದನ್ನು ಪದಗಳಲ್ಲಿ ಕಟ್ಟಿಕೊಡುವುದು ಅಸಾಧ್ಯ. ಎಲ್ಲ ಒಳ್ಳೆಯ ಸಂಗತಿಗಳಿಗೂ ಮುಕ್ತಾಯವಿರುತ್ತದೆ ಎಂಬ ಮಾತಿದೆ. ಇದೀಗ ನಾನು ಸರ್ವಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿಯಾಗುತ್ತಿದ್ದೇನೆ. ನಿಮ್ಮೆಲ್ಲರ ಬೆಂಬಲಕ್ಕೆ ಧನ್ಯವಾದಗಳು' ಎಂದು 37 ವರ್ಷದ ಪೂಜಾರ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಅವರು 103 ಟೆಸ್ಟ್‌ಗಳಿಂದ 7,195 ರನ್ ಗಳಿಸಿದ್ದಾರೆ. ಅದರಲ್ಲಿ 19 ಶತಕ, 35 ಅರ್ಧಶತಕಗಳು ಸೇರಿವೆ. ಐದು ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಿಂದ 51 ರನ್ ಗಳಿಸಿದ್ದಾರೆ. ಒಟ್ಟು 278 ಪ್ರಥಮ ದರ್ಜೆ ಪಂದ್ಯಗಳಿಂದ 21,301 ರನ್ ಗಳಿಸಿದ್ದಾರೆ.



ಇನ್ನೊಂದು ಸುದ್ದಿ 10

'ಡಿಕೆ ಏನು ಮಾಡಿದ್ರೂ ನಡೆಯುತ್ತಾ?'

ಪ್ರಜಾವಾಣಿ ವಾರ್ತೆ

ಕೆ.ಎನ್.ರಾಜಣ್ಣ

ತುಮಕೂರು: ಅಧಿವೇಶನದಲ್ಲಿ ಅವರು (ಡಿ.ಕೆ.ಶಿವಕುಮಾರ್) ಆರ್‌ಎಸ್‌ಎಸ್‌ನ 'ನಮಸ್ತೆ ಸದಾ ವತ್ಸಲೆ ಮಾತೃಭೂಮಿ' ಪ್ರಾರ್ಥನಾ ಗೀತೆ ಹಾಡಬಹುದು. ಬಿಜೆಪಿ ನಾಯಕ ಅಮಿತ್ ಶಾ ಜತೆ ಖಾಸಗಿ ಕಾರ್ಯಕ್ರಮದಲ್ಲಿ ವೇದಿಕೆ ಹಂಚಿಕೊಳ್ಳಬಹುದು. ಅಂಬಾನಿ ಮಗನ ಮದುವೆಗೆ ಹೋಗಬಹುದು. ಅವರು ಏನು ಬೇಕಾದರೂ ಮಾಡಬಹುದು. ನಾವು ಏನೂ ಮಾತನಾಡುವಂತಿಲ್ಲ.

ಮಾಜಿ ಸಚಿವ ಕೆ.ಎನ್.ರಾಜಣ್ಣ ಭಾನುವಾರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರು ಹೇಳದೆ ವಾಗ್ದಾಳಿ ನಡೆಸಿದ ರೀತಿ ಇದು. 'ನಾವು ಶಾಸಕರ ಸಭೆ ಕರೆಯುವ ಹಾಗಿಲ್ಲ. ಬೇರೆಯವರು ಕರೆಯಬಹುದು, ಮಾತಾಡಬಹುದು. ಇದಕ್ಕೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಾಗುವುದು' ಎಂದು ಸುದ್ದಿಗಾರರಿಗೆ ಹೇಳಿದರು.

'ಪ್ರಯಾಗರಾಜ್ ಸಂಗಮದಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಬಡತನ ನಿವಾರಣೆ ಯಾಗುವುದಿಲ್ಲ' ಎಂದು ಎಐಸಿಸಿ ಅಧ್ಯಕ್ಷರು ಹೇಳಿದ ನಂತರವೂ ಇವರು (ಡಿಕೆಶಿ) ಪುಣ್ಯಸ್ನಾನ ಮಾಡಿ ಬಂದರು ಎಂದು ಟೀಕಿಸಿದರು.

ಅಂಬಾನಿ ಮಗನ ಮದುವೆಯ ಆಮಂತ್ರಣವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ವೀಕರಿಸಲಿಲ್ಲ. ಆ ಮದುವೆಗೆ ಇವರು (ಡಿಕೆಶಿ) ಕುಟುಂಬ ಸಮೇತ ಹೋಗಿ ಬಂದರು ಎಂದರು.



ಹವಾಮಾನ ಮುನ್ಸೂಚನೆ: ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆಯಿದೆ

ಸಂಕ್ಷಿಪ್ತ ಸುದ್ದಿ

ಸಿಗಂದೂರು: ಪ್ಯಾಕೇಜ್ ಪ್ರವಾಸ

ಬೆಂಗಳೂರು: ಕೆಎಸ್‌ಆರ್‌ಟಿಸಿ ಕೇಂದ್ರೀಯ ವಿಭಾಗದಿಂದ ಬೆಂಗಳೂರು–ಸಿಗಂದೂರು ಮಾರ್ಗದಲ್ಲಿ ಪ್ಯಾಕೇಜ್ ಪ್ರವಾಸವು ಶುಕ್ರವಾರ ಆರಂಭವಾಗಿದೆ.

ಬೆಂಗಳೂರಿನಿಂದ ಹೊರಟು ಚಿತ್ರದುರ್ಗ, ಹೊಳಲ್ಕೆರೆ, ಚನ್ನಗಿರಿ, ಶಿವಮೊಗ್ಗ ಮೂಲಕ ಸಿಗಂದೂರಿಗೆ ನಾನ್ ಎಸಿ ಸ್ಲೀಪರ್ ಬಸ್ ಪ್ರವಾಸ ಇರಲಿದೆ. ಬೆಂಗಳೂರಿನಿಂದ ಬಸ್ ರಾತ್ರಿ 9.40ಕ್ಕೆ ಹೊರಡಲಿದ್ದು, ಮರುದಿನ ಬೆಳಿಗ್ಗೆ 6ಕ್ಕೆ ಸಿಗಂದೂರು ತಲುಪಲಿದೆ. ಅಲ್ಲಿಂದ ರಾತ್ರಿ 8ಕ್ಕೆ ಹೊರಟು ಮರುದಿನ ಬೆಳಿಗ್ಗೆ 4.15ಕ್ಕೆ ಬೆಂಗಳೂರು ತಲುಪಲಿದೆ. ಟಿಕೆಟ್ ದರ ವಯಸ್ಕರಿಗೆ ₹950 ನಿಗದಿ ಮಾಡಲಾಗಿದೆ.

ವೆಬ್ ಸೈಟ್: www.ksrtc.in & www.ksrtc.karnataka.gov.in ಮೂಲಕ ಟಿಕೆಟ್ ಪಡೆಯಬಹುದು. ಮಾಹಿತಿಗಾಗಿ: 080-26252625,7760990100/560/287 ಸಂಪರ್ಕಿಸಬಹುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕಂಪ್ಯೂಟರ್ ತರಬೇತಿಗೆ ಅರ್ಜಿ

ಬೆಂಗಳೂರು: ಕೆನರಾ ಬ್ಯಾಂಕ್ ವತಿಯಿಂದ ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿ ಅವಧಿಯಲ್ಲಿ ಕಂಪ್ಯೂಟರ್ ಆಫೀಸ್ ಅಸಿಸ್ಟೆಂಟ್, ಟ್ಯಾಲಿ, ಡೆಸ್ಕ್‌ಟಾಪ್ ಪಬ್ಲಿಷಿಂಗ್ ಹಾಗೂ ಹಾರ್ಡ್‌ವೇರ್ ಮತ್ತು ನೆಟ್‌ವರ್ಕ್ ಅಡ್ಮಿನಿಸ್ಟ್ರೇಶನ್‌ನಲ್ಲಿ ಮೂರು ತಿಂಗಳ ಉಚಿತ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತದೆ.

ತರಗತಿಗಳು ಅಕ್ಟೋಬರ್ 3ರಿಂದ ಪ್ರಾರಂಭವಾಗಲಿದ್ದು, 18ರಿಂದ 30 ವರ್ಷ ವಯಸ್ಸಿನ ಸಾಮಾನ್ಯ ವರ್ಗದವರು ಹಾಗೂ 35 ವರ್ಷದೊಳಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ ವಿಳಾಸ: ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ, ಬೆಂಗಳೂರು, ಮಾಹಿತಿಗೆ: 080-23440036/ 94485 38107 ಸಂಪರ್ಕಿಸಬಹುದು.

ಜಲಮಂಡಳಿ ನೌಕರರ ಸಂಘಕ್ಕೆ ಆಯ್ಕೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೌಕರರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಎ.ಗೋವಿಂದರಾಜು ನೇತೃತ್ವದ ಉದಯ ಸೂರ್ಯ ತಂಡ ಜಯಗಳಿಸಿದೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಗೋವಿಂದರಾಜು.ಎ ಅವರು 698 ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಉಪಾಧ್ಯಕ್ಷರಾಗಿ ರವಿಚಂದ್ರ.ಎಸ್., ಪ್ರಧಾನ ಕಾರ್ಯದರ್ಶಿಯಾಗಿ ಕೂಡಲ ಸಂಗಪ್ಪ ಅವರು ಆಯ್ಕೆಯಾಗಿದ್ದಾರೆ. ಮಹೇಂದ್ರಬಾಬು.ಜೆ–ಜಂಟಿ ಕಾರ್ಯದರ್ಶಿ, ಚಂದ್ರಮೋಹನ್.ಜಿ, ಎಸ್.ಸಿ–ಸಂಘಟನಾ ಕಾರ್ಯದರ್ಶಿ, ವರದರಾಯಸ್ವಾಮಿ.ಜಿ ಖಜಾಂಚಿ. ಅಗರಿನಟ್ಟಿ ವೀರೇಶ್, ಪ್ರಮೋದ್. ಜಿ.ವಿ, ಬೋರಲಿಂಗಯ್ಯ.ಬಿ.ಸಿ, ಭದ್ರಪ್ಪ, ಮಹಮ್ಮದ್.ಆರ್, ಮಹೇಶ್. ಬಿ, ಮಾರುತಿ, ಮುನಿರೆಡ್ಡಿ, ರಘು.ಬಿ, ರವೀಣಾ ಬಾನು.ಎಸ್, ರಾಮಲಿಂಗ, ವಸೀಮ್.ಬಿ.ಎಸ್, ಸುನೀಲ್ ಕುಮಾರ್.ಎಂ.ಎಸ್, ಸುರೇಶ್ ಗೌಡ, ಪಿ, ಸಂದೀಪ್.ಬಿ ಅವರು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, 1ನೇ ಹಂತ, ಮಹದೇವಪುರ ಅಂಚೆ, ಬೆಂಗಳೂರು–560048. ದೂರವಾಣಿ: 080–2852 4133 E-mail: info@gpl.in, Web: www.gpl.in CIN : L23209KA1977PLC043357

ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ) / ಇತರ ಆಡಿಯೋ–ವಿಶುವಲ್ ಮಾಧ್ಯಮಗಳ (ಒಎವಿಎಂ) ಮೂಲಕ ನಡೆಯಲಿರುವ 48ನೇ ವಾರ್ಷಿಕ ಸಾಮಾನ್ಯ ಸಭೆಯ ('ಎಜಿಎಂ') ಕುರಿತಾದ ಮಾಹಿತಿ

ಈ ಮೂಲಕ ತಿಳಿಸುವುದೇನೆಂದರೆ, ಗುಜರಾತ್ ಪೆಟ್ರೋಸಿಂಥೆಸ್ ಲಿಮಿಟೆಡ್ ("ಕಂಪನಿ") ನ 48ನೇ ವಾರ್ಷಿಕ ಸಾಮಾನ್ಯ ಸಭೆಯು ("ಎಜಿಎಂ"), ಎಜಿಎಂ ಅನ್ನು ಕರೆಯುವ ಸೂಚನಾ ಪತ್ರದಲ್ಲಿ ನಮೂದಿಸಲಾಗುವ ವ್ಯವಹಾರಗಳನ್ನು ನಡೆಸಲು, ಕಂಪನಿಗಳ ಕಾಯ್ದೆ, 2013 ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳ ಎಲ್ಲಾ ಅನ್ವಯವಾಗುವ ನಿಬಂಧನೆಗಳೊಂದಿಗೆ, ಹಾಗೂ ಮೇ 5, 2020 ರ ಸುತ್ತೋಲೆ ಸಂಖ್ಯೆ 20/2020, ಜನವರಿ 13, 2021 ರ ಸುತ್ತೋಲೆ ಸಂಖ್ಯೆ 02/2021 ಮತ್ತು ಮೇ 5, 2022 ರ ಸಾಮಾನ್ಯ ಸುತ್ತೋಲೆ 2/2022, ತದನಂತರ ಡಿಸೆಂಬರ್ 28, 2022 ರ ಸುತ್ತೋಲೆ ಸಂಖ್ಯೆ 10/2022 ಮತ್ತು 11/2022, ಸೆಪ್ಟೆಂಬರ್ 25, 2023 ರ ಸುತ್ತೋಲೆ ಸಂಖ್ಯೆ 09/2023, ಸೆಪ್ಟೆಂಬರ್ 19, 2024 ರ ಸುತ್ತೋಲೆ ಸಂಖ್ಯೆ 09/2024 (ಒಟ್ಟಾರೆಯಾಗಿ "ಎಂಸಿಎ ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗಿದೆ) ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಯ ಮೇ 13, 2022 ರ ಸುತ್ತೋಲೆ SEBI/HO/CFD/CMD2/CIR/P/2022/62, ತದನಂತರ ಜನವರಿ 5, 2023 ರ ಸುತ್ತೋಲೆ ಸಂಖ್ಯೆ SEBI/HO/CFD/PoD-2/P/CIR/2023/4, ಅಕ್ಟೋಬರ್ 7, 2023 ರ ಸುತ್ತೋಲೆ ಸಂಖ್ಯೆ SEBI/HO/CFD/ CFD-PoD-2/P/CIR/2023/167, ಅಕ್ಟೋಬರ್ 3, 2024 ರ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 (ಒಟ್ಟಾರೆಯಾಗಿ "ಸೆಬಿ ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗಿದೆ) ಇವುಗಳ ಅನುಸಾರವಾಗಿ, ಮಂಗಳವಾರ, ಸೆಪ್ಟೆಂಬರ್ 23, 2025 ರಂದು ಬೆಳಿಗ್ಗೆ 10:30 ಗಂಟೆಗೆ (IST) ವಿಸಿ/ಒಎವಿಎಂ (VC/OAVM) ಮೂಲಕ ನಡೆಯಲಿದೆ.

ಮೇಲ್ಕಂಡ ಸುತ್ತೋಲೆಗಳ ಪಾಲನೆಯಂತೆ, ಕಂಪನಿಯ 2024–25ನೇ ಹಣಕಾಸು ವರ್ಷದ ಎಜಿಎಂ ಸೂಚನಾ ಪತ್ರ ಮತ್ತು ವಾರ್ಷಿಕ ವರದಿಯ ಎಲೆಕ್ಟ್ರಾನಿಕ್ ಪ್ರತಿಗಳನ್ನು, ಕಂಪನಿ / ಡೆಪಾಸಿಟರಿಗಳು / ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರ ಬಳಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಕಳುಹಿಸಲಾಗುವುದು. ಒಂದು ವೇಳೆ ಯಾವುದೇ ಸದಸ್ಯರು 2024–25ನೇ ಹಣಕಾಸು ವರ್ಷದ ವಾರ್ಷಿಕ ವರದಿಯ ಭೌತಿಕ ಪ್ರತಿಯನ್ನು ಪಡೆಯಲು ಇಚ್ಛಿಸಿದರೆ, ಅವರು ತಮ್ಮ ಫೋಲಿಯೊ ಸಂಖ್ಯೆ/ಡಿಪಿ ಐಡಿ ಮತ್ತು ಕ್ಲೈಂಟ್ ಐಡಿಯನ್ನು ನಮೂದಿಸಿ secretarial@gujaratpetrosynthese.com ಇಮೇಲ್ ವಿಳಾಸಕ್ಕೆ ಕಂಪನಿಗೆ ಮನವಿಯನ್ನು ಕಳುಹಿಸಬಹುದು.

ಸೂಚನಾ ಪತ್ರ ಮತ್ತು ವಾರ್ಷಿಕ ವರದಿಯು, ಕಂಪನಿಯ ವೆಬ್‌ಸೈಟ್ www.gpl.in, ಸಿಡಿಎಸ್‌ಎಲ್ (CDSL) ವೆಬ್‌ಸೈಟ್ www.evotingindia.com, ಮತ್ತು ಕಂಪನಿಯ ಷೇರುಗಳು ಪಟ್ಟಿ ಮಾಡಲಾಗಿರುವ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.bseindia.com ನಲ್ಲಿ ಲಭ್ಯವಿರುತ್ತದೆ.

ಇಮೇಲ್ ವಿಳಾಸಗಳನ್ನು ರಜಿಸ್ಟರ್/ಅಪ್ಡೇಟ್ ಮಾಡಿಕೊಳ್ಳುವ ವಿಧಾನ:

ಡಿಮ್ಯಾಟ್ (dematerialised) ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ಸಂಬಂಧಪಟ್ಟ ಡೆಪಾಸಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಳ್ಳಲು ವಿನಂತಿಸಲಾಗಿದೆ. ಭೌತಿಕ (physical) ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನವೀಕರಿಸಲು, ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ಗೆ ("RTA") ಐಎಸ್‌ಆರ್–1 (ISR-1) ಫಾರ್ಮ್ ಅನ್ನು ಸಲ್ಲಿಸಲು ವಿನಂತಿಸಲಾಗಿದೆ. ಆರ್‌ಟಿಎ ವಿವರಗಳು ಕೆಳಗಿನಂತಿವೆ:ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ವಿಳಾಸ: ಕಚೇರಿ ಸಂಖ್ಯೆ S6–2, 6ನೇ ಮಹಡಿ, ಪಿನಾಕಲ್ ಬಿಸಿನೆಸ್ ಪಾರ್ಕ್, ಅಹುರಾ ಸೆಂಟರ್ ಪಕ್ಕ, ಮಹಾಕಾಳಿ ಗುಹೆಗಳ ರಸ್ತೆ, ಅಂಧೇರಿ (ಪೂರ್ವ), ಮುಂಬೈ–400093, ಭಾರತ. ಫೋನ್ ಸಂಖ್ಯೆ: 022–62638236, ಇ–ಮೇಲ್ ಐಡಿ: investor@bigshareonline.com ವೆಬ್‌ಸೈಟ್: www.bigshareonline.com.

ತಮ್ಮ ಇ–ಮೇಲ್ ವಿಳಾಸಗಳನ್ನು ಇನ್ನೂ ನೋಂದಾಯಿಸದ ಸದಸ್ಯರು, ಎಜಿಎಂ ಸೂಚನಾ ಪತ್ರ ಮತ್ತು ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಸ್ವೀಕರಿಸಲು, ಹಾಗೂ ರಿಮೋಟ್ ಇ–ವೋಟಿಂಗ್‌ಗಾಗಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು, ಕೆಳಗೆ ತಿಳಿಸಲಾದ ಪ್ರಕ್ರಿಯೆಯನ್ನು ಅನುಸರಿಸಲು ವಿನಂತಿಸಲಾಗಿದೆ:

1. ಈ ಲಿಂಕ್‌ಗೆ ಭೇಟಿ ಕೊಡಿ : https://www.bigshareonline.com/InvestorRegistration.aspx 2. ಕಂಪನಿಯ ಹೆಸರನ್ನು ಆಯ್ಕೆ ಮಾಡಿರಿ – **ಗುಜರಾತ್ ಪೆಟ್ರೋಸಿಂಥೀಸ್ ಲಿಮಿಟೆಡ್** 3. ಫೋಲಿಯೊ ನಂ./ಡಿಪಿ/ಕ್ಲೈಂಟ್ ಐಡಿ ನಮೂದಿಸಿರಿ 4. ಪ್ಯಾನ್ ನಂಬರ್ ನಮೂದಿಸಿರಿ 5. ಷೇರುದಾರರ ಹೆಸರು ನಮೂದಿಸಿರಿ 6. ಇಮೇಲ್ ಐಡಿ ನಮೂದಿಸಿರಿ 7. ಮೊಬೈಲ್ ನಂಬರ್ ನಮೂದಿಸಿರಿ 8. ಒಟಿಪಿ ಸಲ್ಲಿಸಿ 9. ತದನಂತರ ಸಿಸ್ಟಮ್‌ನಿಂದ ನಿಮ್ಮ ಇ–ಮೇಲ್ ವಿಳಾಸ ಖಚಿತಗೊಂಡು ಎಜಿಎಂ ಪ್ರಕಟಣೆ ರವಾನೆಗೊಳ್ಳುತ್ತದೆ. 10. ಇ–ಮೇಲ್ ವಿಳಾಸ ನೊಂದಾಯಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ವಿಚಾರಣೆಗಳು/ಅನಾನುಕೂಲತೆಗಳು ಇದ್ದಲ್ಲಿ, ಅಂತಹ ಸದಸ್ಯರು investor@bigshareonline.com ವಿಳಾಸಕ್ಕೆ ಬರೆಯಬಹುದು.

ಇ–ಮೇಲ್ ವಿಳಾಸಗಳ ಶಾಶ್ವತ ನೊಂದಣಿಗಾಗಿ, ಡಿಮ್ಯಾಟ್ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ಡೆಪಾಸಿಟರಿ ಪಾರ್ಟಿಸಿಪಂಟ್ (ಡಿಪಿ) ಇವರಲ್ಲಿ ಅಪ್ಡೇಟ್ ಮಾಡಿಕೊಳ್ಳಬೇಕು ಮತ್ತು ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ರಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜಂಟ್ ಇವರೊಂದಿಗೆ ಅಪ್ಲೇಟ್ ಮಾಡಿಕೊಳ್ಳಬೇಕೆಂದು ಕೋರಲಾಗಿದೆ.

ಎಜಿಎಂ ಅವಧಿಯಲ್ಲಿ ರಿಮೋಟ್ ಇ–ವೋಟಿಂಗ್ ಅಥವಾ ಇ–ವೋಟಿಂಗ್ ಮುಖಾಂತರ ಮತ ಚಲಾಯಿಸುವ ಮಾದರಿ:

ರಿಮೋಟ್ ಇ–ವೋಟಿಂಗ್ ಸಿಸ್ಟಮ್ ಮುಖಾಂತರ ಎಜಿಎಂ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ವಹಿವಾಟುಗಳಿಗೆ, ಸದಸ್ಯರು ದೂರದಿಂದಲೇ ತಮ್ಮ ಮತ ಚಲಾಯಿಸುವ ಅವಕಾಶ ನೀಡಲಾಗಿರುತ್ತದೆ.

ಮೇಲೆ ತಿಳಿಸಲಾಗಿರುವ ವಿಧಾನದಲ್ಲಿ ಯಶಸ್ವಿಯಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಸದಸ್ಯರಿಗೆ, ಇ–ವೋಟಿಂಗ್‌ಮುಖಾಂತರ ಮತಗಳನ್ನು ಚಲಾಯಿಸಲು ಲಾಗಿನ್ ಡೆನ್ಷಿಯಲ್‌ಗಳನ್ನು ಒದಗಿಸಲಾಗುತ್ತದೆ.

ಎಜಿಎಂ ಪ್ರಕಟಣೆಯಲ್ಲಿ ನಿಗದಿಪಡಿಸಲಾಗಿರುವ ಎಲ್ಲಾ ಠರಾವುಗಳಿಗೆ ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಮತಗಳನ್ನು ಚಲಾಯಿಸಲು ಸಿಡಿಎಸ್‌ಎಲ್'ರವರ ರಿಮೋಟ್ ಇ–ವೋಟಿಂಗ್ ಸೌಲಭ್ಯ (**'ರಿಮೋಟ್ ಇ–ವೋಟಿಂಗ್'**) ಒದಗಿಸಲು ಸಜ್ಜಾಗಿದೆ. ಹೆಚ್ಚುವರಿಯಾಗಿ, ಸಭೆಯ ಅವಧಿಯಲ್ಲಿ ಕೂಡ ಕಂಪನಿಯು ಇ–ವೋಟಿಂಗ್ ಸೌಲಭ್ಯವನ್ನು ಒದಗಿಸುತದೆ. ಎಜಿಎಂ ಅವಧಿಯಲ್ಲಿ ಎಜಿಎಂ/ಇ–ವೋಟಿಂಗ್ ಎದುರು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಎಜಿಎಂ ಪ್ರಕಟಣೆಯಲ್ಲಿ ನೀಡಲಾಗುತ್ತದೆ.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್‌ನ ಪರವಾಗಿ
ಸಹಿ/– ಉರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ ಡಿ.ಐ.ಎನ್ : 00319482

ದಿನಾಂಕ: ಆಗಸ್ಟ್ 25, 2025
ಸ್ಥಳ : ಮುಂಬೈ

ಎಂಆರ್‌ಐ ಸ್ಕ್ಯಾನಿಂಗ್‌ಗೆ ಹೊಸ ಯಂತ್ರ

ಕಿದ್ವಾಯಿ ಸಂಸ್ಥೆ: ಯಂತ್ರ ಖರೀದಿಸಲು ರಾಜ್ಯ ಸರ್ಕಾರ ಅನುಮೋದನೆ

• ವರುಣ ಹೆಗಡೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಸದ್ಯ ಕಾರ್ಯ ನಿರ್ವಹಿಸುತ್ತಿರುವ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವು ಆಗಾಗ ಕೈಕೊಡುತ್ತಿರುವ ಕಾರಣ, ಸಂಸ್ಥೆಯು ಹೊಸ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ಖರೀದಿಸಲು ಮುಂದಾಗಿದೆ.

ಹೊಸ ಯಂತ್ರ ಖರೀದಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮೂರು ತಿಂಗಳಲ್ಲಿ ಯಂತ್ರ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಕ್ಯಾನ್ಸರ್ ಪೀಡಿತರಿಗೆ ಚಿಕಿತ್ಸೆ ನಿರ್ಧರಿಸಲು, ಅನುಮಾನಾಸ್ಪದ ಗಡ್ಡೆ ಪತ್ತೆಹಚ್ಚಲು ಎಂಆರ್‌ಐ ಸ್ಕ್ಯಾನಿಂಗ್ ಸಹಕಾರಿ. ಸದ್ಯ ಕಾರ್ಯನಿರ್ವಹಿಸುತ್ತಿರುವ ಯಂತ್ರವು ಹಳೆಯದಾಗಿದೆ. ಹೊಸ ಯಂತ್ರ ಸಂಸ್ಥೆಗೆ ಸೇರ್ಪಡೆಯಾಗುವುದರಿಂದ ಕ್ಯಾನ್ಸರ್ ಚಿಕಿತ್ಸೆ ಕಾರ್ಯಕ್ಕೂ ವೇಗ ದೊರೆಯಲಿದೆ.

ಸಂಸ್ಥೆಯು ಎಂಆರ್‌ಐ ಸ್ಕ್ಯಾನಿಂಗ್ ಯಂತ್ರದಲ್ಲಿ ಕಳೆದ ವರ್ಷ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದ ಪರಿಣಾಮ, ರೋಗಿಗಳು ಸಮಸ್ಯೆ ಎದುರಿಸಿದ್ದರು. ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ವಿಕ್ಟೋರಿಯಾ ಸೇರಿ ಕೆಲ ಆಸ್ಪತ್ರೆಗಳಿಗೆ ರೋಗಿಗಳು ಅಲೆದಾಟ ನಡೆಸಿದ್ದರು. ಆ ವೇಳೆ ಸಹ ಹೊಸ ಯಂತ್ರ ಖರೀದಿಗೆ ಸಂಸ್ಥೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು.

25 ಎಂಆರ್‌ಐ ಸ್ಕ್ಯಾನಿಂಗ್: ಜುಲೈ ತಿಂಗಳು ಸಹ ಹಳೆಯ ಯಂತ್ರದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಯಂತ್ರದ ದುರಸ್ತಿಯ ಅವಧಿಯಲ್ಲಿ ರೋಗಿಗಳಿಗೆ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ, ಎಂಆರ್‌ಐ ಸ್ಕ್ಯಾನಿಂಗ್‌ಗೆ ಸಂಬಂಧಿಸಿದಂತೆ ಸಂಸ್ಥೆಯು ನಿಮ್ಹಾನ್ಸ್ ಮತ್ತು ಸಂಜಯ್ ಗಾಂಧಿ ಆಸ್ಪತ್ರೆ ಜತೆಗೆ ಒಡಂಬಡಿಕೆ ಮಾಡಿಕೊಂಡಿತ್ತು. ರೋಗಿಗಳಿಗೆ ಅಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಸಂಸ್ಥೆಯಿಂದಲೇ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಯಂತ್ರವನ್ನು ದುರಸ್ತಿ ಮಾಡಿ, ಎಂಆರ್‌ಐ ಸ್ಕ್ಯಾನಿಂಗ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಸದ್ಯ ಸಂಸ್ಥೆಯಲ್ಲಿ ಪ್ರತಿ ನಿತ್ಯ ಸರಾಸರಿ 25 ಎಂಆರ್‌ಐ ಸ್ಕ್ಯಾನಿಂಗ್ ನಡೆಸಲಾಗುತ್ತಿದೆ. ಹೊಸ ಯಂತ್ರ ಸೇರ್ಪಡೆಯ ಬಳಿಕ ಈ ಸಂಖ್ಯೆ 50ರ ಗಡಿ ದಾಟಲಿದೆ.

'ಸಂಸ್ಥೆಗೆ ಭೇಟಿ ನೀಡುವ ಹೊರ ಹಾಗೂ ಒಳ ರೋಗಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡಿದೆ. ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ರೋಗಿಗಳು ಭೇಟಿ ನೀಡುತ್ತಿದ್ದಾರೆ. ತಪಾಸಣೆ ಹಾಗೂ ರೋಗದ ಬಗ್ಗೆ ಹೆಚ್ಚಿದ ಅರಿವಿನಿಂದಾಗಿ ಕ್ಯಾನ್ಸರ್ ಹೊಸ ಪ್ರಕರಣಗಳೂ ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ. ಹೊಸ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ಸೇರ್ಪಡೆಯಿಂದ ರೋಗಿಗಳ ನಿರ್ವಹಣೆ ಸುಲಭ ಸಾಧ್ಯವಾಗುತ್ತದೆ' ಎಂದು ಸಂಸ್ಥೆಯ ವೈದ್ಯಾಧಿಕಾರಿಯೊಬ್ಬರು ತಿಳಿಸಿದರು.

ಅಂಕಿ ಅಂಶಗಳು

874 ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

1,116 ನಿತ್ಯ ಭೇಟಿ ನೀಡುವ ಸರಾಸರಿ ಹೊರ ರೋಗಿಗಳು

1,243 ಫಾಲೊ ಅಪ್ ಚಿಕಿತ್ಸೆಗೆ ನಿತ್ಯ ಭೇಟಿ ನೀಡುವವರು

3 ಲಕ್ಷ ಸಂಸ್ಥೆಯಲ್ಲಿ ಪ್ರತಿವರ್ಷ ಚಿಕಿತ್ಸೆ ಪಡೆದುಕೊಳ್ಳುವವರು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ರೋಗಿಗಳಿಗೆ ಸಮಸ್ಯೆಯಾಗದಂತೆ ಸದ್ಯ ಎಂಆರ್‌ಐ ಸ್ಕ್ಯಾನಿಂಗ್ ನಡೆಸಲಾಗುತ್ತಿದೆ. ಹೊಸ ಯಂತ್ರ ಖರೀದಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
ಡಾ.ಟಿ. ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

4.07 ಲಕ್ಷ ಒಪಿಡಿ ಭೇಟಿ

ಕಿದ್ವಾಯಿ ಸಂಸ್ಥೆಯ ಹೊರರೋಗಿ ವಿಭಾಗಕ್ಕೆ (ಒಪಿಡಿ) 2024ರಲ್ಲಿ ಕ್ಯಾನ್ಸರ್ ಪರೀಕ್ಷೆ ಹಾಗೂ ಚಿಕಿತ್ಸೆ ಸಂಬಂಧ 4.07 ಲಕ್ಷ ಮಂದಿ ಭೇಟಿ ನೀಡಿದ್ದರು. 22,063 ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದರೆ, ಸಂಸ್ಥೆ ನಡೆಸಿದ ತಪಾಸಣೆಯಿಂದ 21,881 ಹೊಸ ಪ್ರಕರಣಗಳು ಪತ್ತೆಯಾಗಿದ್ದವು.

ಚಿಕಿತ್ಸೆಗಾಗಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಏರುಗತಿ ಪಡೆದಿದೆ. ಪ್ರತಿ ತಿಂಗಳು ಸರಾಸರಿ 33,946 ಮಂದಿ ಹೊರ ರೋಗಿಗಳಾಗಿ ಭೇಟಿ ನೀಡಿದರೆ, 1,839 ಮಂದಿ ಒಳ ರೋಗಿಗಳಾಗಿ ದಾಖಲಾಗುತ್ತಿದ್ದಾರೆ. 2020ರಲ್ಲಿ ಈ ಸಂಖ್ಯೆ ಕ್ರಮವಾಗಿ 21,483 ಹಾಗೂ 795ರಷ್ಟಿತ್ತು.

ರಮಾನಂದ ಸ್ವಾಮಿ ರಾಮಭದ್ರಾಚಾರ್ಯ ಅವರಿಗೆ 'ವಾಗ್ದೇವಿ ಜ್ಞಾನ ಭಾಸ್ಕರ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು

ವಾಗ್ದೇವಿ ಕಲಾ ಉತ್ಸವಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತಹಳ್ಳಿಯ ವಾಗ್ದೇವಿ ವಿಲಾಸ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಲಾ ಉತ್ಸವ-2025 ಕಾರ್ಯಕ್ರಮ ಶನಿವಾರ ಮುಕ್ತಾಯಗೊಂಡಿತು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಜಗದ್ಗುರು ರಮಾನಂದ ಸ್ವಾಮಿ ರಾಮಭದ್ರಾ ಚಾರ್ಯ ಅವರಿಗೆ ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯಿಂದ 'ವಾಗ್ದೇವಿ ಜ್ಞಾನ ಭಾಸ್ಕರ ರತ್ನ' ಪ್ರಶಸ್ತಿಯನ್ನು ಸಮಾರೋಪ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಅಂಕಣಕಾರ ವಿಕ್ರಮ್ ಸಂಪತ್ ಅವರಿಗೆ 'ವಾಗ್ದೇವಿ ಇತಿಹಾಸ ರತ್ನಾಕರ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಾಗ್ದೇವಿ ವಿಲಾಸ ಸಂಸ್ಥೆಯ ಅಧ್ಯಕ್ಷ ಕೆ. ಹರೀಶ್ ಮತ್ತು ಶತಾವಧಾನಿ ಆರ್.ಗಣೇಶ್ ಉಪಸ್ಥಿತರಿದ್ದರು.

ಉತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ಗಾಯನ, ನೃತ್ಯ, ಪ್ರಬಂಧ, ನಾಟಕ, ರಸಪ್ರಶ್ನೆ, ರಂಗೋಲಿ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಶಾಲೆಯ ಆವರಣದಲ್ಲಿ ಮರಳು ಶಿಲ್ಪ ಕಲಾವಿದ ಸುದರ್ಶನ್ ಪಟ್ನಾಯಕ್ ನಿರ್ಮಿಸಿದ್ದ ಮರಳುಶಿಲ್ಪ ಪ್ರಮುಖ ಆಕರ್ಷಣೆಯಾಗಿತ್ತು.

ವರ್ಷವಿಡೀ ಗಾಂಧೀಜಿ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ವಿವಿಧ ಕಾರ್ಯಕ್ರಮಗಳ ಮೂಲಕ 'ಗಾಂಧಿ ಜಯಂತಿ'ಯನ್ನು ಆಚರಿಸಲು 'ಗಾಂಧಿ ಭಾರತ' ಶತಮಾನೋತ್ಸವ ಸಮಿತಿ ನಿರ್ಧರಿಸಿದೆ.

1924ರಲ್ಲಿ ಬೆಳಗಾವಿಯಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ ನೂರು ವರ್ಷ ತುಂಬಿದ ನೆನಪಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಸಮಿತಿಯ ಸಭೆಯು ವಿಧಾನಸೌಧದಲ್ಲಿ ಶನಿವಾರ ನಡೆಯಿತು.

ಗಾಂಧಿ ಜ್ಯೋತಿ ಯಾತ್ರೆ, ಧ್ಯಾನಮಗ್ನ ಪ್ರತಿಮೆಯೊಂದಿಗೆ ಗಾಂಧಿ ಸ್ತಂಭ ಸ್ಥಾಪನೆ, ಶಾಲೆ-ಕಾಲೇಜುಗಳಲ್ಲಿ ಗಾಂಧೀಜಿಯ ಧ್ಯಾನಚಿತ್ರ ಮತ್ತು ಏಳು ಸಾಮಾಜಿಕ ಪಿಡುಗುಗಳ ವಿರುದ್ಧ ಸಂದೇಶ ಪ್ರದರ್ಶನ ಸೇರಿದಂತೆ ಹಲವು ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅಲ್ಲದೆ, ನಾಟಕಗಳು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದ್ದು, ಈ ಕಾರ್ಯ ಕ್ರಮಗಳು ಡಿಸೆಂಬರ್ ಅಂತ್ಯದವರೆಗೆ ಮುಂದುವರಿಯಲಿವೆ.

ಗಾಂಧೀಜಿಯ ಏಳು ಸಾಮಾಜಿಕ ಪಾಪಗಳು, ಭಾರತ ಸಂವಿಧಾನದ ಪ್ರಸ್ತಾವನೆ ಹಾಗೂ ಗಾಂಧೀಜಿಯ ಚಿತ್ರವನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ನೇತೃತ್ವದಲ್ಲಿ ತೆಗೆದುಕೊಂಡಿರುವ ಈ ಕ್ರಮಕ್ಕೆ ಸಭೆ ಮೆಚ್ಚುಗೆ ವ್ಯಕ್ತಪಡಿಸಿತು.

ಸಂಚಾಲಕ ಬಿ.ಎಲ್. ಶಂಕರ್, ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್, ಡಿ.ಆರ್. ಪಾಟೀಲ್, ವಾರ್ತಾ ಮತ್ತು ಸಾರ್ವಜನಿಕ ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳ್ಕರ್ ಪಾಲ್ಗೊಂಡಿದ್ದರು.

'ಗಾಂಧಿಭಾರತ' ಶತಮಾನೋತ್ಸವ ಸಮಿತಿ ಸಭೆಯಲ್ಲಿ ಸಮಿತಿಯ ಗೌರವಾಧ್ಯಕ್ಷ ವೀರಪ್ಪ ಮೊಯಿಲಿ, ಮಧು ಬಂಗಾರಪ್ಪ ಮತ್ತಿತರರು ಪಾಲ್ಗೊಂಡಿದ್ದರು

ಎರಡು ವರ್ಷಗಳ ಉಚಿತ ಐಟಿಐ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಕ್ಷೇತ್ರ ಮರಳೆ ಗವಿ ಮಠದಲ್ಲಿ ಎಸ್‌ಎಸ್‌ಎಂಎಸ್ ಐಟಿಐ ವತಿಯಿಂದ 2025-26ನೇ ಸಾಲಿನಲ್ಲಿ ಎರಡು ವರ್ಷ ಅವಧಿಗೆ ಉಚಿತ ತರಬೇತಿ ನೀಡಲಾಗುತ್ತದೆ.

ಎಸ್ಸೆಸ್ಸೆಲ್ಸಿ ಉತ್ತೀರ್ಣರಾದವರು, ಪಿಯುಸಿ ಹಾಗೂ ಪಾಲಿಟೆಕ್ನಿಕ್ (ಡಿಪ್ಲೊಮಾ)ನಲ್ಲಿ ಅನುತ್ತೀರ್ಣರಾದವರು ತರಬೇತಿಗೆ ದಾಖಲಾಗಬಹುದು. ಉಚಿತ ಊಟ, ವಸತಿ ಲಭ್ಯವಿದೆ. ಸರ್ಕಾರಿ ಮತ್ತು ಖಾಸಗಿ ಕಂಪನಿಗಳಲ್ಲಿ ಉದ್ಯೋಗಾವಕಾಶ ಇದೆ.

ವಿಳಾಸ: ಶ್ರೀಕ್ಷೇತ್ರ ಮರಳೆ ಗವಿ ಮಠ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮಾಹಿತಿಗೆ ಪ್ರಾಂಶುಪಾಲ ಪ್ರಭುಸ್ವಾಮಿ (ಮೊ. 9916080448), ಉಪನ್ಯಾಸಕ ರಜಿತ್ (ಮೊ.9743271827) ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com ವೆಬ್‌ಸೈಟ್: www.gokaldasexports.com

22ನೇ ವಾರ್ಷಿಕ ಸಾಮಾನ್ಯ ಸಭೆ, ಇ–ಮತದಾನ ಮಾಹಿತಿ ಮತ್ತು ಪುಸ್ತಕ ಮುಚ್ಚುವಿಕೆಯ ನೋಟೀಸ್

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ("ಕಂಪನಿ")ಯ ಸದಸ್ಯರ 22ನೇ ವಾರ್ಷಿಕ ಸಾಮಾನ್ಯ ಸಭೆ ('ಎಜಿಎಂ') **ಮಂಗಳವಾರ, ಸೆಪ್ಟೆಂಬರ್ 16, 2025ರಂದು ಸಂಜೆ 4:30 ಐಎಸ್‌ಟಿ** ಗೆ ಎಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ನಡೆಸಲು ವಿಡಿಯೋ ಕಾನ್ಫರೆನ್ಸಿಂಗ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ ("ವಿಸಿ") ಮೂಲಕ ನಡೆಯಲಿದ್ದು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ ("ಎಂಸಿಎ") ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 08, 2020, 17/2020 ದಿನಾಂಕ ಏಪ್ರಿಲ್ 13, 2020, 20/2020 ದಿನಾಂಕ ಮೇ 05, 2020, 33/2020 ದಿನಾಂಕ ಸೆಪ್ಟೆಂಬರ್ 28, 2020, 39/2020 ದಿನಾಂಕ ಡಿಸೆಂಬರ್ 31, 2020, 10/2021 ದಿನಾಂಕ ಜೂನ್ 23, 2021, 20/2021 ದಿನಾಂಕ ಡಿಸೆಂಬರ್ 08, 2021, 10/2022 ದಿನಾಂಕ ಡಿಸೆಂಬರ್ 28, 2022 ಮತ್ತು 09/2024 ದಿನಾಂಕ ಸೆಪ್ಟೆಂಬರ್ 19, 2024 ಹಾಗೂ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದಿಂದ ಹೊರಡಿಸಲಾದ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 3, 2024 (ಒಟ್ಟಾರೆಯಾಗಿ ಇನ್ನುಮುಂದೆ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುವುದು) ರಂತೆ ಕಂಪನಿಗಳು ಸಾಮಾನ್ಯ ಸ್ಥಳದಲ್ಲಿ ಷೇರುದಾರರ ದೈಹಿಕ ಉಪಸ್ಥಿತಿಯಿಲ್ಲದೆ ವಿಸಿ ಮೂಲಕ ಎಜಿಎಂ ನಡೆಸಲು ಅನುಮತಿಸಲಾಗಿದೆ. ಅದರಂತೆ ದಿನಾಂಕ 05ನೇ ಆಗಸ್ಟ್, 2025ರ ಎಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ವ್ಯವಹರಿಸಲು ಕಂಪನಿಯ 22ನೇ ಎಜಿಎಂ ಅನ್ನು ವಿಸಿ ಮೂಲಕ ನಡೆಸಲಾಗುವುದು.

ಸುತ್ತೋಲೆಗಳ ಅನುಸಾರವಾಗಿ, ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳು / ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜಂಟ್‌ರವರೊಂದಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಎಜಿಎಂ ನೋಟೀಸ್ ಮತ್ತು 2024–25ರ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ರವಾನಿಸಲಾಗಿದೆ. ಈ ದಸ್ತಾವೇಜುಗಳು ಕಂಪನಿಯ ವೆಬ್‌ಸೈಟ್ **www.gokaldasexports.com**, ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಾದ **www.bseindia.com** ಮತ್ತು **www.nseindia.com** ಹಾಗೂ ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜಂಟ್ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್‌ಟೆಕ್)ನ ವೆಬ್‌ಸೈಟ್ **https://evoting.kfintech.com/**ನಲ್ಲಿ ಸಹ ಲಭ್ಯವಿದೆ. ಇಮೇಲ್‌ಗಳ ಮೂಲಕ ಎಜಿಎಂ ನೋಟೀಸ್‌ನ ರವಾನೆಯು ಆಗಸ್ಟ್ 24, 2025ರಂದು ಪೂರ್ಣಗೊಂಡಿದೆ.

ಕಟ್–ಆಫ್ ದಿನಾಂಕ (ಸೆಪ್ಟೆಂಬರ್ 09, 2025)ದಂದು ಷೇರುಗಳನ್ನು ಹೊಂದಿರುವ ಸದಸ್ಯರು ಎಜಿಎಂನ ಸೂಚನೆಯಲ್ಲಿ ವಿಧಿಸಿದಂತೆ ವಿದ್ಯುನ್ಮಾನ ರೂಪದಲ್ಲಿ ವ್ಯವಹರಿಸುವ ಕುರಿತಾಗಿ, ಆರ್‌ಟಿಎರವರ ವಿದ್ಯುನ್ಮಾನ ಮತ ವ್ಯವಸ್ಥೆಯ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದಾಗಿರುತ್ತದೆ. ಸದಸ್ಯರುಗಳಿಗೆ ಈ ಕೆಳಕಂಡಂತೆ ಸೂಚಿಸುವುದೇನೆಂದರೆ:

i. ಎಜಿಎಂ ಸೂಚನೆಯಲ್ಲಿ ತಿಳಿಸಿರುವಂತೆ ರಿಮೋಟ್ ಇ–ಮತದಾನ ಅಥವಾ ಎಜಿಎಂನಲ್ಲಿ ಇ–ಮತದಾನ ವ್ಯವಸ್ಥೆಯ ಮೂಲಕ ಮತಚಲಾಯಿಸಿ ವ್ಯವಹರಿಸಬಹುದಾಗಿರುತ್ತದೆ.
ii. ರಿಮೋಟ್ ಇ–ಮತದಾನವು **ಶುಕ್ರವಾರ, ಸೆಪ್ಟೆಂಬರ್ 12, 2025ರಂದು (ಬೆಳಿಗ್ಗೆ 9:00 ಗಂಟೆ ಐಎಸ್‌ಟಿ)** ಪ್ರಾರಂಭವಾಗುವುದು.
iii. ರಿಮೋಟ್ ಇ–ಮತದಾನವು **ಸೋಮವಾರ, ಸೆಪ್ಟೆಂಬರ್ 15, 2025ರಂದು (ಸಂಜೆ 5:00 ಗಂಟೆ ಐಎಸ್‌ಟಿ)** ಮುಕ್ತಾಯವಾಗುವುದು.
iv. ರಿಮೋಟ್ ಇ–ಮತದಾನ ಮಾಡ್ಯುಲ್ ಅನ್ನು ಸೆಪ್ಟೆಂಬರ್ 15, 2025ರಂದು ಸಂಜೆ 5:00 ಗಂಟೆ ಐಎಸ್‌ಟಿಯ ನಂತರ ನಿಷ್ಕ್ರಿಯಗೊಳಿಸಲಾಗುವುದು.
v. ರಿಮೋಟ್ ಇ–ಮತದಾನ ಅಥವಾ ಎಜಿಎಂನಲ್ಲಿ ಇ–ಮತದಾನ ವ್ಯವಸ್ಥೆಯ ಮೂಲಕ ಮತಚಲಾಯಿಸುವ ಅರ್ಹತೆಯನ್ನು ನಿರ್ಧರಿಸುವ ಕಟ್–ಆಫ್ ದಿನಾಂಕವು ಸೆಪ್ಟೆಂಬರ್ 09, 2025 ಆಗಿರುತ್ತದೆ.
vi. ಎಜಿಎಂ ನೋಟೀಸ್ ರವಾನೆಯಾದ ನಂತರ ಕಂಪನಿಯ ಷೇರುಗಳನ್ನು ಪಡೆದು, ಕಂಪನಿಯ ಸದಸ್ಯರಾದ ಯಾವುದೇ ವ್ಯಕ್ತಿ ಕಟ್–ಆಫ್ ದಿನಾಂಕ ಅಂದರೆ ಸೆಪ್ಟೆಂಬರ್ 09, 2025ರಂದು ಷೇರುಗಳನ್ನು ಹೊಂದಿದ್ದಲ್ಲಿ, ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು einward.ris@kfintech.com ಇಲ್ಲಿಗೆ ಮನವಿ ಸಲ್ಲಿಸಿ ಪಡೆದುಕೊಳ್ಳಬಹುದು. ಅದಾಗ್ಯೂ ಯಾವುದೇ ಸದಸ್ಯರು ಈಗಾಗಲೇ ಆರ್‌ಟಿಎನಲ್ಲಿ ಇ–ಮತದಾನಕ್ಕೆ ನೋಂದಾಯಿಸಿದ್ದಲ್ಲಿ, ತಮ್ಮ ಹಾಲಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಪಯೋಗಿಸಿ ಮತ ಚಲಾಯಿಸಬಹುದಾಗಿರುತ್ತದೆ.
vii. ಸದಸ್ಯರ ಗಮನಕ್ಕೆ: (ಅ) ಒಮ್ಮೆ ಠರಾವಿನ ಮೇಲೆ ಸದಸ್ಯರು ಮತ ಚಲಾಯಿಸಿದ ತರುವಾಯ ಅದನ್ನು ಬದಲಿಸುವ ಅವಕಾಶವಿರುವುದಿಲ್ಲ. (ಆ) ಎಜಿಎಂನಲ್ಲಿ ಮತ ಚಲಾಯಿಸುವ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಹಾಗೂ ಯಾವ ಸದಸ್ಯರು ರಿಮೋಟ್ ಇ–ಮತದಾನದ ಮೂಲಕ ಠರಾವಿನ ಮೇಲೆ ಮತ ಚಲಾಯಿಸಿರುವುದಿಲ್ಲವೋ ಮತ್ತು ಹಾಗೆ ಮಾಡಲು ನಿರ್ಬಂಧಕ್ಕೊಳಗಾಗದ ಸದಸ್ಯರು ವಿಸಿ ವ್ಯವಸ್ಥೆಯ ಮೂಲಕ ಎಜಿಎಂನಲ್ಲಿ ಭಾಗವಹಿಸಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. (ಇ) ಎಜಿಎಂನ ಮೊದಲು ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಿದ ಸದಸ್ಯರುಗಳು ಸಹ ಎಜಿಎಂನಲ್ಲಿ ಭಾಗವಹಿಸಬಹುದು. ಆದರೆ, ಪುನಃ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಿರುವುದಿಲ್ಲ. ಮತ್ತು (ಈ) ಕಟ್–ಆಫ್ ದಿನಾಂಕದಂತೆ ನೋಂದಣಿ ದಸ್ತಾವೇಜಿನಲ್ಲಿ ಹೆಸರು ದಾಖಲಿಸಿರುವ ಸದಸ್ಯರು ಅಥವಾ ಡೆಪಾಸಿಟರೀಸ್‌ರಿಂದ ನಿರ್ವಹಿಸಲ್ಪಟ್ಟ ಫಲಾನುಭವಿ ಮಾಲೀಕರ ಪುಸ್ತಕದಲ್ಲಿ ಹೆಸರು ದಾಖಲಿಸಿರುವವರು ರಿಮೋಟ್ ಇ–ಮತದಾನ ಅಥವಾ ಎಜಿಎಂನಲ್ಲಿ ಇ–ಮತದಾನದ ಸೌಲಭ್ಯವನ್ನು ಪಡೆದುಕೊಳ್ಳುವರು.
viii. ಡಿಮೆಟಲೈರ್ಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ಮತ್ತು ಅವರ ಇ–ಮೇಲ್ ವಿಳಾಸಗಳನ್ನು ನೋಂದಾಯಿಕೊಳ್ಳದ ಸದಸ್ಯರಿಗೆ ದೂರದಿಂದಲೇ ಮತದಾನ ಚಲಾಯಿಸುವ ವಿಧಾನವನ್ನು ಸದಸ್ಯರಿಗೆ ಎಜಿಎಂ ನೋಟಿಸ್‌ನಲ್ಲಿ ಒದಗಿಸಲಾಗುತ್ತದೆ.
ix. ಷೇರುದಾರರು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳದ ಪರಿಣಾಮವಾಗಿ ವಾರ್ಷಿಕ ವರದಿ, ಇ–ಎಜಿಎಂ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಾಗಿರದ ಕಾರಣ, https://ris.kfintech.com/email_registration/ ಇದರಲ್ಲಿ ಒದಗಿಸಲಾದ ಸೂಚನೆಯನ್ನು ಅನುಸರಿಸುವ ಮೂಲಕ ತಾತ್ಕಾಲಿಕವಾಗಿ ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಕಂಪನಿಯ ಆರ್‌ಟಿಎರವರೊಂದಿಗೆ ನೋಂದಾಯಿಸಿಕೊಳ್ಳಬಹುದು. ಒಂದೊಮ್ಮೆ ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರು einward.ris@kfintech.com ಇವರಿಗೆ ಬರೆಯಬಹುದು.
x. ವಾರ್ಷಿಕ ವರದಿ ಮತ್ತು ಎಜಿಎಂ ನೋಟೀಸನ್ನು ಡೌನ್‌ಲೋಡ್ ಮಾಡಲು ಷೇರುದಾರರು ಕಂಪನಿಯ ವೆಬ್‌ಸೈಟ್ www.gokaldasexports.com ಅಥವಾ ಆರ್‌ಟಿಎ ವೆಬ್‌ಸೈಟ್ https://evoting.kfintech.com/ ಗೆ ಭೇಟಿ ನೀಡಬಹುದು.
xi. ಒಂದೊಮ್ಮೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಷೇರುದಾರರು einward.ris@kfintech.com ಗೆ ಬರೆಯಬಹುದು ಅಥವಾ ಕೆಫಿನ್‌ಟೆಕ್‌ನ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಇವರನ್ನು ಟೋಲ್ ಫ್ರೀ ನಂ. 1800 345 4001 ಮೂಲಕ ಸಂಪರ್ಕಿಸಬಹುದು.
xii. ಪರ್ಯಾಯವಾಗಿ ಸದಸ್ಯರು ಸಹಿ ಮಾಡಿದ ಮನವಿ ಪತ್ರದ ಸ್ಕ್ಯಾನ್ ಮಾಡಿದ ಪ್ರತಿಯೊಂದಿಗೆ ಇ–ಮೇಲ್ ವಿಳಾಸ, ಮೊಬೈಲ್ ಸಂಖ್ಯೆ, ಸ್ವಯಂ ದೃಢೀಕರಿಸಿದ ಪ್ಯಾನ್ ಪ್ರತಿ ಮತ್ತು ಕ್ಲೈಂಟ್ ಮಾಸ್ಟರ್ ಪ್ರತಿಯನ್ನು ಒದಗಿಸಿ ವಾರ್ಷಿಕ ವರದಿ, ಇ–ಎಜಿಎಂ ನೋಟೀಸ್ ಮತ್ತು ರಿಮೋಟ್ ಇ–ಮತದಾನ ಸೂಚನೆಗಳನ್ನು ಕಳುಹಿಸಲು ಇ–ಮೇಲ್ ಐಡಿ einward.ris@kfintech.com ನಲ್ಲಿ ಇ–ಮೇಲ್ ಮನವಿಯನ್ನು ಕಳುಹಿಸಬಹುದು.

ಪುಸ್ತಕದ ಮುಚ್ಚುವಿಕೆ ಮತ್ತು ದಾಖಲೆ ದಿನಾಂಕ:

ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 91ರ ಅನುಸಾರವಾಗಿ ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ತಿದ್ದುಪಡಿ ನಿಯಮಗಳು, 2015ರ ನಿಯಮ 10ನ್ನು ಓದಿಕೊಂಡಂತೆ ಎಜಿಎಂ ಉದ್ದೇಶಕ್ಕಾಗಿ ಕಂಪನಿಯ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಬುಧವಾರ, ಸೆಪ್ಟೆಂಬರ್ 10, 2025ರಿಂದ ಮಂಗಳವಾರ, ಸೆಪ್ಟೆಂಬರ್ 16, 2025ರ ವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಲ್ಪಟ್ಟಿರುತ್ತದೆ ಎಂದು ನೋಟೀಸ್ ನೀಡಲಾಗಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ದಿನಾಂಕ : ಆಗಸ್ಟ್ 24, 2025
ಸ್ಥಳ : ಬೆಂಗಳೂರು

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ರಸ್ತೆಯಲ್ಲಿ ಓಡಾಡುವ ಬೀಡಾಡಿ ದನ'

ಚಾಮರಾಜ ಪೇಟೆಯ ಉಮಾ ಟಾಕೀಸ್ ಪಕ್ಕದ ರಸ್ತೆ ಹಾಗೂ ಆರನೇ ಅಡ್ಡ ರಸ್ತೆಗಳಲ್ಲಿ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಈ ಭಾಗದಲ್ಲಿ ವಾಹನಗಳ ಸಂಚಾರಕ್ಕೆ ಸಮಸ್ಯೆ ಆಗುತ್ತಿದ್ದು, ಸಂಚಾರ ದಟ್ಟಣೆಗೂ ಕಾರಣವಾಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತಿವೆ. ಇವುಗಳಿಂದ ಬೀದಿಬದಿಯ ವ್ಯಾಪಾರಿಗಳಿಗೆ ಕಿರಿಕಿರಿ ಆಗುತ್ತಿದೆ. ರಸ್ತೆ ಬದಿಯಲ್ಲಿ ಹಾಕಿರುವ ಕಸವನ್ನು ರಸ್ತೆಗೆ ಎಳೆದು ತರುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಬೀಡಾಡಿ ದನಗಳ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು.

ಸಂಜೀವಿನಿ, ಚಾಮರಾಜಪೇಟೆ

'ಡಾಂಬರ್ ಕಾಣದ ರಸ್ತೆ ದುರಸ್ತಿಗೆ ಆಗ್ರಹ'

ಉತ್ತರಹಳ್ಳಿ ಹೋಬಳಿಯ ಎಜಿಎಸ್ ಬಡಾವಣೆಯ ನಾಲ್ಕನೇ ಕ್ರಾಸ್‌ನ ರಸ್ತೆಗೆ ಇದುವರೆಗೆ ಡಾಂಬರ್ ಹಾಕಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಇದರಿಂದ ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಓಡಾಡಲು ತೊಂದರೆ ಆಗುತ್ತಿದೆ. ಈ ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ಹಲವು ಬಾರಿ ಬಿದ್ದು, ಗಾಯ ಮಾಡಿಕೊಂಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಈ ರಸ್ತೆಗೆ ಡಾಂಬರ್ ಹಾಕಲು ಕ್ರಮ ಕೈಗೊಳ್ಳಬೇಕು.

ಶ್ವೇತಾ, ಎಜಿಎಸ್ ಬಡಾವಣೆ

'ಖಾಲಿ ನಿವೇಶನದಲ್ಲಿ ಕಸದ ರಾಶಿ'

ನಾಗದೇವನಹಳ್ಳಿಯ ರಾಜು ಬಡಾವಣೆಯ ನೇತಾಜಿ ರಸ್ತೆಯ ತಿರುವಿನಲ್ಲಿರುವ ಖಾಲಿ ನಿವೇಶನವೊಂದರಲ್ಲಿ ಕಟ್ಟಡ ನಿರ್ಮಾಣದ ಸಾಮಗ್ರಿ, ಕಸದ ರಾಶಿ ತುಂಬಿಕೊಂಡಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಈ ಕಸದ ರಾಶಿಯನ್ನು ಕೂಡಲೇ ವಿಲೇವಾರಿ ಮಾಡಿ, ನಗರದ ಸೌಂದರ್ಯವನ್ನು ಕಾಪಾಡಬೇಕು.

ವೇದ, ನಾಗದೇವನಹಳ್ಳಿ

'ರಸ್ತೆ ಗುಂಡಿ ಮುಚ್ಚಿ'

ರಾಜರಾಜೇಶ್ವರಿ ನಗರದ ಲಗ್ಗೆರೆಯ ಹೊಸ ಬಿಎಂಟಿಸಿ ಬಸ್ ತಂಗುದಾಣದ ಮುಂಭಾಗದ ರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿದ್ದು, ವಾಹನಗಳ ಸಂಚಾರಕ್ಕೆ ತೊಂದರೆ ಆಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಸಂಭವಿಸಿವೆ. ಮಳೆ ಬಂದರೆ ಗುಂಡಿಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ಇದರಿಂದ ರಸ್ತೆ ಯಾವುದು, ಗುಂಡಿ ಯಾವುದು ಎಂಬುದೇ ತಿಳಿಯುವುದಿಲ್ಲ. ಇಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಬಿಬಿಎಂಪಿ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

ಜಿ.ಸಿದ್ದಗಂಗಯ್ಯ, ಚೌಡೇಶ್ವರಿ ನಗರ

'ಆರೋಗ್ಯ ಸೇವೆ ಸುಧಾರಣೆಗೆ ತಜ್ಞರ ಸಹಭಾಗಿತ್ವ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಆರೋಗ್ಯ ಸೇವೆಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಇಲಾಖೆ ಕಾರ್ಯತತ್ಪರವಾಗಿರುವ ಜತೆಗೆ ಅನುಭವ ಇರುವ ಸಂಸ್ಥೆ, ತಜ್ಞರೊಂದಿಗೂ ಸಹಭಾಗಿತ್ವ ಮಾಡಿಕೊಳ್ಳುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ (ಐಪಿಎಚ್) ಸಂಸ್ಥೆಯು ಐಐಎಸ್ಸಿಯ ರಾಮರಾವ್ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 20ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ಬೇಗನೇ ರೋಗ ಪತ್ತೆ ಮಾಡಿ ಅದಕ್ಕೆ ಪೂರಕ ಔಷಧ ನೀಡಿ ಜನರ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ವೈದ್ಯರೊಂದಿಗೆ ನುರಿತ ಸಿಬ್ಬಂದಿಯೂ ಬೇಕಾಗುತ್ತದೆ. ಸರ್ಕಾರ ಒಂದರಿಂದಲೇ ಇದನ್ನು ಮಾಡಲಾಗದು ಎಂದು ಹೇಳಿದರು.

ಪಬ್ಲಿಕ್ ಹೆಲ್ತ್ ಫೌಂಡೇಷನ್ ಆಫ್ ಇಂಡಿಯಾದ ಸಂಸ್ಥಾಪಕ ಡಾ.ಕೆ.ಶ್ರೀನಾಥರೆಡ್ಡಿ ಮಾತನಾಡಿ, 'ಬೆಂಗಳೂರು ಸಹಿತ ಐದು ಕಡೆಗಳಲ್ಲಿ ಪಬ್ಲಿಕ್ ಹೆಲ್ತ್ ಫೌಂಡೇಷನ್ ಆಫ್ ಇಂಡಿಯಾದ ಐದು ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ಅನುಮತಿ ದೊರೆತಿದ್ದು, ಐಪಿಎಚ್ ಜತೆಗೆ ಸಹಭಾಗಿತ್ವ ಹೊಂದಲಿದೆ' ಎಂದು ತಿಳಿಸಿದರು.

ಕರುಣ ಟ್ರಸ್ಟ್‌ನ ಡಾ.ಎಚ್. ಸುದರ್ಶನ್, ಐಪಿಎಚ್‌ನ ಸಂಸ್ಥಾಪಕರಾದ ಡಾ.ದೇವದಾಸನ್, ಡಾ.ರೂಪಾ ದೇವದಾಸನ್, ನಿರ್ದೇಶಕ ಡಾ.ಪ್ರಶಾಂತ್, ಡಾ.ಲತಾ ಜಗನಾಥನ್, ಡಾ. ಪ್ರಗತಿ ಹೆಬ್ಬಾರ್ ಹಾಜರಿದ್ದರು. ಇದೇ ವೇಳೆ ಟಿ.ಟಿ.ನರಸಿಂಹನ್ ಸ್ಕೂಲ್ ಆಫ್ ಅಡ್ವಾನ್ಸಡ್ ಸ್ಟಡೀಸ್ ಸಂಸ್ಥೆಗೆ ಚಾಲನೆ ನೀಡಲಾಯಿತು.

ಒಂದು ಕಿ.ಮೀ.ಗೆ ₹425!

ಆ್ಯಪ್ ಆಧಾರಿತ ‘ಉಬರ್’ ಕಂಪನಿಯ ಆಟೋದರದ ಬಗ್ಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವ್ಯಂಗ್ಯವಾಗಿ ತಿವಿದ ನೆಟ್ಟಿಗರು
- ಉಬರ್‌ಗಿಂತ ಬೇರೆ ಕಂಪನಿಗಳ ದರ ಕಡಿಮೆ: ಅಭಿಪ್ರಾಯ

ಬೆಂಗಳೂರು: ಮಳೆಯ ಸಮಯದಲ್ಲಿ ಒಂದು ಕಿ.ಮೀ. ಸಂಚರಿಸಲು ‘ಉಬರ್’ ಆ್ಯಪ್‌ನಲ್ಲಿ ₹425 ತೋರಿಸಿದ್ದನ್ನು ‘ರೆಡಿಟ್’ನಲ್ಲಿ ಆರ್/ಬೆಂಗಳೂರು ಎಂಬ ಖಾತೆದಾರ ಹಂಚಿಕೊಂಡಿದ್ದಾರೆ. ದರ ನೋಡಿ ದಿಗ್ಭ್ರಮೆ ಉಂಟಾಯಿತು ಎಂದು ದರದ ಸ್ಕ್ರೀನ್‌ಶಾಟ್ ಹಂಚಿಕೊಂಡಿದ್ದಾರೆ.

ಶುಕ್ರವಾರ ರಾತ್ರಿ ಹೊಸೂರು ರಸ್ತೆಯಲ್ಲಿ ಈ ರೀತಿ ಆಗಿದೆ. ಈ ರೀತಿ ವಿಪರೀತ ದರ ವಸೂಲಿ ಮಾಡುತ್ತಿರುವುದರ ವಿರುದ್ಧ ಅನೇಕ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದರೆ, ಕೆಲವರು ಹಾಸ್ಯಮಯವಾಗಿ ತಿವಿದಿದ್ದಾರೆ.

‘ನನ್ನ ಸ್ನೇಹಿತ ಊರಿಗೆ ಹೊರಟಿದ್ದ. ಮಳೆ ಬರುತ್ತಿದ್ದುದರಿಂದ ಉಬರ್ ಆ್ಯಪ್‌ನಲ್ಲಿ ಆಟೊ ಬುಕ್ ಮಾಡಲು ಹೋಗಿದ್ದ. 3 ನಿಮಿಷದ ಪ್ರಯಾಣಕ್ಕೆ ₹425.11 ತೋರಿಸಿತ್ತು. ಕಾರಲ್ಲಿ ಹೋಗುವುದಿದ್ದರೆ ₹364 ತೋರಿಸುತ್ತಿತ್ತು. 1.ಕಿ.ಮೀ.ಗೆ ಇದು ದುಬಾರಿಯಾಗಿತ್ತು. ಸ್ನೇಹಿತ ಆಟೊದಲ್ಲಿ ಹೋಗುವ ಯೋಚನೆಯನ್ನೇ ಕೈಬಿಟ್ಟು, ಛತ್ರಿ ಹಿಡಿದು ನಡೆದುಕೊಂಡು ಹೋದ’ ಎಂದು ಬರೆದುಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಕ್ಯಾಬ್ ದರಗಳು



ಆಟೊ ದರದ ಸ್ಕ್ರೀನ್‌ಶಾಟ್

ವಿಶ್ವದರ್ಜೆಗೇರಿವೆ. ಜರ್ಮನಿಯಲ್ಲಿ ಬೆಂಜ್ ಟ್ಯಾಕ್ಸಿಯಲ್ಲಿ ಈ ದೂರಕ್ಕೆ, ಇಷ್ಟೇ ಬೆಲೆ ಆಗುತ್ತದೆ ಎಂದು ಒಬ್ಬರು ಕಮೆಂಟ್ ಮಾಡಿದ್ದಾರೆ. ಅಮೆರಿಕದಲ್ಲಿ ಉಬರ್/ಲಿಫ್ಟ್ ಕ್ಯಾಬ್‌ಗಳ ದರದಷ್ಟೇ ಬೆಂಗಳೂರಿನಲ್ಲಿ ಇರುವುದು ತಮಾಷೆಯಾಗಿದೆ ಎಂದು ಇನ್ನೊಬ್ಬರು ಹೇಳಿದ್ದರೆ, ಆಟೊ ಖರೀದಿಸಲು ಇಲ್ಲವೇ ಛತ್ರಿ ಖರೀದಿಸಲು ಇದು ಸಕಾಲ ಎಂದು ಮತ್ತೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಹತ್ತಿರ ಇದ್ದರೆ ನಡೆದುಕೊಂಡು ಹೋಗಬೇಕು ಎಂದು ಒಬ್ಬರು ಸಲಹೆ ನೀಡಿದ್ದಾರೆ. ಲಗೇಜು ಇದ್ದಿದ್ದರಿಂದ ಆಟೊ ಬುಕ್ ಮಾಡಲು ಹೋಗಿದ್ದು, ಇಲ್ಲದೇ ಇದ್ದರೆ ನಡೆಯುವುದೇ ನಮ್ಮ ಆಯ್ಕೆ ಎಂದು ಅದಕ್ಕೆ ಆರ್/ಬೆಂಗಳೂರು ಪ್ರತಿಕ್ರಿಯೆ ನೀಡಿದ್ದಾರೆ.

‘ಅವರು ಛತ್ರಿ ತೆಗೆದುಕೊಂಡು ಏಕೆ ನಡೆಯಲಿಲ್ಲ ಎಂದು ನಾನು ಹೇಳಲು ಹೊರಟಿದ್ದೆ. ರಸ್ತೆಗಳು ಮತ್ತು ಮೂಲ ಸೌಕರ್ಯಗಳು ಕೆಟ್ಟದಾಗಿವೆ ಎಂದು ನನಗೆ ತಿಳಿದಿದೆ, ಆದರೆ ನಾವು ಕಡಿಮೆ ದೂರ ನಡೆಯಲು ಅಥವಾ ಸೈಕ್ಲಿಂಗ್ ಮಾಡಲು ಪ್ರಾರಂಭಿಸುವ ಸಮಯ ಇದು’ ಎಂದು ಒಬ್ಬರು ಸಲಹೆ ನೀಡಿದ್ದಾರೆ.

ಉಬರ್‌ಗಿಂತ ಬೇರೆ ಅಗ್ರಿಗೇಟರ್ ಕಂಪನಿಗಳ ಆ್ಯಪ್‌ನಲ್ಲಿ ದರ ಕಡಿಮೆ ಇದೆ ಎಂಬ ಬಗ್ಗೆಯೂ ಗಮನ ಸೆಳೆದಿದ್ದಾರೆ.

ವಿದ್ಯುತ್ ವ್ಯತ್ಯಯ ಗ್ರಾಹಕರ ಪರದಾಟ

ಬೆಂಗಳೂರು: ಹೂಡಿ 220/66/11 ವಿದ್ಯುತ್ ವಿತರಣಾ ಕೇಂದ್ರದಲ್ಲಿ ಭಾನುವಾರ ತುರ್ತು ನಿರ್ವಹಣೆ ಕೈಗೊಳ್ಳಲಾಗಿತ್ತು. ಇದರಿಂದ ಆರು ಗಂಟೆಗಳ ಕಾಲ ವಿದ್ಯುತ್ ಇಲ್ಲದೇ ಗ್ರಾಹಕರು ಪರದಾಡಿದರು.

ವಿದ್ಯುತ್ ವ್ಯತ್ಯಯವಾದ ಸ್ಥಳಗಳು: ಗರುಡಾಚಾರಪಾಳ್ಯ, ಆರ್‌ಎಚ್‌ಬಿ ಕಾಲೊನಿ, ಸಿಂಗಯ್ಯನಪಾಳ್ಯ, ಗಾಯಿತ್ರಿ ಬಡಾವಣೆ, ಬೃಂದಾವನ ಬಡಾವಣೆ, ಹೂಡಿ ಮುಖ್ಯರಸ್ತೆ, ಓಂಶಕ್ತಿ ಬಡಾವಣೆ, ಮುನೇಶ್ವರ ದೇವಸ್ಥಾನದ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಬೀದಿ ನಾಯಿ ರಕ್ಷಿಸಿ...

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೀದಿ ನಾಯಿಗಳ ರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರಾಣಿಗಳ ಹಕ್ಕುಗಳ ಪರ ಹೋರಾಟಗಾರರು ಪ್ರತಿಭಟನೆ ನಡೆಸಿದರು

ಚುಟುಕು ಸುದ್ದಿ

ಭದ್ರತಾ ಸಿಬ್ಬಂದಿ ಮೇಲೆ ಹರಿದ ಲಾರಿ

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಭದ್ರತಾ ಸಿಬ್ಬಂದಿಯೊಬ್ಬರು ಮೃತಪಟ್ಟಿರುವ ಘಟನೆ ರಾಜಾಜಿನಗರ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಖಾಸಗಿ ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದ ಸಂಜೀವ್ ಕುಮಾರ್ (22) ಮೃತ ವ್ಯಕ್ತಿ.

ಬಿಹಾರ ಮೂಲದ ಸಂಜೀವ್ ಪೀಣ್ಯದಲ್ಲಿ ವಾಸವಾಗಿದ್ದರು. ರಾತ್ರಿ ಕೆಲಸ ಮುಗಿಸಿ ದ್ವಿಚಕ್ರ ವಾಹನದಲ್ಲಿ ಮನೆಗೆ ಹೋಗುತ್ತಿದ್ದ ವೇಳೆ ಕೃಷ್ಣಾನಂದ ನಗರದ ಜಂಕ್ಷನ್ ಬಳಿ ಹಿಂದಿನಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ವಾಹನದಿಂದ ಕೆಳಗೆ ಬಿದ್ದ ಸಂದರ್ಭದಲ್ಲಿ ಲಾರಿ ಚಕ್ರ ಅವರ ಮೇಲೆ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಾಲನೆ ಮಾಡುತ್ತಿದ್ದ ರ‍್ಯಾಪಿಡೊ ಸ್ಕೂಟರ್‌ನ ಚಾಲಕ ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳಕ್ಕೆ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

2.50 ಲಕ್ಷ ಪ್ರಕರಣಗಳು ಇತ್ಯರ್ಥ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳಲು ಶೇಕಡ 50ರಷ್ಟು ರಿಯಾಯಿತಿಯಡಿ ದಂಡ ಪಾವತಿಸಲು ವಾಹನ ಮಾಲೀಕರಿಗೆ ಅವಕಾಶ ಕಲ್ಪಿಸಿದ್ದು, ಈವರೆಗೆ ಎಲ್ಲ ವಿಧಾನಗಳ ಮೂಲಕ ಒಟ್ಟು 2,56,102 ಪ್ರಕರಣಗಳು ಇತ್ಯರ್ಥಗೊಂಡು, ₹7,19,51,500 ದಂಡ ಪಾವತಿಯಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಸೆಪ್ಟೆಂಬರ್ 12ರವರೆಗೆ ದಂಡ ಪಾವತಿಸಲು ಅವಕಾಶವಿದೆ. ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಳ್ಳಬಹುದು.

ಬಳಿಕ ಪಾವತಿಸಲು ಇಚ್ಛಿಸುವ ದಂಡದ ಮೊತ್ತವನ್ನು ಆಯ್ಕೆ ಮಾಡಿದರೆ, ರಿಯಾಯಿತಿ ಮೊತ್ತದ ಪಾವತಿಯ ಆಯ್ಕೆ ಲಭ್ಯವಾಗುತ್ತದೆ. ನಂತದ ದಂಡದ ಮೊತ್ತ ಪಾವತಿಸಬಹುದು.

ಮೇಲ್ಸೇತುವೆಯಿಂದ ಬಿದ್ದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು-ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ-44ರ ಬಚ್ಚಳ್ಳಿ ಗೇಟ್ ಮೇಲ್ಸೇತುವೆಯಲ್ಲಿ ಶನಿವಾರ ರಾತ್ರಿ ದ್ವಿಚಕ್ರ ವಾಹನ ಮತ್ತು ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಮಹಿಳೆಯೊಬ್ಬರು ಸುಮಾರು 30 ಅಡಿ ಎತ್ತರದ ಮೇಲ್ಸೇತುವೆಯಿಂದ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ.

ಬಾಣಸವಾಡಿ ನಿವಾಸಿ ನೇತ್ರಾವತಿ (31) ಅವರು ಪತಿ ಶಿವು ಜತೆ ದ್ವಿಚಕ್ರ ವಾಹನದಲ್ಲಿ ಚಿಕ್ಕಬಳ್ಳಾಪುರಕ್ಕೆ ಹೋಗುತ್ತಿದ್ದಾಗ ದುರ್ಘಟನೆ ನಡೆದಿದೆ.

‘ಕಾರು ಚಾಲಕ ಏಕಮುಖ ಸಂಚಾರದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಚಾಲನೆ ಮಾಡಿಕೊಂಡು ಬಂದು ನೇತ್ರಾವತಿ ದಂಪತಿಯ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾನೆ. ಅಪಘಾತದ ರಭಸಕ್ಕೆ ನೇತ್ರಾವತಿ ಅವರು ದ್ವಿಚಕ್ರ ವಾಹನದಿಂದ ಹಾರಿ ಮೇಲ್ಸೇತುವೆಯಿಂದ ಕೆಳಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ದ್ವಿಚಕ್ರ ವಾಹನ ಸಮೇತ ಮೇಲ್ಸೇತುವೆಯಲ್ಲೇ ಬಿದ್ದ ಶಿವು ಅವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ನಂತರ ಕಾರು ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಕಾರಿನ ದೃಶ್ಯ ಸೆರೆಯಾಗಿದ್ದು, ಈ ಸುಳಿವು ಆಧರಿಸಿ ಚಾಲಕನ ಪತ್ತೆ ಕಾರ್ಯ ಮುಂದುವರಿಸಿದ್ದೇವೆ’ ಎಂದು ಹೇಳಿದ್ದಾರೆ.

ನೇತ್ರಾವತಿ ಅವರು ಹೋಟೆಲ್‌ನಲ್ಲಿ ಸ್ವಾಗತಕಾರಿಣಿ ಆಗಿದ್ದರು. ಶಿವು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ದೇವನಹಳ್ಳಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಎಂಟಿಸಿ ಬಸ್ ಹರಿದು ಬಾಲಕ ಸಾವು

ಬೆಂಗಳೂರು: ಬಿಎಂಟಿಸಿ ಬಸ್ ಹರಿದು ಹನ್ನೊಂದು ವರ್ಷದ ಬಾಲಕ ಮೃತಪಟ್ಟಿರುವ ಘಟನೆ ಕೆ.ಆರ್. ಮಾರುಕಟ್ಟೆ ಬಳಿ ಭಾನುವಾರ ನಡೆದಿದೆ.

ಜೆ.ಎಂ.ಪಾಳ್ಯ ನಿವಾಸಿ ಸುನಿಲ್ ಕುಮಾರ್ ಅವರ ಅಣ್ಣನ ಮಗ ಶಬರೀಶ್ ಮೃತ ಬಾಲಕ.

ಸ್ಥಳೀಯ ದೇವಸ್ಥಾನದ ಅರ್ಚಕರಾಗಿರುವ ಸುನಿಲ್ ಕುಮಾರ್ ಅವರು ತನ್ನ ಅಣ್ಣ ದಿವಂಗತ ದಿಲೀಪ್ ಕುಮಾರ್ ಅವರ ಮಗನ ಜತೆ ದ್ವಿಚಕ್ರ ವಾಹನದಲ್ಲಿ ಕೆ.ಆರ್.ಮಾರ್ಕೆಟ್‌ಗೆ ಸಂಜೆ 5ರ ಸುಮಾರಿಗೆ ಬಂದಿದ್ದರು. ಈ ವೇಳೆ ದ್ವಿಚಕ್ರ ವಾಹನಕ್ಕೆ ಬಸ್ ತಾಗಿದ್ದರಿಂದ ಶಬರೀಶ್ ಕೆಳಗೆ ಬಿದ್ದಿದ್ದಾನೆ. ಆಗ ಆತನ ಮೇಲೆ ಬಸ್‌ನ ಚಕ್ರಗಳು ಹರಿದ ಪರಿಣಾಮ, ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಬಲ ಭಾಗಕ್ಕೆ ಬಿದ್ದ ಸುನಿಲ್ ಕುಮಾರ್ ಅವರಿಗೆ ಸಣ್ಣ ಗಾಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಎಂಟಿಸಿ ಚಾಲಕನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಾರ್ವಜನಿಕರು, ವ್ಯಾಪಾರಿಗಳು ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣೆ ಎದುರು ಜಮಾವಣೆಗೊಂಡರು. ಮೃತನ ಬಾಲಕನ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದರು.

ಸಹ ಕೈದಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಗುಂಪು ಸಹ ಕೈದಿಯ ಮೇಲೆ ಚೂಪಾದ ಆಯುಧದಿಂದ ಹಲ್ಲೆ ನಡೆಸಿದ್ದು, ಗಾಯಗೊಂಡಿರುವ ವಿಚಾರಣಾ ಕೈದಿಯನ್ನು ಜೈಲಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂಬಂಧ ಕಾರಾಗೃಹದ ಅಧೀಕ್ಷಕ ಇಮಾಮ್‌ಸಾಬ್ ಮ್ಯಾಗೇರ್ ಅವರ ದೂರು ಆಧರಿಸಿ ವಿಚಾರಣಾ ಕೈದಿಗಳಾದ ಭರತ್ ಕುಮಾರ್ ಅಲಿಯಾಸ್ ಕೆಟಿಎಂ ಭರತ್, ಸುಮಂತ್ ಕುಮಾರ್, ಮಣಿಕಂಠ, ಮಹಮ್ಮದ್ ಯಾಸಿನ್, ಸೂರಿ, ಅರುಣ್ ಕುಮಾರ್, ಕಾರ್ತಿಕ್, ಭರತ್ ಕುಮಾರ್ ಅಲಿಯಾಸ್ ಹುಲಿ ವಿರುದ್ಧ ಹಲ್ಲೆ ಆರೋಪದಡಿ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕೇಂದ್ರ ಕಾರಾಗೃಹದ ಭದ್ರತಾ ವಿಭಾಗ-2ರ ಕೊಠಡಿ ಸಂಖ್ಯೆ 6ರಲ್ಲಿ ಆಗಸ್ಟ್ 22ರಂದು ಈ ಘಟನೆ ನಡೆದಿದೆ. ಹಲ್ಲೆಯಿಂದ ವಿಚಾರಣಾಧೀನ ಕೈದಿ ಅನಿಲ್ ಕುಮಾರ್‌ಗೆ ಗಾಯವಾಗಿದ್ದು, ಕೇಂದ್ರ ಕಾರಾಗೃಹದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾನೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ವಿಚಾರಣಾಧೀನ ಕೈದಿಗಳಾದ ಭರತ್ ಹಾಗೂ ಆತನ ಎಂಟು ಮಂದಿ ಸಹಚರರು ಪ್ರಕರಣವೊಂದರ ವಿಚಾರಣೆ ಸಂಬಂಧ ವಿಡಿಯೊ ಕಾನ್ಫರೆನ್ಸ್‌ಗೆ ಹಾಜರಾಗಲು ತೆರಳುತ್ತಿದ್ದ ಅನಿಲ್ ಮೇಲೆ ಹಲ್ಲೆ ನಡೆಸಿದ್ದಾರೆ. ಚೂಪಾದ ವಸ್ತುವಿನಿಂದ ಹಲ್ಲೆ ಮಾಡಿದ ಪರಿಣಾಮ ಆತ ಗಾಯಗೊಂಡಿದ್ದಾನೆ. ಬಳಿಕ ಜೈಲು ಸಿಬ್ಬಂದಿ ಮಧ್ಯ ಪ್ರವೇಶಿಸಿ ಜಗಳ ಬಿಡಿಸಿದ್ದಾರೆ.

ಅಪರಾಧ ಸುದ್ದಿ

ಗಾಯಗೊಂಡಿದ್ದ ಅನಿಲ್‌ನನ್ನು ಕೇಂದ್ರ ಕಾರಾಗೃಹದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಹಲ್ಲೆಗೆ ನಿಖರ ಕಾರಣ ತಿಳಿದು ಬಂದಿಲ್ಲ’ ಎಂದು ತಿಳಿಸಿದ್ದಾರೆ.

ಸಹ ಕೈದಿ ಮೇಲೆ ಹಲ್ಲೆ ಹಾಗೂ ಜೈಲು ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ ಭರತ್ ಹಾಗೂ ಆತನ ಸಹಚರರ ವಿರುದ್ಧ ದೂರು ನೀಡಿದ್ದಾರೆ. ಈ ದೂರಿನ ಮೇರೆಗೆ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕರ್ತವ್ಯ ಲೋಪ: ಅಮಾನತು

ಚನ್ನಪಟ್ಟಣ (ರಾಮನಗರ): ತಾಲ್ಲೂಕಿನ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಕಳ್ಳತನ ಪ್ರಕರಣದ ಆರೋಪಿಯ ಲಾಕಪ್ ಡೆತ್ ಆರೋಪಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪದ ಆರೋಪದ ಮೇಲೆ ಠಾಣೆಯ ಎಎಸ್‌ಐ ನಾಗರಾಜು, ಕಾನ್‌ಸ್ಟೆಬಲ್‌ಗಳಾದ ಲಕ್ಷ್ಮಿನಾರಾಯಾಣ, ಪ್ರತಾಪ್ ಹಾಗೂ ಸೋಮನಾಥ್ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಅಮಾನತುಗೊಳಿಸಿದ್ದಾರೆ.

ದೇವಸ್ಥಾನದಲ್ಲಿ ನಡೆದಿದ್ದ ಕಳ್ಳತನಕ್ಕೆ ಸಂಬಂಧಿಸಿದಂತೆ ಬಂಧಿತನಾಗಿದ್ದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ದುಂಡನಹಳ್ಳಿಯ ರಮೇಶ್ (59) ಶವ ಠಾಣೆಯ ಶೌಚಾಲಯದಲ್ಲಿ ಆ. 20ರಂದು ಬೆಳಗಿನ ಜಾವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ‘ಪೊಲೀಸರೇ ಹೊಡೆದು ಸಾಯಿಸಿ ನೇಣು ಹಾಕಿದ್ದಾರೆ. ಇದು ಲಾಕಪ್‌ಡೆತ್’ ಎಂದು ರಮೇಶ್ ಕುಟುಂಬದವರು ಪೊಲೀಸರ ವಿರುದ್ಧ ನೇರ ಆರೋಪ ಮಾಡಿದ್ದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಮಗುವಿಗೆ ಜನ್ಮ ನೀಡಿ ಮಹಿಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಕೆರೆಯಲ್ಲಿ ದೊರೆತ ಮಹಿಳೆಯ ಶವದ ಗುರುತು ಪತ್ತೆಹಚ್ಚಿರುವ ಪೊಲೀಸರು, ಮೃತಳನ್ನು ನೇಪಾಳದ ಜೇನಿ ಶಾ ಎಂದು ಗುರುತಿಸಿದ್ದಾರೆ.

ಆಗಸ್ಟ್ 23ರಂದು ಲಾಲ್‌ಬಾಗ್‌ನ ಕೆರೆಯಲ್ಲಿ ಶವ ಗಮನಿಸಿದ ಭದ್ರತಾ ಸಿಬ್ಬಂದಿ, ಸಿದ್ದಾಪುರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು.

‘ಪತಿ ನಬ್‌ರಾಜ್‌ರೊಂದಿಗೆ ಸರ್ಜಾಪುರದಲ್ಲಿ ವಾಸವಿದ್ದ ಜೇನಿ ಶಾ, ನಾಲ್ಕು ದಿನಗಳ ಹಿಂದೆಯಷ್ಟೇ ವಾಣಿವಿಲಾಸ ಆಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದಳು. ಮಗುವಿನ ಆರೋಗ್ಯ ಸರಿಯಿರಲಿಲ್ಲ ಎಂದು ಮಾನಸಿಕವಾಗಿ ನೊಂದಿದ್ದಳು. ಪತ್ನಿ ಆಸ್ಪತ್ರೆಯಿಂದ ನಾಪತ್ತೆಯಾಗಿರುವ ಬಗ್ಗೆ ಆಗಸ್ಟ್ 23ರಂದು ಪತಿ ಪೊಲೀಸ್ ಠಾಣೆಗೆ ದೂರು ನೀಡಲು ಬಂದಿದ್ದರು. ಈ ವೇಳೆ ಲಾಲ್‌ಬಾಗ್ ಕೆರೆಯಲ್ಲಿ ಪತ್ತೆಯಾದ ಮಹಿಳೆಯ ಮೃತದೇಹವನ್ನು ಪತಿ ಗುರುತಿಸಿದ್ದಾರೆ. ಮಗುವಿನ ಆರೋಗ್ಯ ಸರಿಯಾಗಿಲ್ಲ ಎಂದು ಬೇಸತ್ತು ಆತ್ಮಹತ್ಯೆಗೆ ಶರಣಾಗಿರಬಹುದು’ ಎಂದು ಪೊಲೀಸರು ಶಂಕಿಸಿದ್ದಾರೆ.

‘ಮೃತ ಜೇನಿ ಶಾ ಅವರ ಮಗು ಆಸ್ಪತ್ರೆಯಲ್ಲಿಯೇ ಇದೆ. ಅವರ ಪತಿ ನಬ್‌ರಾಜ್ ಅವರ ಹೇಳಿಕೆ ಪಡೆಯಲಾಗಿದೆ. ಮಗುವಿನ ಆರೋಗ್ಯದಲ್ಲಿ ಸಮಸ್ಯೆ ಇದ್ದ ಕಾರಣಕ್ಕೆ ಪತ್ನಿ ಜೇನಿ ಶಾ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ. ನೇಪಾಳದಿಂದ ಜೇನಿ ಶಾ ಪೋಷಕರು ಬಂದ ಬಳಿಕ ಮರಣೋತ್ತರ ಪರೀಕ್ಷೆ ನಡೆಸಲಾಗುವುದು’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅಸಹಜ ಸಾವಿನ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸಿದ್ದಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕೆಸರುಮಯ ರಸ್ತೆಯಲ್ಲಿ ಸಂಚಾರ ಸಂಕಟ

ಜೆ. ಸಿ. ರಸ್ತೆ ಗುಂಡಿಗಳಿಂದಾಗಿ ಪರಿಸರ ದೂಳುಮಯ • ವ್ಯಾಪಾರಕ್ಕೆ ಹೊಡೆತ • ವೈಟ್ ಟಾಪಿಂಗ್ ಕಾಮಗಾರಿಯಿಂದ ಕಿರಿಕಿರಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ಈ ಕಡೆಯಿಂದ ವಾಹನ ಎತ್ತಿ. ಟೈರ್ ಅಡಿ ಕಲ್ಲು ಇಡಿ. ಈಗ ಆ ಕಡೆಯಿಂದ ಎತ್ತಿ, ಆ ಟೈರ್ ಅಡಿಯೂ ಕಲ್ಲು ಇಡಿ. ಎಲ್ಲ ಸೇರಿ ದಬ್ಬಿ..'

ಜೆ.ಸಿ. ರಸ್ತೆಯನ್ನು ಸಂಪರ್ಕಿಸುವ ಸ್ಥಳದಲ್ಲಿ ಶನಿವಾರ ಸಿಲುಕಿದ್ದ 'ಆಪೆ' ಗೂಡ್ಸ್ ವಾಹನವನ್ನು ತಳ್ಳುತ್ತಿದ್ದಾಗ ವಾಹನ ಚಾಲಕ ಹಾಗೂ ಅವರಿಗೆ ಸಹಾಯ ಮಾಡುತ್ತಿದ್ದವರ ಮಾತು ಇದು. ಒಂದು ವಾಹನವನ್ನು ತಳ್ಳಿ ರಸ್ತೆಗೆ ತಂದು ಎರಡು ನಿಮಿಷ ಕಳೆಯುವ ಹೊತ್ತಿಗೆ ಇನ್ನೊಂದು ಗೂಡ್ಸ್ ವಾಹನ ಸಿಲುಕಿಕೊಂಡಿತು. ಜೆ.ಸಿ. ರಸ್ತೆಯನ್ನು ಅಗೆದು ಹಾಕಿರುವುದರಿಂದ

ಇಬ್ರಾಹಿಂ

ಚೆನ್ನಿ

ನಿತ್ಯವೂ ವಾಹನ ಸವಾರರು ಇತರರ ಸಹಾಯವನ್ನು ಪಡೆದುಕೊಂಡೇ ಸಂಚರಿಸಬೇಕಾದ ಪರಿಸ್ಥಿತಿ ಉದ್ಭವವಾಗಿದೆ.

'ಇತ್ತೀಚೆಗೆ ಒಂದು ವಾಹನ ಕೆಸರಲ್ಲಿ ಸಿಲುಕಿ ಜಾರಿಹೋಗಿ ಪಲ್ಟಿಯಾಗಿತ್ತು. ಒಳಚರಂಡಿಗಾಗಿ ಇಲ್ಲಿ ಅಗೆದು ಸರಿಯಾಗಿ ಮುಚ್ಚದೇ ಹೋಗಿದ್ದಾರೆ. ಅರೆಬರೆ ತುಂಬಿಸಿದ್ದ ಮಣ್ಣು ಮಳೆಗೆ

ಮುಖ್ಯಾಂಶಗಳು

- ಅಗೆದ ಬಳಿಕ ಸರಿಯಾಗಿ ಮುಚ್ಚಲು ಜನರ ಆಗ್ರಹ
- ಕಾಮಗಾರಿ ಬೇಗ ಪೂರ್ಣಗೊಳಿಸಲು ಒತ್ತಾಯ
- ಸಾರ್ವಜನಿಕರ ಮನವಿಯನ್ನು ಕಿವಿಗೆ ಹಾಕಿಕೊಳ್ಳದ ಅಧಿಕಾರಿಗಳು

ಕೆಸರಿನಂತಾಗಿದೆ. ಅದರಲ್ಲಿ ವಾಹನಗಳು ಸಿಲುಕಿಕೊಳ್ಳುತ್ತಿವೆ' ಎಂದು ಸರಕುಗಳ ಸಾಗಾಟ ವ್ಯವಹಾರ ನಡೆಸುವ ಇಬ್ರಾಹಿಂ ತಿಳಿಸಿದರು.

ಪುರಭವನದ ಬಳಿ ಜಯಚಾಮ ರಾಜೇಂದ್ರ ರಸ್ತೆ (ಜೆ.ಸಿ. ರಸ್ತೆ) ವೈಟ್‌ಟಾಪಿಂಗ್‌ಗಾಗಿ ಅಗೆದು ಹಾಕಿರುವುದರಿಂದ ರಸ್ತೆಯ ಇಕ್ಕೆಲಗಳಲ್ಲಿ ದೂಳು ತುಂಬಿ ಹೋಗಿದೆ. ಪೈಪ್‌ಗಳನ್ನು ಅಳವಡಿಸಲು ಅಗೆದು, ಸರಿಯಾಗಿ ಮುಚ್ಚದೇ ಇರುವುದರಿಂದ ವಾಹನಗಳು ಸಿಲುಕಿಕೊಂಡು ಮುಂದಕ್ಕೆ ಹೋಗಲು ಪರದಾಡುವಂತಾಗಿದೆ ಎಂದು ಆಟೊ ಚಾಲಕ ಚೆನ್ನಿ ಪರಿಸ್ಥಿತಿ ವಿವರಿಸಿದರು.

ಮಿನರ್ವ ವೃತ್ತದಿಂದ ಪುರಭವನದವರೆಗೆ ಬಿಬಿಎಂಪಿಯಿಂದ ವೈಟ್‌ಟಾಪಿಂಗ್ ಕಾಮಗಾರಿ, ಜಲಮಂಡಳಿಯಿಂದ ಒಳಚರಂಡಿ ಕೊಳವೆ ಮಾರ್ಗ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಜೊತೆಗೆ ಮಳೆನೀರು ಚರಂಡಿಯನ್ನೂ ನಿರ್ಮಿಸಲಾಗುತ್ತಿದೆ. ಕೆಲವೆಡೆ ರಸ್ತೆ ಬದಿಯಲ್ಲಿ ಅಗೆದು ಪೈಪ್ ಹಾಕಿ ಮುಚ್ಚಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ ನೆಲ ಅಗೆದು ಹಾಗೆಯೇ ಬಿಡಲಾಗಿದೆ. ರಸ್ತೆಯ ಎರಡೂ ಕಡೆ ಒಟ್ಟೊಟ್ಟಿಗೆ ಕಾಮಗಾರಿ ನಡೆಸುತ್ತಿರುವುದರಿಂದ ವಾಹನಗಳ ಪಾರ್ಕಿಂಗ್‌ಗೂ ಸಮಸ್ಯೆಯಾಗಿದೆ.

ಯುಟಿಲಿಟಿ ಪೈಪ್‌ಗಳು, ಚರಂಡಿ ಪೈಪ್‌ಗಳನ್ನು ರಸ್ತೆ ಬದಿಯಲ್ಲಿ ರಾಶಿ ಹಾಕಲಾಗಿದೆ. ಅಲ್ಲಲ್ಲಿ ಚರಂಡಿ ಮುಚ್ಚಿರುವುದರಿಂದ ಕೊಳಚೆ ನೀರು ಅಲ್ಲಲ್ಲೇ ನಿಂತು ಗಬ್ಬು ನಾರುತ್ತಿದೆ.

'ಕಾಮಗಾರಿ ಆರಂಭವಾಗಿ ಎಂಟು ತಿಂಗಳು ಕಳೆದಿದ್ದರೂ ಕಾಲುಭಾಗ ಕೆಲಸವೂ ಆಗಿಲ್ಲ. ಜೆ.ಸಿ. ರಸ್ತೆ ತುಂಬಾ ಗುಂಡಿಗಳು ಬಿದ್ದಿವೆ. ಅವುಗಳನ್ನು ಮುಚ್ಚುವ ಕೆಲಸವನ್ನೂ ಮಾಡಿಲ್ಲ. ಅಗೆದುಹಾಕ್ತಾರೆ. ಹಾಗೇ ಬಿಟ್ಟು ಹೋಗುತ್ತಾರೆ. ಸಂಚಾರಕ್ಕೆ ತೊಡಕಾಗಿರುವುದರಿಂದ ವಾಹನಗಳು ನಿಧಾನವಾಗಿ ಚಲಿಸುವಂತಾಗಿದೆ. ಇದರಿಂದ ದಟ್ಟಣೆ ಉಂಟಾಗಿದೆ' ಎಂದು ಚಾಲಕ ಸುಲೈಮಾನ್ ತಿಳಿಸಿದರು.

'ದೂಳಿನಿಂದಾಗಿ ಜನರು ಸುತ್ತಮುತ್ತಲ ಅಂಗಡಿಗಳಿಗೆ ಬರುತ್ತಿಲ್ಲ. ವ್ಯಾಪಾರ ತುಂಬಾ ಕಡಿಮೆಯಾಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಬೇಕು' ಎಂದು ವ್ಯಾಪಾರಿ ಮಹಮ್ಮದ್ ಅಲಿ ಆಗ್ರಹಿಸಿದರು.

ಸಿಂಧಿ ಕಾಲೊನಿಯಿಂದ ಜೆ.ಸಿ ರಸ್ತೆಯನ್ನು ಸಂಪರ್ಕಿಸುವ ಜಾಗದಲ್ಲಿ ಕೆಸರಿನಲ್ಲಿ ಹೂತು ಹೋಗಿದ್ದ ಗೂಡ್ಸ್ ವಾಹನವನ್ನು ಹೊರತೆಗೆಯಲು ತಳ್ಳಬೇಕಾಗಿ ಬಂತು ಚಿತ್ರ: ಪ್ರಶಾಂತ್ ಎಚ್.ಜಿ.

ಸುಲೈಮಾನ್

ಮಹಮ್ಮದ್ ಅಲಿ

'ಕಾಂಕ್ರೀಟೀಕರಣವಾದಾಗ ಸಮಸ್ಯೆ ಇತ್ಯರ್ಥ'

ವೈಟ್ ಟಾಪಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಒಳಚರಂಡಿ ಕೊಳವೆ ಅಳವಡಿಕೆ, ಮಳೆನೀರಿನ ಚರಂಡಿ ನಿರ್ಮಾಣ ಸಹಿತ ಮೂಲ ಅವಶ್ಯಕತೆಗಳೊಂದಿಗೆ ಕಾಮಗಾರಿ ನಡೆಸಬೇಕಿರುವುದರಿಂದ ಸ್ವಲ್ಪ ಹೆಚ್ಚು ಸಮಯ ಹಿಡಿಯುತ್ತದೆ. ಕಾಂಕ್ರೀಟೀಕರಣವಾದಾಗ ಸಮಸ್ಯೆ ಪರಿಹಾರಗೊಳ್ಳಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಜೆ.ಸಿ. ರಸ್ತೆಯಲ್ಲಿ ಕಾಮಗಾರಿಗಾಗಿ ತಂದು ಹಾಕಿರುವ ಕೊಳವೆಗಳು, ಪೈಪ್‌ಗಳು

ಗುಂಡಿ ಮುಚ್ಚಿದ ಸಾರ್ವಜನಿಕರು

ದಾಬಸ್ ಪೇಟೆ: ವಿನಾಯಕ ಬಡಾವಣೆಯ ನಿವಾಸಿಗಳು ಸರ್ಕಾರವನ್ನು, ಸ್ಥಳೀಯ ಪಂಚಾಯಿತಿಯವರನ್ನು, ಸಂಬಂಧಿಸಿದ ಇಲಾಖೆಯವರನ್ನು ಕಾಯದೇ ಬಡಾವಣೆಯ ರಸ್ತೆ ಗುಂಡಿಗಳನ್ನು ಮುಚ್ಚಿದ್ದಾರೆ.

ಮಳೆಯಿಂದ ಗುಂಡಿಗಳು ಬಿದ್ದಿದ್ದವು. ಇದರಿಂದ ಜನ ಸಂಚಾರಕ್ಕೆ ತೊಂದರೆಯಾಗಿತ್ತು. ಇದನ್ನು ಮನಗಂಡ ಸ್ಥಳೀಯರಾದ ಎಚ್.ಬಿ. ನಾಗಭೂಷಣ್, ಪಂಡಿತ್ ಮಾಚಾ, ವಿಜಯ್ ಯಾದವ್, ನಾಗೇಶ್, ಮೋಹನ್, ಶಿವಕುಮಾರ್, ಸಿದ್ದೇಶ್, ಪುಟ್ಟರಾಜು, ಸತೀಶ್ ಪನ್ನೂರು, ಹರೀಶ್ ರಸ್ತೆಗೆ ಕಲ್ಲು-ಮಣ್ಣು ಹಾಕಿ ಮುಚ್ಚಿದರು.

CONNECT

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business to Business

Business

JV OPPORTUNITY in Bangalore for Customized Bungalow Projects with Architects, Layout Owners, and Builders. 8698483277.

Business Offers

Distributors

WANTED FOR Any Distributor For New startup Business as Partnership startup Business please Call:9000 182908

JOB OPPORTUNITIES

General

REQUIRED IMMEDIATELY Communication Skilled MANAGERS, LADY EXECUTIVES. MARKETING EXECUTIVES. Good Salary. Walkin V&V GROUP, Behind IIMB, Bannerghatta Road: 99000-54462

RENTAL PROPERTIES

Accommodation Available

Commercial

RENT 1350 Sqft Ground Floor Malleshwaram 11th Cross, Suitable for Showroom, Bank: 9945656569/ 9341271837/ 9845015030

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

PERSONAL

Change of Name

I, TEJASHREE C residing at Tumakuru-572102 have changed my name as THEJASHWINI C, vide affidavit dated 23/08/2025 before Notary K.S. Bammappanavar, Bengaluru

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಿಬಿಸಿ ಯೋಜನೆ: ಜಮೀನು ಮಾಲೀಕರ ಮನವೊಲಿಸುವಲ್ಲಿ ಬಿಡಿಎ ವಿಫಲ

ಭೂ ಪರಿಹಾರ: ಮೂಡದ ಒಮ್ಮತ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1) ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನುಗಳ ದರ ನಿಗದಿಗೆ ಸಂಬಂಧಿಸಿದಂತೆ ಜಮೀನು ಮಾಲೀಕರೊಂದಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಡೆಸಿದ ಸಂಧಾನ ಸೂತ್ರ ಸಭೆ ಮತ್ತೊಮ್ಮೆ ವಿಫಲವಾಗಿದೆ.

ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು ಹಾಗೂ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸುವಂತೆ ಜಮೀನು ಮಾಲೀಕರು ಪಟ್ಟು ಹಿಡಿದಿದ್ದರೆ, ಭೂ ಸ್ವಾಧೀನ ಕಾಯ್ದೆ 1894ರ ಅನ್ವಯ ಸಂಧಾನ ಸೂತ್ರದಡಿ ಪರಿಹಾರ ನೀಡುವುದಾಗಿ ಬಿಡಿಎ ಹೇಳುತ್ತಿದೆ. ಹಾಗಾಗಿ ಸಮಸ್ಯೆ ಮತ್ತಷ್ಟು ಕಗ್ಗಂಟಾಗಿದೆ.

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ರೈತರೊಂದಿಗೆ ಚರ್ಚಿಸಿ ದರ ನಿಗದಿ ಮಾಡಲು ಎಂಟು ಮಂದಿ ವಿಶೇಷ ಭೂಸ್ವಾಧೀನಾಧಿಕಾರಿಗಳ ತಂಡವನ್ನು ಪ್ರಾಧಿಕಾರ ರಚಿಸಿತ್ತು. ಎರಡು ದಿನ 66 ಗ್ರಾಮಗಳ ವ್ಯಾಪ್ತಿಯ ಜಮೀನು ಮಾಲೀಕರ ಅಹವಾಲು ಆಲಿಸಿತು.

ಯಲಹಂಕ ಮಿನಿ ವಿಧಾನಸೌಧ, ವರ್ತೂರು ನಾಡ ಕಚೇರಿ, ಹುಸ್ಕೂರು ಕಂದಾಯ ಕಚೇರಿ, ಬ್ಯಾಲಕೆರೆ ಗ್ರಾಮ ಪಂಚಾಯಿತಿ, ಅವಲಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಕಾಡುಗೋಡಿ ಬಿಬಿಎಂಪಿ ಕಚೇರಿ ಸೇರಿದಂತೆ ಎಂಟು ಕಡೆಗಳಲ್ಲಿ 74 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಹಲವು ಹಳ್ಳಿಗಳ ಭೂಮಾಲೀಕರೊಂದಿಗೆ ಪರಿಹಾರ ನಿಗದಿ ಸಂಬಂಧ ಚರ್ಚಿಸಿದರೂ ಫಲಪ್ರದವಾಗಿಲ್ಲ.

2024-25ರ ಮಾರ್ಗಸೂಚಿಯಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿನ ಜಮೀನುಗಳಿಗೆ ಎರಡರಷ್ಟು, ಗ್ರಾಮೀಣ ಪ್ರದೇಶಗಳಿಗೆ ಮೂರರಷ್ಟು ಪರಿಹಾರ ನೀಡಲು ಮುಂದಾಗಿದೆ. ಆದರೆ, ಮಾರುಕಟ್ಟೆ ಮೌಲ್ಯ ಆಧರಿಸಿ ಪರಿಹಾರ ನಿಗದಿಪಡಿಸುವಂತೆ ರೈತರು ಪಟ್ಟು-ಹಿಡಿದಿದ್ದಾರೆ. ಸದ್ಯ ಬಿಡಿಎ ನಿಗದಿಪಡಿಸಿದ ಪರಿಹಾರ ಮೊತ್ತ ಮಾರುಕಟ್ಟೆ ದರದ ಶೇಕಡ 25ಕ್ಕಿಂತಲೂ ಕಡಿಮೆ ಇದೆ ಎಂಬುದು ರೈತರ ಆಕ್ಷೇಪವಾಗಿದೆ.

ಆಯಾ ಗ್ರಾಮವಾರು ಮಾರ್ಗಸೂಚಿ ದರವನ್ನು ಗಮನದಲ್ಲಿಟ್ಟುಕೊಂಡು ಸಂಧಾನ ಸೂತ್ರದ ಮೂಲಕ ಭೂಸ್ವಾಧೀನ ಕಾಯಿದೆ 1984ರ ಅಡಿ ಪರಿಹಾರ ನೀಡಲು ಬಿಡಿಎ ಉದ್ದೇಶಿಸಿದೆ. ಆದರೆ, ಇದಕ್ಕೆ ಭೂ ಮಾಲೀಕರು ಒಪ್ಪುತ್ತಿಲ್ಲ.

ಕೆಲವೆಡೆ ರೈತರು ಸಭೆಗೆ ವಿರೋಧ ವ್ಯಕ್ತಪಡಿಸಿದ ಘಟನೆಯೂ ನಡೆಯಿತು. ಚಿಕ್ಕಬಾಣಾವರ ಪುರಸಭೆ ಬಳಿ ಆಯೋಜಿಸಿದ್ದ ಸಭೆಯಲ್ಲಿ ರೈತರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು. 'ಸಭೆ ಆಯೋಜನೆ ಕುರಿತು ನೋಟಿಸ್ ನೀಡಿಲ್ಲ. ಮಧ್ಯವರ್ತಿಗಳ ಮೂಲಕ ಸಭೆ ಆಯೋಜಿಸಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಯೋಜನೆ ವ್ಯಾಪ್ತಿಯ ಹಳ್ಳಿಗಳಿಗೆ ತೆರಳಿ ರೈತರನ್ನು ಮನವೊಲಿಸಲು ಸಂಧಾನ ಸಭೆಯನ್ನು ಈ ಹಿಂದೆಯೂ ನಡೆಸಿದ್ದರೂ ಪ್ರಯೋಜನವಾಗಿರಲಿಲ್ಲ. ಈಗಲೂ ಅದೇ ಸ್ಥಿತಿ ಮುಂದುವರಿದಿದೆ.

'ಪ್ರತಿ ಎಕರೆಗೆ ₹1.85 ಕೋಟಿ ಪರಿಹಾರ ನಿಗದಿಪಡಿಸಲಾಗಿದ್ದು, ಇದರ ಮೂರು ಪಟ್ಟು ಅಂದರೆ ಪ್ರತಿ ಎಕರೆಗೆ ₹5.55 ಕೋಟಿ ನೀಡಲು ಬಿಡಿಎ ಸಿದ್ಧವಿದೆ. ಆದರೆ, ಸದ್ಯ ಇಲ್ಲಿ ಅಂದಾಜು ₹10 ಕೋಟಿಯಿಂದ ₹15 ಕೋಟಿ ಮಾರುಕಟ್ಟೆ ಮೌಲ್ಯವಿದೆ. ಬಿಬಿಸಿ ಯೋಜನೆಗೆ ಜಮೀನು ನೀಡುವ ಭೂ ಮಾಲೀಕರಿಗೆ ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು. ಈ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕು. ಇದಕ್ಕೆ ಬಿಡಿಎ ಒಪ್ಪದಿದ್ದರೆ ನಿರಾಕ್ಷೇಪಣಾ (ಎನ್‌ಒಸಿ) ಪತ್ರ ಕೊಡಲಿ' ಎಂದು ಜಮೀನು ಮಾಲೀಕರು ಹೇಳಿದರು.

'ಮಹಾನಗರ ಯೋಜನಾ ಸಮಿತಿ (ಎಂಪಿಸಿ)ಆಗಬೇಕು. ಭೂಮಿಯ ಬೆಲೆ ನಿಗದಿ ಸಮಿತಿಯಲ್ಲಿ ಭೂ ಮಾಲೀಕರು ಮತ್ತು ಅನುಭವಿ ನಗರ ಯೋಜನಾ ತಜ್ಞರು ಇರಬೇಕು. ನ್ಯಾಯಯುತ ಪುನರ್ವಸತಿ ಮತ್ತು ಪುನರ್ವಸತಿ ಪರಿಹಾರ ನೀಡಬೇಕು. ಭೂಮಿ ನೀಡುವ ರೈತರ ಕುಟುಂಬದಲ್ಲಿ ಒಬ್ಬರಿಗೆ ಕಡ್ಡಾಯವಾಗಿ ಸರ್ಕಾರಿ ಉದ್ಯೋಗ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ಬಿಬಿಸಿ ಯೋಜನೆಗೆ 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಈವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಬೆರಳಣಿಕೆಯಷ್ಟು ಜಮೀನಿಗೆ ಪರಿಹಾರ ನೀಡಲಾಗಿದ್ದು, ಆ ಜಮೀನನ್ನೂ ಬಿಡಿಎ ವಶಕ್ಕೆ ಪಡೆದುಕೊಂಡಿಲ್ಲ. 2023ರ ಮಾರ್ಗಸೂಚಿ ದರವು ಎಕರೆಗೆ ₹5.50 ಕೋಟಿ ಇದೆ. ಆದರೆ, ₹4.50 ಕೋಟಿ ನೀಡಲು ನಿರ್ಧರಿಸಿದೆ. ಮಾರ್ಗಸೂಚಿ ದರವನ್ನು ಪರಿಷ್ಕರಿಸಿ, ಹೆಚ್ಚಿಸುವ ಬದಲು ಕಡಿಮೆ ಮಾಡಲಾಗಿದೆ. ಹಾಗಾಗಿ ಯೋಜನೆ ರದ್ದುಗೊಳಿಸಿ, ಹೊಸದಾಗಿ ಅಧಿಸೂಚನೆ ಹೊರಡಿಸಬೇಕು. ನ್ಯಾಯಬದ್ಧ ಪರಿಹಾರ, ಪುನರ್ವಸತಿ ಕಲ್ಪಿಸಬೇಕು. ಈ ಯೋಜನೆ ವಿರುದ್ಧ ರೈತರು ನ್ಯಾಯಾಲಯದಲ್ಲಿ 600 ಪ್ರಕರಣ ದಾಖಲಿಸಿದ್ದು, ವಿಚಾರಣೆ ಹಂತದಲ್ಲಿದೆ' ಎಂದು ಸೂಲಿಕುಂಟೆ ರೈತ ಶ್ರೀಧರ್ 'ಪ್ರಜಾವಾಣಿ'ಗೆ ತಿಳಿಸಿದರು.

'1894ರ ಕಾಯಿದೆಯಂತೆ ಪರಿಹಾರ ನೀಡಲು ಅವಕಾಶವಿಲ್ಲ ಎಂದು 2013ರ ಕಾಯ್ದೆ ಎರಡನ್ನೂ ಸಮತೋಲನ ಮಾಡಿ ಪರಿಹಾರ ನಿಗದಿಪಡಿಸಿದೆ. ಇಪ್ಪತ್ತು ವರ್ಷದ ಹಳೆಯ ಯೋಜನೆ ಇದಾಗಿದೆ. ಸುಪ್ರಿಂಕೋರ್ಟ್ ತೀರ್ಪಿನ ಅನ್ವಯ ಬಿಡಿಎ ಕಾಯ್ದೆ-1976 ಅಡಿಯ ಅಧಿಸೂಚಿತ ಜಮೀನುಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಭೂ ಸ್ವಾಧೀನ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯಿದೆ-2013 ಅನ್ವಯವಾಗುವುದಿಲ್ಲ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಪಿಆರ್‌ಆರ್ ರಸ್ತೆ ನಿರ್ಮಾಣಕ್ಕಾಗಿ 2,557 ಎಕರೆ ಭೂಮಿ
- 'ಎಲ್‌ಎಆರ್‌ಆರ್ ಕಾಯಿದೆ 2013' ಅಡಿ ಪರಿಹಾರಕ್ಕೆ ಒತ್ತಾಯ

74 ಕಿ.ಮೀ ಉದ್ದ

ಬಿಬಿಸಿ ನಿರ್ಮಾಣಕ್ಕೆ 2,557 ಎಕರೆ ಭೂಮಿಯ ಅಗತ್ಯವಿದೆ. 74 ಕಿ.ಮೀ. ಉದ್ದದ ಈ ರಸ್ತೆಯು 77 ಗ್ರಾಮಗಳಲ್ಲಿ ಹಾದು ಹೋಗಲಿದೆ. ಬೆಂಗಳೂರಿನ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ 10 ಪಥದ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲಾಗುತ್ತಿದೆ. ಈ ರಸ್ತೆ ತುಮಕೂರು ರಸ್ತೆ ಮತ್ತು ಹೊಸೂರು ರಸ್ತೆಯನ್ನು ಸಂಪರ್ಕಿಸುತ್ತದೆ.

ಇದು ಪ್ರವೇಶ ನಿಯಂತ್ರಿತ ಎಕ್ಸ್‌ಪ್ರೆಸ್‌ವೇ ಆಗಿದ್ದು, ಹೆಸರಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು ರಸ್ತೆ, ಹಳೆ ಮದ್ರಾಸ್ ರಸ್ತೆ, ಹೊಸಕೋಟೆ ರಸ್ತೆ ಹಾಗೂ ಸರ್ಜಾಪುರ ಸೇರಿದಂತೆ ಹಲವು ಗ್ರಾಮಗಳ ಮೂಲಕ ಹಾದು ಹೋಗುತ್ತದೆ.

ರೊಬೊಟಿಕ್ ತಂತ್ರಜ್ಞಾನ ಬೆನ್ನುಮೂಳೆ ಶಸ್ತ್ರಚಿಕಿತ್ಸೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯ ವೈದ್ಯರು ಬೆನ್ನುಮೂಳೆ ಸಮಸ್ಯೆಯಿಂದ ಬಳಲುತ್ತಿದ್ದ ಮೂವರಿಗೆ ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಬೆನ್ನುಮೂಳೆ ಕ್ಷಯ ರೋಗದಿಂದ ಬಳಲುತ್ತಿದ್ದ 14 ವರ್ಷದ ಉಷಾ ಎಚ್.ಎಂ., 'ಸ್ಕೋಲಿ ಯೋಸಿಸ್' ಸಮಸ್ಯೆ ಎದುರಿಸುತ್ತಿದ್ದ 17 ವರ್ಷದ ಸಾಜಿಯಾ ಐಮನ್ ಮತ್ತು 'ಬ್ರೂಸೆಲ್ಲಾ' ಸೋಂಕಿನಿಂದ ಬಳಲುತ್ತಿದ್ದ 34 ವರ್ಷದ ವೆಂಕೋಬ ಅವರು ರೊಬೊಟಿಕ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. 'ಸ್ಪೈನ್ ರೊಬೊಟ್', 'ಒ-ಆರ್ಮ್ ಇಂಟ್ರಾ ಆಪರೇಟಿವ್ ಇಮೇಜಿಂಗ್', 'ಸ್ಪೈನಲ್ ನ್ಯಾವಿಗೇಷನ್' ಮತ್ತು 'ನ್ಯೂರೋಮಾನಿಟರಿಂಗ್' ಎಂಬ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು, ಮೂರು ಸಂಕೀರ್ಣ ಬೆನ್ನುಮೂಳೆ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

'ಈಗಾಗಲೇ ಆಸ್ಪತ್ರೆಯು 10 ಸಾವಿರಕ್ಕೂ ಹೆಚ್ಚು ಯಶಸ್ವಿ ಮೂಳೆ ಶಸ್ತ್ರಚಿಕಿತ್ಸೆಗಳನ್ನು ನಡೆಸಿದೆ. ಸಂಕೀರ್ಣ ಬೆನ್ನುಮೂಳೆ ಸಮಸ್ಯೆಗಳನ್ನು ಹೊಂದಿರುವವರಿಗೆ, ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ' ಎಂದು ಆಸ್ಪತ್ರೆಯ ಬೆನ್ನುಮೂಳೆ ಶಸ್ತ್ರಚಿಕಿತ್ಸೆ ವಿಭಾಗದ ಸಲಹೆಗಾರ ಡಾ. ವಿನು ರಾಜ್ ಹೇಳಿದ್ದಾರೆ. 'ಪೊಲೀಸ್ ಅಧಿಕಾರಿಯಾಗಬೇಕೆಂಬ ಕನಸು ಹೊಂದಿದ್ದೆ. ಬೆನ್ನುಮೂಳೆ ಸಮಸ್ಯೆಯು ನನ್ನ ಕನಸಿಗೆ ಭಂಗವನ್ನುಂಟು ಮಾಡಿತ್ತು. ಸರಿಯಾಗಿ ನಡೆಯಲು ಸಾಧ್ಯವಾಗದೆ ನಿರಾಶಳಾಗಿದ್ದೆ. ಶಸ್ತ್ರಚಿಕಿತ್ಸೆಯ ಬಳಿಕ ದಿನದಿಂದ ದಿನಕ್ಕೆ ಬಲಿಷ್ಠಳಾಗುತ್ತಿದ್ದೇನೆ' ಎಂದು ಉಷಾ ಎಚ್.ಎಂ. ತಿಳಿಸಿದ್ದಾರೆ.

ಗ್ರಾಮಸಭೆಗೆ ಹಿರಿಯ ಅಧಿಕಾರಿಗಳ ಗೈರು: ಆಕ್ರೋಶ

ಯಲಹಂಕ: ಗ್ರಾಮ ಸಭೆಗಳಿಗೆ ಬಹುತೇಕ ಇಲಾಖೆಗಳ ಹಿರಿಯ ಅಧಿಕಾರಿಗಳು ಗೈರಾಗಿ, ಕಿರಿಯ ಹಾಗೂ ಸಹಾಯಕ ಅಧಿಕಾರಿಗಳನ್ನು ಕಳುಹಿಸುವ ಪ್ರವೃತ್ತಿ ಹೆಚ್ಚಾಗಿದೆ. ಇದರಿಂದ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತಿಲ್ಲ ಎಂದು ಮಾರೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ರಾಹುಲ್ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ಮಾರೇನಹಳ್ಳಿ ಗ್ರಾಮ ಪಂಚಾಯಿತಿ ಆಯೋಜಿಸಿದ್ದ 2025-26ನೇ ಸಾಲಿನ ಮೊದಲನೇ ಸುತ್ತಿನ ಗ್ರಾಮಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಧಿಕಾರಿಗಳು ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ಗೈರಾಗುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರೂ ಗ್ರಾಮಸಭೆಯಲ್ಲಿ ಪಾಲ್ಗೊಳ್ಳುವುದರಿಂದ ಹಲವಾರು ಸಮಸ್ಯೆಗಳು ಸ್ಥಳದಲ್ಲಿಯೇ ಬಗೆಹರಿಸಿಕೊಳ್ಳಬಹುದು ಎಂದರು. ಪಂಚಾಯಿತಿ ಉಪಾಧ್ಯಕ್ಷೆ ಜ್ಯೋತಿ ಮತ್ತು ಇತರರು ಪಾಲ್ಗೊಂಡಿದ್ದರು.

ರವಿಚಂದ್ರನ್, ವಿಜಯ್ ಪ್ರಕಾಶ್, ರಘು ದೀಕ್ಷಿತ್ ಉತ್ಸವದಲ್ಲಿ ಭಾಗಿ

ಗಣೇಶೋತ್ಸವ: 11 ದಿನ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರಣ್ಯ ಯುವಕ ಸಂಘವು ಆಗಸ್ಟ್ 27ರಿಂದ ಸೆಪ್ಟೆಂಬರ್ 6ರವರೆಗೆ 63ನೇ ವರ್ಷದ ಬೆಂಗಳೂರು ಗಣೇಶ ಉತ್ಸವ ಹಮ್ಮಿಕೊಂಡಿದ್ದು, ಹನ್ನೊಂದು ದಿನಗಳ ಕಾರ್ಯಕ್ರಮದಲ್ಲಿ 50ಕ್ಕೂ ಅಧಿಕ ಕಲಾವಿದರು ಪಾಲ್ಗೊಳ್ಳಲಿದ್ದಾರೆ.

ಎರಡು ಸ್ಥಳಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಎಪಿಎಸ್ ಕಾಲೇಜು ಮೈದಾನ ಹಾಗೂ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಉತ್ಸವದಲ್ಲಿ ಎಂ.ಡಿ.ಪಲ್ಲವಿ, ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್, ಸೂರ್ಯಗಾಯತ್ರಿ, ಸುನೀತಾ ಉಪದ್ರಷ್ಟ, ವೆಂಕಟೇಶ ಕುಮಾರ್, ವಿನಯ್ ವಾರಾಣಸಿ, ಗಂಗಾ ಶಶಿಧರನ್ ಮೊದಲಾದ ಕಲಾವಿದರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಲಿದೆ. ಎಲ್ಲ ದಿನಗಳು ಸಂಜೆ ಭಕ್ತಿ ಸಂಗೀತದ ಜತೆಗೆ ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಬೆಂಗಳೂರು ಗಣೇಶ ಉತ್ಸವ ಸಮಿತಿಯ ವ್ಯವಸ್ಥಾಪಕ ಟ್ರಸ್ಟಿ ನಂದೀಶ್ ಎಸ್.ಎಂ. ತಿಳಿಸಿದ್ದಾರೆ.

ಚಿತ್ರರಂಗದ ರವಿಚಂದ್ರನ್, ಮಯೂರ ರಾಘವೇಂದ್ರ ಅವರು ಪ್ರೇಕ್ಷಕರ ಜತೆಗೆ ಸಂವಾದ ನಡೆಸಲಿದ್ದಾರೆ. ಮಂಜು ಡ್ರಮ್ಸ್ ಕಲೆಕ್ಟಿವ್‌ನಿಂದ ಸಂಗೀತ ಕಛೇರಿ ಇರಲಿದೆ. ವಿಜಯ್ ಪ್ರಕಾಶ್, ರಘು ದೀಕ್ಷಿತ್, ಎಂ.ಡಿ. ಪಲ್ಲವಿ, ರಾಜೇಶ್ ಕೃಷ್ಣನ್, ಪ್ರವೀಣ್ ಗೋಡ್ಖಿಂಡಿ, ವಿಜಯ್ ಯೇಸುದಾಸ್ ಮೊದಲಾದವರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಪಂಡಿತ್ ಜಗದೀಶ್ ಡಿ. ಕುರ್ತಕೋಟಿ ಹಾಗೂ ತಂಡದಿಂದ 'ಕಾಶಿ ಡಮರು', ಸವಿತಕ್ಕ ಹಳ್ಳಿ ಬ್ಯಾಂಡ್‌ನಿಂದ 'ಭಕ್ತಿ ಜಾನಪದ ಸಂಗೀತ' ಹಾಗೂ ವಿನಯ್ ವಾರಾಣಸಿ ಅವರಿಂದ 'ಗಜಮುಖಮ್' ನೃತ್ಯರೂಪಕ ಆಯೋಜಿಸಲಾಗಿದೆ. ಆ.31ರಂದು ಮಹಿಳೆಯರಿಂದ ಏಕಕಾಲಕ್ಕೆ ಗಣೇಶ ಪಂಚರತ್ನ ಶ್ಲೋಕಗಳನ್ನು ಪಠಿಸುತ್ತಾ, ಎಪಿಎಸ್ ಕಾಲೇಜಿನಿಂದ ಗಾಂಧಿ ಬಜಾರ್ ವೃತ್ತದವರೆಗೆ ಮೆರವಣಿಗೆ ನಡೆಯಲಿದೆ ಎಂದು ಹೇಳಿದ್ದಾರೆ.

ಆಹಾರ ಪ್ರಿಯರಿಗೆ 'ಅರೋಮಾಸ್ ಆಫ್ ಕರ್ನಾಟಕ' ಆಹಾರೋತ್ಸವ ಹಮ್ಮಿಕೊಳ್ಳಲಾಗಿದೆ. ಈ ವರ್ಷವೂ ಗಣೇಶ ಮಂಟಪವನ್ನು ಮಣ್ಣಿನಲ್ಲಿ ಕರಗುವ ವಸ್ತುಗಳಿಂದಲೇ ನಿರ್ಮಿಸ ಲಾಗುತ್ತದೆ. ಸೆ.6ರಂದು ಗಣಪತಿ ವಿಸರ್ಜನೆ ನಡೆಯಲಿದೆ. ಗಣೇಶೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶ ವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಹಂಟಿಂಗ್ಟನ್: ವಿರಳ ರೋಗ ಪಟ್ಟಿಗೆ ಸೇರಿಸಿ: ಕೇಂದ್ರಕ್ಕೆ ಮನವಿ

ಬೆಂಗಳೂರು: ಹಂಟಿಂಗ್ಟನ್ ರೋಗವನ್ನು ರಾಷ್ಟ್ರೀಯ ವಿರಳ ರೋಗ ಪಟ್ಟಿಗೆ ಸೇರಿಸುವಂತೆ ಹಂಟಿಂಗ್ಟನ್ ಡಿಸಿಸ್ ಸೊಸೈಟಿ ಆಫ್ ಇಂಡಿಯಾವು (ಎಚ್‌ಡಿಎಸ್‌ಐ) ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದೆ.

ಎಚ್‌ಡಿಎಸ್‌ಐ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ದ್ವಿತೀಯ ಅಂತರರಾಷ್ಟ್ರೀಯ ಸಮ್ಮೇಳನವನ್ನು ಜೈವಿಕ ತಂತ್ರಜ್ಞಾನ ಇಲಾಖೆಯ ಮಾಜಿ ಕಾರ್ಯದರ್ಶಿ ಪ್ರೊ.ಕೆ. ವಿಜಯ್‌ರಾಘವನ್ ಹಾಗೂ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಉದ್ಘಾಟಿಸಿದರು.

'ಹಂಟಿಂಗ್ಟನ್ ಅನುವಂಶೀಯ ರೋಗವಾಗಿದೆ. ಈ ರೋಗಕ್ಕೆ ತುತ್ತಾದವರಿಗೆ ಕ್ರಮೇಣ ದಿನನಿತ್ಯದ ಚಟುವಟಿಕೆಗಳು ಕಷ್ಟವಾಗುತ್ತವೆ. ರಾಷ್ಟ್ರೀಯ ವಿರಳ ರೋಗ ಪಟ್ಟಿಗೆ ಸೇರಿಸುವುದರಿಂದ ಅಧಿಕೃತ ಮಾನ್ಯತೆ ಸಿಗಲಿದ್ದು, ಸಂಶೋಧನೆ ಹಾಗೂ ನೀತಿ ರೂಪಿಸಲು ಸಹಕಾರಿಯಾಗುತ್ತದೆ. ಸರಳ ಪರೀಕ್ಷೆಗಳ ಮೂಲಕ ಕಾಯಿಲೆಯನ್ನು ಪತ್ತೆಹಚ್ಚಲು ಅನುಕೂಲವಾಗುವಂತೆ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್‌ಗಳನ್ನು ಸ್ಥಾಪಿಸಬೇಕಿದೆ. ರೋಗಿಗಳ ದಾಖಲಾತಿ ಪಟ್ಟಿಯನ್ನೂ ಸಿದ್ಧಪಡಿಸಬೇಕು. ಇದು ರೋಗ ಹಾಗೂ ಚಿಕಿತ್ಸೆಗೆ ಸಂಬಂಧಿಸಿದ ನೀತಿ ರೂಪಿಸಲು ಸಹಕಾರಿ' ಎಂದು ಎಚ್‌ಡಿಎಸ್‌ಐ ಪ್ರತಿನಿಧಿಗಳು ಹಕ್ಕೊತ್ತಾಯ ಮಂಡಿಸಿದರು.

ಎಚ್‌ಡಿಎಸ್‌ಐ ಅಧ್ಯಕ್ಷ ವೆಂಕಟೇಶ್ವರ ರಾವ್ ಕೌಶಿಕ್, 'ದೇಶದಲ್ಲಿ ಈ ಕಾಯಿಲೆ ಹಾಗೂ ಚಿಕಿತ್ಸಾ ಸೌಲಭ್ಯದ ಬಗ್ಗೆ ಅರಿವಿನ ಕೊರತೆಯಿದೆ. ಚಿಕಿತ್ಸೆಯ ಆಯ್ಕೆಗಳೂ ಪೂರಕವಾಗಿಲ್ಲ. ಹಂಟಿಂಗ್ಟನ್ ರೋಗದಿಂದ ಬಾಧಿತರಾದ ಕುಟುಂಬಗಳು ವೈದ್ಯಕೀಯ ಹಾಗೂ ಸಾಮಾಜಿಕ ಬೆಂಬಲವಿಲ್ಲದೆ ಸಂಕಷ್ಟ ಅನುಭವಿಸುತ್ತಿವೆ. ರಾಷ್ಟ್ರೀಯ ವಿರಳ ರೋಗ ನೀತಿಯಲ್ಲಿ ಗುರುತಿಸುವುದರ ಜತೆಗೆ, ವಿಶೇಷ ಕ್ಲಿನಿಕ್‌ಗಳು ಹಾಗೂ ರೋಗಿಗಳ ದಾಖಲೆ ವ್ಯವಸ್ಥೆ ರೂಪಿಸಿರುವುದರಿಂದ ಸಾವಿರಾರು ಕುಟುಂಬಗಳಿಗೆ ನೆರವಾಗಲಿದೆ' ಎಂದು ಹೇಳಿದರು.

'ಇ-ಖಾತಾ ತಿದ್ದುಪಡಿ ಸರಳೀಕರಿಸಿ'

ಬೆಂಗಳೂರು: ಇ-ಖಾತಾ ತಿದ್ದುಪಡಿಯನ್ನು ಸರಳಗೊಳಿಸಬೇಕು ಎಂದು ಎಫ್‌ಕೆಸಿಸಿಐ ಪದಾಧಿಕಾರಿಗಳು ಸರ್ಕಾರವನ್ನು ಒತ್ತಾಯಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಶನಿವಾರ ಆಯೋಜಿಸಿದ್ದ ರಾಜ್ಯಮಟ್ಟದ ಜಿಲ್ಲಾ ವಾಣಿಜ್ಯ, ಕೈಗಾರಿಕಾ ಸಂಸ್ಥೆಗಳ ಸಮ್ಮೇಳನದಲ್ಲಿ ಈ ಆಗ್ರಹ ಮಂಡಿಸಲಾಯಿತು. ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಮಾತನಾಡಿ, 'ಇ-ಖಾತಾದಲ್ಲಿ ಸಣ್ಣ ಅಕ್ಷರ ತೊಂದರೆಯಾದರೂ ಸರಿಪಡಿಸಲು ಐದಾರು ತಿಂಗಳು ಬೇಕಾಗುತ್ತದೆ. ಮೇಲಧಿಕಾರಿಗಳ ಒಪ್ಪಿಗೆ ಬೇಕಾಗುತ್ತದೆ. ಸರಳೀಕರಿಸುವ ಮೂಲಕ ತಿದ್ದುಪಡಿ ಬೇಗ ಆಗುವಂತೆ ಮಾಡಬೇಕು' ಎಂದು ಮನವಿ ಮಾಡಿದರು.

ಕಾವೇರಿ ಪೋರ್ಟಲ್ ಕಾರ್ಯ ನಿರ್ವಹಿಸುತ್ತಿಲ್ಲ. ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಪಂಚಾಯಿತಿ ಮಟ್ಟದಲ್ಲಿ ತೆರಿಗೆಯಲ್ಲೂ ಕಾನೂನು ಉಲ್ಲಂಘನೆ ಆಗುತ್ತಿದೆ. ಪಿಡಿಒಗಳು ನೀತಿ ನಿಯಮ ಪಾಲನೆ ಮಾಡಲು ಸೂಚಿಸಬೇಕು ಎಂದು ಹೇಳಿದರು. ಪರಿಸರ ಇಲಾಖೆಯ ಹಿರಿಯ ವಿಭಾಗೀಯ ಅಧಿಕಾರಿ ಸೈಯದ್ ಖಾಜಾ ಮೊಹಿದ್ದೀನ್, ಸಂಸ್ಥೆಯ ಚುನಾಯಿತ ಅಧ್ಯಕ್ಷೆ ಉಮಾರೆಡ್ಡಿ, ಹಿರಿಯ ಉಪಾಧ್ಯಕ್ಷ ಟಿ. ಸಾಯಿರಾಂ ಪ್ರಸಾದ್, ನಿಕಟಪೂರ್ವ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ, ಅಂಡಾರು ದೇವಿ ಪ್ರಸಾದ್ ಶೆಟ್ಟಿ ಭಾಗವಹಿಸಿದ್ದರು.

ಕೈಕೊಟ್ಟ ಏರ್‌ಟೆಲ್ ನೆಟ್‌ವರ್ಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ಬೆಳಿಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ಏರ್‌ಟೆಲ್ ಮೊಬೈಲ್ ನೆಟ್‌ವರ್ಕ್ ಬಹುತೇಕ ಸ್ಥಗಿತವಾಗಿತ್ತು.

ಏರ್‌ಟೆಲ್ ಸಿಮ್ ಬಳಕೆದಾರರ ಮೊಬೈಲ್‌ನಲ್ಲಿ 'ಸಿಮ್ ಕಾರ್ಡ್ ನಾಟ್ ಡಿಟೆಕ್ಟೆಡ್', 'ನೋ ಸಿಗ್ನಲ್' ಎಂದು ತೋರಿಸುತ್ತಿತ್ತು. ಬಳಕೆದಾರರು ಕರೆ ಮಾಡಲು, ಸಂದೇಶ ಕಳುಹಿಸಲೂ ಪರದಾಡುವಂತಾಯಿತು. ಕೆಲವು ಮೊಬೈಲ್ ಫೋನ್‌ಗಳಲ್ಲಿ ನೆಟ್‌ವರ್ಕ್ ಇದೆಯೆಂದು ತೋರಿಸುತ್ತಿದ್ದರೂ, ಕರೆ ಹೋಗುತ್ತಿರಲಿಲ್ಲ.

ಮನೆಗಳಲ್ಲಿ ವೈಫೈ ಸಂಪರ್ಕ ಇದ್ದವರು, ಮೊಬೈಲ್‌ನಲ್ಲಿ ಇಂಟರ್‌ನೆಟ್ ಆಧಾರಿತ ಸೇವೆಗಳನ್ನು ಬಳಸಲು ಸಾಧ್ಯವಿತ್ತು. ಆದರೆ 'ಸಿಮ್ ಕಾರ್ಡ್ ನಾಟ್ ಡಿಟೆಕ್ಟೆಡ್' ಎಂದು ಬರುತ್ತಿದ್ದ ಕಾರಣ, ಯುಪಿಐ ಮೂಲಕ ಹಣ ವರ್ಗಾವಣೆ ಮಾಡಲು ಸಾಧ್ಯವಾಗುತ್ತಿರಲಿಲ್ಲ.

'ಮೈಸೂರಿನಿಂದ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಬಂದು, ಅಲ್ಲಿಂದ ಆಟೊದಲ್ಲಿ ಮನೆಗೆ ಬಂದಿದ್ದೇನೆ. ಇಲ್ಲಿ, ನೆಟ್‌ವರ್ಕ್ ಇಲ್ಲದ ಕಾರಣ ಯುಪಿಐ ಮೂಲಕ ಹಣ ನೀಡಲು ಆಗುತ್ತಿಲ್ಲ. ನನ್ನ ಬಳಿ ನಗದು ಬೇರೆ ಇರಲಿಲ್ಲ. ಪಕ್ಕದ ಅಂಗಡಿಯವರ ಬಳಿ ಹಣ ಪಡೆದು, ಆಟೊದವರಿಗೆ ನೀಡಿದೆ' ಎಂದು ತಾವು ಎದುರಿಸಿದ ಸಮಸ್ಯೆಯನ್ನು ಮೂಡಲಪಾಳ್ಯದ ಮಂಜುಳಾ 'ಪ್ರಜಾವಾಣಿ'ಗೆ ತಿಳಿಸಿದರು.

ನೆಟ್‌ವರ್ಕ್ ಇಲ್ಲದ ಕಾರಣ ಸ್ವಿಗ್ಗಿ, ಜೊಮ್ಯಾಟೊ, ಬ್ಲಿಂಕಿಟ್‌ನಂತಹ ಆ್ಯಪ್‌ಗಳಲ್ಲಿ ಆಹಾರ ಮತ್ತು ದಿನಸಿ ಬುಕ್ ಮಾಡಿದರೂ, ಪೂರೈಕೆಯಲ್ಲಿ ವ್ಯತ್ಯಯವಾಯಿತು. 'ನನ್ನ ಮೊಬೈಲ್‌ನಲ್ಲಿ ನೆಟ್‌ವರ್ಕ್ ಬರುತ್ತಿರಲಿಲ್ಲ. ಮೊಬೈಲ್ ಕೆಟ್ಟುಹೋಗಿರಬಹುದು ಎಂದು ಸರ್ವಿಸ್ ಸೆಂಟರ್‌ಗೆ ತೆಗೆದುಕೊಂಡು ಹೋಗಿದ್ದೆ. ಆದರೆ, ನೆಟ್‌ವರ್ಕ್‌ನದೇ ಸಮಸ್ಯೆ ಎಂದು ಗೊತ್ತಾಯಿತು' ಎಂದು ವಿಜಯನಗರದ ಸ್ವಿಗ್ಗಿ ರೈಡರ್ ಪ್ರಶಾಂತ್ ಹೇಳಿದರು.

ಈ ಬಗ್ಗೆ ವಿವರಣೆ ಪಡೆಯಲು ಏರ್‌ಟೆಲ್ ಗ್ರಾಹಕ ಸೇವಾ ಕೇಂದ್ರಕ್ಕೆ ಕರೆ ಮಾಡಿದರೆ, ಸಂಪರ್ಕ ಸಾಧ್ಯವಾಗಲಿಲ್ಲ. ಬದಲಿಗೆ, 'ತಾಂತ್ರಿಕ ಕಾರಣದಿಂದ ನೆಟ್‌ವರ್ಕ್ ಸಮಸ್ಯೆ ಎದುರಾಗಿದೆ. ಕೆಲವೇ ಗಂಟೆಗಳಲ್ಲಿ ನೆಟ್‌ವರ್ಕ್ ಮರಳಲಿದೆ' ಎಂದ ಸಂದೇಶ ಬರುತ್ತಿತ್ತು. ಮಧ್ಯಾಹ್ನ 2ರ ಹೊತ್ತಿಗೆ ನೆಟ್‌ವರ್ಕ್ ಸಹಜ ಸ್ಥಿತಿಗೆ ಮರಳಿತು.

ನಗರದಲ್ಲಿ ಇಂದು

ಪದವಿ ಪ್ರದಾನ ಸಮಾರಂಭ: ಭಾಷಣ ಮಾಡುವವರು: ವಿ. ನಾರಾಯಣನ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ: ಆರ್.ವಿ. ಎಂಜಿನಿಯರಿಂಗ್ ಕಾಲೇಜು, ಸ್ಥಳ: ಪೂರ್ಣಿಮಾ ಪ್ಯಾಲೆಸ್, ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದ ಹತ್ತಿರ, ಮೈಸೂರು ರಸ್ತೆ, ಬೆಳಿಗ್ಗೆ 10.30

'ಮನುಷ್ಯತ್ವದೆಡೆಗೆ ಸಮುದಾಯ-50' ಜಾಥಾ, ನಾಟಕೋತ್ಸವ: ಸದ್ಭಾವನ ಗೀತೆಗಳು: ಜನಾರ್ದನ್ ಮತ್ತು ತಂಡ, 'ಸಮುದಾಯ-50' ರಂಗ ಗೌರವ: ಬೊಳುವಾರು ಮಹಮ್ಮದ್ ಕುಂಞಿಗೆ, ಸಿ. ಬಸವಲಿಂಗಯ್ಯ, ಎಸ್. ರಘುನಂದನ, ಲಕ್ಷ್ಮೀ ಚಂದ್ರಶೇಖರ್, ಶ್ರೀನಿವಾಸ್ ಜಿ. ಕಪ್ಪಣ್ಣ, ಜೆ. ಲೋಕೇಶ್, ಎಲ್. ಕೃಷ್ಣಪ್ಪ, ಅತಿಥಿ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, 'ಜುಗಾರಿ ಕ್ರಾಸ್' ನಾಟಕ ಪ್ರದರ್ಶನ: ನಿರ್ದೇಶನ: ನಟರಾಜ ಹೊನ್ನವಳ್ಳಿ, ಆಯೋಜನೆ: ಸಮುದಾಯ ಸಾಂಸ್ಕೃತಿಕ ಸಂಘಟನೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

'ಪ್ರೋಷ್ಟಪದಿ ಭಾಗವತ' ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಮತ್ತು ಸ್ಥಳ: ಭೀಮನಕಟ್ಟೆ ರಾಘವೇಂದ್ರ ಸ್ವಾಮಿ ಮಠ, ದೊಡ್ಡ ಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಗೌರವಧನ ತಡೆಹಿಡಿದಿರುವುದಕ್ಕೆ ಆಕ್ಷೇಪ

ಬಿಬಿಎಂಪಿ: 72 ಅತಿಥಿ ಶಿಕ್ಷಕರು/ ಉಪನ್ಯಾಸಕರ ನಿಯೋಜನೆ ರದ್ದು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎಸ್‌ಎಸ್‌ಎಲ್‌ಸಿ/ ಪಿಯುಸಿಯಲ್ಲಿ ಶೇ 50ಕ್ಕಿಂತ ಕಡಿಮೆ ಫಲಿತಾಂಶ
- 37 ಶಿಕ್ಷಕರು, ಉಪನ್ಯಾಸಕರ ಸೇವೆ ರದ್ದು

ಬೆಂಗಳೂರು: ಬಿಬಿಎಂಪಿ ಶಾಲಾ-ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ 72 ಅತಿಥಿ ಶಿಕ್ಷಕರು/ಉಪನ್ಯಾಸಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ, ಅವರಿಗೆ ನೀಡುತ್ತಿದ್ದ ಗೌರವಧನವನ್ನು ತಾತ್ಕಾಲಿಕವಾಗಿ ತಡೆಹಿಡಿದಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

2025–26ನೇ ಸಾಲಿಗೆ ನಿಯೋಜನೆಯಾಗಿದ್ದ 804 ಅತಿಥಿ ಶಿಕ್ಷಕರು/ ಉಪನ್ಯಾಸಕರ ಪೈಕಿ, 35 ಮಂದಿ ನಿಗದಿತ ವಿದ್ಯಾರ್ಹತೆ ಹೊಂದಿಲ್ಲ ಎಂಬ ಕಾರಣಕ್ಕೆ ಅವರ ನಿಯೋಜನೆ ರದ್ದಾಗಿದೆ. ಅದೇ ರೀತಿ ಕಳೆದ ಮೂರು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ/ಪಿಯುಸಿಯಲ್ಲಿ ಶೇ 50ಕ್ಕಿಂತ ಕಡಿಮೆ ಫಲಿತಾಂಶ ಬಂದಿದೆ ಎಂಬ ಕಾರಣಕ್ಕೆ 37 ಶಿಕ್ಷಕರು/ ಉಪನ್ಯಾಸಕರ ಸೇವೆಯನ್ನು ರದ್ದುಗೊಳಿಸಲಾಗಿದೆ.

ಬಿಬಿಎಂಪಿ ಶಾಲೆಗಳಿಗೆ ನಿಯೋಜನೆಯಾಗಿರುವ ಅತಿಥಿ ಶಿಕ್ಷಕರಲ್ಲಿ ಡಿ.ಇಡಿ, ಡಿಸಿಎಚ್ ತರಬೇತಿ ಪಡೆಯದವರು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ನಿಯೋಜನೆಯಾಗಿರುವ ಅತಿಥಿ ಉಪನ್ಯಾಸಕರಲ್ಲಿ ಬಿ.ಇಡಿ ಹೊಂದಿಲ್ಲದವರ ನಿಯೋಜನೆ ರದ್ದುಗೊಳಿಸಲಾಗಿದೆ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಹಿರಿಯ ಸಹಾಯಕ ನಿರ್ದೇಶಕರು ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ನೇಮಕಾತಿ ಸಂದರ್ಭದಲ್ಲೇ ವಿದ್ಯಾರ್ಹತೆ ಪರಿಶೀಲಿಸಬೇಕಾಗಿತ್ತು. ಈಗಾಗಲೇ ಮೂರು ತಿಂಗಳು ಕಾರ್ಯನಿರ್ವಹಿಸಿದ್ದೇವೆ. ಈಗ ಕೆಲಸದಿಂದ ತೆಗೆಯುವುದು, ಗೌರವಧನ ನೀಡದೆ

ಸಾಂದರ್ಭಿಕ ಚಿತ್ರ

ಇರುವುದು ಸರಿಯಲ್ಲ. ಡಿ.ಇಡಿ, ಡಿಸಿಎಚ್ ವಿದ್ಯಾರ್ಹತೆ ಹೊಂದಿಲ್ಲ ಎನ್ನುತ್ತಿದ್ದಾರೆ. ಆದರೆ, ನಾವೆಲ್ಲ ಅದಕ್ಕಿಂತ ಉನ್ನತವಾದ ಬಿ.ಎ,ಬಿ.ಇಡಿ, ಎಂ.ಎ, ಬಿ.ಇಡಿ ವಿದ್ಯಾರ್ಹತೆ ಹೊಂದಿದ್ದೇವೆ. ಇದನ್ನು ಯಾಕೆ ಪರಿಗಣಿಸುತ್ತಿಲ್ಲ ಎಂಬುದು ಶಿಕ್ಷಕರ ಪ್ರಶ್ನೆ.

‘ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿ (ಸಿಡಿಸಿ) ಮೂಲಕ ಅತಿಥಿ ಶಿಕ್ಷಕರು, ಉಪನ್ಯಾಸಕರನ್ನು ನಿಯೋಜಿಸಿಕೊಳ್ಳಲಾಗಿತ್ತು. ನೇಮಕಾತಿ ಸಂದರ್ಭದಲ್ಲೇ ಶೈಕ್ಷಣಿಕ ದಾಖಲೆಗಳನ್ನು ಪರಿಶೀಲಿಸಿ, ಡಿ.ಇಡಿ, ಡಿಸಿಎಚ್ ವಿದ್ಯಾರ್ಹತೆ ಹೊಂದಿರುವವರನ್ನು ನೇಮಕ ಮಾಡಿಕೊಂಡಿದ್ದರೆ, ನಾವು ಪ್ರಶ್ನೆ ಮಾಡುತ್ತಿರಲಿಲ್ಲ. ಆಗ ಸುಮ್ಮನಿದ್ದು, ಮೂರು ತಿಂಗಳ ನಂತರ ಕೆಲಸದಿಂದ ತೆಗೆಯುವುದು ಯಾವ ನ್ಯಾಯ? ಈಗ ನಾವು ಎಲ್ಲಿಗೆ ಹೋಗಬೇಕು’ ಎಂದು ನೊಂದ ಶಿಕ್ಷಕಿ ಅಳಲು ತೋಡಿಕೊಂಡರು.

ನಿಗದಿತ ವಿದ್ಯಾರ್ಹತೆ ಹೊಂದಿರುವ 732 ಅತಿಥಿ ಶಿಕ್ಷಕರು/ ಉಪನ್ಯಾಸಕರ ಗೌರವ ಧನವನ್ನು ಎಸ್‌ಡಿಎಂಸಿ ಮತ್ತು ಸಿಡಿಸಿ ಮುಖ್ಯಸ್ಥರ ಖಾತೆಗೆ ಬಿಡುಗಡೆ ಮಾಡಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ಸುತ್ತೋಲೆ ಪ್ರಕಾರ ನೇಮಕ ಮಾಡಿಲ್ಲ’

‘ಎಸ್‌ಡಿಎಂಸಿ ಮತ್ತು ಸಿಡಿಸಿಯವರು ಸುತ್ತೋಲೆ ಪ್ರಕಾರ ಶಿಕ್ಷಕರು/ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿಲ್ಲ. ನಿಗದಿತ ವಿದ್ಯಾರ್ಹತೆ ಹೊಂದಿರುವವರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕು ಎಂದು ಸ್ಪಷ್ಟವಾಗಿ ತಿಳಿಸಲಾಗಿತ್ತು. ಆದರೂ ಇದರ ಪಾಲನೆ ಆಗಿಲ್ಲ. ತಪ್ಪಾಗಿ ನೇಮಕ ಮಾಡಿಕೊಂಡಿರುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಹಿರಿಯ ಅಧಿಕಾರಿ ತಿಳಿಸಿದರು.

‘ಇದರಲ್ಲಿ ಶಿಕ್ಷಕರು/ಉಪನ್ಯಾಸಕರ ತಪ್ಪು ಇದೆ. ನಿಗದಿತ ವಿದ್ಯಾರ್ಹತೆ ಇಲ್ಲ ಎಂಬುದು ಗೊತ್ತಿದ್ದರೂ, ಕೆಲಸಕ್ಕೆ ಯಾಕೆ ಬರಬೇಕಿತ್ತು? ಅಂತಹವರನ್ನು ಮುಂದುವರಿಸಲು ಹೇಗೆ ಸಾಧ್ಯ? ನಮ್ಮ ಕಡೆಯಿಂದ ಲೋಪ ಆಗಿಲ್ಲ. ಎಸ್‌ಡಿಎಂಸಿ ಮತ್ತು ಸಿಡಿಸಿ ಹಂತದಲ್ಲಿ ಆಗಿರುವ ತಪ್ಪುಗಳಿಗೆ ನಾವು ಹೊಣೆಯಲ್ಲ’ ಎಂದು ಅವರು ವಿವರಿಸಿದರು.

‘ಇವರಿಗಷ್ಟೇ ಏಕೆ ಶಿಕ್ಷೆ?’

ಬಿಬಿಎಂಪಿ ಶಾಲಾ– ಕಾಲೇಜುಗಳಲ್ಲಿ ಶೇ 80ರಷ್ಟು ಹೊರಗುತ್ತಿಗೆ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಹತೆ ಇಲ್ಲದವರು ಹಾಗೂ ಕಡಿಮೆ ಫಲಿತಾಂಶ ಬಂದಿರುವ ಕಾರಣ ನೀಡಿ 72 ಮಂದಿಯನ್ನು ಕೆಲಸದಿಂದ ಮುಕ್ತಗೊಳಿಸುತ್ತಿದ್ದಾರೆ. 45 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಈ ಅತಿಥಿ ಶಿಕ್ಷಕರನ್ನು ತೆಗೆದು ಹಾಕುವುದರಿಂದ ಅವರ ಕುಟುಂಬ ನಿರ್ವಹಣೆ ಕಷ್ಟವಾಗಲಿದೆ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಖಜಾಂಚಿ ಎನ್.ಎಸ್.ಸೋಮಶೇಖರ್ ತಿಳಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಸರ್ಕಾರಿ ಶಾಲೆಗಳಲ್ಲಿ ಕಡಿಮೆ ಫಲಿತಾಂಶ ಬಂದರೂ ಶಿಕ್ಷಕರನ್ನು ಸೇವೆಯಿಂದ ತೆಗೆದುಹಾಕಿಲ್ಲ. ಅದರೆ, ಇವರಿಗೆ ಏಕೆ ಈ ಶಿಕ್ಷೆ’ ಎಂದು ಅವರು ಪ್ರಶ್ನಿಸಿದ್ದಾರೆ.

ಬಿಬಿಎಂಪಿ ಶಾಲೆಗಳಲ್ಲಿ ಕಡಿಮೆ ಫಲಿತಾಂಶ ಬರುವುದಕ್ಕೆ, ಆರ್ಥಿಕ ಪರಿಸ್ಥಿತಿ, ತಂದೆ, ತಾಯಿ ವಿದ್ಯಾವಂತರಲ್ಲದೇ ಇರುವುದು, ಮಕ್ಕಳ ಗೈರು ಹಾಜರಿ ಇತ್ಯಾದಿ ಕಾರಣಗಳಿವೆ. ಇದನ್ನು ಗಮನಿಸದೆ ಶಿಕ್ಷಕರನ್ನು ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ. ಮಾನವೀಯ ನೆಲೆಯಲ್ಲಿ ನೋಡಬೇಕಾಗುತ್ತದೆ ಎಂದು ಮುಖ್ಯ ಆಯುಕ್ತರಿಗೆ ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರು ಎಚ್‌.ನಾಗೇಶ್ ಮತ್ತು ನಂದಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡರು

ಗೊಂದಲದ ಗೂಡಾದ ಕಾಂಗ್ರೆಸ್ ಸಭೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಾಂಗ್ರೆಸ್ ಪಕ್ಷಕ್ಕೆ ಹಗಲಿರುಳು ದುಡಿದ ಹಿರಿಯ ಮುಖಂಡರನ್ನು ವಾರ್ಡ್ ಸಭೆಗೆ ಆಹ್ವಾನಿಸದೆ ಕಡೆಗಣಿಸಲಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಮುನ್ನೆಕೊಳಲು ವಾರ್ಡ್‌ಸಭೆಯಲ್ಲಿ ಗದ್ದಲ ಎಬ್ಬಿಸಿದರು.

ಮಹದೇವಪುರ ಕ್ಷೇತ್ರದ ಪಣತ್ತೂರಿನಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಮಾಜಿ ಶಾಸಕ ಎಚ್. ನಾಗೇಶ್ ಹಾಗೂ ಬೆಂಗಳೂರು ಪೂರ್ವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ನಂದಕುಮಾರ್ ಸಮ್ಮುಖದಲ್ಲಿ ಮುನ್ನೆಕೊಳಲು ವಾರ್ಡ್ ಸಭೆ ಹಮ್ಮಿಕೊಳ್ಳಲಾಗಿತ್ತು.

‘ಮಾಜಿ ಪಾಲಿಕೆ ಸದಸ್ಯ ಉದಯಕುಮಾರ್ ಮತ್ತು ಕೆಪಿಸಿಸಿ ಸದಸ್ಯ ಜಯರಾಮ್ ರೆಡ್ಡಿ ಅವರನ್ನು ಗಣನೆಗೆ ತೆಗೆದುಕೊಳ್ಳದೆ ಸಭೆ ನಡೆಸುತ್ತಿದ್ದೀರಿ... ಇದು ಸರಿಯಲ್ಲ’ ಎಂದು ಉದಯಕುಮಾರ್ ಹಾಗೂ ಜಯರಾಮ್ ರೆಡ್ಡಿ ಬಣದ ಬೆಂಬಲಿಗರು ಎಚ್.ನಾಗೇಶ್ ಮತ್ತು ನಂದಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡರು.

ತಮಗೆ ಬೇಕಾದವರಿಗೆ ಗ್ಯಾರಂಟಿ ಯೋಜನೆಯಲ್ಲಿ ಪದವಿ ನೀಡಲಾಗುತ್ತದೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗಾಗಿ ಕೆಲಸ ಮಾಡಿದ ನಿಷ್ಠಾವಂತ ಕಾರ್ಯಕರ್ತರನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದು ಕಾಂಗ್ರೆಸ್ ಮುಖಂಡ ಬಾಬುಗೌಡ ಅಕ್ರೋಶ ವ್ಯಕ್ತಪಡಿಸಿದರು.

ನಾಗೇಶ್ ಮತ್ತು ನಂದಕುಮಾರ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಗಣನೆಗೆ ತೆಗೆದುಕೊಳ್ಳದೆ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ಪದಾಧಿಕಾರಿಗಳನ್ನು ಆಯ್ಕೆ ಮಾಡುವಾಗಲೂ ತಮಗೆ ಬೇಕಾದವರಿಗೆ ಮಣೆ ಹಾಕುತ್ತಿದ್ದಾರೆ. ಬ್ಲಾಕ್, ವಾರ್ಡ್ ಮಾಜಿ ಅಧ್ಯಕ್ಷರನ್ನು ಕಡೆಗಣಿಸಲಾಗಿದೆ. ಪಕ್ಷದಲ್ಲಿ ಗುಂಪುಗಾರಿಕೆ ಹೆಚ್ಚಾಗಿದೆ. ಪಕ್ಷದ ವರಿಷ್ಠರಿಗೆ ದೂರು ನೀಡಲಾಗುವುದು ಕಾಂಗ್ರೆಸ್ ಮುಖಂಡ ವಿಟಿಬಿ ಬಾಬು ದೂರಿದರು.

ಚಿಟಿಕೆ ಸುದ್ದಿ

ಅಯೋಧ್ಯೆಗೆ ಮೇಣದ ವಸ್ತುಸಂಗ್ರಹಾಲಯದ ಮೆರುಗು

ಅಯೋಧ್ಯೆ (ಉತ್ತರ ಪ್ರದೇಶ) (ಪಿಟಿಐ): ರಾಮಮಂದಿರದ ಆವರಣದಲ್ಲಿ ಭವ್ಯವಾದ ಮೇಣದ ವಸ್ತುಸಂಗ್ರಹಾಲಯ ನಿರ್ಮಿಸಲಾಗುತ್ತಿದ್ದು, ಈ ವರ್ಷದ ದೀಪೋತ್ಸವದ ವೇಳೆ ಉದ್ಘಾಟನೆ ಆಗಲಿದೆ ಎಂದು ಉತ್ತರ ಪ್ರದೇಶದ ಸರ್ಕಾರ ಭಾನುವಾರ ತಿಳಿಸಿದೆ.

ದೇಗುಲದ ಪರಿಕ್ರಮ ಮಾರ್ಗದಲ್ಲಿ 10,000 ಚದರ ಅಡಿ ವಿಸ್ತೀರ್ಣದಲ್ಲಿ ಈ ವಸ್ತ ಸಂಗ್ರಹಾಲಯ ನಿರ್ಮಿಸಲಾಗುತ್ತಿದೆ. ಇದು ಭಕ್ತರು ಮತ್ತು ಪ್ರವಾಸಿಗರಿಗೆ ವಿಶಿಷ್ಟ ರೀತಿಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಅನುಭವ ನೀಡುತ್ತದೆ. ಈ ಯೋಜನೆಗೆ ಇಲ್ಲಿಯವರೆಗೆ ಸುಮಾರು ₹7.5 ಕೋಟಿ ವ್ಯಯಿಸಲಾಗಿದೆ ಎಂದು ಅದು ಪ್ರಕಟಣೆಯಲ್ಲಿ ಹೇಳಿದೆ.

ರಾಮ, ಸೀತೆ, ಲಕ್ಷ್ಮಣ, ಹನುಮಾನ್, ಸುಗ್ರೀವ, ಜಟಾಯು ಸೇರಿದಂತೆ ರಾಮಾಯಣದ ಸುಮಾರು 50 ಪ್ರಮುಖ ಪಾತ್ರಗಳ ಮೇಣದ ಪ್ರತಿಮೆಗಳನ್ನು ಈ ವಸ್ತು ಸಂಗ್ರಹಾಲಯ ಒಳಗೊಂಡಿರುತ್ತದೆ.

ರಾಮ–ರಾವಣ ನಡುವಿನ ಯುದ್ಧ, ಸೀತೆಯ ಅಪಹರಣ, ಹನುಮಂತನ ಲಂಕಾ ಪ್ರಯಾಣ, ರಾಮಸೇತು ನಿರ್ಮಾಣದಂತಹ ಹಂತಗಳನ್ನು ಮೇಣ, ಆಧುನಿಕ ತಂತ್ರಜ್ಞಾನದ ಮಿಶ್ರಣದ ಮೂಲಕ ಕಲಾತ್ಮಕವಾಗಿ ಮರುಸೃಷ್ಟಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮಹಾರಾಷ್ಟ್ರದ ಮೂಲದ ಸಂಸ್ಥೆ ಮತ್ತು ಕೇರಳದ ತಜ್ಞರ ಸಹಯೋಗದೊಂದಿಗೆ ಈ ಪ್ರತಿಮೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಅದು ಹೇಳಿದೆ.

ಪ್ರತಿ ವರ್ಷ ದೀಪೋತ್ಸದ ವೇಳೆ ಅಯೋಧ್ಯೆಯಲ್ಲಿ ಲಕ್ಷಾಂತರ ದೀಪಗಳನ್ನು ಬೆಳಗಿಸಲಾಗುತ್ತದೆ. ಈ ಸಂಪ್ರದಾಯವು ನಗರಕ್ಕೆ ಜಾಗತಿಕ ಮನ್ನಣೆ ತಂದುಕೊಟ್ಟಿದೆ.

ಅಧಿಕ ಸುಂಕ: ವ್ಯಾನ್ಸ್ ಸಮರ್ಥನೆ

ಜೆ.ಡಿ.ವ್ಯಾನ್ಸ್

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಉಕ್ರೇನ್ ಮೇಲೆ ರಷ್ಯಾದ ಬಾಂಬ್ ದಾಳಿಯನ್ನು ನಿಲ್ಲಿಸುವಂತೆ ಒತ್ತಾಯಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ದ್ವಿತೀಯ ಸುಂಕ ಹೇರುವ ಮೂಲಕ ಆಕ್ರಮಣಕಾರಿ ಆರ್ಥಿಕ ನೀತಿಯನ್ನು ಅನುಸರಿಸಿದ್ದಾರೆ ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಭಾನುವಾರ ಹೇಳಿದರು.

ಮಾಧ್ಯಮ ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ‘ತೈಲ ಆರ್ಥಿಕತೆಯಿಂದ ಶ್ರೀಮಂತವಾಗಲು ಬಯಸಿದ್ದ ರಷ್ಯಾಗೆ ಈಗ ಹಾದಿ ಕಠಿಣವಾಗಿ ಪರಿಣಮಿಸಿದೆ’ ಎಂದರು.

ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾತೈಲ ಖರೀದಿಸುತ್ತಿರುವುದಕ್ಕೆ ಟ್ರಂಪ್ ಆಡಳಿತ ಭಾರತವನ್ನು ತೀವ್ರವಾಗಿ ಟೀಕಿಸಿದೆ. ಆದರೆ ರಷ್ಯಾದಿಂದ ಅತಿ ಹೆಚ್ಚು ಪ್ರಮಾಣದಲ್ಲಿ ತೈಲ ಖರೀದಿಸುತ್ತಿರುವ ಚೀನಾವನ್ನು ವಾಷಿಂಗ್ಟನ್ ಟೀಕಿಸಿಲ್ಲ.

ರಷ್ಯಾದಿಂದ ಇಂಧನ ಖರೀದಿಯು ತನ್ನ ರಾಷ್ಟ್ರೀಯ ಹಿತಾಸಕ್ತಿ ಮತ್ತು ಮಾರುಕಟ್ಟೆಯ ಚಲನಶೀಲತೆಯಿಂದ ನಡಸೆಯುತ್ತಿದೆ ಎಂದು ಭಾರತ ಸಮರ್ಥಿಸಿಕೊಂಡಿದೆ.

ಸೇವಾ ವಲಯದಲ್ಲೂ ಜಾಗತಿಕ ನಾಯಕ– ಪ್ರಕಾಶ ಬೆಳವಾಡಿ

‘ದೇಶದ ಪ್ರಗತಿ– ಮೋದಿ ಪಾತ್ರ ಹಿರಿದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಅವರು ಕೇವಲ ಭಾರತದ ನಾಯಕರಾಗದೆ, ಎಂತಹ ಸನ್ನಿವೇಶವನ್ನೂ ಬದಲಾಯಿಸಬಲ್ಲ ಜಾಗತಿಕ ನಾಯಕರಾಗಿ ಹೊರಹೊಮ್ಮಿದ್ದಾರೆ’ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಅಯೋಧ್ಯ ಪಬ್ಲಿಕೇಷನ್ಸ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹೇಶ್ ಮಂಚಲ್ ಅವರ ಸಂಪಾದಕತ್ವದ ‘ದಿ ಮೋದಿ ಎಫೆಕ್ಟ್’ ಪುಸ್ತಕವನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

‘ಭಾರತವು ಉತ್ಪಾದನೆ ಜತೆಗೆ ಸೇವಾ ವಲಯದಲ್ಲೂ ಜಾಗತಿಕ ನಾಯಕ ರಾಷ್ಟ್ರವಾಗಿ ಬೆಳೆದಿದೆ. ಡಿಜಿಟಲ್, ಐಟಿ ವಲಯದಲ್ಲಿ ಚೀನಾವನ್ನೇ ಹಿಂದಿಕ್ಕುವಷ್ಟು ಸಶಕ್ತವಾಗಿದೆ. ನವೋದ್ಯಮ, ಸೋಲಾರ್ ವಿದ್ಯುತ್ ವಲಯ, ಸೆಮಿಕಂಡಕ್ಟರ್, ರಕ್ಷಣಾ ವಲಯದ ಉತ್ಪಾದನೆಯಲ್ಲೂ ಮುಂಚೂಣಿಯಲ್ಲಿದೆ’ ಎಂದು ಹೇಳಿದರು.

ಕಲಾವಿದ ಪ್ರಕಾಶ್ ಬೆಳವಾಡಿ, ‘ನರೇಂದ್ರ ಮೋದಿ ಒಬ್ಬ ಅವಕಾಶವಾದಿ. ಅಂದರೆ, ಎಂತಹ ಸನ್ನಿವೇಶವನ್ನೂ ಒಳ್ಳೆಯದಕ್ಕಾಗಿ ಬಳಸಿಕೊಳ್ಳಬಲ್ಲ ಬುದ್ಧಿವಂತ ನಾಯಕ. ಒಂದು ದಶಕದ ಅವಧಿಯಲ್ಲಿ ಎಂತಹ ವಿರೋಧ ಬಂದರೂ ಭಾರತಕ್ಕೆ ಒಳ್ಳೆಯದನ್ನು ಮಾಡಲು ಎಂದಿಗೂ ಹಿಂಜರಿದಿಲ್ಲ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹೃದ್ರೋಗ ತಜ್ಞ ಡಾ.ದೇವಿಪ್ರಸಾದ್ ಶೆಟ್ಟಿ, ‘ಒಂದು ದಶಕದ ಅವಧಿಯಲ್ಲಿ ಭಾರತೀಯ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಯಾಗಿದೆ. ವೈದ್ಯಕೀಯ ಕಾಲೇಜುಗಳು 377ರಿಂದ 780ಕ್ಕೆ ಏರಿದರೆ, ಸೀಟುಗಳ ಸಂಖ್ಯೆ 1.18 ಲಕ್ಷಕ್ಕೆ ಹೆಚ್ಚಳವಾಗಿವೆ. ನರ್ಸಿಂಗ್ ಕೋರ್ಸ್ ಮಾಡಿದವರಿಗೂ ಲಕ್ಷಾಂತರ ರೂಪಾಯಿ ವೇತನ ಸಿಗುತ್ತಿದೆ. ಆರೋಗ್ಯ ಕ್ಷೇತ್ರದ ಬದಲಾವಣೆಯ ಫಲ ಮುಂದಿನ ಪೀಳಿಗೆಗೂ ಸಿಗಲಿದೆ’ ಎಂದು ಹೇಳಿದರು.

ಚೈತನ್ಯಾ ಆದಿಕೇಶವುಲು, ರೋಹಿತ್ ಚಕ್ರತೀರ್ಥ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ (ಎಡದಿಂದ) ಮಂಚಲ್ ಮಹೇಶ್, ಪ್ರಕಾಶ್ ಬೆಳವಾಡಿ, ಡಾ.ಸಿ.ಎನ್. ಮಂಜುನಾಥ್, ಡಾ. ದೇವಿಪ್ರಸಾದ್ ಶೆಟ್ಟಿ ಮತ್ತು ಚೈತನ್ಯಾ ಆದಿಕೇಶವಲು ಸಮಾಲೋಚನೆ ನಡೆಸಿದರು–ಪ್ರಜಾವಾಣಿ ಚಿತ್ರ

> **ಮೋದಿ ಅವರ ಅಧಿಕಾರವಧಿಯಲ್ಲಿ ಆಗುತ್ತಿರುವ ಬದಲಾವಣೆಯ ಫಲ ಸದ್ಯಕ್ಕೆ ಕೆಲವರ ಕಣ್ಣಿಗೆ ಕಾಣದೇ ಇರಬಹುದು. ಮುಂದಿನ ದಶಕಗಳಲ್ಲಿ ಭಾರತ ಆರ್ಥಿಕವಾಗಿ ಶಕ್ತಿಶಾಲಿಯಾಗಿ ಹೊರಹೊಮ್ಮುವ ಹಾದಿಯಲ್ಲಂತೂ ಇದೆ**
> **ಪ್ರಕಾಶ ಬೆಳವಾಡಿ,** ಕಲಾವಿದ

ಹೋರಾಟದ ಹಾದಿಯ ಅವಲೋಕನ

‘ಮನುಷ್ಯತ್ವದೆಡೆಗೆ ಸಮುದಾಯ 50’ ಜಾಥಾಕ್ಕೆ ಚಾಲನೆ; ಚಿಂತನ–ಮಂಥನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮುದಾಯ ಸಾಂಸ್ಕೃತಿಕ ಸಂಘಟನೆಯ ಸುವರ್ಣ ಸಂಭ್ರಮದ ಸಮಾರಂಭವು, ಸಂಘಟನೆಯ ಹೋರಾಟದ ಹಾದಿಯ ಅವಲೋಕನದ ಜತೆಗೆ ಪ್ರಸ್ತುತ ಸಂದರ್ಭದಲ್ಲಿ ಸಮಾಜ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚಿಂತನ ಮಂಥನಕ್ಕೆ ವೇದಿಕೆ ಕಲ್ಪಿಸಿತು.

ಸಂಘಟನೆಯು 50 ವರ್ಷಗಳ ಪಯಣದ ಪ್ರಯುಕ್ತ ‘ಮನುಷ್ಯತ್ವದೆಡೆಗೆ ಸಮುದಾಯ 50’ ಜಾಥಾ ಹಮ್ಮಿಕೊಂಡಿದೆ. ಸುವರ್ಣ ಸಂಭ್ರಮದ ಪ್ರಯುಕ್ತ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಈ ಜಾಥಾಕ್ಕೆ ಚಾಲನೆ ನೀಡಿದರು. ಈ ಜಾಥಾ ಕಾರ್ಯಕ್ರಮ ರಾಜ್ಯದಾದ್ಯಂತ ವರ್ಷಪೂರ್ತಿ ನಡೆಯಲಿದೆ.

ಮೂರು ಕಿರು ವೇದಿಕೆಗಳಲ್ಲಿ ಜನಾರ್ದನ (ಜನ್ನಿ), ಜೋಗಿಲ ಸಿದ್ದರಾಜು ಮತ್ತು ಸಿ.ಎಂ. ನರಸಿಂಹಮೂರ್ತಿ ಅವರು ಸಂವೇದನಾ ಗೀತೆಗಳನ್ನು ಹಾಡಿದರೆ, ಸಮುದಾಯ 50 ಜಾಥಾ ಸ್ವಾಗತ ಸಮಿತಿಯ ಅಧ್ಯಕ್ಷರೂ ಆಗಿರುವ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಸಮುದಾಯ ಸಂಘಟನೆ ನಡೆದು ಬಂದ ಹಾದಿಯನ್ನು ವಿವರಿಸಿದರು.

ಕೌದಿ ಎಳೆಯುವ ಮೂಲಕ ಸಮಾರಂಭ ಉದ್ಘಾಟಿಸಿದ ಬರಗೂರು ರಾಮಚಂದ್ರಪ್ಪ, ‘ರೋಚಕತೆ, ರೋಮಾಂಚನ ಉಂಟು ಮಾಡುತ್ತಿದ್ದ ಕಾಲದಲ್ಲಿ ಸೈದ್ಧಾಂತಿಕ ಸಂಚಲನವನ್ನು ಉಂಟುಮಾಡಿದ ಹೆಮ್ಮೆ ಸಮುದಾಯ ಸಂಘಟನೆಯದ್ದಾಗಿದೆ. ಇದು ಆದ್ಯತೆಗಳು ಪಲ್ಲಟವಾಗುತ್ತಿರುವ, ಸಂಘಟನೆಗಳು ವಿಘಟನೆಗೊಂಡಿರುವ ಕಾಲವಾಗಿದೆ. ಇಂತಹ ಸಂದರ್ಭದಲ್ಲಿ ಸಮುದಾಯ ಸಂಘಟನೆ ಏಳು ಬೀಳುಗಳನ್ನು ಕಂಡರೂ ಸ್ಪಷ್ಟ ಸೈದ್ಧಾಂತಿಕತೆಯನ್ನು ಜತನವಾಗಿ ಕಾಪಾಡಿಕೊಂಡಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಸಾಮಾಜಿಕ ಶ್ರೇಣೀಕರಣ, ಧಾರ್ಮಿಕ ಧ್ರುವೀಕರಣ ಹಾಗೂ ಆರ್ಥಿಕ ಕೇಂದ್ರೀಕರಣದ ಕಾಲ ಇದಾಗಿದೆ. ಮಾನವೀಯತೆಯ ಜಾಗದಲ್ಲಿ ಮತೀಯತೆ ಹಾಗೂ ಮಠೀಯತೆ ಆಕ್ರಮಿಸಿಕೊಂಡಿದೆ. ಮನುಷ್ಯತ್ವದ ಮೌಲ್ಯದ ಮೇಲೆ ಅತ್ಯಾಚಾರ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಮನುಷ್ಯತ್ವದ ಎರಡು ಕಣ್ಣುಗಳಾದ ಸೌಹಾರ್ದ ಹಾಗೂ ಸಮಾನತೆಯನ್ನು ಕಾಪಾಡಬೇಕಿದೆ’ ಎಂದು ಹೇಳಿದರು.

ಸಮುದಾಯ 50ರ ಗೌರವಾಧ್ಯಕ್ಷರೂ ಆಗಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ‘ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ನಮ್ಮ ರಾಜ್ಯದಲ್ಲಿ ಸೌಹಾರ್ದ ವಾತಾವರಣ ನೆಲೆಸುವ ನಿಟ್ಟಿನಲ್ಲಿ ಸಮುದಾಯ ಕೊಟ್ಟ ಕೊಡುಗೆ ಅಪಾರ. ಇಂತಹ ಸಾಂಸ್ಕೃತಿಕ ಎಚ್ಚರದ ಸಂಘಟನೆಯೊಂದಿಗೆ ಎಲ್ಲರೂ ಕೈ ಜೋಡಿಸಬೇಕು’ ಎಂದರು.

ಈ ಸುವರ್ಣ ಸಂಭ್ರಮದ ಭಾಗವಾಗಿ ಬೆಳಿಗ್ಗೆ ‘ಮನುಷ್ಯತ್ವದೆಡೆಗೆ ಸಮುದಾಯ’ ಕಲಾ ಶಿಬಿರ ನಡೆಯಿತು. ಇದನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಪ.ಸ. ಕುಮಾರ್ ಉದ್ಘಾಟಿಸಿದರು. ಈ ಶಿಬಿರದಲ್ಲಿ ರಚಿಸಲಾದ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು.

ಕೌದಿ ಎಳೆಯುವ ಮೂಲಕ ಬರಗೂರು ರಾಮಚಂದ್ರಪ್ಪ ಅವರು ಸಮಾರಂಭ ಉದ್ಘಾಟಿಸಿದರು. ಎಚ್ ಜನಾರ್ದನ್, ಎಚ್‌.ಎನ್‌ ನಾಗಮೋಹನದಾಸ್, ರಂಗಕರ್ಮಿ ಪ್ರಸನ್ನ, ಅಗ್ರಹಾರ ಕೃಷ್ಣಮೂರ್ತಿ, ಸಾಹಿತಿ ಬಂಜಗೆರೆ ಜಯಪ್ರಕಾಶ್, ವಿಜಯಾ ಮತ್ತು ಸಮುದಾಯ ಸಂಘಟನೆಯ ರಾಜ್ಯ ಸಂಚಾಲಕ ರವೀಂದ್ರನಾಥ್ ಸಿರಿವರ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬಿ.ಎಲ್‌ಡಿ ಸೌಹಾರ್ದ ಸಹಕಾರಿ ಬ್ಯಾಂಕ್ ಬೆಂಗಳೂರು ನಗರದಲ್ಲಿ ತೆರೆದಿರುವ ಪ್ರಥಮ ಶಾಖೆಗೆ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಮತ್ತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಸಚಿವ ಎಂ.ಬಿ. ಪಾಟೀಲ ಉಪಸ್ಥಿತರಿದ್ದರು

ಬಿ.ಎಲ್.ಡಿ. ಸೌಹಾರ್ದ ಬ್ಯಾಂಕ್ ಶಾಖೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಲ್.ಡಿ ಸೌಹಾರ್ದ ಸಹಕಾರಿ ಬ್ಯಾಂಕ್ ನಗರದ ಶಿವಾನಂದ ವೃತ್ತದ ಬಳಿ ಇರುವ ಎಸ್.ಎನ್.ಎಸ್ ಪ್ಲಾಜಾದಲ್ಲಿ ತೆರೆದಿರುವ ಪ್ರಥಮ ಶಾಖೆಗೆ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಮತ್ತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಭಾನುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಸಿದ್ಧಲಿಂಗ ಸ್ವಾಮೀಜಿ, ‘ಬಂಡವಾಳ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ, ಕೃಷಿ ಹಾಗೂ ಕೈಗಾರಿಕೆ ಇವೆಲ್ಲವೂ ಸಮಾಜದಲ್ಲಿ ಒಂದಕ್ಕೊಂದು ಪೂರಕವಾಗಿವೆ. ಬೆಂಗಳೂರಿನಲ್ಲಿ ತನ್ನ ಪ್ರಪ್ರಥಮ ಶಾಖೆ ತೆರೆದಿರುವ ಬಿ.ಎಲ್.ಡಿ ಬ್ಯಾಂಕ್ ಜನರಿಗೆ ನೆರವಾಗಲಿ’ ಎಂದರು.

ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ‘ಬ್ಯಾಂಕಿಂಗ್ ಕ್ಷೇತ್ರವು ಸರಿಯಾದ ಠೇವಣಿ, ಸಾಲ ನೀಡುವಿಕೆ ಮತ್ತು ಸಾಲ ವಸೂಲಾತಿಗಳ ಆಧಾರದ ಮೇಲೆ ನಡೆಯುತ್ತದೆ. ಬಿ.ಎಲ್.ಡಿ ಸೌಹಾರ್ದ ಬ್ಯಾಂಕ್ ಕೇವಲ ಮೂರು ವರ್ಷಗಳಲ್ಲಿ ತನ್ನ 11ನೇ ಶಾಖೆಯನ್ನು ತೆರೆಯುವ ಮಟ್ಟಕ್ಕೆ ಬೆಳೆದಿರುವುದು ಶ್ಲಾಘನೀಯ’ ಎಂದರು.

ಸಚಿವ ಎಂ.ಬಿ ಪಾಟೀಲ ಮಾತನಾಡಿ, ‘ಫ.ಗು. ಹಳಕಟ್ಟಿ ಅವರು ಸ್ಥಾಪಿಸಿದ ಬಿ.ಎಲ್.ಡಿ ಸಂಸ್ಥೆಗೆ 30 ವರ್ಷಗಳ ಹಿಂದೆಯೇ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾಲೂರಬೇಕೆಂಬ ಬಯಕೆ ಇತ್ತು. ನಂತರದ ದಿನಗಳಲ್ಲಿ ಸಹೋದರ ಸುನಿಲಗೌಡ ಪಾಟೀಲ ಅವರು ಆಸಕ್ತಿ ವಹಿಸಿದ್ದರಿಂದ ಕಾರ್ಯರೂಪಕ್ಕೆ ಬಂದಿದೆ’ ಎಂದರು.

ಮುಂದುವರಿದ ಗುಂಡಿ ಮುಚ್ಚುವ ಕಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ರಜಾ ದಿನವಾದ ಭಾನುವಾರವೂ ಮುಂದುವರಿಯಿತು.

ನಗರದ ಪ್ರಮುಖ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳಿಂದಾಗಿ ವಾಹನ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ವಾಹನದಟ್ಟಣೆ ಉಂಟಾಗುತ್ತಿದೆ. ಈ ನಿಟ್ಟಿನಲ್ಲಿ ಸಂಚಾರಿ ಪೊಲೀಸ್ ವಿಭಾಗದಿಂದ 4,614 ಗುಂಡಿಗಳನ್ನು ಗುರುತಿಸಿ ಆದ್ಯತೆ ಮೇರೆಗೆ ಮುಚ್ಚಲು ಪಾಲಿಕೆಗೆ ಪಟ್ಟಿಯನ್ನು ನೀಡಲಾಗಿತ್ತು. ಅದರಲ್ಲಿ 3,995 ಪಾಲಿಕೆ ವ್ಯಾಪ್ತಿಯಲ್ಲಿ ಹಾಗೂ 619 ಬಿಬಿಎಂಪಿಯ ಹೊರಭಾಗದಲ್ಲಿವೆ.

ಬಿಬಿಎಂಪಿ 3,287 ರಸ್ತೆಗುಂಡಿಗಳು ಮುಚ್ಚಬೇಕಿದ್ದು, ಉಳಿದ ರಸ್ತೆಗುಂಡಿಗಳು ಜಲಮಂಡಳಿ, ಬೆಸ್ಕಾಂ, ಗೇಲ್, ಮೆಟ್ರೊ, ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಇತರ ಇಲಾಖೆಗಳಿಗೆ ಬರಲಿವೆ. ಈ ಸಂಬಂಧ ಬಿಬಿಎಂಪಿ ಹಾಗೂ ವಿವಿಧ ಇಲಾಖೆಗಳು ಕೈಜೋಡಿಸಿ ಕಾಲಮಿತಿಯೊಳಗಾಗಿ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸದಲ್ಲಿ ಕಾರ್ಯಪ್ರವೃತ್ತವಾಗಿವೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ಭಾನುವಾರ ನಡೆಯಿತು

ಪಾಲಿಕೆಯ ಎಲ್ಲ 8 ವಲಯಗಳಲ್ಲಿ ಶನಿವಾರ ಹಾಗೂ ಭಾನುವಾರ ರಸ್ತೆ ಗುಂಡಿಗಳನ್ನು ಎಂಜಿನಿಯರ್‌ಗಳ ಉಸ್ತುವಾರಿಯಲ್ಲಿ ಮುಚ್ಚಲಾಗುತ್ತಿದೆ. ಪಾಲಿಕೆಯ ರಸ್ತೆ ಮೂಲ ಸೌಕರ್ಯಗಳ ವಿಭಾಗದಿಂದ ಹೊರ ವರ್ತುಲ ರಸ್ತೆ, ಹೈಡೆನ್ಸಿಟಿ ಕಾರಿಡಾರ್ ಹಾಗೂ ಪ್ರಮುಖ ರಸ್ತೆಗಳಲ್ಲಿ ರಾತ್ರಿ ವೇಳೆ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ. ಮೈಸೂರು ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ, ಕನಕಪುರ ರಸ್ತೆ, ನಾಗರಭಾವಿ ಇನ್ನಿತರ ರಸ್ತೆಗಳಲ್ಲಿ ಶನಿವಾರ ರಾತ್ರಿ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ತ್ವರಿತಗತಿಯಲ್ಲಿ ಕೆಲಸ ಪೂರ್ಣಗೊಳಿಸಬೇಕು. ಮಳೆ ಬಂದಲ್ಲಿ ಕೋಲ್ಡ್ ಮಿಕ್ಸ್, ಇಕೋಫಿಕ್ಸ್ ಬಳಸಿಕೊಂಡು ರಸ್ತೆ ಗುಂಡಿಗಳನ್ನು ಮುಚ್ಚಬೇಕು. ಮಳೆ ಇಲ್ಲದ ವೇಳೆ ಹಾಟ್ ಮಿಕ್ಸ್ ಬಳಸಿಕೊಂಡು ರಸ್ತೆ ಗುಂಡಿಗಳನ್ನು ಮುಚ್ಚಬೇಕು ಎಂದು ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದ್ದಾರೆ.

ಚಿತ್ರಾವಳಿ

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ನ್ಯಾಷನಲ್ ಏವಿಯೇಷನ್ ರಿಸರ್ಚ್ ಫೋರಂ ಶನಿವಾರ ಆಯೋಜಿಸಿದ್ದ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಹಿಳೆಯರ ಸಬಲೀಕರಣ ಕಾರ್ಯಕ್ರಮದಲ್ಲಿ ಐಎಎಸ್ ಅಧಿಕಾರಿ ಖುಷ್ಬು ಗೋಯಲ್ ಚೌಧರಿ, ಶಿಜಾ ಎಸ್., ಪಾಯಲ್ ಸತೀಶ್, ರೀನಾ ಉತ್ತಪ್ಪ ಪಿ., ಕ್ಯಾಪ್ಟನ್ ರೂಪಾ ವಿ., ಪದ್ಮಾವತಿ ಎಸ್, ಕೆನ್ನಿ ಥಾಮಸ್, ಗ್ರೀಷ್ಮಾ ಶ್ರೀಕಾಂತ್, ಕಿರಣ್ ಪ್ರಸಾದ್, ಅಂಕಿತಾ ಎಂ. ಹುಂಡೇಕರ್, ಫೋರಂನ ಅಧ್ಯಕ್ಷ ಜೋಫಿನ್ ಜೋಸ್, ಉಪಾಧ್ಯಕ್ಷ ವೆಂಕಟೇಶ್ವರನ್ ಭಾಗವಹಿಸಿದ್ದರು

ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಶನಿವಾರ ನಡೆದ ಪ್ರವರ ಥಿಯೇಟರ್ ಸಂಸ್ಥೆಯ 12ನೇ ವಾರ್ಷಿಕೋತ್ಸವದಲ್ಲಿ ರಂಗಕರ್ಮಿಗಳಾದ ಕುಂದಾಪುರದ ರೇವತಿರಾಂ ಕುಂದನಾಡು ಮತ್ತು ಬೆಂಗಳೂರಿನ ಅನಿರುದ್ಧ ವೇದಾಂತಿ ಅವರಿಗೆ ‘ಪ್ರವರ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಪ್ರವರ ಥಿಯೇಟರ್ ಸಂಸ್ಥೆಯ ಕಾರ್ಯಕಾರಿ ಸದಸ್ಯರಾದ ಪ್ರವೀಣ್ ಕೆಮ್ತೂರ್, ಸಚಿನ್ ಶೆಟ್ಟಿ, ವರ್ಚಸ್ವಿನಿ ರವೀಂದ್ರ, ಸಂಸ್ಥಾಪಕ ನಿರ್ದೇಶಕ ಹನು ರಾಮಸಂಜೀವ, ವಕೀಲ ಜಿ.ಟಿ. ನರೇಂದ್ರ, ನಾಟಕಕರಾದ ನಾಗವೇಣಿ ರಂಗನ್, ಕಾರ್ಯಕಾರಿ ಸದಸ್ಯರಾದ ಋತ್ವಿಕ್ ಹಾಗೂ ಚೈತ್ರಾ ಉಪಸ್ಥಿತರಿದ್ದರು

ಪಿಇಎಸ್ ವಿಶ್ವವಿದ್ಯಾಲಯ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಿ.ಟೆಕ್, ಬಿ.ಆರ್ಕ್ ಪ್ರಥಮ ವರ್ಷದ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ ಅವರು ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ವಿಶ್ವವಿದ್ಯಾಲಯದ ಕುಲಸಚಿವ ಕೆ.ಎಸ್ ಶ್ರೀಧರ್, ಮುಖ್ಯ ಕಾರ್ಯಾಚರಣೆ ಅಧಿಕಾರಿ ಪ್ರೊ. ಅಜಯ್ ಕುಮಾರ್ ಹಾಗೂ ಕುಲಪತಿ ಜೆ. ಸೂರ್ಯಪ್ರಸಾದ್ ಉಪಸ್ಥಿತರಿದ್ದರು

ಜಯಂತ್ಯುತ್ಸವದಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ

ಬೆಂದಕಾಳೂರು ಉಳಿಸಲು ಹೋರಾಡಿದ್ದ ಕೆಂಪೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಸಾಮ್ರಾಜ್ಯದ ವೈಭವವನ್ನು ನೋಡಿದ್ದ ಕೆಂಪೇಗೌಡರು ಅದೇ ರೀತಿಯ ವೈಭವಯುತ ರಾಜ್ಯವನ್ನು ಕಟ್ಟಲು ಬೆಂದಕಾಳೂರು ನಗರವನ್ನು ಸ್ಥಾಪಿಸಿದ್ದರು ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ನಾಡಪ್ರಭು ಕೆಂಪೇಗೌಡ ವಿಚಾರ ವೇದಿಕೆ ಟ್ರಸ್ಟ್ ಭಾನುವಾರ ಹಮ್ಮಿಕೊಂಡಿದ್ದ ಕೆಂಪೇಗೌಡರ 516ನೇ ಜಯಂತ್ಯುತ್ಸವ, ಸಾಧಕರಿಗೆ ಗೌರವ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸುಂದರ ನಗರದ ಕನಸು ಕಂಡಿದ್ದ ಕೆಂಪೇಗೌಡರು ಅದ್ಭುತವಾಗಿ ನಿರ್ಮಿಸಿ ಕನಸು ನನಸು ಮಾಡಿದ್ದರು. ಇಂದು ವಿಶ್ವದ ದೊಡ್ಡ ನಗರಗಳಲ್ಲಿ ಒಂದಾಗಿ ಬೆಂಗಳೂರು ಹೆಸರು ಮಾಡಲು ಕೆಂಪೇಗೌಡರ ಕೊಡುಗೆ ಅಪಾರ ಎಂದು ಹೇಳಿದರು.

ರಾಜ್ಯದ ಜನರಷ್ಟೇ ಅಲ್ಲ, ದೇಶ, ವಿದೇಶದವರೂ ಆರ್ಥಿಕ, ಔದ್ಯೋಗಿಕ, ಶೈಕ್ಷಣಿಕವಾಗಿ ಬೆಂಗಳೂರು ನಗರದಿಂದ ಸವಲತ್ತು ಪಡೆದುಕೊಳ್ಳುತ್ತಿದ್ದಾರೆ. ಅದಕ್ಕೆ ಕೆಂಪೇಗೌಡರು ಹಾಕಿದ ಅಡಿಪಾಯ ಕಾರಣ ಎಂದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ನಾಡಪ್ರಭು ಕೆಂಪೇಗೌಡರ ಜಯಂತಿ’ ಕಾರ್ಯಕ್ರಮದಲ್ಲಿ ಆಂಜನೇಯ, ನಾಗರಾಜಯ್ಯ ಮತ್ತು ಬಿ.ಎಂ ನಾರಾಯಣಸ್ವಾಮಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು–ಪ್ರಜಾವಾಣಿ ಚಿತ್ರ

ರಾಷ್ಟ್ರಪತಿ ಪದಕ ಪುರಸ್ಕೃತರಾದ ಡಾ. ನಾಗರಾಜಯ್ಯ, ನಾಟ್ಯ ಸರಸ್ವತಿ ಶಾಂತಲಾ, ಕನ್ನಡ ಕಲಾ ಸಂಘದ ಪ್ರಧಾನ ಕಾರ್ಯದರ್ಶಿ ಆಂಜನೇಯ, ಕೆಂಪೇಗೌಡ ಕೇಂದ್ರ ಸಮಿತಿಯ ಹಿರಿಯ ವ್ಯವಸ್ಥಾಪಕ ಸದಸ್ಯ ಬಿ.ಎಂ. ನಾರಾಯಣಸ್ವಾಮಿ, ಟ್ರಸ್ಟ್ ಸದಸ್ಯ ಕುಮಾರಸ್ವಾಮಿ ಅವರನ್ನು ಶಾಸಕ ಎಂ. ಕೃಷ್ಣಪ್ಪ ಸನ್ಮಾನಿಸಿದರು.

ಆದಿಚುಂಚನಗಿರಿ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ವಕೀಲ ಸಿ.ಎಚ್. ಹನುಮಂತರಾಯಪ್ಪ, ಯುಎಸ್‌ಡಿಎ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ನಾಗೇಶ್, ವೈದ್ಯರಾದ ಡಾ. ಟಿ.ಎಚ್. ಆಂಜನಪ್ಪ, ಟ್ರಸ್ಟ್ ಅಧ್ಯಕ್ಷ ಟಿ. ಪಾಪಣ್ಣ ಇಗ್ಗಲೂರು, ಉಪಾಧ್ಯಕ್ಷೆ ಎಸ್. ಜಯಲಕ್ಷ್ಮಿ, ಗೌರವ ಸಲಹೆಗಾರ ಸಿ. ನಂಜುಂಡಯ್ಯ, ಕನ್ನಡ ಜನಶಕ್ತಿ ಕೇಂದ್ರದ ಸಿ.ಕೆ. ರಾಮೇಗೌಡ ಇದ್ದರು.

‘ಅಂಗನವಾಡಿಗಳಲ್ಲಿ ಕಳಪೆ ಆಹಾರ’

ವಿಧಾನಮಂಡಲದ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತ ಕಲ್ಯಾಣ ಸಮಿತಿ ಕಳವಳ

ಗುತ್ತಿಗೆ ರದ್ದುಪಡಿಸಲು ಸಮಿತಿ ಶಿಫಾರಸು

ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಕೇಂದ್ರಗಳಿಂದ (ಎಂಎಸ್‌ಪಿಸಿ) ಗುತ್ತಿಗೆದಾರರ ಮೂಲಕ ಅಂಗನವಾಡಿ ಕೇಂದ್ರಗಳಿಗೆ ಪೂರೈಸುತ್ತಿರುವ ಆಹಾರದ ಗುಣಮಟ್ಟ ಕಳಪೆಯಾಗಿರುವ ಕಾರಣ, ಈ ಗುತ್ತಿಗೆಗಳನ್ನು ರದ್ದುಪಡಿಸಿ ಎಂದು ಸಮಿತಿಯು ಶಿಫಾರಸು ಮಾಡಿದೆ.

ಎಂಎಸ್‌ಪಿಸಿಗಳಿಂದ ಪೂರೈಸುತ್ತಿರುವ ಆಹಾರದ ಬದಲಿಗೆ ಮಾಲ್ಟ್ ಮತ್ತು ಹಾಲನ್ನು ಒದಗಿಸಿ. ಸ್ಥಳೀಯ ಮಟ್ಟದಲ್ಲಿಯೇ ಪೌಷ್ಟಿಕ ಆಹಾರ ಒದಗಿಸಬೇಕು.

ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆಳೆಯಲು ಅನುಕೂಲವಾಗುವಂತಹ ಆಹಾರ ಹಾಗೂ ವಾತಾವರಣವನ್ನು ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಅಂಗನವಾಡಿ ಕೇಂದ್ರಗಳಲ್ಲಿ ಕಳಪೆ ಗುಣಮಟ್ಟದ ಆಹಾರ ಪೂರೈಸುತ್ತಿರುವುದರ ವಿರುದ್ಧ ಇಲಾಖೆಯ ಸಿಬ್ಬಂದಿ, ಕಾರ್ಯಕರ್ತೆಯರ ಪತ್ರ ವರದಿ ಸಂಬಂಧ ಜೂನ್ 3 ರಂದು ‘ಪ್ರಜಾವಾಣಿ’ ವರದಿ ಪ್ರಕಟಿಸಿತ್ತು.

• ಜಯಸಿಂಹ ಆರ್.

ಬೆಂಗಳೂರು: ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಪೌಷ್ಟಿಕ ಆಹಾರದ ಗುಣಮಟ್ಟ ಕಳಪೆಯಾಗಿದೆ ಎಂದು ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಮಿತಿಯು ಹೇಳಿದೆ.

ಈಚೆಗೆ ನಡೆದ ಕರ್ನಾಟಕ ವಿಧಾನಮಂಡಲ ಅಧಿವೇಶನದಲ್ಲಿ, ಆಗಸ್ಟ್ 22ರಂದು 2024-25ನೇ ಸಾಲಿಗೆ ಸಂಬಂಧಿಸಿದ ವರದಿಯನ್ನು ಮಂಡಿಸಲಾಗಿದೆ. ಸಮಿತಿಯ ಸದಸ್ಯರು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿದಾಗ, ಕಳಪೆ ಗುಣಮಟ್ಟದ ಆಹಾರ ನೀಡುತ್ತಿರುವುದು ಗಮನಕ್ಕೆ ಬಂದಿತು ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯದ ಅಂಗನವಾಡಿ ಕೇಂದ್ರವೊಂದಕ್ಕೆ ಪೂರೈಸಲಾಗಿದ್ದ ಕೊಳೆತ ಬೆಲ್ಲದ ಪುಡಿ ಮತ್ತು ಸಾಂಬಾರು ಪುಡಿ

ಪ್ರಜಾವಾಣಿ ಚಿತ್ರ

‘ಈ ಹಿಂದೆ ಅಂಗನವಾಡಿಗಳಿಗೆ ಉತ್ತಮ ಗುಣಮಟ್ಟದ ಆಹಾರ ಪೂರೈಸಲಾಗುತ್ತಿತ್ತು. ಈಗ ಪೌಡರ್ ರೂಪದಲ್ಲಿ ಆಹಾರ ನೀಡಲಾಗುತ್ತಿದ್ದು, ಅದರಲ್ಲಿ ಪೌಷ್ಟಿಕಾಂಶ ಇದೆಯೋ ಅಥವಾ ಇಲ್ಲವೋ ಎಂಬುದು ತಿಳಿಯುವುದಿಲ್ಲ. ಜಿಡ್ಡ ರೂಪದಲ್ಲಿ ಆಹಾರ ನೀಡುತ್ತಿದ್ದು, ಇದು ಸರಿಯಲ್ಲ. ಈ ಹಿಂದೆ ಯಾವ ಸ್ವರೂಪದಲ್ಲಿ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸಲಾಗುತ್ತಿತ್ತೋ, ಅದೇ ಪದ್ಧತಿಯನ್ನು ಅನುಸರಿಸಬೇಕು’ ಎಂದು ಸಮಿತಿಯು ಶಿಫಾರಸು ಮಾಡಿದೆ.

‘ರಾಜ್ಯದ ಎಲ್ಲ ಅಂಗನವಾಡಿಗಳಿಗೆ ಆಹಾರ ಪೂರೈಕೆ ಮಾಡಲು ಕೆಲವು ಏಜೆನ್ಸಿಗಳಿಗೆ ಗುತ್ತಿಗೆ ನೀಡಲಾಗಿದೆ. ಈ ಬಗ್ಗೆ ದೂರುಗಳಿವೆ. ಮಾಧ್ಯಮಗಳಲ್ಲೂ ವರದಿಯಾಗಿವೆ. ದೂರುಗಳು ಬಂದಾಗ ತಾವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇವೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ವಿವರಣೆ ನೀಡಿದ್ದಾರೆ. ಆದರೆ ಅದು ಸಾಲುವುದಿಲ್ಲ’ ಎಂದು ಸಮಿತಿಯು ಅಭಿಪ್ರಾಯಪಟ್ಟಿದೆ.

‘ದೂರು ಬಂದ ಕೂಡಲೇ ಅಂತಹ ಏಜೆನ್ಸಿ, ಗೋದಾಮು ಮತ್ತು ಸಂಬಂಧಿತ ಅಂಗನವಾಡಿಗಳಿಗೆ ಭೇಟಿ ನೀಡಿದರೆ ಕಳಪೆ ಗುಣಮಟ್ಟದ ಯಾವ ಸರಕು ಸಿಗುವುದಿಲ್ಲ. ಬದಲಿಗೆ ದಿಢೀರ್ ಭೇಟಿ ನೀಡಬೇಕು. ಆಗ ಮಾತ್ರ ಲೋಪಗಳನ್ನು ಪತ್ತೆ ಮಾಡಲು ಸಾಧ್ಯ ಎಂದು ಇಲಾಖೆಯ ನಿರ್ದೇಶಕರಿಗೆ ಸೂಚಿಸಲಾಗಿದೆ’ ಎಂದು ಸಮಿತಿಯ ವರದಿ ತಿಳಿಸಿದೆ.

ಚಟಕ್ ಸುದ್ದಿ

ತುಮಕೂರು ವಿ.ವಿಗೆ ಸಿದ್ದಗಂಗಾ ಶ್ರೀ ಹೆಸರಿಡಲು ಪತ್ರ

ತುಮಕೂರು: ತುಮಕೂರು ವಿಶ್ವವಿದ್ಯಾಲಯಕ್ಕೆ ಸಿದ್ದಗಂಗಾ ಮಠದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಹೆಸರು ಮರು ನಾಮಕರಣ ಮಾಡುವಂತೆ ಒತ್ತಾಯಿಸಿ ಕೇಂದ್ರ ಜಲ ಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಶಿವಕುಮಾರ ಸ್ವಾಮೀಜಿ ಉಚಿತವಾಗಿ ಶಿಕ್ಷಣ, ವಸತಿ ಮತ್ತು ದಾಸೋಹದ ವ್ಯವಸ್ಥೆ ಮಾಡುವ ಮೂಲಕ ಸಾವಿರಾರು ಮಕ್ಕಳ ಪ್ರಗತಿ ಹೊಂದಲು ಕಾರಣೀಭೂತರಾಗಿದ್ದಾರೆ. ಸ್ವಾಮೀಜಿ ಹೆಸರನ್ನು ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಿದರೆ ಅವರಿಗೆ ಗೌರವ ಸಲ್ಲಿಸಿದಂತೆ ಆಗುತ್ತದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ವಿ.ಸೋಮಣ್ಣ ಅವರು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ಸುದ್ದಿ 2 ನಿಮಿಷ

ವೀರಶೈವ, ಲಿಂಗಾಯತ- ಶೀಘ್ರ ತೀರ್ಮಾನ: ಎಂ.ಬಿ. ಪಾಟೀಲ

ಬೆಂಗಳೂರು: ‘ರಾಜ್ಯದಲ್ಲಿ ನಡೆಯಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ (ಜಾತಿವಾರು ಗಣತಿ) ಧರ್ಮ ನಮೂದಿಸುವ ಕಾಲಂನಲ್ಲಿ ಏನು ಬರೆಸಬೇಕೆಂದು ಲಿಂಗಾಯತ ನಾಯಕರ ಸಭೆ ನಡೆಸಿ 10 ದಿನಗಳಲ್ಲಿ ನಿರ್ಧರಿಸುತ್ತೇವೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಾವಿರಾರು ಸಭೆ ಸೇರಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಆ ಸಭೆಗೆ ಸ್ವಾಮೀಜಿಗಳೂ ಬಂದಿದ್ದರು’ ಎಂದರು.

‘ಧರ್ಮ ನಮೂದಿಸುವ ಕಲಂನಲ್ಲಿ ಏನು ಬರೆಸಬೇಕೆಂದು ಚರ್ಚಿಸಿದ್ದೇವೆ. ಈ ಹಿಂದೆ ಕೆಲವರು ವೀರಶೈವ ಎಂದೂ ಇನ್ನೂ ಕೆಲವರು ಲಿಂಗಾಯತ ಎಂದೂ ಬರೆಸಿದ್ದಾರೆ. ಈ ವಿಚಾರದ ಬಗ್ಗೆ ಮತ್ತೆ ಚರ್ಚೆ ಮಾಡುತ್ತೇವೆ’ ಎಂದರು.

‘ಕೇಂದ್ರ ಸರ್ಕಾರದಿಂದಲೂ ಜಾತಿವಾರು ಗಣತಿ ನಡೆಯಲಿದೆ. ನಮ್ಮದು ಸಾಮಾಜಿಕ, ಆರ್ಥಿಕ ಸಮೀಕ್ಷೆ’ ಎಂದರು.

ಬಿಜೆಪಿಯವರು ಬಾಯಿ ಮುಚ್ಚಿಕೊಳ್ಳಬೇಕು: ಡಿಕೆಶಿ

ಬೆಂಗಳೂರು: ‘ಧರ್ಮಸ್ಥಳ ವಿಚಾರದಲ್ಲಿ ಬಿಜೆಪಿಯವರು ರಾಜಕೀಯ ಮಾಡುವ ಬದಲು ಬಾಯಿ ಮುಚ್ಚಿಕೊಳ್ಳಬೇಕು’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ರಾಹುಲ್ ಗಾಂಧಿ ನೇತೃತ್ವದಲ್ಲಿ ಬಿಹಾರದಲ್ಲಿ ನಡೆಯುತ್ತಿರುವ ‘ಮತ ಅಧಿಕಾರ ಯಾತ್ರೆ’ಯಲ್ಲಿ ಭಾಗವಹಿಸಿದ ಅವರು ಸುದ್ದಿಗಾರರ ಜೊತೆ ಮಾತನಾಡಿ, ‘ಬಿಜೆಪಿಯಲ್ಲಿ ಎರಡು ಬಣಗಳಿವೆ. ಹೀಗಾಗಿ, ಈ ರೀತಿ ಮಾಡುತ್ತಿದ್ದಾರೆ. ಅವರು ತಮ್ಮ ವೈಫಲ್ಯಗಳನ್ನು ನಮ್ಮ ಮೇಲೆ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ನಾವು ಸತ್ಯಾಂಶವನ್ನು ಜನರ ಮುಂದಿಡುತ್ತೇವೆ’ ಎಂದರು.

ದೇಶದ ಪಾಲಿಗೆ ಗೇಮ್ ಚೇಂಜರ್: ‘ರಾಹುಲ್ ಗಾಂಧಿ ಅವರು ಕರ್ನಾಟಕದಿಂದ ಬಿಹಾರದವರೆಗೆ ಧ್ವನಿ ಎತ್ತಿರುವ ವಿಚಾರದ ಬಗ್ಗೆ ಇಡೀ ದೇಶವೇ ಚರ್ಚಿಸುತ್ತಿದೆ. ಅವರ ನೇತೃತ್ವದಲ್ಲಿ ಬಿಹಾರದಲ್ಲಿ ನಡೆಯುತ್ತಿರುವ ‘ಮತ ಅಧಿಕಾರ ಯಾತ್ರೆ’ ದೇಶದ ಪಾಲಿಗೆ ಗೇಮ್ ಚೇಂಜರ್ ಆಗಲಿದೆ’ ಎಂದರು.

‘ರಾಹುಲ್ ಗಾಂಧಿ ಅವರು ತಮಗಾಗಿ ಈ ಹೋರಾಟ ಮಾಡುತ್ತಿಲ್ಲ. ಸಂವಿಧಾನದತ್ತವಾಗಿ ದೇಶದ ಜನಸಾಮಾನ್ಯರಿಗೆ ಸಿಕ್ಕಿರುವ ಹಕ್ಕಿನ ರಕ್ಷಣೆಗೆ ಹೋರಾಡುತ್ತಿದ್ದಾರೆ. ಕರ್ನಾಟಕದಲ್ಲಿ ಏನಾಗಿದೆ ಎನ್ನುವುದು ನನಗೆ ಗೊತ್ತಿದೆ. ಮತದಾರರು ತಮ್ಮ ಹಕ್ಕನ್ನು ಪಡೆಯಲು ಅವಕಾಶ ಮಾಡಿಕೊಟ್ಟಿರುವ ಸುಪ್ರೀಂ ಕೋರ್ಟ್ ಬಗ್ಗೆ ಹೆಮ್ಮೆ ಇದೆ’ ಎಂದರು.

‘ಬಿಹಾರದ ಜನ ಬದಲಾವಣೆ ಬಯಸಿದ್ದಾರೆ. ಇಲ್ಲಿನ ಯುವಕರು ಕೂಡ ಬೀದಿಗಿಳಿದು ಮಹಾಘಟಬಂಧನಕ್ಕೆ ಬೆಂಬಲ ನೀಡುತ್ತಿದ್ದಾರೆ. ಈ ಬಾರಿ ಮಹಾಘಟಬಂಧನ ಗೆದ್ದೇ ಗೆಲ್ಲುತ್ತದೆ’ ಎಂದರು.

ಭಾಷೆ ಬಳಕೆ ಹೆಚ್ಚಳ ಪ್ರಮಾಣದಲ್ಲಿ ಕನ್ನಡಕ್ಕೆ ಕೊನೆ ಸ್ಥಾನ: ಬಿಳಿಮಲೆ

ಬೆಂಗಳೂರು: ವರ್ಷದಿಂದ ವರ್ಷಕ್ಕೆ ಹಿಂದಿ ಭಾಷಿಕರ ಸಂಖ್ಯೆ ಹೆಚ್ಚುತ್ತಿದ್ದು ಕನ್ನಡ ಕೊನೆಯ ಸ್ಥಾನಕ್ಕೆ ಕುಸಿದಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆತಂಕ ವ್ಯಕ್ತಪಡಿಸಿದರು.

ಅನ್ವರ್ಥ ಪಬ್ಲಿಕೇಶನ್ ಹೌಸ್‌ನ 25ನೇ ವರ್ಷದ ನೆನಪಿನಲ್ಲಿ ನವಕಾ ಬಿ. ದೇಶಮಾನೆ ಸಂಪಾದಿಸಿದ 25 ಮಹಿಳಾ ಪುಸ್ತಕಗಳನ್ನು ಗುರುವಾರ ಜನಾರ್ದನ ಗೋಖಲೆ ಅವರು ಮಾತನಾಡಿದರು.

ಲಭ್ಯ ಇರುವ ಮಾಹಿತಿ ಪ್ರಕಾರ, ‘ಹಿಂದಿ ಮಾತನಾಡುವವರ ಪ್ರಮಾಣ 40 ವರ್ಷಗಳಲ್ಲಿ ಶೇ 66ರಷ್ಟು ಹೆಚ್ಚಾಗಿದೆ. 70 ಕೋಟಿ ಜನರು ಹಿಂದಿ ಭಾಷೆ ಬಳಸುತ್ತಿದ್ದಾರೆ. ಒಡಿಯಾ, ಮರಾಠಿ, ತೆಲುಗು, ತಮಿಳು, ಮಲಯಾಳ, ಪಂಜಾಬಿ ಭಾಷೆ ಬಳಸುವವರ ಪ್ರಮಾಣ ಶೇ 70ರಷ್ಟು ಹೆಚ್ಚಿದೆ. ಕನ್ನಡ ಭಾಷೆ ಬಳಕೆ ಪ್ರಮಾಣ ಹೆಚ್ಚಳ ಶೇ 3.73ರಷ್ಟು ಮಾತ್ರ ಹೆಚ್ಚಾಗಿದೆ’ ಎಂದು ವಿವರಿಸಿದರು.

ಕರೀಗೌಡ ಬೀಚನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ವೈದ್ಯೆ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ, ವಾರ್ತಾ ಇಲಾಖೆಯ ಉಪನಿರ್ದೇಶಕಿ ಪಲ್ಲವಿ ಹೊನ್ನಾಪುರ, ಲೇಖಕಿಯರಾದ ವಿಜಯಾ, ಕೆ.ಟಿ. ಶಾಂತಲಾ, ಪದ್ಮಾ ನಾಗರಾಜು, ಪ್ರಕಾಶಕರಾದ ಕಂಪಣ್ಣ ನಾಗರಾಜು ಹಾಜರಿದ್ದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು-560 023 ದೂರವಾಣಿ: 080-2955 7021, ಇ-ಮೇಲ್: pdksaps@gmail.com

ಸಂಖ್ಯೆ: ಕೆಎಸ್‌ಎಪಿಎಸ್/ಎಆರ್ಟಿ/04/2025-26 ದಿನಾಂಕ: 16.08.2025

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ-ಲಕೋಟೆ)

7 ಎನ್‌ಎಸಿಪಿ ಮತ್ತು 1 ನಾನ್ ಎನ್‌ಎಸಿಪಿ ವೈರಲ್ ಲೋಡ್ ಲ್ಯಾಬ್‌ಗಳಿಗೆ ಅವಶ್ಯಕತೆ ಇರುವ ವೈರಲ್ ಲೋಡ್ ಕನ್ಸೂಮಬಲ್ಸ್‌ಗಳನ್ನು ಸರಬರಾಜು ಮಾಡಲು ಇ-ಸಂಗ್ರಹಣ ವೇದಿಕೆ ಮೂಲಕ ಟೆಂಡರ್ (ದ್ವಿ-ಲಕೋಟೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:15.09.2025. ಸಮಯ ಸಂಜೆ 5:30 ಗಂಟೆಯವರೆಗೆ. ಹೆಚ್ಚಿನ : https://kppp.karnataka.gov.in

ಸಹಿ/- ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ.

ವಾಸಾಸಂಇ/ವಾಪ್ರ/ಜಿಎ/2438/2025-26

ಒಬ್ಬ ಅಧಿಕಾರಿಗೆ ನಾಲ್ವರ ಕೆಲಸ ಮಾಡುವ ಸನ್ನಿವೇಶ

‘ಕೆಪಿಸಿಬಿ’ಯಲ್ಲಿ ಸಿಬ್ಬಂದಿ ಕೊರತೆ

• ಉಮೇಶ ಭಟ್ಟ ಪಿ.ಎಚ್

ಮಂಡಳಿಯಲ್ಲಿ ಸಿಬ್ಬಂದಿ ಕೊರತೆ ಇದೆ. ಸದ್ಯ 300 ಹುದ್ದೆ ಭರ್ತಿಗೆ ಸರ್ಕಾರ ಅನುಮತಿ ನೀಡಿದ್ದು, ಒಳಮೀಸಲು ನಿಗದಿ ನಂತರ ನೇಮಕ ನಡೆಯಲಿದೆ.

ಎಸ್.ಎಸ್.ಲಿಂಗರಾಜ
ಸದಸ್ಯ ಕಾರ್ಯದರ್ಶಿ, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ

ಅಂಕಿ ಅಂಶಗಳು

749 ಮಂಡಳಿಯಲ್ಲಿನ ಒಟ್ಟು ಹುದ್ದೆಗಳು

469 ಖಾಲಿ ಇರುವ ಹುದ್ದೆಗಳು

250 ಸೇವೆಯಲ್ಲಿರುವವರ ಸಂಖ್ಯೆ

300 ನೇಮಕಾತಿಗೆ ಸಿಕ್ಕಿರುವ ಅನುಮತಿ

ಬೆಂಗಳೂರು: ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಸಿಬ್ಬಂದಿ ಕೊರತೆ ಇದ್ದು, ಹಾಲಿ ಇರುವ ಒಬ್ಬೊಬ್ಬ ಸಿಬ್ಬಂದಿ ನಾಲ್ವರು ಮಾಡುವ ಕೆಲಸ ಮಾಡುವಂತಹ ಸನ್ನಿವೇಶ ನಿರ್ಮಾಣವಾಗಿದೆ.

ಗಣೇಶ ಹಬ್ಬ ಬರುತ್ತಿದ್ದು, ಪಿಒಪಿ ಗಣೇಶ ಮೂರ್ತಿಗಳ ಬಳಕೆ ನಿಯಂತ್ರಿಸಲು ಪರಿಸರ ಇಲಾಖೆ ಹಾಗೂ ಮಂಡಳಿ ಮುಂದಾಗಿದೆ. ಆದರೆ, ಸಿಬ್ಬಂದಿ ಕೊರತೆಯಿಂದಾಗಿ ಕ್ಷೇತ್ರ ವೀಕ್ಷಣೆ, ಅನುಮತಿ ನೀಡುವ ಜತೆಗೆ ಗಣೇಶ ಮೂರ್ತಿಗಳ ಮೇಲೆ ನಿಗಾ ವಹಿಸುವುದು ಕಷ್ಟವಾಗಿದೆ ಎನ್ನುವುದು ಮಂಡಳಿ ಮೂಲಗಳ ಮಾಹಿತಿ. ಇದರಿಂದಾಗಿ ಕೆಲಸಗಳು ತಡವಾಗುತ್ತಿರುವುದು ಕೂಡ ನಿಜ ಎನ್ನುವುದು ಅಧಿಕಾರಿಗಳ ಮಾತು.

ಮಂಡಳಿಯಲ್ಲಿ ಶೇ 60ರಷ್ಟು ಸಿಬ್ಬಂದಿ ಕೊರತೆ ಇದೆ. ಬಹುತೇಕ ಹತ್ತು ವರ್ಷದಿಂದ ಪರಿಸರ ಅಧಿಕಾರಿಗಳು, ವೈಜ್ಞಾನಿಕ ಅಧಿಕಾರಿಗಳು, ಸಹಾಯಕ ಪರಿಸರ ಅಧಿಕಾರಿಗಳ ನೇಮಕವಾಗಿಲ್ಲ.

ಮಂಡಳಿಯು 12 ವಲಯ ಕಚೇರಿಗಳೆಂದ್ರ, 51 ಪ್ರಾದೇಶಿಕ ಕಚೇರಿಗಳಿವೆ. ಅತಿ ಹೆಚ್ಚು ಕಾರ್ಖಾನೆಗಳನ್ನು ಹೊಂದಿರುವ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿಯೇ 14 ಪ್ರಾದೇಶಿಕ ಕಚೇರಿಗಳಿವೆ. ಎಲ್ಲಾ ಕಚೇರಿಗಳಲ್ಲೂ ಒಬ್ಬರು ಪರಿಸರ ಅಧಿಕಾರಿ. ಒಬ್ಬರು ಉಪ ಪರಿಸರ ಅಧಿಕಾರಿ, ಮೂವರು ಸಹಾಯಕ ಪರಿಸರ ಅಧಿಕಾರಿಗಳು ಇರಬೇಕು.

ಇರಲ್ಲದೇ ವೈಜ್ಞಾನಿಕ ಅಧಿಕಾರಿ, ಸಹಾಯಕರು ಇದ್ದು ಎಲ್ಲಾ ಹುದ್ದೆಗಳಲ್ಲೂ ಸಿಬ್ಬಂದಿ ಕೊರತೆ ಇದೆ.

ಮಂಡಳಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುವ 205 ಪರಿಸರ ಅಧಿಕಾರಿಗಳ ಪೈಕಿ 61 ಮಂದಿ ನಿವೃತ್ತರಾಗಿದ್ದು, 144 ಪರಿಸರ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮುಖ್ಯ, ಉಪ ಪರಿಸರ ಅಧಿಕಾರಿಗಳ ಶೇ 50ರಷ್ಟು ಹುದ್ದೆಗಳು ಖಾಲಿ ಇರುವುದರಿಂದ ಪರಿಸರ ಅಧಿಕಾರಿಗಳೇ ಹೆಚ್ಚುವರಿ ಕಾರ್ಯಭಾರ ನೋಡಿಕೊಳ್ಳುತ್ತಿದ್ದಾರೆ.

ಮಂಡಳಿಯಲ್ಲಿನ ಖಾಲಿ ಹುದ್ದೆಗಳನ್ನು ಐದು ವರ್ಷಕ್ಕೆ ಒಮ್ಮೆ ನೇಮಕ ಮಾಡಿಕೊಳ್ಳಬೇಕು ಎಂಬ ಸೂಚನೆಯಿದ್ದು, 1999 ಹಾಗೂ 2003ರಲ್ಲಿ ನೇಮಕ ಪ್ರಕ್ರಿಯೆ ನಡೆದಿತ್ತು. ಇದಾದ ನಂತರ 2014ರಲ್ಲಿ ನೇಮಕವಾಗಿತ್ತು. ಬಳಿಕ ನೇಮಕ ಪ್ರಕ್ರಿಯೆ ನಡೆದಿಲ್ಲ.

‘ಇಲಾಖೆಯಲ್ಲಿ ಎರಡು ದಶಕಕ್ಕೂ ಹೆಚ್ಚು ಕಾಲದಿಂದ ಪರಿಸರ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವೆ. ಕಾಲಕಾಲಕ್ಕೆ ನೇಮಕ ಪ್ರಕ್ರಿಯೆ ನಡೆಯದ ಕಾರಣ ಕ್ಷೇತ್ರ ಕಾರ್ಯ ಮಾಡಬೇಕಾದ ಅಧಿಕಾರಿ, ಸಿಬ್ಬಂದಿ ಸಂಖ್ಯೆ ಕಡಿಮೆಯಾಗಿದೆ. ಪರಿಸರ ಮಾಲಿನ್ಯ ತಡೆ ಕಾರ್ಯಗಳಲ್ಲದೇ, ಹೊಸ ಬಡಾವಣೆ ನಿರ್ಮಾಣಕ್ಕೆ ಎನ್‌ಒಸಿ ಕೊಡುವುದರವರೆಗೂ ಸೇವೆ ವಿಸ್ತರಣೆಗೊಂಡಿದೆ. ಕೆಲಸದ ಒತ್ತಡ ಜಾಸ್ತಿಯಾಗಿ ಹಲವರ ಆರೋಗ್ಯದ ಮೇಲೂ ಪರಿಣಾಮ ಬೀರಿದೆ’ ಎಂದು ಜಿಲ್ಲೆಯೊಂದರ ಹಿರಿಯ ಪರಿಸರ ಅಧಿಕಾರಿ ಪರಿಸ್ಥಿತಿ ವಿವರಿಸಿದರು.

ಹೂಡಿಕೆದಾರರ ಸಮಾವೇಶಕ್ಕೆ ₹100 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಫೆಬ್ರುವರಿಯಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ (ಜಿಮ್) ರಾಜ್ಯ ಸರ್ಕಾರ ₹100.69 ಕೋಟಿ ವೆಚ್ಚ ಮಾಡಿದೆ. 2022ರಲ್ಲಿ ಬಿಜೆಪಿ ಸರ್ಕಾರ ಆಯೋಜಿಸಿದ್ದ ಜಿಮ್‌ಗೆ ₹74.99 ಕೋಟಿ ವೆಚ್ಚವಾಗಿತ್ತು. ಈಗಿನ ಸರ್ಕಾರ ಅದಕ್ಕಿಂತ ಹೆಚ್ಚುವರಿಯಾಗಿ ₹25.77 ಕೋಟಿ ವೆಚ್ಚ ಮಾಡಿದೆ.

ನಗರದ ಅರಮನೆ ಮೈದಾನದಲ್ಲಿ ನಡೆದ ಸಮಾವೇಶದ ಒಟ್ಟು ವೆಚ್ಚದಲ್ಲಿ ಅತಿ ಹೆಚ್ಚು ಖರ್ಚಾಗಿದ್ದು, ಇವೆಂಟ್ ಮ್ಯಾನೇಜ್‌ಮೆಂಟ್ ಸೇವೆಗಳಿಗೆ. ಸಮಾವೇಶ ನಡೆಸಿದ ಜಾಗದ ಬಾಡಿಗೆಗೆ ₹2.12 ಕೋಟಿ ಮತ್ತು ಜಾಹೀರಾತು–ಪ್ರಚಾರಕ್ಕೆ ₹21.83 ಕೋಟಿ ವೆಚ್ಚ ಮಾಡಲಾಗಿದೆ ಎಂಬ ಮಾಹಿತಿಯು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ವಿಧಾನ ಪರಿಷತ್ತಿಗೆ ನೀಡಿದ ಉತ್ತರದಲ್ಲಿದೆ.

ಜಿಮ್‌ನ ಭಾಗವಾಗಿ ವಿದೇಶಗಳಲ್ಲಿ ನಡೆಸಿದ ರೋಡ್‌ಷೋಗಳಿಗೆ ₹5.58 ಕೋಟಿ ವೆಚ್ಚವಾಗಿದೆ. ಚೆನ್ನೈ, ಮುಂಬೈ, ದೆಹಲಿ ರೋಡ್‌ಷೋಗಳಿಗೆ ಕ್ರಮವಾಗಿ ₹52.13 ಲಕ್ಷ, ₹64.21 ಲಕ್ಷ, ₹36.26 ಲಕ್ಷ ವೆಚ್ಚವಾಗಿದ್ದರೆ, ರಾಜ್ಯದ ಹಲವೆಡೆ ನಡೆಸಲಾದ ಸಭೆಗಳಿಗೆ ₹37.90 ಲಕ್ಷ ವೆಚ್ಚವಾಗಿದೆ.

THE FEDERAL BANK LIMITED
Regd. Office: Aluva, Kerala.

ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2025-26 NOTICE FOR PRIVATE SALE OF GOLD 22/08/2025

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-09-2025 as shown below:

Br. Belthangadi: Suvarna Arcade, Belthangadi, Dakshina Kannada- 574 214, Ph. No. 08256-232404 :- 19016400103961,19016400104357.
Br. B C Road: Ground floor, Hindusthan Towers, Oppo LIC office, Santhi Angadi Kaikamba, BC Road, Dakshina Kannada- 574 219 :- 20716400084940,20716400078470,20716400086416.
Br. Bhatkal: Misbah Chambers, Ranginkatta, NH 17, Bhatkal, Uttar Kannada Dist.., Karnataka- 581 320 :- 19866400118561,19866400117712, 19866400091016,19866400103902,19866400117928,19866400113323,19866400119130,19866400110295,19866400116722,19866400101781,19866400119718, 19866400119825,19866400093848,19866400111160,19866400111731,19866400114628,19866400119171,19866900000236,19866400110709,19866400111939, 19866400109610,19866400109958,19866400120039,19866100012767,19866100015315,19866400121136,19866400108729,19866400121185,19866100013765, 19866400121326,19866400121441,19866400095736,19866900000129,19866400072941,19866100012031,19866100014409,19866900000475,19866400099118.
Br. Chikmagalur: P B No 157, BM Buildings, Thogarihenkal Circle, K M Road, Chikmagaluru- 577 101, Ph. No. 08262-233024 :- 13566100435762,13566400233396,13566400218827,13566400252529,13566400218561,13566400207614,13566400252164,13566100436224,13566400242652, 13566400228958,13566100435978,13566400214321,13566400212986,13566400249699,13566400252420,13566400252719,13566400253279,13566400254368, 13566400253741,13566400238502,13566400254491.
Br.Channarayapatna: Ground Floor, Madhu Complex, Mysore Road, Channarayapatna, Hassan, Karnataka- 573 116, Ph No. 08176-252438 :- 19876400146645,19876400148039,19876100044108,19876400148534,19876400148047,19876400139665,19876400149953,19876400154565.
Br. Gonikopal: Sudharma Building, Near Masjid, Ponnampet Road Jn, Main Road, Gonikoppal, Kodagu - 571 213 :- 19616400118438,19616400138394.
Br. Hebri: Spatika Plaza, Kuchoor Road, Hebri, Karkala Taluk, Udupi Dist., Karnataka- 576 112, Ph. No. 08253-250045 :- 18966400034197,18966400033058,18966900000805,18966400032902,18966400033959,18966400033991,18966400034031,18966900000599,18966400027860, 18966400034072,18966900000698.
Br. Hassan: Ground Floor, St. Antony's Church Complex, NR Circle, HN Pura Road, Hassan, Karnataka- 573 201 :- 13546400271422,13546400315732,13546300014112,13546400333461,13546400337892,13546300083919,13546400315641,13546400277312,13546300070924, 13546300084099,13546400335292,13546300084610,13546300083869,13546400337132,13546300014161,13546300082002,13546400330335,13546300082648, 13546300082671,13546400339351,13546300084008,13546300082069,13546400305352,13546300021935,13546300019624,13546400311319,13546300071104, 13546300084362,13546400333552,13546300084057,13546300073936,13546400339096,13546300083745,13546300082267,13546400336514,13546300083067, 13546300082465,13546101035191,13546300021273,13546300082853,13546400336803,13546300084248,13546300036461,13546400338254,13546300070890, 13546300073902,13546400333602,13546300083349,13546300021828,13546400280183,13546300020259,13546300083968,13546400336654,13546300070882, 13546300083703,13546400336530,13546300082093,13546300070908.
Br. Kadur: Dr Vishwanath Building, Maravanji Circle, BH Road, Kadur, Chikmagalur Dist, Karnataka- 577 548 Ph. No. 08267-221244 :- 18936400060617,18936400061698,18936100026843,18936400041716,18936400035528,18936400064825,18936400053067,18936400042276,18936400061185, 18936400061342,18936400062035,18936400042599,18936400061276,18936100026694,18936400065129,18936100028211,18936400062837,18936400062969, 18936400062944,18936400063181,18936400047085,18936400062977,18936400069345,18936400065459,18936400054628,18936400063868,18936400055823, 18936100026488,18936100024822.
Br. Kadaba: Ground Floor, Anugraha Complex, Main Road, Kadaba, Dakshina Kannada- 574 221 :- 20126400033394,20126400045976,20126400046412,20126400037551,20126400044870,20126400035597,20126400046255,20126400048822,20126400048954, 20126900000406,20126900000281,20126400048129.
Br. Kundapura: Shivram Complex, Municipal Main Road, Kundapura, Udupi Dist. Karnataka- 576 201 Ph. No. 08254 233144 :- 20146100007084,20146100007290,20146100007324,20146400108129,20146400114994,20146400117435,20146400120306,20146400117716,20146400115769, 20146400118573,20146400119670,20146100007647,20146400119274,20146400119498,20146400097009,20146400116932.
Br. Kushalnagar: HRS Mansion, BM Road, Kushal Nagar, Kodagu District, Karnataka - 571 234, Ph. No. 08276 274084 :- 19316400096912,19316400096904,19316400096763,19316400105937.
Br. Karkala: Opp Bundimatt Bus Stand, Karkala, Udupi District, Karnataka- 574 104 :- 19636400038683,19636400035259,19636400039053, 19636100016377,19636400031613,19636100017169,19636400027660,19636400031894,19636400038204,19636900000803.
Br. Kinnigoli: C4 and C5, Pintos Golden Castle, Talipady Road, Next to BSNL office, Kinnigoli, Dakshin Kannada, Karnataka- 574 150 Ph: 0824-2295690 :- 20076400034936,20076400034944,20076900000163,20076900000189,20076400039851.
Br. Mangalore: P B No. 775, Near PVS Circle, Manasa Towers, M G Road, Kodialbail, Mangalore, Dakshin Kannada- 575 003, Ph. No. 08242-497883 :- 11755600004838,11756400048520,11756400049361,11755600004887,11756100095359,11756400048942,11756400050120,11756400050138,11755600004770, 11755600004945,11755600004671,11755600004796,11756400049429,11756400050237,11756900042577,11756900042593,11756900043211,11756400050039, 11756400050096,11756100094683.
Br. Mangalore/Kankanady: The Vintage, Kankanady, Dakshina Kannada, Mangalore- 575 002, Ph: 08242430152 :- 17706400040765,17706400041136,17706400040153,17706900000988,17706400035104,17706400039817,17706400031665,17706400039965,17706400041276, 17706400041300,17706400040633,17706400040641,17706400032283,17706400041060,17706400040302,17706400040344,17706400040369.
Br. Nellyadi: Elite Plaza, Nh 48, Near St. George P U College, Nellyadi, Dakshina Kannada- 574 229, Ph: 08251-256100 :- 16446400105364,16446400108780, 16446400103138,16446400107741,16446400107022,16446100013454,16446400089303,16446400109473,16446400110398,16446400108350,16446400081078.
Br. Puttur: Meenar Complex, Main Road, Puttur, Dakshin Kannada, Karnataka- 574 201, Ph: 08251-233544 :- 18946400086207,18946100013576,18946400103556,18946400087080,18946400091181.
Br. Shimoga: Haranahalli Manjappa Complex, Park Extension Road, Durgigudi, Shimoga District, Karnataka- 577 201, Ph. No. 08182-271998 :- 15906400087152,15906400090677,15906400100278,15906400102472,15906400066453,15906400091592,15906400102282,15906400103488,15906400077674, 15906400101938,15906400098936,15906400104767,15906400085263,15906400091758,15906400071404,15906400098365,15906400094141,15906400096930, 15906400090743,15906400098456,15906400101680,15906900002271,15906400104155,15906400098571,15906900000960,15906400102456,15906900001521, 15906900002511,15906100028589,15906400102506,15906900001562,15906400103983,15906400100948,15906100028225,15906400098985,15906400078516, 15906100028258,15906400092731,15906400099033,15906400099199,15906400100922,15906400097813,15906400103314,15906400103371,15906400102480, 15906400066347,15906400093051,15906400102449,15906400101136,15906400092889,15906400103298,15906400089653,15906400103462,15906400087939, 15906400105327,15906900002735,15906400091220,15906400083722.
Br. Sullia: Ganesh Complex, Main Road, Sullia, Dakshina Kannada, Karnataka- 574 239, Ph. No. 08257 230818 :- 19005500014640,19006400051641,19006400054462,19006400054710,19006400054702,19006400048027,19005500015209,19006400054801,19005500014954, 19006100029525,19006400048027,19005500011927,19006400054454,19006400054181,19006100029442.
Br. Thokottu: R E B Complex, Opp.Thokottu Bus stand, NH17, Permannur Po, Thokkottu Jn, Dakshin Kannada– 575 017, Ph. No.0824246201 3 :- 20136400082309,20136400078489,20136400082705,20136400077614,20136400083331,20136400083711.
Br. Udupi: Mahalasa Towers, Court Road, Udupi, Karnataka- 576 101, Ph. No. 08202521562 :- 15746400054855,15746400069481,15746400072931,15746400068905,15746400066024,15746400070448,15746400066032.
Br. Narasimharajapura: No.794, Dayasagar Complex, Near IOC Petrol Pump, Nagalapura, B H Kaimara, Chikmagalur, Karnataka- 577 134 Ph: 08266-228055 :- 18956400031129.
Br. Arsikere : Near LIC Office, B H Road, Arsikere, Hassan, Karnataka- 573 103 :- 20306400050958,20306400057276,20306400057391,20306400056146,20306400056849,20306400050388,20306400052905,20306400059363,20306400061047.

Bangalore 22-08-2025 Vice President & Zonal Head

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.78	7,633	6,498
ಹಾರಂಗಿ	2,859	2,857.67	2,509	2,250
ಕಬಿನಿ	2,284.00	2,283.79	4,630	4,733
ಹೇಮಾವತಿ	2,922	2,922	7,988	7,710
ಲಿಂಗನಮಕ್ಕಿ	1,819	1,817	12,568	8,612
ಸೂಪಾ (ಮೀ)	564	557	9,899.78	4,554.30
ಮಾಣಿ	595	592.80	1,723	663
ತುಂಗಭದ್ರಾ	1,633	1,625.69	36,014	17,952
ಮಲಪ್ರಭಾ	2,079.5	2,078.30	4,294	4,294
ಘಟಪ್ರಭಾ	2175	2,173.66	9,196	9,827
ಭದ್ರಾ *	186	184.1	7,419	6,215
ಆಲಮಟ್ಟಿ (ಮೀ)	519.6	518.36	2,75,568	1,75,000
ನಾರಾಯಣಪುರ (ಮೀ)	492.25	490.85	1,80,000	1,47,090

* ನೆಲಮಟ್ಟದಿಂದ

ಉಕ್ಕಿದ ಭೀಮೆ: ಮೂರನೇ ದಿನವೂ ಸಂಚಾರ ಸ್ಥಗಿತ

ಅಫಜಲಪುರ (ಕಲಬುರಗಿ ಜಿಲ್ಲೆ): ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಮೂರು ದಿನಗಳ ಹಿಂದೆ ಭೀಮಾ ನದಿಗೆ 2.24 ಲಕ್ಷ ಕ್ಯೂಸೆಕ್ ನೀರು ಹರಿಸಲಾಗಿದೆ. ನದಿ ಉಕ್ಕಿ ಹರಿಯುತ್ತಿದ್ದು, ಭಾನುವಾರವೂ ದೇವಲ ಗಾಣಗಾಪುರ ಹಾಗೂ ಘತ್ತರಗಾ ಸೇತುವೆಗಳು ಮುಳುಗಿದ್ದರಿಂದ ಸಂಚಾರ ಸ್ಥಗಿತಗೊಂಡಿತ್ತು.

ಸದ್ಯಕ್ಕೆ 15 ಗೇಟ್ ಮುಖಾಂತರ 80 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಅಫಜಲಪುರ ತಾಲ್ಲೂಕಿನ ಸುಕ್ಷೇತ್ರ ಗಾಣಗಾಪುರದಿಂದ ಜೇವರ್ಗಿ ತಾಲ್ಲೂಕಿನ ಕೆಲ ಗ್ರಾಮಗಳು ಹಾಗೂ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿದೆ.

‘ಟಿಟಿಡಿ ಭೂಮಿ ಹಸ್ತಾಂತರಕ್ಕೆ ನಾಯ್ಡು ಪಿತೂರಿ’

ತಿರುಪತಿ(ಪಿಟಿಐ): ‘ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಒಡೆತನದ ₹1,500 ಕೋಟಿ ಮೌಲ್ಯದ ಭೂಮಿಯನ್ನು ಒಬೆರಾಯ್ ಹೋಟೆಲ್ಸ್‌ಗೆ ಹಸ್ತಾಂತರಿಸಲು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಪಿತೂರಿ ರೂಪಿಸಿದ್ದಾರೆ’ ಎಂದು ವೈಎಸ್‌ಆರ್‌ಸಿಪಿ ನಾಯಕ ಬಿ.ಕರುಣಾಕರ ರೆಡ್ಡಿ ಭಾನುವಾರ ಆರೋಪಿಸಿದ್ದಾರೆ.

‘ಒಬೆರಾಯ್ ಹೋಟೆಲ್ಸ್‌ನ ಪ್ರಸ್ತಾವವನ್ನು ಈ ಹಿಂದೆ ತಿರಸ್ಕರಿಸಿದ್ದ ನಾಯ್ಡು, ಈಗ ಕಡಿಮೆ ಮೌಲ್ಯದ ಗ್ರಾಮೀಣ ಭೂಮಿಯನ್ನು ಪಡೆಯಲು ಪರ್ಯಾಯವಾಗಿ ಟಿಟಿಡಿಯ 20 ಎಕರೆ ಭೂಮಿಯನ್ನು ಒಬೆರಾಯ್ ಸಂಸ್ಥೆಗೆ ನೀಡಲು ಮುಂದಾಗಿದ್ದಾರೆ. ಇದರಿಂದ ₹1000 ಕೋಟಿ ನಷ್ಟವಾಗಲಿದೆ. ಪರ್ಯಾಯ ಭೂಮಿಯ ಸೋಗಿನಲ್ಲಿ ನಡೆಯುತ್ತಿರುವ ಈ ಪಿತೂರಿಗೆ ನಾಯ್ಡು ಅವರೇ ರೂವಾರಿ’ ಎಂದೂ ರೆಡ್ಡಿ ದೂರಿದ್ದಾರೆ.

ಟಿಡಿಪಿ ಸರ್ಕಾರವು ದೇವಾಲಯದ ಭೂಮಿಯನ್ನು ‘ಇನಾಂ ಭೂಮಿ’ ಎಂದು ಪರಿಗಣಿಸುವಂತೆ ಮಾಡಲು ಉದ್ದೇಶಪೂರ್ವಕವಾಗಿ ಅವುಗಳ ಮೌಲ್ಯಮಾಪನವನ್ನು ಕೈಬಿಟ್ಟಿದೆ. ಇದು ಹಗಲು ದರೋಡೆ ಎಂದೂ ದೂರಿದ್ದಾರೆ.

ಉಪ ರಾಷ್ಟ್ರಪತಿ ಚುನಾವಣೆ ಬಳಿಕ ಗಮನ: ಭರವಸೆ

ದೆಹಲಿಯಲ್ಲಿ ವಿಜಯೇಂದ್ರ ಕಸರತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ ಅಧಿವೇಶನದ ಮುಗಿದ ಬೆನ್ನಲ್ಲೇ ರಾಷ್ಟ್ರ ರಾಜಧಾನಿಗೆ ದೌಡಾಯಿಸಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವರಿಷ್ಠರ ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ರಾಷ್ಟ್ರ ಘಟಕದ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡುವ ಇಂಗಿತದಿಂದ ಶನಿವಾರ ಬಂದ ಅವರಿಗೆ ಉಭಯ ನಾಯಕರ ಭೇಟಿ ಸಾಧ್ಯವಾಗಲಿಲ್ಲ. ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಹಾಗೂ ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿ ಮಾಡಿದರು.

‘ಉಪರಾಷ್ಟ್ರಪತಿ ಚುನಾವಣೆ ಬಗ್ಗೆ ಪಕ್ಷದ ವರಿಷ್ಠರು ಗಮನ ಹರಿಸಿದ್ದು, ಅಲ್ಲಿಯವರೆಗೆ ರಾಷ್ಟ್ರ ಹಾಗೂ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆಗೆ ಚುನಾವಣೆ ಪ್ರಕ್ರಿಯೆ ನಡೆಯುವುದಿಲ್ಲ. ಸೆಪ್ಟೆಂಬರ್ ಅಂತ್ಯದೊಳಗೆ ರಾಜ್ಯ ಘಟಕದ ಚುನಾವಣೆ ಪ್ರಕ್ರಿಯೆ ಮುಗಿಸಲಾಗುವುದು’ ಎಂದು ಅಗರವಾಲ್ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

‘ಪಕ್ಷದಲ್ಲಿ ಉಂಟಾದ ಗೊಂದಲದಿಂದ ಸಂಘಟನೆ ಕಾರ್ಯಕ್ಕೆ ಸ್ವಲ್ಪ ಹಿನ್ನಡೆಯಾಗಿತ್ತು. ಈಗ ಸಂಘಟನೆಗೆ ಚುರುಕು ನೀಡಲಾಗಿದೆ. ‘ಮನೆ ಮನೆಗೆ ತ್ರಿವರ್ಣ’ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ವಿಜಯೇಂದ್ರ ಅವರು ಅಗರವಾಲ್ ಗಮನಕ್ಕೆ ತಂದರು.

ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಗಾಗಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರ ಅಭಿಪ್ರಾಯ ಸಂಗ್ರಹ ಪ್ರಕ್ರಿಯೆಯನ್ನು ಪಕ್ಷ ಆರಂಭಿಸಿದೆ. ಪಕ್ಷದ ಸಂವಿಧಾನದ ಪ್ರಕಾರ, ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ನಡೆಸಲು ಕನಿಷ್ಠ 19 ರಾಜ್ಯಗಳಲ್ಲಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡಿರಬೇಕು.

ಪ್ರಸ್ತುತ 27 ರಾಜ್ಯಗಳಲ್ಲಿ ಚುನಾವಣೆ ಮುಗಿದಿದೆ. ಆದರೆ, ಪ್ರಮುಖ ರಾಜ್ಯಗಳಾದ ಉತ್ತರ ಪ್ರದೇಶ, ಗುಜರಾತ್, ಕರ್ನಾಟಕ ಹಾಗೂ ಹರಿಯಾಣದಲ್ಲಿ ಪ್ರಕ್ರಿಯೆ ಕಗ್ಗಂಟಾಗಿದೆ. ಈ ರಾಜ್ಯಗಳಲ್ಲಿ ಅಧ್ಯಕ್ಷರ ನೇಮಕವಾದ ಬಳಿಕವೇ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ಪ್ರಕ್ರಿಯೆ ನಡೆಸಲು ವರಿಷ್ಠರು ಆಶಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಜಯೇಂದ್ರ ಮುಂದುವರಿಕೆಗೆ ಭಿನ್ನರ ಬಣ ಹಾಗೂ ತಟಸ್ಥರ ಬಣ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ತಟಸ್ಥ ಬಣದವರು ಸದ್ಯ ಮೌನಕ್ಕೆ ಶರಣಾಗಿದ್ದಾರೆ. ಭಿನ್ನಮತೀಯ ನಾಯಕರ ಅಹವಾಲನ್ನು ಪ್ರಲ್ಹಾದ ಜೋಶಿ ಆಲಿಸಿದ್ದಾರೆ.

ಈ ನಡುವೆ, ಕೇಂದ್ರ ಸಚಿವ ವಿ.ಸೋಮಣ್ಣ ಅವರು ರಾಜ್ಯ ಘಟಕದ ಅಧ್ಯಕ್ಷರಾಗಲು ಸದ್ದಿಲ್ಲದೆ ಪ್ರಯತ್ನ ಮುಂದುವರಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಲು ತಮಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಸಮಸ್ಯೆಯನ್ನು ವಿವರಿಸಲು ಸಾಧ್ಯವಾಗದವರು, ಆ ಸಮಸ್ಯೆಗೆ ಎಂದಿಗೂ ಪರಿಹಾರವನ್ನು ಕಂಡುಕೊಳ್ಳಲಾರರು.
–ಕನ್‌ಫ್ಯೂಷಿಯಸ್

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ–12 ಭಾರತದ ಮಣ್ಣುಗಳು

22) ಪರ್ವತ ಮಣ್ಣು ಕುರಿತು ಬರೆಯಿರಿ

ಉತ್ತರ: ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಈ ಮಣ್ಣು ಹೊಂದಿದೆ. ಪರ್ವತಗಳಲ್ಲಿ ನಿರ್ಮಾಣಗೊಂಡಿರುತ್ತದೆ. ಈ ಮಣ್ಣು ಇಳಿಜಾರಿನ ಮೈದಾನಕ್ಕೆ ಇಳಿದು ಬರುತ್ತದೆ. ಇದು ಸಾರಜನಕ ಮತ್ತು ಸಾವಯವ ಅವಶೇಷಗಳನ್ನು ಹೆಚ್ಚಾಗಿ ಒಳಗೊಂಡಿರುತ್ತದೆ. ಕಾಫಿ, ಚಹಾ ಮತ್ತು ಸಾಂಬಾರು ಪದಾರ್ಥ, ಹಣ್ಣು ಬೆಳೆಯಲು ಸೂಕ್ತವಾಗಿರುತ್ತದೆ.

ಹಿಮಾಲಯದ ಪಾದ ಬೆಟ್ಟಗಳು, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಪರ್ವತ ಪ್ರದೇಶಗಳಲ್ಲಿ ಈ ಮಣ್ಣು ಹಂಚಲ್ಪಟ್ಟಿದೆ.

23) ಮಣ್ಣು ಸವೆತ ಎಂದು ಯಾವುದನ್ನು ಕರೆಯುತ್ತಾರೆ?

ಉತ್ತರ:– ಭೂ ಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರಗೊಳ್ಳುವ ಕ್ರಿಯೆಯನ್ನು ಮಣ್ಣಿನ ಸವೆತ ಎನ್ನುವರು

24) ಭೂ ಸವೆತದ ಮುಖ್ಯ ಕರ್ತೃಗಳು ಯಾವುವು?

ಉತ್ತರ:– ಹರಿಯುವ ನೀರು, ಗಾಳಿ, ಸಮುದ್ರದ ಅಲೆ ಮೊದಲಾದವು

25) ಮಣ್ಣಿನ ಸವೆತಕ್ಕೆ ಮುಖ್ಯ ಕಾರಣಗಳು ಯಾವುವು?

ಉತ್ತರ:– ಮಣ್ಣಿನ ಸವೆತವು ದೇಶದ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಅಧಿಕವಾಗಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ 1) ಅರಣ್ಯಗಳ ನಾಶ, 2) ಹೆಚ್ಚು ಮೇಯಿಸುವುದು, 3) ಅವೈಜ್ಞಾನಿಕ ಬೇಸಾಯ, 4) ಅಧಿಕ ನೀರಾವರಿ ಬಳಕೆ ಮೊದಲಾದವು. ಉದಾ: ಇಟ್ಟಿಗೆ, ಹೆಂಚು, ಮಡಿಕೆ ತಯಾರಿಕೆ ಮುಂತಾದವುಗಳಿಂದ ಮೇಲ್ಮಣ್ಣು ನಾಶವಾಗಿ ಅನುಪಯುಕ್ತವಾದ ಮಣ್ಣು ಉಳಿದುಕೊಳ್ಳುವುದು.

26) ಮಣ್ಣಿನ ಸವೆತದ ಪರಿಣಾಮಗಳು ಯಾವುವು?

ಉತ್ತರ:– ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ

1) ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
2) ನದಿಗಳಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
3) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ಅವುಗಳಲ್ಲಿ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ.
4) ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

ಭಾರತವು ವ್ಯವಸಾಯ ಪ್ರಧಾನವಾದ ರಾಷ್ಟ್ರ. ಇದರಿಂದ ಭೂ ಸವೆತ ವ್ಯವಸಾಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು. ಆದುದರಿಂದ ಫಲವತ್ತತೆ ಹಾಗೂ ಉತ್ಪಾದನೆಯನ್ನು ಕಾಪಾಡಲು ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ.

****

ಇತಿಹಾಸ: ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಪೀಠಿಕೆ:– ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಆರಂಭದಲ್ಲಿ ಕೇವಲ ವ್ಯಾಪಾರಿ ಕಂಪನಿಯಾಗಿ ತನ್ನ ವಾಣಿಜ್ಯ ಹಿತಾಸಕ್ತಿಗಳನ್ನು ಮಾತ್ರ ಪೂರೈಸಿಕೊಳ್ಳುವ ಕೆಲಸ ಮಾಡಿತು. ನೂರಾರು ರಾಜಮನೆತನಗಳಲ್ಲಿ ಹಂಚಿಹೊಗಿದ್ದ ಭಾರತದ ಪರಿಸ್ಥಿತಿಯನ್ನು ಅವಲೋಕಿಸಿದ ಬ್ರಿಟಿಷರು ಆ ಪರಿಸ್ಥಿತಿಯನ್ನು ತಮ್ಮ ರಾಜಕೀಯ ಏಳಿಗೆಗೆ ಬಳಸಿಕೊಂಡರು. ಪರಸ್ಪರ ಕಚ್ಚಾಡುತ್ತಿದ್ದ ರಾಜರ ನಡುವೆ ಒಡೆದು ಆಳುವ ನೀತಿಯನ್ನು ಬಳಸಿಕೊಂಡು ಅವರೆಲ್ಲರನ್ನೂ ಕ್ರಮೇಣ ತಮ್ಮ ಅಧೀನಕ್ಕೆ ತೆಗೆದುಕೊಂಡರು. ಅಧೀನಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ 'ಸಂಧಾನ' ಮತ್ತು 'ಯುದ್ಧ'ಗಳ ಮಾರ್ಗಗಳನ್ನು ಸಮರ್ಥವಾಗಿ ಬಳಸಿಕೊಂಡರು. ವಿವಿಧ ಉಪಾಯಗಳನ್ನು ಬಳಸಿ ಭಾರತವನ್ನು ರಾಜಕೀಯವಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡ ನಂತರ ಅದನ್ನು ಶಾಶತ್ವವಾಗಿ ತಮ್ಮಲ್ಲಿ ಹೇಗೆ ಉಳಿಸಿಕೊಳ್ಳಬೇಕೆನ್ನುವುದನ್ನು ಆಲೋಚಿಸತೊಡಗಿದರು. ಭಾರತ ಒಂದು ದೇಶವೆಂಬ ಸಾಮೂಹಿಕ ಕಲ್ಪನೆಯು ಇಲ್ಲದಿದ್ದ ಆ ಸಂದರ್ಭದಲ್ಲಿ ಅದು ವಿವಿಧ ರಾಜ್ಯಾಡಳಿತಗಳಲ್ಲಿ ಹರಿದು ಹಂಚಿಹೋಗಿತ್ತು. ಅನೇಕ ರಾಜ್ಯಗಳನ್ನು ವಿವಿಧ ಕಾರಣಗಳಿಂದ ಒಂದುಗೂಡಿಸಿ ಬ್ರಿಟಿಷರು ಏಕರೂಪ ರಾಜಕೀಯ ವ್ಯವಸ್ಥೆಗೆ ಮತ್ತು ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು

ಶಿಕ್ಷಣ, ನ್ಯಾಯಾಂಗ ವ್ಯವಸ್ಥೆ, ಭೂ ಕಂದಾಯ, ವ್ಯಾಪಾರ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಹೊಸ ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಅವರು ಕಟ್ಟಿದ ರಾಜ್ಯ ವ್ಯವಸ್ಥೆಗೆ ಏಕರೂಪವನ್ನು ನೀಡುವಲ್ಲಿ ಸಫಲರಾದರು. ಈ ಬಗೆಯ ಆಡಳಿತವನ್ನು ರೂಪಿಸುವಾಗ ತಮ್ಮ ಆರ್ಥಿಕ ಹಿತಾಸಕ್ತಿಯನ್ನು ಸಂರಕ್ಷಿಸಿಕೊಳ್ಳುವುದನ್ನು ಮರೆಯಲಿಲ್ಲ. ಈ ನಿಟ್ಟಿನಲ್ಲಿ ಕಂಪನಿಯು ಆಡಳಿತದ ಕ್ಷೇತ್ರದಲ್ಲಿ ವಿವಿಧ ಪ್ರಯೋಗಗಳನ್ನು ಜಾರಿಗೊಳಿಸಿತು

ಬಹುಆಯ್ಕೆ ಪ್ರಶ್ನೆಗಳು

1) ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ಯಾರು?

ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್‌ವಾಲೀಸ್
ಸಿ) ಲಾರ್ಡ್ ಮಿಂಟೊ ಡಿ) ಲಾರ್ಡ್ ಕರ್ಜನ್

ಉತ್ತರ:– ಬಿ

2) 1800ರಲ್ಲಿ ನಾಗರಿಕ ಸೇವೆಗೆ ಸೇರ ಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್‌ವಾಲೀಸನು ಕಲ್ಕತ್ತಾದಲ್ಲಿ ....ನ್ನು ಸ್ಥಾಪಿಸಿದನು.

ಎ) ಫೋರ್ಟ್ ವಿಲಿಯಂ ಕಾಲೇಜು
ಬಿ) ಲಾಹೋರ್ ಹಿಂದು ಕಾಲೇಜು
ಸಿ) ಅಲಿಘರ್ ಮುಸ್ಲಿಂ ಯೂನಿವರ್ಸಿಟಿ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ

3) ಕಾರ್ನ್‌ವಾಲೀಸನು ....ಎಂದು ಪ್ರತಿಪಾದಿಸಿದನು. ಇದರಿಂದಾಗಿ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ಭಾರತೀಯರಿಗೆ ನೀಡಲಾಯಿತು.

ಎ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಕೆಳವರ್ಗದವರು
ಬಿ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಮೇಲ್ವರ್ಗದವರು
ಸಿ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ
ಡಿ) ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಉತ್ತಮ ನಡೆತೆಯನ್ನು ಹೊಂದಿದವನಲ್ಲ

ಉತ್ತರ:– ಸಿ

4) 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಯಾವ ಹಕ್ಕನ್ನು ಬ್ರಿಟಿಷರಿಗೆ ನೀಡಿದನು?

ಎ) ನ್ಯಾಯದಾನ ಮಾಡುವ ಹಕ್ಕು
ಬಿ) ರಾಜ್ಯದ ಆಡಳಿತ ನಡೆಸುವ ಹಕ್ಕು
ಸಿ) ರಾಜ್ಯದ ಜನರರಲ್ಲಿ ಸೈನಿಕರನ್ನು ಆರಿಸುವ ಹಕ್ಕು
ಡಿ) ಕಂದಾಯ ವಸೂಲಾತಿ

ಉತ್ತರ:– ಡಿ

5) ಯಾವ ಪ್ರಾಂತ್ಯದಲ್ಲಿ ದ್ವಿ ಆಡಳಿತ ಪದ್ಧತಿ ಅಥವಾ ದ್ವಿ ಸರ್ಕಾರ ಪದ್ಧತಿ ಜಾರಿಗೆ ಬಂತು?

ಎ) ಬಂಗಾಳ ಬಿ) ಮುಂಬೈ
ಸಿ) ಕೇರಳ ಡಿ) ಪಂಜಾಬ್

ಉತ್ತರ:– ಎ

(ಮುಂದುವರಿಯುವುದು)

ಕಾಕ್‌ಟೇಲ್ ಕೌಶಲ ಸಿದ್ಧಿಸಿಕೊಳ್ಳಿ!

ಆಹಾರ ಮತ್ತು ಪಾನೀಯ ಕ್ಷೇತ್ರದ ವ್ಯಾಪ್ತಿ ಹಿಗ್ಗಿದ್ದು, ಬಾರ್ಟೆಂಡಿಂಗ್ ಆಕರ್ಷಕ ವೃತ್ತಿ ಎನಿಸಿಕೊಂಡಿದೆ

• ವಿಜಯ್ ಜೋಷಿ

ಮಹಾನಗರಗಳ ವೈಭವೋಪೇತ ಬಾರ್‌ಗಳಲ್ಲಿ ಬಗೆಬಗೆಯ ಪಾನೀಯಗಳನ್ನು ಬೆರೆಸಿ ಕಾಕ್‌ಟೇಲ್, ಮಾಕ್‌ಟೇಲ್‌ಗಳನ್ನು ಚೆಂದಕ್ಕೆ ಸಿದ್ಧಪಡಿಸಿ, ಪಾನಪ್ರಿಯರನ್ನು ಖುಷಿಪಡಿಸಲು ಯತ್ನಿಸುವ ಬಾರ್ಟೆಂಡರ್‌ಗಳದ್ದು ಬೇರೆಯದೇ ಜಗತ್ತು. ಪಾನಗೃಹ ಪರಿಚಾರಕರು ಈಗ ಉತ್ತಮ ವೇತನವನ್ನು ನಿರೀಕ್ಷಿಸ ಬಹುದು, ಬಾರ್ಟೆಂಡಿಂಗ್ ಕೆಲಸಕ್ಕೆ ಅಗತ್ಯವಿರುವ ಕೌಶಲಗಳನ್ನು ಕಲಿಸಲು ಕೆಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಮುಂದೆ ಬರುತ್ತಿವೆ ಎಂದು ಹೇಳುತ್ತಿದ್ದಾರೆ ಈ ಕ್ಷೇತ್ರದ ಅನುಭವಿಗಳು.

ಬಾರ್ಟೆಂಡಿಂಗ್ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿರುವ ಪಂಕಜ್ ಬಾಲಚಂದ್ರನ್ ಅವರು ಬೆಂಗಳೂರಿನಲ್ಲಿ ಈಚೆಗೆ ನಡೆದ 'ಅಲ್ಟಿಮೇಟ್ ಬಾರ್ಟೆಂಡರ್ ಚಾಂಪಿಯನ್‌ಷಿಪ್'ನ ಹೋಸ್ಟ್ ಆಗಿ ಭಾಗಿಯಾಗಿದ್ದರು. ತಮ್ಮ ವೃತ್ತಿಯ ಬಗ್ಗೆ, ವೃತ್ತಿಯನ್ನು ಸಮಾಜವು ಈಗ ನೋಡುತ್ತಿರುವ ಬಗೆಯ ಬಗ್ಗೆ ಅವರು 'ಪ್ರಜಾವಾಣಿ' ಜೊತೆ ಮಾತನಾಡಿದರು.

'ಬಾರ್ಟೆಂಡರ್ ಆಗಿ ಕೆಲಸ ಮಾಡುವವರಿಗೆ ಇಂದು ಉತ್ತಮ ವೇತನ ಸಿಗುತ್ತಿದೆ. 22 ವರ್ಷ ವಯಸ್ಸಿನ ಬಾರ್ಟೆಂಡರ್, ಇತರ ಕೆಲವು ಉದ್ಯೋಗಗಳಲ್ಲಿ ತೊಡಗಿಕೊಂಡಿರುವ ತನ್ನದೇ ವಯಸ್ಸಿನವರಿಗಿಂತ ಹೆಚ್ಚು ವೇತನ ಪಡೆಯಬಲ್ಲ. ಬಾರ್ಟೆಂಡಿಂಗ್ ಈಗ ಒಂದು ಐಷಾರಾಮಿ ವೃತ್ತಿಯಂತೆ ಆಗಿದೆ. ಈ ವೃತ್ತಿಯಲ್ಲಿ ತೊಡಗಿಕೊಂಡವರು ಪ್ರವಾಸ ಕೈಗೊಳ್ಳುವ, ಬೇರೆ ಬೇರೆ ಜನರನ್ನು ಭೇಟಿ ಮಾಡುವ ಅವಕಾಶ ಗಿಟ್ಟಿಸಿಕೊಳ್ಳ ಬಹುದು. ಇಂದು ಆಹಾರ ಮತ್ತು ಪಾನೀಯ ಕ್ಷೇತ್ರದ ಮೇಲೆ ಹೂಡಿಕೆ ಮಾಡಲು ಹಲವರು ಬಯಸುತ್ತಿದ್ದಾರೆ' ಎಂದು ಅವರು ಮಾತಿನ ಆರಂಭದಲ್ಲಿ ಹೇಳಿದರು.

'ಐಎಚ್‌ಎಂ ಕೇಟರಿಂಗ್ ಕಾಲೇಜಿನಂತಹ ಸಂಸ್ಥೆಗಳು ಈ ವೃತ್ತಿಗೆ ಬರುವವರಿಗೆ ಆರಂಭಿಕ ಹೆಜ್ಜೆ ಇರಿಸಲು ತರಬೇತಿ ನೀಡುತ್ತವೆ. ಇಲ್ಲಿ ಆತಿಥ್ಯ, ಆಹಾರ ಮತ್ತು ಪಾನೀಯ, ಪಾಕಶಾಲೆಯ ಬಗ್ಗೆ ತರಬೇತಿ ಇರುತ್ತದೆ. ಆದರೆ ಬಾರ್‌ಗೆ ಸಂಬಂಧಿಸಿದ ವಿಶೇಷ ತರಬೇತಿ ಬಯಸಿದರೆ ಯುರೋಪಿಯನ್ ಬಾರ್ಟೆಂಡಿಂಗ್ ಸ್ಕೂಲ್‌ನಂತಹ ಸಂಸ್ಥೆಗಳಲ್ಲಿ ಅಗತ್ಯ ತರಬೇತಿ ಸಿಗುತ್ತದೆ. ಬೆಂಗಳೂರು ಸೇರಿದಂತೆ ದೇಶದ ಹಲವು ನಗರಗಳಲ್ಲಿ ಈ ಸ್ಕೂಲ್ ಇದೆ' ಎಂದರು ಪಂಕಜ್.

> ಸಾಂಸ್ಕೃತಿಕವಾಗಿ ಬಹಳಷ್ಟು ಬದಲಾವಣೆಗಳು ಆಗಿವೆ. ನಾನು ಈ ವೃತ್ತಿಯಲ್ಲಿ ತೊಡಗಿದಾಗ ನನ್ನ ಕುಟುಂಬದಲ್ಲಿ ಕೆಲವರು ಅಪಸ್ವರ ಎತ್ತಿದ್ದರು. ಆದರೆ ಅವರೇ ಈಗ ನನ್ನ ಸಾಧನೆ ನೋಡಿ ಮೆಚ್ಚಿದ್ದಾರೆ. ಹಿಂದಿನ ಕೆಲವು ವರ್ಷಗಳಲ್ಲಿ ಸಮಾಜದಲ್ಲಿ ಬದಲಾವಣೆ ಆಗಿದೆ. ಈ ವೃತ್ತಿಯಲ್ಲಿ ಮಹಿಳೆಯರೂ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ.
>
> –ಪಂಕಜ್ ಬಾಲಚಂದ್ರನ್, ಬಾರ್ಟೆಂಡರ್

'ಬಾರ್ಟೆಂಡಿಂಗ್ ವೃತ್ತಿಯನ್ನು ಕಲಿಸಲು ಹಲವು ಶಿಕ್ಷಣ ಸಂಸ್ಥೆಗಳು ಇದ್ದರೂ, ಅನುಭವಿ ಬಾರ್ಟೆಂಡರ್‌ಗಳ ಜೊತೆ ಕೆಲಸ ಮಾಡುವುದು ಹೆಚ್ಚು ಉತ್ತಮ. ಆದರೆ, ದೇಶದ ಮುಂಚೂಣಿ ಬಾರ್‌ಗಳು ಇಂತಹ ಶಿಕ್ಷಣ ಸಂಸ್ಥೆಗಳಿಂದ ಯುವಕರನ್ನು ನೇಮಕ ಮಾಡಿಕೊಳ್ಳುತ್ತಿವೆ' ಎಂದು ಅವರು ತಿಳಿಸಿದರು.

ಅವರು ಹೇಳುವ ಪ್ರಕಾರ, ಬಾರ್ಟೆಂಡಿಂಗ್ ವೃತ್ತಿಯಲ್ಲಿ ನಿಪುಣರಿಗೆ ಬೇಡಿಕೆ ಇದೆ, ಆದರೆ ಅಂಥವರು ಸಿಗುತ್ತಿಲ್ಲ. 'ಇಲ್ಲಿ ಬಹಳ ಕಿರಿಯ ವಯಸ್ಸಿನವರಿಗೂ ಒಳ್ಳೆಯ ವೇತನ ನೀಡಲಾಗುತ್ತಿದೆ. ಇದರ ಪರಿಣಾಮವಾಗಿ, ಕೆಲವು ಬಾರ್‌ಗಳಿಗೆ ಪ್ರತಿಭಾವಂತರನ್ನು ದೊಡ್ಡ ವೇತನ ಕೊಟ್ಟು ನೇಮಿಸಿಕೊಳ್ಳಲು ಆಗದಂತಹ ಸ್ಥಿತಿಯೂ ಇದೆ' ಎಂದರು.

'ಈ ಕ್ಷೇತ್ರದಲ್ಲಿ ಅವಕಾಶಗಳು ಹೆಚ್ಚಾಗಿ ಇವೆ ಎಂಬುದನ್ನು ಜನ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ, ಮುಂದಿನ ದಿನಗಳಲ್ಲಿ ಬಾರ್ಟೆಂಡಿಂಗ್ ವೃತ್ತಿಗೆ ನಿಪುಣರು ಹೆಚ್ಚಾಗಿ ಸಿಗಬಹುದು. ಹಿಂದೆಲ್ಲ, ಭಾರತದಲ್ಲಿ ಕೆಲವು ವರ್ಷ ಕೆಲಸ ಮಾಡಿದ ನಂತರ ಬಾರ್ಟೆಂಡರ್‌ಗಳು ವಿದೇಶಗಳಿಗೆ ತೆರಳುತ್ತಿದ್ದರು. ಇದು ಈಗ ಬದಲಾಗುತ್ತಿದೆ. ಜನ ದುಬೈ, ಸಿಂಗಪುರದಲ್ಲಿ ಬಾರ್ಟೆಂಡರ್ ಆಗಿ ಕೆಲಸ ಮಾಡಿ, ಅನುಭವ ಸಂಪಾದಿಸಿ ಭಾರತಕ್ಕೆ ಮರಳುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

'ನಾನು ಈ ವೃತ್ತಿಯಲ್ಲಿ ಈಗ ಒಂದೂವರೆ ದಶಕದಿಂದ ಇದ್ದೇನೆ. ನಾನು ಕೆಲಸ ಶುರುಮಾಡಿದ್ದು ಇನ್ನೇನೋ ಆಗಿ, ನಂತರದ ದಿನಗಳಲ್ಲಿ ಈ ವೃತ್ತಿಯತ್ತ ಬಂದೆ. ಈಗ ನಾನು ಏಷ್ಯಾದ ಅತ್ಯುತ್ತಮ ಬಾರ್‌ಗಳಲ್ಲಿ ಒಂದನ್ನು ನಡೆಸುತ್ತಿದ್ದೇನೆ. ಬೇರೆ ಬೇರೆ ಬ್ರ್ಯಾಂಡ್‌ಗಳ ಜೊತೆ ಕೆಲಸ ಮಾಡುತ್ತೇನೆ. ಕಾಕ್‌ಟೇಲ್ ಮಾಡುವ, ಅದಕ್ಕೆ ಸಂಬಂಧಿಸಿದ ಇತರ ಕೆಲವು ಕೆಲಸಗಳನ್ನು ಮಾಡುತ್ತೇನೆ. ಬೇರೆಯವರಿಗಾಗಿ ನಮ್ಮ ಕನ್ಸಲ್ಟಿಂಗ್ ವಿಭಾಗದ ಮೂಲಕ ಉತ್ತಮ ಬಾರ್ ಕಟ್ಟಿಕೊಡುವ ಕೆಲಸವನ್ನೂ ಮಾಡುತ್ತೇನೆ' ಎಂದು ಹೇಳಿದರು.

ಬಾರ್ಟೆಂಡರ್ ಆಗಲು ಬಯಸುವವರಿಗೆ ದೇಶದಲ್ಲಿ ಅಗತ್ಯ ಕೋರ್ಸ್‌ಗಳು ಲಭ್ಯ ಇವೆ

ವಿದ್ಯಾರ್ಥಿವೇತನ ಕೈಪಿಡಿ

ಡಿಎಕ್ಸ್‌ಸಿ ಪ್ರೋಗ್ರೆಸಿಂಗ್ ಮೈಂಡ್ಸ್ ಸ್ಕಾಲರ್‌ಷಿಪ್

ಡಿಎಕ್ಸ್‌ಸಿ ಟೆಕ್ನಾಲಜಿಯು ಸಿಎಸ್‌ಆರ್ ಉಪಕ್ರಮದಡಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ.

ಅರ್ಹತೆ: ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್ ಆ್ಯಂಡ್ ಮ್ಯಾತಮ್ಯಾಟಿಕ್ಸ್) ಸಂಬಂಧಿತ ಪದವಿಯ ಯಾವುದೇ ವರ್ಷದಲ್ಲಿರುವ ಹೆಣ್ಣುಮಕ್ಕಳು, ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಅರ್ಹರು. ಅರ್ಜಿದಾರರು ತಮ್ಮ ಹಿಂದಿನ ತರಗತಿ ಅಥವಾ ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು.

ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 4 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಅಂಗವಿಕಲ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಆರ್ಥಿಕ ಸಹಾಯ: ₹ 50,000
ಅರ್ಜಿ ಸಲ್ಲಿಸಲು ಕೊನೇ ದಿನ: 30.9.2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/DXCS6

ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

Chapter – 2

ELECTROSTATIC POTENTIAL AND CAPACITANCE

35. Two point charge 4 μC and – 2 μ C are separated by a distance of 1 m in air. Calculate at what point on the line joining the two charge, the electric potential is zero.

Ans:- Let P be the point at a distance x from 4 μC, at which the potential is zero.

$$\therefore \frac{1}{4\pi\in_0}\frac{4\times10^{-6}}{x} - \frac{1}{4\pi\in_0}\frac{2\times10^{-6}}{(1-x)} = 0$$

$$\Rightarrow \frac{2}{x} = \frac{1}{1-x} \Rightarrow x = \frac{2}{3} = 0.67\ m$$

36. What is the electrostatic potential due to an electric dipole at an equatorial point?

Ans:- Zero.

37. What is electron volt?

Ans:- Energy acquired by electron while passing through a potential difference of 1 volt.

38. What is the value of electron-volt?

Ans:- 1 eV = 1.6×10^{-19} J.

39. Give expression for work done on a test charge q_o in electrostatic field due to a set of charges q_1, q_2, q_3, q_4, q_5, shown in the figure along paths PIQ, PIIA, PIIIQ, PIVQ and PVQ. Let U be the potential energy and V be potential.



Ans:- The required expression for work done is same for all paths because work done is independent of the path and depends upon initial and final positions i.e., P and Q only. Thus work done is given by,

$$\frac{W_{QP}}{q_0} = \frac{U_Q - U_P}{q_0} = V_Q - V_P$$

$$\text{i.e., } W_{QP} = q_0(V_Q - V_P)$$

40. Find the electric potential at a point, when a work of 2.4×10^{-5} J is done to carry charge of 5×10^{-19} C to that point.

$$\text{Soln :- Using, } V = \frac{W}{q},$$

$$\text{we get, } V = \frac{2.4\times10^{-5}}{5\times10^{-19}} = 4.8 \times 10^{13}\ V$$

41. Work is done in taking a positive charge from the outer surface of a metallic sphere to another point outside the sphere but no work is done in taking the charge inside the sphere from one point to other. Why?

Ans:- Electric potential is same at all points inside the metallic sphere so no work is done in moving the charge inside the sphere. But outside the sphere potential is different at different distances so work is done in moving the charge from one point to the other out-side the sphere.

42. If 100 joule of work must be done move electric charge of 4C from a place where potential is -10 volt to another place, where potential is 'V' volt, find the value of V.

Soln:- To find potential at a point is -

$$V_A = -10\,V; \quad V_B = V;$$

$$\text{and } W_{AB} = 100\,J \text{ and } q = 4\,C$$

$$\text{Using relation, } V_B - V_A = \frac{W_{AB}}{q_0},$$

$$\text{we get, } V - (-10) = \frac{100}{4} = 25$$

$$\text{(or) } V = 15\ \text{volt}$$

43. Arrange three charges +q, +q and –q using distances r, 2r and 2r to get a system with zero potential energy.



Here potential energy,

$$U = k\left(\frac{q^2}{r} - \frac{q^2}{2r} - \frac{q^2}{2r}\right) = 0$$

44. Draw three equipotential surfaces corresponding to a field that uniformly increases in magnitude but remains constant along Z - direction. How are the surfaces different from that of a constant electric field along Z - direction?

Ans:-



Equi-potential surface

Equipotential surfaces will be equidistant for some potential difference in constant electric field. They narrow down for some potential difference in the case of increasing field.

45. Depict the equipotential surfaces for a system of two identical positive point charges placed at distance d apart

Ans:-

(Contd…….)

CMR UNIVERSITY
BENGALURU
Private University Estd in Karnataka State by Act No. 45 of 2013
A GRADE
ACCREDITED BY NAAC
APPLY NOW!

CREATE THE FUTURE
ADMISSIONS OPEN AY 2025-26
RANKED
• 69 among top engineering institutes in India
• 44 among top private institutes for placement in India
Source: Times All India Engineering Institutes Ranking Survey 2025
OUR INDUSTRY-READY POSTGRADUATE PROGRAMMES
School of Management
MBA with Dual Specialisation in
• Marketing • HR • Finance
• Business Analytics
• Digital Marketing
• Supply Chain Management
MBA | Business Analytics & Business Intelligence
MBA | Technology Management NEW
Executive MBA | Product Leadership
MBA PGCET CODES: City Campus - B150, OMBR Campus - B149, Lakeside Campus - B395
School of Science & Computer Studies
MCA
Advanced programming languages, software engineering, database management, networking, and mobile application development.
MCA PGCET CODES: OMBR Campus - C527, Lakeside Campus - C521
M.Sc. | Information Technology
Get proficient in advanced programming (Java, C#, Python), SQL, software engineering, networks, cybersecurity, and project management.
School of Engineering & Technology
M.Tech (For Regular & Professionals)
• Computer Science & Engineering
• Artificial Intelligence
M.Tech PGCET CODE: Lakeside Campus - T987
School of Liberal Studies
M.Sc. | Psychology
• Clinical
• Counselling
• HRDM
Up to 100% scholarship available for eligible candidates based on PGCET rank*
*T&C apply
• Semester-wise payment option
• Interest-free education loan (EMI option*)
• Hostel facility for boys & girls
*T&C apply
We honour all National-level and state level entrance tests.
Direct admission for CUET students
200+ recruiters
BOSCH KPMG Capgemini EY IBM zomato amazon Deloitte. and many more..
PROVIDING OPPORTUNITIES TO GET SCHOLARSHIPS WORTH ₹12 CRORES*
*T&C apply
93429 00666
admissions@cmr.edu.in
www.cmr.edu.in
Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ

ಸುಭಾಷಿತ

ನಮಗೆ ಅವಶ್ಯಕತೆ ಇಲ್ಲದೆ ಇರುವುದನ್ನು ಪಡೆದರೂ ಅದು ಕಳ್ಳತನ ಮಾಡಿದಂತೆ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ದೇಶದ್ರೋಹ ಕಾನೂನಿನ ಅಪಬಳಕೆ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಪ್ರಹಾರ

ಇಬ್ಬರು ಪತ್ರಕರ್ತರ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಿರುವ ಅಸ್ಸಾಂ ಪೊಲೀಸರ ಕ್ರಮ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಸಿರುವ ದಾಳಿ ಹಾಗೂ ನ್ಯಾಯಾಂಗಕ್ಕೆ ವಿರುದ್ಧವಾದುದು. 'ದಿ ವೈರ್' ಪತ್ರಿಕೆಯ ಸಿದ್ಧಾರ್ಥ್ ವರದರಾಜನ್ ಹಾಗೂ ಕರಣ್ ಥಾಪರ್ ಅವರಿಗೆ ಸಮನ್ಸ್ ನೀಡಿರುವ ಪೊಲೀಸರು, ದೇಶದ್ರೋಹಕ್ಕೆ ಸಂಬಂಧಿಸಿದ, 'ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 152'ರ (ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಗೆ ಧಕ್ಕೆ) ಅನ್ವಯ ಪ್ರಕರಣ ದಾಖಲಿಸಿದ್ದಾರೆ. ಈ ಇಬ್ಬರು ಪತ್ರಕರ್ತರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಅಸ್ಸಾಂ ಪೊಲೀಸರಿಗೆ ಸುಪ್ರೀಂ ಕೋರ್ಟ್ ಆಗಸ್ಟ್ 12ರಂದು ಆದೇಶ ನೀಡಿತ್ತು. ಅದೇ ದಿನ, ಪತ್ರಕರ್ತರ ವಿರುದ್ಧ ಹೊಸದಾಗಿ ಎಫ್‌ಐಆರ್ ದಾಖಲಿಸಿರುವ ಪೊಲೀಸರು, ಸಮನ್ಸ್ ಜಾರಿಗೊಳಿಸಿದ್ದಾರೆ. ಎಫ್‌ಐಆರ್‌ನ ಪ್ರತಿ ಅಥವಾ ಅಪರಾಧಕ್ಕೆ ಸಂಬಂಧಿಸಿದ ಯಾವುದೇ ವಿವರಗಳನ್ನು ಸಮನ್ಸ್ ಒಳಗೊಂಡಿಲ್ಲ. ಪತ್ರಕರ್ತರಿಗೆ ಸಮನ್ಸ್ ನೀಡುವ ಮೂಲಕ, ಅವರಿಗೆ ತಿಳಿಸದ ಅಪರಾಧಗಳಿಗಾಗಿ ಬಂಧನದ ಬೆದರಿಕೆ ಒಡ್ಡುವ ರೂಪದಲ್ಲಿರುವ ಈ ಪ್ರಕರಣ ಅತಾರ್ಕಿಕವಾದುದು, ಆತಂಕ ಹುಟ್ಟಿಸುವಂತಹದ್ದು ಹಾಗೂ ಕಾನೂನಿನ ಸಿಂಧುತ್ವ ಹೊಂದಿಲ್ಲದೆ ಇರುವುದಾಗಿದೆ.

'ದಿ ವೈರ್'ನಲ್ಲಿ ಪ್ರಕಟಗೊಂಡ ವರದಿಯೊಂದರಲ್ಲಿ, 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಭಾರತೀಯ ವಾಯುಪಡೆ ಯುದ್ಧ ವಿಮಾನಗಳನ್ನು ಕಳೆದುಕೊಂಡಿದೆ ಎಂದು ಉಲ್ಲೇಖಿಸಲಾಗಿತ್ತು. ಇಂಡೊನೇಷ್ಯಾದಲ್ಲಿ ನಡೆದ ವಿಚಾರ ಸಂಕಿರಣವೊಂದಕ್ಕೆ ಸಂಬಂಧಿಸಿದ ವರದಿಯಲ್ಲಿನ ಉಲ್ಲೇಖ, ಪತ್ರಕರ್ತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಪೊಲೀಸರಿಗೆ ನೆಪವಾಗಿದೆ. ವರದಿ ಮಾಡುವ ಹಾಗೂ ಸಾರ್ವಜನಿಕ ಹಿತಾಸಕ್ತಿ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸುವ ಹಕ್ಕು ಪತ್ರಕರ್ತರಿಗಿದ್ದು, ಆ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ. ನಾಗರಿಕರ ಅಭಿವ್ಯಕ್ತಿ ಸ್ವಾತಂತ್ರ್ಯದ ವಿಸ್ತರಣೆಯಂತಿರುವ ಪತ್ರಕರ್ತರ ಹಕ್ಕುಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಜೀವಾಳವಾಗಿವೆ. ಆದರೆ, ಸರ್ಕಾರದ ನೀತಿಗಳಿಗೆ ಪೂರಕವಾಗಿ ಕಾರ್ಯ ನಿರ್ವಹಿಸುವಂತೆ ಪತ್ರಕರ್ತರು ಹಾಗೂ ಮಾಧ್ಯಮ ಸಂಸ್ಥೆಗಳ ಮೇಲೆ ನಿರಂತರವಾಗಿ ಒತ್ತಡ ಹೇರಲಾಗುತ್ತಿದೆ. ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ 151ನೇ ಸ್ಥಾನದಲ್ಲಿದೆ. ಈ ಸ್ಥಾನ, ದೇಶದಲ್ಲಿ ಮಾಧ್ಯಮ ಸ್ವಾತಂತ್ರ್ಯಕ್ಕೆ ಎದುರಾಗಿರುವ ಅಪಾಯ ನೈಜವಾದುದು ಎನ್ನುವುದನ್ನು ಸಂಕೇತಿಸುವಂತಿದೆ. 'ದಿ ವೈರ್' ಪತ್ರಕರ್ತರ ಮೇಲೆ ದಾಖಲಾಗಿರುವ ಪ್ರಕರಣಗಳು ಹಾಗೂ ದೇಶದ ಬೇರೆ ಭಾಗಗಳಲ್ಲಿ ದಾಖಲಾಗಿರುವ ಇಂತಹುದೇ ಪ್ರಕರಣಗಳು ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತದ ಸ್ಥಾನ ಉತ್ತಮಗೊಳ್ಳುವ ಯಾವುದೇ ಸಾಧ್ಯತೆ ಇಲ್ಲದಿರುವುದರ ಸೂಚನೆಯಾಗಿದೆ.

ಪತ್ರಕರ್ತರ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆದಿರುವ ತೀವ್ರ ದಾಳಿ ಮತ್ತು ಪತ್ರಕರ್ತರ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನ.

ಪತ್ರಕರ್ತರ ಮೇಲೆ ಸೆಕ್ಷನ್ 152 ಅನ್ನು ಬಳಸಿ ಪ್ರಕರಣ ದಾಖಲಿಸಿರುವುದು, ಪೊಲೀಸರು ತಮ್ಮ ಕಾರ್ಯವ್ಯಾಪ್ತಿಯನ್ನು ಮೀರಿರುವ ಮತ್ತೊಂದು ಉದಾಹರಣೆಯಾಗಿದೆ. ಬಿಎನ್‌ಎಸ್ ಸೆಕ್ಷನ್ 152, ದೇಶದ್ರೋಹಕ್ಕೆ ಸಂಬಂಧಿಸಿದ 'ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124ಎ'ನ ವೇಷಧಾರಿಯಾಗಿದೆ. ಈ ವಿಧಿಯ ಅನ್ವಯ ಯಾವುದೇ ಎಫ್‌ಐಆರ್ ದಾಖಲಿಸದಂತೆ ಸುಪ್ರೀಂ ಕೋರ್ಟ್ 2022ರಲ್ಲಿ ನಿರ್ದೇಶನ ನೀಡಿದೆ. ಅದಕ್ಕೆ ಪರ್ಯಾಯವಾಗಿ ಮತ್ತಷ್ಟು ಕಠಿಣ ಹಾಗೂ ವ್ಯಾಪಕವಾದ ಸೆಕ್ಷನ್ 152 ಅನ್ನು ಸರ್ಕಾರ ಬಳಸುತ್ತಿದೆ. ಹೊಸ ಕಾನೂನಿನ ಬಳಕೆಗೆ ಸಂಬಂಧಿಸಿದ ಅರ್ಜಿಯೊಂದು ಕೋರ್ಟ್ ಪರಿಶೀಲನೆಯಲ್ಲಿರುವ ಸಂದರ್ಭದಲ್ಲೇ, ಪತ್ರಕರ್ತರ ವಿರುದ್ಧ ದೇಶದ್ರೋಹದ ಪ್ರಕರಣವನ್ನು ಪೊಲೀಸರು ದಾಖಲಿಸಿದ್ದಾರೆ. 'ದಿ ವೈರ್' ಪತ್ರಕರ್ತರು ಮಾತ್ರವಲ್ಲದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರವನ್ನು ಟೀಕಿಸಿದ ಮತ್ತೊಬ್ಬ ಪತ್ರಕರ್ತನ ಮೇಲೆಯೂ ಸೆಕ್ಷನ್ 152ರ ಅನ್ವಯ ಅಸ್ಸಾಂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಪತ್ರಕರ್ತರ ವಿರುದ್ಧ ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಿರುವುದು ಅಧಿಕಾರದ ಸ್ಪಷ್ಟ ದುರುಪಯೋಗ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದಾಗಿ 'ದಿ ವೈರ್' ಪತ್ರಕರ್ತರು ಬಂಧನಕ್ಕೆ ಒಳಗಾಗುವುದರಿಂದ ರಕ್ಷಣೆ ಪಡೆದಿದ್ದಾರೆ. ದೇಶದ್ರೋಹ ಪ್ರಕರಣದ ಬಳಕೆಯ ಕುರಿತಾದ ತನ್ನ ನಿರ್ದೇಶನ ಉಲ್ಲಂಘನೆಯಾಗದಂತೆ ಹಾಗೂ ಹಳೆಯ ಕಾನೂನು ಹೊಸ ರೂಪಾಂತರಗಳೊಂದಿಗೆ ನುಸುಳದಂತೆ ಸುಪ್ರೀಂ ಕೋರ್ಟ್ ನೋಡಿಕೊಳ್ಳಬೇಕಾಗಿದೆ.

ಪೊಲೀಸರು ಕೈಗೊಂಬೆಗಳಲ್ಲ

ಅಧಿಕಾರ ಸ್ಥಾನದಲ್ಲಿ ಇರುವವರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಪೊಲೀಸ್ ವ್ಯವಸ್ಥೆಯನ್ನು ಜವಾಬ್ದಾರಿಯಿಂದ ಬಳಸಬೇಕು. ಆಡಳಿತವನ್ನು ಪ್ರಶ್ನಿಸುವ ಧ್ವನಿಗಳನ್ನು ಕುಗ್ಗಿಸಲು ಪೊಲೀಸರನ್ನು ಕೈಗೊಂಬೆಗಳಂತೆ ಬಳಸಬಾರದು.

ಚೇತನ್ ಅಹಿಂಸಾ, ನಟ–ಸಾಮಾಜಿಕ ಹೋರಾಟಗಾರ, 'ಎಕ್ಸ್'ನಿಂದ

ಕಿಡಿನುಡಿ

ಈ ನೂರು ವರ್ಷಗಳಲ್ಲಿ ಆರ್‌ಎಸ್‌ಎಸ್ ದೇಶಕ್ಕೆ ನೀಡಿದ ಕೇವಲ 10 ಕೊಡುಗೆಗಳನ್ನು ಹೇಳಲು ಬಿಜೆಪಿಯವರಿಂದ ಮತ್ತು ಸಂಘ ಪರಿವಾರದವರಿಂದ ಸಾಧ್ಯವಾಗುವುದಿಲ್ಲ. ಇಂತಹ ಆರ್‌ಎಸ್‌ಎಸ್‌ನಿಂದ ಅಪಾಯವಿದೆಯೇ ಹೊರತು ಸಹಾಯವಿಲ್ಲ.

ಪ್ರಿಯಾಂಕ್ ಖರ್ಗೆ, ಐ.ಟಿ–ಬಿ.ಟಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 25-8-2000

- **ಅಮೆರಿಕ ಟೆನಿಸ್: ಪೇಸ್–ಮಹೇಶ್**

ಬೆಂಗಳೂರು, ಆಗಸ್ಟ್ 24– ಭಾರತದ ಅಗ್ರಮಾನ್ಯ ಟೆನಿಸ್ ಜೋಡಿ ಲಿಯಾಂಡರ್ ಪೇಸ್ ಮತ್ತು ಮಹೇಶ್ ಭೂಪತಿ ಸೋಮವಾರದಿಂದ ನ್ಯೂಯಾರ್ಕ್‌ನಲ್ಲಿ ಆರಂಭವಾಗುವ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಜತೆಯಾಗಿ ಆಡಲು ನಿರ್ಧರಿಸಿದ್ದಾರೆ.

ಈ ವಿಷಯವನ್ನು ಮಹೇಶ್ ಅವರ ತಂದೆ ಕೃಷ್ಣ ಭೂಪತಿ, ಇಂದು 'ಪ್ರಜಾವಾಣಿ'ಗೆ ತಿಳಿಸಿದರು.

1999ರಲ್ಲಿ ಫ್ರೆಂಚ್ ಮತ್ತು ವಿಂಬಲ್ಡನ್ ಟೆನಿಸ್ ಟೂರ್ನಿಯ ಡಬಲ್ಸ್ ಪ್ರಶಸ್ತಿ ಗಳಿಸಿ ವಿಶ್ವದ ಅಗ್ರಮಾನ್ಯ ಡಬಲ್ಸ್ ಜೋಡಿಯಾಗಿ ಹೊರಹೊಮ್ಮಿದ್ದ ಲಿಯಾಂಡರ್–ಮಹೇಶ್ ಜೋಡಿ ಕಳೆದ ವರ್ಷ ಜತೆಯಾಗಿ ಆಡಿರಲಿಲ್ಲ.

- **ಪುರುಷರು ನಾಪತ್ತೆ, ಉದ್ವಿಗ್ನ ಪರಿಸ್ಥಿತಿ**

ತುಮಕೂರು, ಆಗಸ್ಟ್ 24– ಗುಬ್ಬಿ ತಾಲ್ಲೂಕಿನ ಜಿ. ಅರಿವೇಸಂದ್ರ ಗ್ರಾಮದಲ್ಲಿ ಸವರ್ಣೀಯರು ಮತ್ತು ದಲಿತರ ನಡುವೆ ನಡೆಯುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಇಡೀ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದೆ.

ಗ್ರಾಮದಲ್ಲಿ ಸವರ್ಣೀಯರು ಮತ್ತು ದಲಿತರ ಮನೆಗಳ ಎಲ್ಲ ಗಂಡಸರು ತಲೆಮರೆಸಿಕೊಂಡಿದ್ದು, ಹೆಂಗಸರು ಮತ್ತು ಮಕ್ಕಳು ಮಾತ್ರ ಭೀತಿಯ ನೆರಳಲ್ಲಿ ಕಾಲ ಕಳೆಯುತ್ತಿರುವುದು ಸ್ಥಳಕ್ಕೆ ಭೇಟಿ ನೀಡಿದ 'ಪ್ರಜಾವಾಣಿ'ಯ ಗಮನಕ್ಕೆ ಬಂತು.

75 ವರ್ಷಗಳ ಹಿಂದೆ

ಶುಕ್ರವಾರ, 25-8-1950

- **ಸಂಸ್ಥಾನದ ಆಹಾರ ಪರಿಸ್ಥಿತಿ**

ಬೆಂಗಳೂರು, ಆಗಸ್ಟ್ 24– ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು, ಇಂದು ಅವರ ಕಚೇರಿಯಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿ ಬಗ್ಗೆ ಸಂಸ್ಥಾನದ ಜಿಲ್ಲಾಧಿಕಾರಿಗಳೊಡನೆ ಸಮಾಲೋಚನೆ ನಡೆಸಿದರು.

ಆಹಾರ ಸಚಿವ ಟಿ. ಮರಿಯಪ್ಪ ಅವರು ಹಾಜರಿದ್ದರು.

ಕಳೆದ ವಾರಾಂತ್ಯದಲ್ಲಿ ದೆಹಲಿಯಲ್ಲಿ ನಡೆದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ದೇಶದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದ ಮುಖ್ಯಮಂತ್ರಿ ಅವರು, ಆ ಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತರಬೇಕೆಂದು ತಿಳಿಸಿದರು.

- **ಸಮಾನ ಪಠ್ಯಭಾಷೆ ಬಗ್ಗೆ ಸಲಹೆ**

ನಾಗಪುರ, ಆಗಸ್ಟ್ 24– ಅಂತರ ವಿಶ್ವವಿದ್ಯಾಲಯ ಮಂಡಳಿಯು ವಿಶ್ವವಿದ್ಯಾಲಯ ಸಮಿತಿಯ ವರದಿಯನ್ನು ಅಂಗೀಕರಿಸಿ ದೇಶದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ಸಮಾನ ಪಠ್ಯಭಾಷೆಯೊಂದು ಇರುವುದು ಸೂಕ್ತವೆಂದು ಅಭಿಪ್ರಾಯಪಟ್ಟಿದೆ.

ಬೀದಿ ನಾಯಿ: ಹಕ್ಕು ಮತ್ತು ಸಿಕ್ಕು

ವಿಶ್ಲೇಷಣೆ

ಡಾ. ಮುರಳೀಧರ ಕಿರಣಕೆರೆ

ದೆಹಲಿಯಲ್ಲಿನ ಬೀದಿ ನಾಯಿಗಳ ನಿರ್ವಹಣೆಯ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನ ಚರ್ಚೆಗೆ ಕಾರಣವಾಗಿದೆ. ಯಾವುದೇ ಜೀವಿಯ ಬದುಕುವ ಹಕ್ಕನ್ನು ಕಸಿದುಕೊಳ್ಳುವ ಅಧಿಕಾರ ನಮಗಿಲ್ಲ ಎನ್ನುವುದು ನಿಜವಾದರೂ, ಬೀದಿ ನಾಯಿಗಳ ಸಮಸ್ಯೆ ಬಹು ದೊಡ್ಡ ಬಿಕ್ಕಟ್ಟಾಗಿ ಪರಿಣಮಿಸಿರುವುದನ್ನು ನಾವು ಗಮನಿಸಬೇಕು.

ದೆಹಲಿಯ ಎಲ್ಲಾ ಬೀದಿ ನಾಯಿಗಳನ್ನು ಕಡ್ಡಾಯವಾಗಿ ಶಾಶ್ವತ ಆಶ್ರಯ ತಾಣಗಳಿಗೆ ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ್ದ ಆದೇಶ ದೇಶದಾದ್ಯಂತ ಪರ, ವಿರೋಧದ ಚರ್ಚೆಗೆ ಕಾರಣವಾಗಿತ್ತು. ಮುಕ್ತವಾಗಿ ಓಡಾಡಿಕೊಂಡಿರುವ ಪ್ರಾಣಿಗಳನ್ನು ಇಕ್ಕಟ್ಟಾದ ಜಾಗದಲ್ಲಿ ಬಂಧಿಸುವುದು ಇಲ್ಲವೇ ಅವುಗಳ ವಾಸಸ್ಥಳದಿಂದ ಎತ್ತಂಗಡಿ ಮಾಡಿ ಬೇರೆಡೆ ಕೂಡಿಹಾಕುವುದು 'ಪ್ರಾಣಿ ಜನನ ನಿಯಂತ್ರಣ ನಿಯಮ–2023'ರ ಸ್ಪಷ್ಟ ಉಲ್ಲಂಘನೆ ಎಂದು ಕೆಲವರು ವಾದಿಸಿದ್ದರು. ಮಕ್ಕಳು, ವೃದ್ಧರನ್ನು ನಾಯಿಗಳು ಕಚ್ಚಿ ಸಾಯಿಸುತ್ತಿರುವ, ಗಂಭೀರವಾಗಿ ಗಾಯಗೊಳಿಸುತ್ತಿರುವ ಹೃದಯವಿದ್ರಾವಕ ದೃಶ್ಯಗಳು ಜಾಲತಾಣಗಳಲ್ಲಿ ಹರಿದಾಡುತ್ತಾ, 'ಇನ್ನೆಷ್ಟು ದಿನ ಈ ಕ್ರೌರ್ಯ ಸಹಿಸುವುದು?' ಎಂಬ ಧ್ವನಿಯೂ ಜೋರಾಗಿ ಕೇಳಿಬಂದಿತ್ತು.

ಸಾರ್ವಜನಿಕ ಚರ್ಚೆಗಳ ತರುವಾಯ, ಸುಪ್ರೀಂ ಕೋರ್ಟ್ ತನ್ನ ಆದೇಶವನ್ನು ಪರಿಷ್ಕರಿಸಿದೆ. ದೆಹಲಿಯಲ್ಲಿ ಈಗಾಗಲೇ ಹಿಡಿಯಲಾಗಿರುವ ಬೀದಿ ನಾಯಿಗಳಿಗೆ ಲಸಿಕೆ ಹಾಕಿ, ಅವುಗಳನ್ನು ಈ ಮುಂಚೆ ಇದ್ದ ಸ್ಥಳಗಳಿಗೇ ಬಿಡಲು ಹಾಗೂ ಅವುಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಬೇಕೆಂದು ಹೇಳಿದೆ. ರೇಬಿಸ್ ಸೋಂಕು ಇರುವ ಅಥವಾ ಸೋಂಕಿನ ಶಂಕೆ ಇರುವ ನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಬೇಕು ಹಾಗೂ ಯಾವುದೇ ಕಾರಣಕ್ಕೂ ಅವುಗಳನ್ನು ಮತ್ತೆ ಬೀದಿಗಳಿಗೆ ಬಿಡಬಾರದು ಎಂದೂ ಹೇಳಿದೆ. ಬೀದಿ ನಾಯಿಗಳ ಉಪದ್ರವಕ್ಕೆ ಕಡಿವಾಣ ಹಾಕುವುದಕ್ಕಾಗಿ ರಾಷ್ಟ್ರವ್ಯಾಪಿ ಅನ್ವಯವಾಗುವ ನೀತಿಯೊಂದನ್ನು ರೂಪಿಸುವ ಇಂಗಿತವನ್ನೂ ವ್ಯಕ್ತಪಡಿಸಿದೆ.

ರೇಬಿಸ್ ಸೋಂಕು ಹೊಂದಿದ ನಾಯಿಗಳು ರಸ್ತೆಯಲ್ಲಿ ಇರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ, ಅದರ ಅನುಷ್ಠಾನ ಅಷ್ಟು ಸುಲಭವಲ್ಲ. ನಾಯಿಯೊಂದು ಕಂಡ ಕಂಡ ಮನುಷ್ಯ, ಪ್ರಾಣಿಗಳಿಗೆ ಕಚ್ಚುತ್ತಾ ಹೋದಾಗಲಷ್ಟೇ ಅದಕ್ಕೆ ಹುಚ್ಚೆಂದು ಗೊತ್ತಾಗುವುದು. ಸೋಂಕಿತ ನಾಯಿಯಿಂದ ಕಚ್ಚಿಸಿಕೊಂಡವರು ಲಸಿಕೆ ತೆಗೆದುಕೊಳ್ಳದಿದ್ದರೆ ಅಪಾಯ ನಿಶ್ಚಿತ. ಹಾಗೆಯೇ ಆ ನಾಯಿಗಳಿಂದ ಕಚ್ಚಿಸಿಕೊಂಡ ಬೀದಿ ನಾಯಿಗಳಿಗೂ ಲಸಿಕೆ ಹಾಕಬೇಕು. ಇಲ್ಲದಿದ್ದರೆ ಅವುಗಳಿಗೂ ರೋಗ ತಗುಲಿ ಮತ್ತಷ್ಟು ಕಡೆ ಸೋಂಕು ಹರಡುತ್ತವೆ.

ಬೀದಿ ನಾಯಿಗಳಿಗೆ ಎಂದೋ ನೀಡಿದ್ದ ಒಂದು ಲಸಿಕೆ ಈಗ ಪ್ರಯೋಜನಕ್ಕೆ ಬಾರದು. ರೋಗ ಪ್ರತಿರೋಧ ಶಕ್ತಿ ಸುಸ್ಥಿತಿಯಲ್ಲಿ ಇರಬೇಕಿದ್ದರೆ ಪ್ರತಿ ವರ್ಷವೂ ಬೀದಿ ನಾಯಿಗಳನ್ನು ಹಿಡಿದು ಲಸಿಕೆ ಹಾಕಬೇಕು. ಇದು ವ್ಯಾವಹಾರಿಕವಾಗಿ ಸಾಧ್ಯವೇ? ಪ್ರತಿನಿತ್ಯ ನಾಯಿಗಳ ಮೇಲೆ ನಿಗಾ ಇರಿಸುವ ವ್ಯವಸ್ಥೆ ಯಾದರೂ ಎಲ್ಲಿದೆ? ಹಾಗಾಗಿ ನಾಯಿ ಕಡಿತದ ಪ್ರತಿ ಪ್ರಕರಣವನ್ನು ರೇಬಿಸ್ ದೃಷ್ಟಿಯಿಂದಲೇ ನೋಡಬೇಕಾದುದು ಅನಿವಾರ್ಯ. ನಮ್ಮ ರಾಜ್ಯವೊಂದರಲ್ಲೇ ಈ ವರ್ಷದ ಜನವರಿಯಿಂದ ಇಲ್ಲಿಯವರೆಗೆ ಸುಮಾರು ಮೂರು ಲಕ್ಷದಷ್ಟು ನಾಯಿ ಕಡಿತದ ಪ್ರಕರಣಗಳು ದಾಖಲಾಗಿರುವುದನ್ನು ಗಮನಿಸಿದರೆ, ಪರಿಸ್ಥಿತಿ ಎಷ್ಟು ಗಂಭೀರವಾದುದು ಎನ್ನುವುದು ಅರಿವಾಗುತ್ತದೆ!

ನಾಯಿಗಳ ಮೇಲಿನ ಅತಿಯೆನಿಸುವಷ್ಟು ಸಾರ್ವಜನಿಕ ಅನುಕಂಪ, ಆಡಳಿತದ ನಿರ್ಲಕ್ಷ್ಯ, ಇಚ್ಛಾಶಕ್ತಿಯ ಕೊರತೆ, ಹೀಗೆ ಬೇರೆ ಬೇರೆ ಕಾರಣಗಳಿಂದ, ಹಲವು ದಶಕಗಳಿಂದ ಜೀವಂತವಾಗಿರುವ ಸಮಸ್ಯೆಯೊಂದು ಅಪಾಯಕಾರಿಯಾಗಿ ಬೆಳೆದಿದೆ ಹಾಗೂ ದಿನದಿಂದ ದಿನಕ್ಕೆ ಕಗ್ಗಂಟಾಗುತ್ತಲೇ ಸಾಗುತ್ತಿದೆ.

ಕರ್ನಾಟಕ ಸರ್ಕಾರ 2022ರ ಡಿಸೆಂಬರ್‌ನಲ್ಲಿ ರೇಬಿಸ್ ರೋಗವನ್ನು ಅಧಿಸೂಚಿತ ಕಾಯಿಲೆಯೆಂದು ಘೋಷಿಸಿದೆ. ಅದರನ್ವಯ, ಸರ್ಕಾರಿ ಮತ್ತು ಖಾಸಗಿ ಸೇರಿದಂತೆ ಎಲ್ಲಾ ವೈದ್ಯಕೀಯ ಸಂಸ್ಥೆಗಳು ನಾಯಿ ಕಡಿತ, ರೇಬಿಸ್ ಸೋಂಕಿನ ಪ್ರಕರಣಗಳನ್ನು ಸರ್ಕಾರಕ್ಕೆ ವರದಿ ಮಾಡುವುದು ಕಡ್ಡಾಯ. ಹಾಗಾಗಿ, ಕಳೆದ ಎರಡು ಮೂರು ವರ್ಷಗಳಿಂದ ನಿಖರವಾದ ಅಂಕಿಅಂಶಗಳು ದೊರಕುತ್ತಿವೆ. ಇದಕ್ಕಿಂತ ಹಿಂದೆಯೂ ನಾಯಿಗಳ ದಾಳಿಯಿಂದ ದೊಡ್ಡ ಪ್ರಮಾಣದಲ್ಲೇ ಸಾವು–ನೋವು ಸಂಭವಿಸುತ್ತಿದ್ದರೂ ಅವು ಹೆಚ್ಚಾಗಿ ವರದಿಯಾಗುತ್ತಿರಲಿಲ್ಲ. ಈಗ ಸಾಮಾಜಿಕ ಮಾಧ್ಯಮಗಳು ಹೆಚ್ಚು ಕ್ರಿಯಾಶೀಲವಾಗಿವೆ, ಇಂತಹ ಘಟನೆಗಳಿಗೆ ವ್ಯಾಪಕ ಪ್ರಚಾರ ಸಿಗುತ್ತಿರುವುದರಿಂದ ಬೇಗನೆ ಎಲ್ಲರ ಗಮನಕ್ಕೆ ಬರುತ್ತಿದೆ. ಜನರಲ್ಲೂ ನಾಯಿ ಕಡಿತ ಹಾಗೂ ರೇಬಿಸ್ ಕುರಿತಾಗಿ ಜಾಗೃತಿ ಮೂಡಿದೆ. ಹಾಗಾಗಿ, ವೈದ್ಯಕೀಯ ಸಲಹೆ ಹಾಗೂ ಚಿಕಿತ್ಸೆಗೆ ಧಾವಿಸುತ್ತಿರುವವರ ಸಂಖ್ಯೆಯಲ್ಲಿ ಗಾಬರಿಯಾಗುವಷ್ಟು ಏರಿಕೆಯಾಗುತ್ತಿದೆ.

ನಾಯಿಗಳ ಆಕ್ರಮಣಶೀಲತೆಗೆ ಅವುಗಳಿಗೆ ಆಹಾರ ಕೊರತೆಯಾಗಿರುವುದೇ ಪ್ರಮುಖ ಕಾರಣವೆಂದು ಬಿಂಬಿಸಲಾಗುತ್ತಿದೆ. ಇದೊಂದು ಬಿಡುಬೀಸಾದ ಹೇಳಿಕೆಯೇ ಹೊರತು ಅದಕ್ಕೆ ಯಾವುದೇ ಆಧಾರವಿಲ್ಲ. ನಾಯಿಗಳು ಜನ, ಜಾನುವಾರು ಮೇಲೆ ಆಕ್ರಮಣ ಮಾಡಲು ಹತ್ತಾರು ಕಾರಣಗಳುಂಟು. ತನಗೆ ಅಪಾಯವೆದುರಾದ ಸಂದರ್ಭದಲ್ಲಿ ನಾಯಿ ಆಕ್ರಮಣ ಮಾಡುತ್ತದೆ. ಭಯಗೊಂಡಾಗ, ಭಾರೀ ಸದ್ದುಗದ್ದಲಗಳಿಂದ ಮಾನಸಿಕವಾಗಿ ಗಲಿಬಿಲಿಗೊಂಡಾಗ, ಸುಮ್ಮನಿದ್ದರೂ ಕೆಣಕಿದಾಗ, ಅದು ಮಲಗಿರುವಾಗ ಇಲ್ಲವೇ ಆಹಾರ ತಿನ್ನುವಾಗ ತೊಂದರೆ ಮಾಡಿದರೆ ಕೆರಳಿ ಕಚ್ಚುವುದುಂಟು. ಮರಿ ಹಾಕಿರುವಾಗ ಸಂತಾನದ ರಕ್ಷಣೆಗಾಗಿ ತಾಯಿನಾಯಿ ಆಕ್ರಮಣ ಪ್ರವೃತ್ತಿ ತೋರುತ್ತದೆ. ನೋವು, ಕಾಯಿಲೆಯಿಂದ ಬಳಲುತ್ತಿರುವ ನಾಯಿಯನ್ನು ಮುಟ್ಟಲು ಹೋದಾಗ, ಅವು ಬೆದೆಗೆ ಬಂದಾಗ, ಹಸಿದಿರುವಾಗ, ವಿಚಿತ್ರ ವೇಷದವರು ಎದುರಾದಾಗಲೂ ದಾಳಿ ಮಾಡುವುದುಂಟು. ಇನ್ನು ಚಿಕ್ಕ ಮಕ್ಕಳು ನಾಯಿಗಳಿಗೆ ಅವುಗಳ ಮೂಲ ಸ್ವಭಾವದ ಕಾರಣ ಬೇಟೆ ಪ್ರಾಣಿಯಂತೆ ಕಾಣುವುದರಿಂದ, ನಾಯಿಗಳು ಅವರ ಮೇಲೆ ಹಠಾತ್ ಎರಗುತ್ತವೆ.

ಕೆಲವು ತಳಿಯ ಶ್ವಾನಗಳಲ್ಲಿ ವಂಶವಾಹಿಯ ಕಾರಣ ಸಿಟ್ಟು ಹಾಗೂ ಕಚ್ಚುವ ಪ್ರವೃತ್ತಿ ಹೆಚ್ಚು. ನಾಯಿಗಳು ಗುಂಪಿನಲ್ಲಿರುವಾಗ ಒಂದು ನಾಯಿ ಅಟ್ಟಿಸಿಕೊಂಡು ಬಂದರೆ, ಉಳಿದ ನಾಯಿಗಳು ಅದನ್ನು ಅನುಕರಿಸಿ ದಾಳಿಗೆ ಮುಂದಾಗುತ್ತವೆ. ಹಾಗಾಗಿ, ನಾಯಿ ಕಡಿತದ ಪ್ರಕರಣಗಳು ಹೆಚ್ಚಾಗಲು ಅವುಗಳಿಗೆ ಸರಿಯಾಗಿ ಆಹಾರ ಸಿಗದಿರುವುದೇ ಕಾರಣವೆಂದು ಹೇಳುವುದು ಕೇವಲ ಮಿಥ್ಯಾರೋಪವಷ್ಟೆ.

ನಾಯಿಗಳನ್ನು ಶಾಂತವಾಗಿ ಇರಿಸಲು ಪ್ರತಿಯೊಬ್ಬರೂ ಬೀದಿ ನಾಯಿಗಳಿಗೆ ನಿತ್ಯ ಊಟ ಹಾಕಿ ಎನ್ನುವುದು ಹಾಸ್ಯಾಸ್ಪದ. ಇಂತಹದ್ದೇ ಕಾರಣಕ್ಕಾಗಿ ನಮ್ಮ ಬಿಬಿಎಂಪಿ ನಾಯಿಗಳಿಗೆ ಒಂದು ಹೊತ್ತು ಊಟ ಹಾಕುವ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿರುವುದು ಸಮರ್ಥನೀಯವಲ್ಲ. ನಾಯಿಗಳಿಗೆ ಚೆನ್ನಾಗಿ ಆಹಾರ ಸಿಕ್ಕಾಗ ಅವುಗಳ ವಂಶಾಭಿವೃದ್ಧಿ ಸಾಮರ್ಥ್ಯವೂ ಸಹಜವಾಗಿಯೇ ವೃದ್ಧಿಸುತ್ತದೆ. ಸುಲಭವಾಗಿ ಆಹಾರ ದೊರಕುವ ಕಡೆ ಅವುಗಳ ಗುಂಪೂ ದೊಡ್ಡದಾಗುತ್ತದೆ. ವಾಹನಗಳಿಗೆ ಅಡ್ಡ ಬಂದು ಅಪಘಾತಗಳಿಗೆ ಕಾರಣವಾಗುವ ಜೊತೆಗೆ ಸಮೂಹ ಸನ್ನಿಯಿಂದಾಗಿ ಮಕ್ಕಳು, ದುರ್ಬಲರ ಮೇಲೆ ಎರಗುವ ಸಂಭವವೂ ಹೆಚ್ಚು.

ಹಿಂದೆಲ್ಲಾ ನಾಯಿಗಳಲ್ಲಿ ಗರ್ಭಧಾರಣೆ ತಡೆಯುವ ಮಾತ್ರೆಗಳು ಪಶು ವೈದ್ಯಕೀಯ ಸಂಸ್ಥೆಗಳಲ್ಲಿ ಸಿಗುತ್ತಿದ್ದವು. ತಮ್ಮ ಮನೆಯ ಹೆಣ್ಣು ನಾಯಿ ಬೆದೆಗೆ ಬಂದಾಗ ಗುಳಿಗೆಗಳನ್ನು ಹಾಕುತ್ತಿದ್ದ ಮಾಲೀಕರು, ಅವು ಮರಿ ಹಾಕದಂತೆ ತಡೆಯುತ್ತಿದ್ದರು. ಇದು ಅವುಗಳ ಸಂಖ್ಯೆ ನಿಯಂತ್ರಣಕ್ಕೆ ಸುಲಭ ಮಾರ್ಗವಾಗಿತ್ತು. ಆದರೆ, ಈ ಔಷಧಗಳ ವ್ಯಾಪಕ ದುರುಪಯೋಗ, ದುಷ್ಪರಿಣಾಮದಂತಹ ಕಾರಣಗಳಿಂದ ಪೂರೈಕೆ ನಿಂತು ಹೋಗಿ ಹಲವು ವರ್ಷಗಳೇ ಆಗಿಹೋಗಿವೆ. ಈಗ ಗರ್ಭ ನಿರೋಧಕ ಅಥವಾ ಗರ್ಭಪಾತ ಮಾಡಿಸುವಂತಹ ಮಾತ್ರೆಗಳು ದೊರೆಯದ ಕಾರಣ ತಮ್ಮ ಮನೆಯ ನಾಯಿಗಳು ಮರಿ ಹಾಕಿದಾಗ ಸಾಕಲಾಗದೆ ಬೀದಿಗೆ ಬಿಡುವವರು ಹೆಚ್ಚಾಗಿದ್ದಾರೆ. ಗರ್ಭ ಧರಿಸುವುದನ್ನು ತಡೆಯುವ ಸುಧಾರಿತ ಔಷಧಗಳು ಪಶು ವೈದ್ಯಕೀಯ ಸಂಸ್ಥೆಗಳಲ್ಲಿ ಸುಲಭವಾಗಿ ಮತ್ತು ಉಚಿತವಾಗಿ ದೊರೆಯುವಂತಾದಾಗ, ನಾಯಿಗಳ ಸಂಖ್ಯೆಗೆ ಕಡಿವಾಣ ಹಾಕಲು ಸಾಧ್ಯವಿದೆ.

ಹೆಣ್ಣುನಾಯಿಗಳಲ್ಲಿ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ತುಸು ಕ್ಲಿಷ್ಟ ಮತ್ತು ದುಬಾರಿ. ಗರ್ಭಕೋಶವು ಶರೀರದ ಒಳಭಾಗದಲ್ಲಿ ಇರುವುದರಿಂದ ನಾಯಿಗೆ ಪ್ರಜ್ಞೆ ತಪ್ಪಿಸಿ, ಹೊಟ್ಟೆಯ ಮಾಂಸ ಪದರಗಳನ್ನು ಛೇದಿಸಿ, ಗರ್ಭಚೀಲವನ್ನು ತೆಗೆದು ಹಾಕಬೇಕಾಗುತ್ತದೆ. ಪ್ರಕ್ರಿಯೆಯ ನಂತರದ ತೊಡಕುಗಳ ಕಾರಣ ಐದಾರು ದಿನಗಳ ಕಾಲ ನಿಗಾ ವಹಿಸಬೇಕಾಗುತ್ತದೆ. ಅದೇ ಗಂಡು ನಾಯಿಗಳಲ್ಲಿ ವೃಷಣ ಚೀಲವು ಶರೀರದ ಹೊರಭಾಗದಲ್ಲಿ ಇರುವುದರಿಂದ ಈ ಪ್ರಕ್ರಿಯೆ ಸರಳ. ನಂತರದಲ್ಲಿ ತೊಂದರೆಗಳೂ ಕಡಿಮೆ. ಹೌದು, ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಆರ್ಥಿಕ ಸಂಪನ್ಮೂಲವಷ್ಟೇ ಅಲ್ಲ, ಕುಶಲ ಮಾನವ ಸಂಪನ್ಮೂಲದ ಕೊರತೆಯೂ ಇದೆ. ಸಿಬ್ಬಂದಿ ವರ್ಗದವರಿಗೆ ಸೂಕ್ತ ತರಬೇತಿ ನೀಡಿ ಗಂಡು ನಾಯಿಗಳಿಗೆ ಶಸ್ತ್ರಕ್ರಿಯೆ ಮಾಡಿಸಬಹುದು, ಪರಿಣತರ ಅಗತ್ಯವೂ ಇಲ್ಲ. ಹಾಗಾಗಿ, ಗಂಡುನಾಯಿಗಳನ್ನೇ ಕೇಂದ್ರೀಕರಿಸಿ ಜನನ ನಿಯಂತ್ರಣ ಕಾರ್ಯಕ್ರಮ ಹಮ್ಮಿಕೊಂಡಾಗ ವೆಚ್ಚವನ್ನು ತಗ್ಗಿಸಬಹುದಲ್ಲದೆ, ಪ್ರಕ್ರಿಯೆಗೂ ವೇಗ ತುಂಬಬಹುದು.

ಈ ಭೂಮಿಯಲ್ಲಿ ಮನುಷ್ಯ ಸೇರಿದಂತೆ ಎಲ್ಲಾ ಪಶು–ಪಕ್ಷಿಗಳಿಗೂ ಬದುಕುವ ಹಕ್ಕಿದ್ದರೂ, ಕೆಲವು ಪ್ರಾಣಿಗಳಿಗೆ ಹೆಚ್ಚಿನ ಹಕ್ಕುಗಳನ್ನು ಒತ್ತಾಯಿಸುವುದು ಅಪಾಯಕಾರಿ ಆಗಬಲ್ಲದು ಎಂಬುದಕ್ಕೆ ಬೀದಿ ನಾಯಿಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ ಮತ್ತು ತತ್ಸಂಬಂಧದ ಮಾನವ–ನಾಯಿ ಸಂಘರ್ಷವೇ ಸಾಕ್ಷಿ.

ಜನ–ಜಾನುವಾರು ಸುರಕ್ಷತೆಯ ದೃಷ್ಟಿಯಿಂದ ನಾಯಿಗಳಿಗೆ ಕನಿಷ್ಠ ಸೌಲಭ್ಯವುಳ್ಳ ಪಾಲನಾ ಕೇಂದ್ರಗಳನ್ನು ತೆರೆದು, ಅವುಗಳು ಬೀದಿಯ ಮೇಲೆ ಅಲೆಯದಂತೆ ನೋಡಿಕೊಳ್ಳುವುದು ಕಷ್ಟವಾದರೂ ಅಸಾಧ್ಯವಲ್ಲ. ಸಂಖ್ಯೆ ಮಿತಿ ಮೀರಿ ಅನಾಹುತಗಳಾಗುತ್ತಿರುವ ಈ ಹೊತ್ತಿನಲ್ಲಿ ನಾಯಿಗಳ ಹಕ್ಕಿನ ವಿಚಾರದಲ್ಲಿ ಇರುವ ಸೂಕ್ಷ್ಮಗಳ ಬಗ್ಗೆ ಚರ್ಚಿಸುವುದು ಹಾಗೂ ಸೂಕ್ತ ಪರಿಹಾರ ಕಂಡುಕೊಳ್ಳುವುದು ಸದ್ಯದ ತುರ್ತು.

(ಲೇಖಕ: ಮುಖ್ಯ ಪಶು ವೈದ್ಯಾಧಿಕಾರಿ)

ವಾಚಕರ ವಾಣಿ

ರೈತರ ಮನಸ್ಸುಗಳಲ್ಲಿ ಆತಂಕದ ಮಡು

ಹವಾಮಾನ ವೈಪರೀತ್ಯದಿಂದಾಗಿ ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯು ರೈತರ ಬದುಕನ್ನು ದಿಕ್ಕೆಡಿಸಿದೆ. ಮಳೆಯು ರೈತರನ್ನು ಸಂತಸಪಡಿಸಿಲ್ಲ. ಮಳೆಯಿಂದ ಅಪಾರ ಪ್ರಮಾಣದ ಹಾನಿಯಾಗಿದೆ. ಬಿತ್ತಿದ ಬೆಳೆಗಳು ಸರಿಯಾಗಿ ಫಸಲು ಕಾಣುತ್ತಿಲ್ಲ. ಶ್ರಮದ ಫಲ ರೈತನ ಕೈ ಸೇರದ ಸ್ಥಿತಿ ನಿರ್ಮಾಣವಾಗಿದೆ. ಲಕ್ಷಾಂತರ ರೂಪಾಯಿ ನಷ್ಟವಾಗುವ ಆತಂಕ ಎದುರಾಗಿದೆ. ರೈತರಿಗೆ ಸೂಕ್ತ ಪರಿಹಾರ ನೀಡುವ ನಿಟ್ಟಿನಲ್ಲಿ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ. ಕೂಡಲೇ, ಅಧಿಕಾರಿಗಳು ಸರ್ವೆ ಮಾಡಿ ಸರ್ಕಾರದ ಗಮನಕ್ಕೆ ತರಬೇಕಿದೆ.

ಕುಂದೂರು ಮಂಜಪ್ಪ, ಹರಿಹರ

ಬಾಯಿತುರಿಕೆಗಾಗಿ ಮಾತು ಸರಿಯೇ?

'ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಗ್ಗೆ ಆರೋಪ ಮಾಡಿದವನನ್ನು (ಮಹೇಶ್ ಶೆಟ್ಟಿ ತಿಮರೋಡಿ) ಒದ್ದು ಒಳಗೆ ಹಾಕಲಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿರುವುದು ವರದಿಯಾಗಿದೆ (ಪ್ರ.ವಾ., ಆಗಸ್ಟ್ 23). ಈ ಸುದ್ದಿ ಓದಿದರೆ ನಾವು ನಾಗರಿಕ ಸಭ್ಯ ಸಮಾಜದಲ್ಲಿದ್ದೇವಾ ಅಥವಾ ಗೂಂಡಾ ರಾಜ್ಯದಲ್ಲಿದ್ದೇವಾ ಎಂದು ಅಚ್ಚರಿಯಾಗುತ್ತದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಜನಪ್ರತಿನಿಧಿಗಳು ಬಳಸುವ ಮಾತುಗಳು ಸಾರ್ವಜನಿಕ ಸಭ್ಯತೆಯಿಂದ ಕೂಡಿರಬೇಕು. ಜೊತೆಗೆ, ನಾಗರಿಕರಿಗೆ ಮಾದರಿಯಾಗಬೇಕು.

ಆನಂದ ರಾಮತೀರ್ಥ, ಜಮಖಂಡಿ

'ಕಾವೇರಿ'ಗೂ ಜಗ್ಗದ ಲಂಚಾವತಾರ

ಉಪ ನೋಂದಣಾಧಿಕಾರಿ ಕಚೇರಿಯಲ್ಲಿ 'ಕಾವೇರಿ-2.0' ತಂತ್ರಾಂಶ ಬಂದ ಮೇಲೆ ಎಲ್ಲವೂ ಆನ್‌ಲೈನ್ ಆಗುತ್ತದೆ. ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ. ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂದು ಬೊಬ್ಬೆ ಹಾಕಿದ ಸರ್ಕಾರ ಈಗ ಏನೂ ಕಾಣದಂತೆ ಕಣ್ಮುಚ್ಚಿ ಕುಳಿತಿದೆ. ಮಧ್ಯವರ್ತಿಗಳ ಉಪಟಳ ಜಾಸ್ತಿಯಾಗಿದೆ. ಅಧಿಕಾರಿಗಳ ಭ್ರಷ್ಟಾಚಾರ ಪರ್ಸೆಂಟೇಜ್ ಮೇಲೆ ನಿಂತಿದೆ. ಸಂಬಂಧಪಟ್ಟ ಪತ್ರಗಳಲ್ಲಿ ಏನೇ ದೋಷವಿದ್ದರೂ ಕೊಡುವವರು, ತೆಗೆದುಕೊಳ್ಳುವವರೇ ಜವಾಬ್ದಾರರು ಎಂದು ಹೇಳಿ, ಅಧಿಕಾರಿಗಳು ನುಣುಚಿಕೊಳ್ಳುತ್ತಿದ್ದಾರೆ. ಈ ಪತ್ರಗಳಿಗೆ ಪತ್ರ ಬರಹಗಾರರ ಅವಶ್ಯಕತೆಯೇನಾದರೂ ಇದೆಯಾ? ಸ್ವಯಂ ಘೋಷಣೆ ಮಾಡಿಕೊಳ್ಳಬಹುದಲ್ಲವೇ?

ಶ್ರುತಿ ಎ.ಸಿ. ಅನುಮಾನಹಳ್ಳಿ, ರಾಮನಗರ

ಬಡವರಿಗೆ ಕೈಗೆಟುಕದ ಶಿಕ್ಷಣ

ಬೆಂಗಳೂರಿನಲ್ಲಿರುವ ನನ್ನ ಸಹೋದರಿ ತನ್ನ ಮೊಮ್ಮಗನಿಗೆ ಮುಂಬರುವ ಶೈಕ್ಷಣಿಕ ವರ್ಷಕ್ಕೆ ಒಂದನೇ ತರಗತಿಗೆ ಪ್ರವೇಶ ಪಡೆಯಲು ಪ್ರತಿಷ್ಠಿತ ಶಾಲೆಗೆ ಕರೆದುಕೊಂಡು ಹೋಗಿದ್ದಳು. 'ವರ್ಷಕ್ಕೆ ಆ ಶಾಲೆಯಲ್ಲಿ ಶಿಕ್ಷಣ ಕೊಡಿಸಲು ಸುಮಾರು ₹2 ಲಕ್ಷ ಖರ್ಚಾಗುತ್ತದೆ. ಬೆಂಗಳೂರಿನಲ್ಲಿರುವ ಬಹಳಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲಾ ಶುಲ್ಕ ಇಷ್ಟೇ ಇರುತ್ತದೆ' ಎಂದು ಹೇಳಿದಳು. ಇದನ್ನು ಕೇಳಿ 'ಅಬ್ಬಾ ಇಷ್ಟೊಂದಾ...' ಅನ್ನಿಸಿತು. ಹಾಗಾದರೆ, ಮಹಾನಗರಗಳಲ್ಲಿ ಚಿಕ್ಕ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಹಣ ಇದ್ದವರಿಗಷ್ಟೆ ಸಾಧ್ಯವೇ? ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಸಂಪೂರ್ಣ ವ್ಯಾವಹಾರಿಕ ಆಗಿರುವುದಕ್ಕೆ ಯಾರು ಹೊಣೆ? ಇದಕ್ಕೆ ಯಾರನ್ನು ದೂಷಿಸುವುದು?

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ದಸರಾ ಮುಕುಟಕ್ಕೆ ಮತ್ತೊಂದು ಗರಿ

ಈ ಬಾರಿ ಮೈಸೂರು ದಸರಾ ಮಹೋತ್ಸವವನ್ನು ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರು ಉದ್ಘಾಟಿಸಲಿರುವುದು ಸಂತಸ ತಂದಿದೆ. ಬಾನು ಅವರು, ರೈತ ಸಂಘ ಹಾಗೂ ಕನ್ನಡ ಚಳವಳಿಯ ಒಡನಾಡಿಯೂ ಹೌದು. ಅವರಿಂದ ಉದ್ಘಾಟನೆ ಆಗಲಿರುವುದು ದಸರಾ ಮಹೋತ್ಸವಕ್ಕೆ ಮತ್ತೊಂದು ಗರಿ ಸೇರ್ಪಡೆಯಾದಂತಾಗಲಿದೆ.

ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ಸಾಂವಿಧಾನಿಕ ಮಾರ್ಗ ಪಾಲಿಸಲಿ

ಕರ್ನಾಟಕದ ರಾಜಕೀಯ ಪಕ್ಷವೊಂದರ ಸದಸ್ಯರು ಭ್ರಷ್ಟಾಚಾರ ನಿರ್ಮೂಲನೆ ಅಭಿಯಾನದ ಹೆಸರಿನಲ್ಲಿ ಸರ್ಕಾರಿ ಕಚೇರಿಗಳಿಗೆ ದಿಢೀರನೆ ಗುಂಪಾಗಿ ಪ್ರವೇಶಿಸಿ ಹಲವು ಪ್ರಶ್ನೆಗಳನ್ನು ಕೇಳುವುದಲ್ಲದೆ, ಅದನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುತ್ತಿದ್ದಾರೆ. ಸರ್ಕಾರಿ ವಾಹನವನ್ನು ಅಡ್ಡಗಟ್ಟಿ ಲಾಗ್ ಪುಸ್ತಕ ಕೇಳುವುದೂ ನಡೆದಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕಾದದ್ದು ಅತ್ಯಗತ್ಯ. ಆದರೆ, ಅದನ್ನು ನಿರ್ವಹಿಸಬೇಕಾದ ರೀತಿಯೂ ಪ್ರಜಾಸತ್ತಾತ್ಮಕವಾಗಿಯೇ ಇರಬೇಕಲ್ಲವೇ? ಸರ್ಕಾರಿ ನೌಕರರ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿಬಂದರೆ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಮೇಲಧಿಕಾರಿಗೆ, ಲೋಕಾಯುಕ್ತರಿಗೆ ದೂರು ನೀಡಬಹುದು. ಆದಾಗ್ಯೂ ಕ್ರಮ ಜರುಗಿಸದಿದ್ದಾಗ ನ್ಯಾಯಾಲಯದ ಮೊರೆ ಹೋಗಬಹುದು. ಇದನ್ನು ಬದಿಗೊತ್ತಿ ನೇರವಾಗಿ ಕಾರ್ಯಾಚರಣೆಗೆ ಇಳಿಯುವುದು ಸರಿಯಲ್ಲ.

ಭೀಮಾನಂದ ಮೌರ್ಯ, ಮೈಸೂರು

ಮೂಲ ಜಾತಿಗೆ ಅಪಚಾರ ಬೇಡ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಹಿಂದುಳಿದ ವರ್ಗಕ್ಕೆ ಸೇರಿದ ಜಾತಿಗಳ ಹೆಸರುಗಳನ್ನು ಘೋಷಿಸಿದೆ. ಅದರಲ್ಲಿ ಕ್ರಮಸಂಖ್ಯೆ 190 ಮತ್ತು ಕ್ರಮಸಂಖ್ಯೆ 319ರಲ್ಲಿ ಅನುಕ್ರಮವಾಗಿ 'ಬಿಲ್ಲವ ಕ್ರಿಶ್ಚಿಯನ್' ಮತ್ತು 'ಈಡಿಗ ಕ್ರಿಶ್ಚಿಯನ್' ಎಂದು ಪ್ರಕಟಿಸಲಾಗಿದೆ. ಯಾರು, ಯಾವ ಧರ್ಮವನ್ನಾದರೂ ಸೇರಿಕೊಳ್ಳಲಿ, ಅದು ಅವರವರ ಇಚ್ಛೆ. ಆದರೆ, ಇನ್ನೊಂದು ಧರ್ಮ ಸೇರಿಕೊಂಡು ಮೂಲ ಜಾತಿಯ ಹೆಸರು ಬಳಸುವುದು ಖಂಡನೀಯ. ಆಯೋಗವು ಇಂತಹ ದ್ವಂದ್ವ ನಿಲುವಿನ ಹೆಸರನ್ನು ಮಾನ್ಯ ಮಾಡಬಾರದು.

ಗಣಪತಿ ನಾಯ್ಕ್, ಕಾನಗೋಡ

ಚುರುಮುರಿ

ಕೋಟಿ ವೀರ ಜನಸೇವಕರು

• ಸುಮಂಗಲಾ

'ಒಂಬೈನೂರು ಮೂವತ್ತಾರು ಕೋಟಿ ಅಂದ್ರ 936ರ ಮುಂದೆ ಆರು ಸೊನ್ನೆ... ಅಬ್ಬಬ್ಬಾ!' ಬೆಕ್ಕಣ್ಣ ವರದಿ ಓದುತ್ತ ಮೂಗಿನ ಮೇಲೆ ಬೆರಳಿಟ್ಟುಕೊಂಡು ಉದ್ಗರಿಸಿತು.

'ಆರಲ್ಲಲೇ, ಏಳು ಸೊನ್ನೆ ಬರತಾವು. ಲೆಕ್ಕದಾಗೆ ನೀ ಪೂರಾ ಸೊನ್ನೆ ಆಗಿದ್ರೂ, ಅಂಕಿಗಳ ಮುಂದೆ ಸೊನ್ನೆ ಎಲ್ಲಿ, ಎಷ್ಟು ಬರತಾವು ಅಂತ ಗೊತ್ತಿರಬಕು' ಎಂದು ತಿದ್ದಿದೆ.

'₹936 ಕೋಟಿ ಆಸ್ತಿಯಿರೋ ಚಂದ್ರಬಾಬು ನಾಯ್ಡು ಅಂಕಲ್ಲು ಇಡೀ ದೇಶದಾಗೆ ಶ್ರೀಮಂತ ಸಿಎಮ್ಮು' ಎಂದು ವರದಿ ತೋರಿಸಿತು.

'₹51.9 ಕೋಟಿ ಆಸ್ತಿ ಇರೋ ನಮ್ ಸಿದ್ದೂ ಅಂಕಲ್ಲು ಮೂರನೇ ಶ್ರೀಮಂತ ಸಿಎಂ! ಬಾಪ್‌ರೇ!' ವರದಿ ಓದುತ್ತ ನಾನೂ ಮೂಗಿನ ಮೇಲೆ ಬೆರಳಿಟ್ಟೆ.

'ಸರ್ಕಾರದ ಕೆಲಸ ದೇವರ ಕೆಲಸ... ಜನಸೇವೆಯೇ ಧನಾರ್ಜನ ಸೇವೆ! ಹಿಂಗಾಗಿ ಇವರಿಗೆಲ್ಲ ಕುಬೇರ ದೇವರು ಒಲಿದಿರತಾನೆ' ಎಂದು ಬೆಕ್ಕಣ್ಣ ನಕ್ಕಿತು.

'ಮೂವತ್ತರಲ್ಲಿ 28 ಸಿಎಂಗಳು ಕೋಟ್ಯಧಿಪತಿಗಳು, ಕೊನೇ ಪಕ್ಷ ಒಂದು ಕೋಟಿ ಆಸ್ತಿ ಇದ್ದವರು. ₹15 ಲಕ್ಷ ಆಸ್ತಿಯಿರೋ ಬಂಗಾಳದ ಮಮತಾ ದೀದಿ, ₹55 ಲಕ್ಷ ಆಸ್ತಿಯಿರೋ ಕಾಶ್ಮೀರದ ಓಮರ್ ಅಬ್ದುಲ್ಲಾ, ಇವರಿಬ್ಬರೇ ಲಕ್ಷಾಧಿಪತಿಗಳು... ಪಾಪ...' ಎಂದು ನಾನು ಲೊಚಗುಟ್ಟಿದೆ.

'ರಾಜಕಾರಣಿ = ಕೋಟ್ಯಧಿಪತಿ ಅಂತ ಸಮೀಕರಣನೇ ಐತಿ. ಅಂತಾದ್ರಲ್ಲಿ ಇವರಿಬ್ಬರು ಅದೆಂಗೆ ರೊಕ್ಕನೇ ಮಾಡಿಕೊಂಡಿಲ್ಲ ಅಂತ?' ಬೆಕ್ಕಣ್ಣ ಹುಬ್ಬೇರಿಸಿತು.

'ಇಷ್ಟ್ ವರ್ಷ ರಾಜಕಾರಣದಾಗೆ ಇದ್ದು ಒಂದ್ ಕೋಟಿ ಗಳಿಸಿಲ್ಲ ಅಂದ್ರ ರಾಜಕಾರಣದ ಕಿಮ್ಮತ್ತನ್ನೇ ಕಳಿತೀರಿ ನೀವು ಅಂತ ಉಳಿದ ಸಿಎಮ್ಮುಗಳು ಅವರಿಬ್ಬರಿಗೂ ಬೈತಿರಬೇಕು' ಎಂದೆ.

'ನಿಮಗಿಂತ ನಾನೇ ವಾಸಿ... ಭಿಕ್ಷೆ ಬೇಡೂ ಕೆಲಸದಲ್ಲೇ ₹7.5 ಕೋಟಿ ಆಸ್ತಿ ಮಾಡೀನಿ. ನನ್ನ ನೋಡಿ ಕಲೀರಿ ಅಂತ ಮುಂಬೈನ ಭರತ್ ಜೈನ್ ಅನ್ನೋ ಭಿಕ್ಷುಕ ಇಬ್ಬರಿಗೂ ಹೇಳ್ಯಾನಂತೆ' ಎಂದು ಬೆಕ್ಕಣ್ಣ ಮುಸಿ ಮುಸಿ ನಕ್ಕಿತು.

ಸಂಗತ

ಷಡ್ಯಂತ್ರ: ಯಾರಿಂದ? ಯಾರ ವಿರುದ್ಧ?

ರಾಜಕಾರಣಿಗಳು ಇತ್ತೀಚೆಗೆ ಹೆಚ್ಚು ಬಳಸಿರುವ ಪದ 'ಷಡ್ಯಂತ್ರ'. ಈ ಷಡ್ಯಂತ್ರ ಸತ್ಯದ ವಿರುದ್ಧವೇ ನಡೆದಂತಿದೆ, ಅದಕ್ಕೆ ರಾಜಕಾರಣಿಗಳ ಕುಮ್ಮಕ್ಕೂ ಇರುವಂತಿದೆ.

• ಚಂದ್ರಕಾಂತ ವಡ್ಡು

'ಷಡ್ಯಂತ್ರ' ಪದ ಇತ್ತೀಚೆಗೆ ರಾಜಕಾರಣಿಗಳ ಬಾಯಿಯಲ್ಲಿ ಅತಿಯಾಗಿ ಕೇಳಿಬರುತ್ತಿದೆ. ಸಾಮಾನ್ಯವಾಗಿ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬರುವ 'ಷಡ್ಯಂತ್ರ' ರೀತಿಯ ಸಮುಚ್ಚಯ ಪದಗಳು ಕನ್ನಡ ವ್ಯಾಕರಣದಲ್ಲಿ ಕಾಣಸಿಗುವುದಿಲ್ಲ. ಷಡ್ಯಂತ್ರದಲ್ಲಿ 'ಷಟ್' ಮತ್ತು 'ಯಂತ್ರ' ಪದಗಳ ಸಂಯೋಜನೆಯಿದೆ. ಇದರ ಭಾವಾರ್ಥ, ವಿರೋಧಿಗಳನ್ನು ಹಣಿಯಲು ಆರು (ಷಟ್) ಸಾಧನ (ಯಂತ್ರ) ಬಳಸಿ ಹೆಣೆದ ಪಿತೂರಿ ಎಂದಾಗುತ್ತದೆ. ಆ ಆರು ಸಾಧನಗಳ ಬಗೆಗೆ ಖಚಿತ ಮಾಹಿತಿ ಇರುವಂತಿಲ್ಲ. ತಾಂತ್ರಿಕ ಆಚರಣೆಗಳಲ್ಲೂ 'ಯಂತ್ರ' ಪದಬಳಕೆ ಕಾಣಬಹುದು. ಬಹುಶಃ, ಈ ಶಬ್ದದ ವ್ಯುತ್ಪತ್ತಿ ಬಗೆಗೆ ಅಷ್ಟೇನೂ ಅರಿವು, ಆಸಕ್ತಿ ಇರದ ರಾಜಕಾರಣಿಗಳು ಸಮಯಾನುಸಾರ ಸರಾಗವಾಗಿ ಬಳಸಿ ಮುಗಿಸುತ್ತಾರೆ.

'ಧರ್ಮಸ್ಥಳ ಪ್ರಕರಣದ ಹಿಂದೆ ಷಡ್ಯಂತ್ರ ಇದೆ, ಆ ರಹಸ್ಯ ಶೀಘ್ರದಲ್ಲೇ ಹೊರಬರಲಿದೆ' ಎಂಬುದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಖಚಿತ ಅಭಿಪ್ರಾಯ. ಧರ್ಮಸ್ಥಳ ಪ್ರಕರಣ ಕುರಿತು ತಮ್ಮದೇ ಸರ್ಕಾರ ರಚಿಸಿರುವ ಎಸ್.ಐ.ಟಿ. ತನಿಖೆ ನಡೆಸುತ್ತಿರುವ ಸೂಕ್ಷ್ಮ ಸಂದರ್ಭದಲ್ಲಿಯೇ ಡಿಸಿಎಂ ಆಡಿರುವ ಮಾತುಗಳ ಪರಿಣಾಮ ಸಣ್ಣದಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವವರ ಇಂತಹ ಮಾತುಗಳು ಎಸ್.ಐ.ಟಿ. ಅಧಿಕಾರಿಗಳು ಮತ್ತು ಹೋರಾಟಗಾರರ ನೈತಿಕತೆಯನ್ನು ನಲುಗಿಸುವುದಷ್ಟೇ ಅಲ್ಲ, ನಾಗರಿಕರ ಭಾವನೆಗಳನ್ನು ಸಹ ಕದಡಬಲ್ಲವು. ಅಷ್ಟಕ್ಕೂ ಶಿವಕುಮಾರ್ ಉಲ್ಲೇಖಿಸುವ ಷಡ್ಯಂತ್ರ ರೂಪಿಸಿದವರು ಯಾರು? ಆ ಸಂಚಿನಲ್ಲಿ ಅಡಗಿರುವ ಆರು ತಂತ್ರಗಳು ಯಾವುವು?

ವಿಧಾನಸಭೆಯ ಕಲಾಪದಲ್ಲಿ ವಿಪಕ್ಷ ನಾಯಕ ಆರ್. ಅಶೋಕ, 'ಒಬ್ಬ ವ್ಯಕ್ತಿ, ಮುಖ್ಯಮಂತ್ರಿ ಸಿದ್ದರಾಮಯ್ಯ 24 ಕೊಲೆ ಮಾಡಿದ್ದಾರೆ ಎಂದಿದ್ದಾರೆ. ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಹೇಗೆ?' ಎಂದು ವಾದಿಸಿದ್ದಾರೆ. ಬಿಜೆಪಿಯ ಇತರ ಸದಸ್ಯರು ಕೂಡ, 'ಮುಖ್ಯಮಂತ್ರಿ ಕೊಲೆಗಾರ ಎಂದು ಹೇಳಿರುವುದು ಈ ಸದನಕ್ಕೆ ಮಾಡಿದ ಅವಮಾನ, ತನಿಖೆ ನಡೆಸಿ' ಎಂದು ಒತ್ತಾಯಿಸಿದ್ದಾರೆ. ಮೇಲ್ನೋಟಕ್ಕೆ ಇವರೆಲ್ಲರ ಮಾತಿನ ಗುರಿ ಇದ್ದುದು 'ಜಸ್ಟೀಸ್ ಫಾರ್ ಸೌಜನ್ಯ' ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರೆಡೆ. ವಾಸ್ತವವಾಗಿ, ಈ ಹಿಂದೆ ಬೆಳ್ತಂಗಡಿಯ ಬಹಿರಂಗ ಸಭೆಯಲ್ಲಿ ಸಿದ್ದರಾಮಯ್ಯ ಮೇಲೆ ಕೊಲೆ ಆರೋಪ ಮಾಡಿದ್ದು ಬಿಜೆಪಿ ಶಾಸಕ ಹರೀಶ್ ಪೂಂಜ. ಹಾಗಾದರೆ ತಮ್ಮದೇ ಪಕ್ಷದ ಶಾಸಕ ಪೂಂಜ ಅವರ ವಿರುದ್ಧ ಪಕ್ಷದ ಇನ್ನೊಂದು ಬಣ ಷಡ್ಯಂತ್ರ ರೂಪಿಸಿದೆಯೇ?

ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಮುಂದಾದ ಉಪಮುಖ್ಯಮಂತ್ರಿ ಮತ್ತು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು, ಸದನದಲ್ಲಿ ಸಾಂದರ್ಭಿಕವಾಗಿ ಆಡಿದ ಮಾತುಗಳ ಹೊರದನಿ ಒಂದಾದರೆ, ಒಳಾರ್ಥ ಮತ್ತೊಂದು ಆಗಿತ್ತು! 'ಮುಖ್ಯಮಂತ್ರಿಗಳು ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾಲಯದಲ್ಲಿ ಪ್ರತೀ ವರ್ಷ ಚಿಕಿತ್ಸೆ ಪಡೆಯುತ್ತಾರೆ. ಅವರಿಗೆ ಆ ಕ್ಷೇತ್ರದ ಮೇಲೆ ಅಪಾರ ನಂಬಿಕೆ' ಎಂದು ಹೇಳುತ್ತಾರೆ ಶಿವಕುಮಾರ್. ಅವರ ಆಪ್ತ ಶಾಸಕ ಬಾಲಕೃಷ್ಣ, 'ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಸಹೋದರ ಮುಖ್ಯಮಂತ್ರಿಯನ್ನು ಭೇಟಿಯಾಗಿ ಎಸ್.ಐ.ಟಿ. ರಚನೆ ಸ್ವಾಗತಿಸಿದ್ದಕ್ಕೆ ತಾವೇ ಸಾಕ್ಷಿ' ಎಂದು ಹೇಳಿಕೊಂಡಿದ್ದಾರೆ.

ಇನ್ನೊಂದೆಡೆ, ಸನ್ನಿವೇಶದ ರಾಜಕೀಯ ಫಸಲು ತೆಗೆಯಲು ಮುಂದಾಗಿರುವ ಬಿಜೆಪಿ ನಿರೀಕ್ಷೆಯಂತೆ 'ಧರ್ಮಯುದ್ಧ' ಘೋಷಿಸಿದೆ. ಧರ್ಮಸ್ಥಳದ ವಿರುದ್ಧ ಕಾಂಗ್ರೆಸ್ ಸರ್ಕಾರ ಮತ್ತು ಹೈಕಮಾಂಡ್ ಷಡ್ಯಂತ್ರ ಮಾಡಿದೆ ಎಂಬುದು ಈ ಪಕ್ಷದ ಪ್ರತಿಪಾದನೆ. ಧಾರ್ಮಿಕ ಕ್ಷೇತ್ರಕ್ಕೆ ಕಳಂಕ ತರುವ ಉದ್ದೇಶವುಳ್ಳ ಈ ಪ್ರಕರಣದ ಹಿಂದೆ ಎಡಪಂಥೀಯ ಶಕ್ತಿಗಳ ಷಡ್ಯಂತ್ರ ಇರುವುದಾಗಿ ಆರೋಪಿಸಿರುವ ಈ ಪಕ್ಷದ ನಾಯಕರು ಎನ್.ಐ.ಎ. ಮತ್ತು ಇ.ಡಿ. ಮಧ್ಯಪ್ರವೇಶಕ್ಕೆ ಆಗ್ರಹಿಸಿದ್ದಾರೆ. ಆದರೆ ಧರ್ಮಸ್ಥಳ ಗ್ರಾಮದಲ್ಲಿ ಸಂಭವಿಸಿವೆ ಎನ್ನಲಾದ ಅಸಹಜ ಸಾವು–ಕೊಲೆಗಳ ಬಗ್ಗೆ ನ್ಯಾಯಯುತ ತನಿಖೆಯಾಗಬೇಕೆಂದು ಹೋರಾಟ ನಿರತರಾದವರಲ್ಲಿ ಎಡಪಂಥೀಯ ಒಲವಿನ ವಿಚಾರವಾದಿಗಳಷ್ಟೇ ಇಲ್ಲ; ಇವರಲ್ಲಿ ಗಾಢ ಧಾರ್ಮಿಕ ನಂಬಿಕೆ–ಶ್ರದ್ಧೆ ಹೊಂದಿರುವ ಅನೇಕ ವಕೀಲರು, ಸಾಹಿತಿಗಳು, ಪತ್ರಕರ್ತರು, ವಿದ್ಯಾರ್ಥಿಗಳು ಮತ್ತು ಸಂಘಟಕರು ಸೇರಿದ್ದಾರೆ. ಸ್ವತಃ ಮಹೇಶ್ ಶೆಟ್ಟಿ ತಿಮರೋಡಿ 'ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆ'ಯ ಅಧ್ಯಕ್ಷರು.

ಹೀಗಿರುವಾಗ, ಧಾರ್ಮಿಕ ನಂಬಿಕೆಯ ಧರ್ಮಸ್ಥಳ ಕ್ಷೇತ್ರ ಮತ್ತು ಪ್ರಕರಣಗಳಿಗೆ ಕಾರಣರಾದ ಆರೋಪಿಗಳನ್ನು ಜನರೆದುರು ಪ್ರತ್ಯೇಕವಾಗಿ ಬಿಂಬಿಸುವಲ್ಲಿ ಹೋರಾಟಗಾರರು ವಿಫಲರಾದರೇ? ದೇವರು, ಧರ್ಮ, ಆಚರಣೆಗಳನ್ನು ಜನರ ನಂಬಿಕೆಯ ಭಾಗವಾಗಿ ಗೌರವಿಸುವುದು ನಾಗರಿಕ ಮತ್ತು ಸಾಂವಿಧಾನಿಕ ಕರ್ತವ್ಯ. ಹಾಗೆಯೇ ಆಸ್ತಿಕ ಭಾವನೆಗಳನ್ನು ಅನ್ಯಾಯದ ರಕ್ಷಣೆಗೆ ಬಳಸುವುದು ಹೇಯ ಕೃತ್ಯ. ಈ ಕುರಿತು ನಿಖರ ತಿಳಿವಳಿಕೆ ಅತ್ಯಗತ್ಯ.

ದೂರುದಾರರು, ಹೋರಾಟಗಾರರು ಬಂಧನಕ್ಕೆ ಒಳಗಾಗುವ ವಿದ್ಯಮಾನವು ನ್ಯಾಯಯುತ ಆಡಳಿತ ಹಾಗೂ ಆರೋಗ್ಯಪೂರ್ಣ ಸಾಮಾಜಿಕ, ನ್ಯಾಯಿಕ, ನಾಗರಿಕ ವ್ಯವಸ್ಥೆಯ ಲಕ್ಷಣವಂತೂ ಅಲ್ಲ. ಒಟ್ಟಾರೆ, 'ಒದ್ದು ಒಳಗೆ ಹಾಕುವ' ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂಚೂರು ಸೈದ್ಧಾಂತಿಕ ಸಂವೇದನೆ ಉಳಿಸಿಕೊಂಡಿರುವ ಸಿದ್ದರಾಮಯ್ಯ ಸಂದಿಗ್ಧತೆಗೆ ಸಿಲುಕಿದಂತೆ ಭಾಸವಾಗುತ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದತ್ತು ಗೊಂದಲ ಬೇಕಿದೆ ಪರಿಹಾರ

ಭಾರತದಲ್ಲಿ ಮೂರು ಕೋಟಿಗೂ ಅಧಿಕ ಅನಾಥ, ಪರಿತ್ಯಕ್ತ ಮತ್ತು ನಿರ್ಗತಿಕ (ಒಎಎಸ್) ಮಕ್ಕಳಿದ್ದಾರೆ. ಇವರಲ್ಲಿ ಹೆಚ್ಚಿನವರು ಹೆತ್ತವರಿಗೆ ಬೇಡವಾದವರು; ಕೆಲವರು ಹೆತ್ತವರನ್ನು ಕಳೆದುಕೊಂಡವರು. ವಿವಿಧ ಕಾರಣಗಳಿಂದ ಪೋಷಕರು, ಬಂಧುಬಳಗದಿಂದ ದೂರವಾದ ಇಂಥ ಮಕ್ಕಳು ಒಂದೆಡೆ ಇದ್ದರೆ, ಮಕ್ಕಳನ್ನು ದತ್ತು ಸ್ವೀಕಾರ ಮಾಡಲು ಸಿದ್ಧವಾಗಿರುವ ಪೋಷಕರು ಮತ್ತೊಂದೆಡೆ ಇದ್ದಾರೆ. ಆದರೆ, ಭಾರತದಲ್ಲಿ ದತ್ತು ಸ್ವೀಕಾರ ಪ್ರಕ್ರಿಯೆ ಸಂಕೀರ್ಣವಾಗಿದೆ. ಮಗು ದತ್ತು ಪಡೆಯಲು ಮೂರು ವರ್ಷಕ್ಕಿಂತಲೂ ಹೆಚ್ಚು ಕಾಯಬೇಕಿದೆ. ಇದು ಪೋಷಕರು ಕಾನೂನುಬಾಹಿರವಾಗಿ ದತ್ತು ಪಡೆಯಲು ಮತ್ತು ದತ್ತು ನಿರ್ಧಾರದಿಂದ ಹಿಂದೆ ಸರಿಯಲು ಕಾರಣವಾಗುತ್ತಿದೆ

ಪ್ರಜಾವಾಣಿ ವಾರ್ತೆ

ಮಕ್ಕಳನ್ನು ದತ್ತು ಪಡೆಯುವ ವಿಚಾರದಲ್ಲಿ ದೇಶದ ಜನರ ಮನೋಭಾವ ಸಾಕಷ್ಟು ಬದಲಾಗಿದೆ. ವೈದ್ಯಕೀಯ ಕಾರಣಗಳಿಂದ ಮಕ್ಕಳಾಗದೇ ಇರುವ ದಂಪತಿ ಅಷ್ಟೇ ಅಲ್ಲದೇ, ಮಕ್ಕಳು ಹೊಂದಲು ಇಚ್ಛಿಸದೇ ಇರುವವರು, ಅನಾಥ ಮಕ್ಕಳಿಗೆ ಬದುಕು ಕೊಡಲು ಬಯಸುವವರು ಹೀಗೆ ಅನೇಕರು ಮಕ್ಕಳನ್ನು ದತ್ತು ಪಡೆಯಲು ಮುಂದಾಗುತ್ತಿದ್ದಾರೆ. ಆದರೆ, ಭಾರತದಲ್ಲಿ ಕೋಟ್ಯಂತರ ಮಕ್ಕಳು ನಿರ್ಗತಿಕರಾಗಿದ್ದರೂ ಕಾನೂನು ಪ್ರಕ್ರಿಯೆಯ ತೊಡಕು ಮತ್ತು ಸಂಕೀರ್ಣತೆಯಿಂದ ಅನೇಕ ಪೋಷಕರಿಗೆ ಮಕ್ಕಳನ್ನು ದತ್ತು ಪಡೆಯಲು ಸಾಧ್ಯವಾಗುತ್ತಿಲ್ಲ.

ತಂದೆ–ತಾಯಿ, ಬಂಧು ಬಳಗದಿಂದ ದೂರವಾದ, ಅನಾಥ, ಪರಿತ್ಯಕ್ತ ಮತ್ತು ನಿರ್ಗತಿಕ ಮಕ್ಕಳನ್ನು ದತ್ತು ನೀಡುವ ಪದ್ಧತಿ ದೇಶದಲ್ಲಿ ಚಾಲ್ತಿಯಲ್ಲಿದೆ. ಒಂದು ವರದಿಯ ಪ್ರಕಾರ, ಭಾರತದಲ್ಲಿ 3 ಕೋಟಿ ಅನಾಥ ಮಕ್ಕಳಿದ್ದಾರೆ. ದೊಡ್ಡ ಸಂಖ್ಯೆಯ ಮಕ್ಕಳು ಬಾಲಮಂದಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಆದರೆ, ದತ್ತು ಸ್ವೀಕಾರಕ್ಕೆ ಅರ್ಹರಾಗಿರುವ ಮಕ್ಕಳ ಸಂಖ್ಯೆ ಮಾತ್ರ ತೀರಾ ಕಡಿಮೆ ಇದೆ. ದತ್ತು ಪಡೆಯಲು ನೋಂದಣಿ ಮಾಡಿಕೊಂಡಿರುವ 13 ಪೋಷಕರಿಗೆ ಒಂದು ಮಗು ಮಾತ್ರ ಲಭ್ಯವಿದೆ. ದತ್ತು ನೋಂದಣಿಗೆ ಕಾಯುತ್ತಿರುವ ಪೋಷಕರಲ್ಲಿ ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ ಮತ್ತು ಪಶ್ಚಿಮ ಬಂಗಾಳದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ವರದಿಯೊಂದು ಹೇಳಿದೆ.

ದತ್ತು ಸ್ವೀಕಾರದಲ್ಲಿ ಹೆಚ್ಚಳ: ಭಾರತದಲ್ಲಿ ಕಳೆದೊಂದು ದಶಕದಲ್ಲಿ ದತ್ತು ಸ್ವೀಕಾರದ ಪ್ರಮಾಣ ಹೆಚ್ಚಾಗಿದೆ. 2024–25ರಲ್ಲಿ 4,515 ಮಕ್ಕಳನ್ನು ದತ್ತು (ಸ್ವದೇಶಿ ಮತ್ತು ವಿದೇಶಿ ಪೋಷಕರಿಗೆ) ನೀಡಲಾಗಿದ್ದು, 2015ರ ಬಳಿಕ ಇದು ಅತಿ ದೊಡ್ಡ ಸಂಖ್ಯೆಯಾಗಿದೆ. ಕೋವಿಡ್ ಕಾಲದಲ್ಲಿ ದತ್ತು ಸ್ವೀಕಾರದ ಸಂಖ್ಯೆ ಇಳಿಮುಖವಾಗಿತ್ತು. ಅದರ ನಂತರ ಮತ್ತೆ ಏರುಗತಿಯಲ್ಲಿ ಸಾಗಿದೆ.

ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿರುವ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್‌ಎ) ಮಕ್ಕಳ ದತ್ತು ಸ್ವೀಕಾರ ಪ್ರಕ್ರಿಯೆಯ ನಿರ್ವಹಣೆ ಮಾಡುತ್ತದೆ. ಸಿಎಆರ್‌ಎ ಕೇಂದ್ರೀಕೃತ ಡಿಜಿಟಲ್ ವ್ಯವಸ್ಥೆಯಾಗಿದ್ದು, ಕಾನೂನು ಸಂಬಂಧಿ ಪ್ರಕ್ರಿಯೆ ನಡೆಸಲು ಇದನ್ನು ರೂಪಿಸಲಾಗಿದೆ. ಪ್ರತಿ ರಾಜ್ಯದಲ್ಲಿಯೂ ರಾಜ್ಯ ದತ್ತು ಸಂಪನ್ಮೂಲ ಸಂಸ್ಥೆ (ಎಸ್‌ಎಆರ್‌ಎ) ಇದೆ. ಇವುಗಳ ಮೂಲಕವೇ ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ಪ್ರತಿ ಪ್ರಕ್ರಿಯೆಯೂ ನಡೆಯುತ್ತದೆ. ಮಗು ದತ್ತು ಪಡೆಯಲು ಬಯಸುವ ಪೋಷಕರು ಸಿಎಆರ್‌ಎ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

1,914 (ಆಗಸ್ಟ್ 2025ರ ವರೆಗೆ) 2025–26ರಲ್ಲಿ ದತ್ತು ಸ್ವೀಕಾರವಾದ ಮಕ್ಕಳು

36,635 ದತ್ತು ಸ್ವೀಕಾರಕ್ಕಾಗಿ ನೋಂದಣಿ ಮಾಡಿಸಿರುವ ಪೋಷಕರು

2,756 ದತ್ತು ಸ್ವೀಕಾರಕ್ಕೆ ಲಭ್ಯವಿರುವ ಒಟ್ಟು ಮಕ್ಕಳು

1,810 ದತ್ತು ಸ್ವೀಕಾರಕ್ಕೆ ಲಭ್ಯವಿರುವವರ ಪೈಕಿ ವಿಶೇಷ ಅಗತ್ಯದ ಮಕ್ಕಳು

ಯಾವುದೇ ಅನಾಥ, ಪರಿತ್ಯಕ್ತ ಮತ್ತು ನಿರ್ಗತಿಕ ಮಗು ದತ್ತು ನೀಡಲು ಅರ್ಹ ಎಂದು ಕಾನೂನು ಅನ್ವಯ ಘೋಷಣೆಯಾಗಬೇಕು. ಹೀಗೆ ಕಾನೂನಿನ ಸಮ್ಮತಿ ಪಡೆದ ಮಕ್ಕಳ ಸಂಖ್ಯೆ ತೀರಾ ಕಡಿಮೆ ಇದೆ. ಅದಕ್ಕೆ ಹಲವು ಕಾರಣಗಳು.

ಸಂಕೀರ್ಣ, ದೀರ್ಘ ಪ್ರಕ್ರಿಯೆ: ಒಂದು ಮಗು ದತ್ತು ಸ್ವೀಕಾರಕ್ಕೆ ಅರ್ಹ ಎಂದು ಪರಿಗಣಿಸಬೇಕಾದರೆ, ಆ ಮಗುವಿಗೆ ಪೋಷಕ/ಪರ್ಯಾಯ ಪೋಷಕ ಇಲ್ಲ ಎನ್ನುವುದು ಮೊದಲು ಸ್ಪಷ್ಟವಾಗಬೇಕು. ಅದನ್ನು ಪತ್ತೆ ಹಚ್ಚುವ ಜವಾಬ್ದಾರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (ಡಿಸಿಪಿಯು) ಮತ್ತು ಮಕ್ಕಳ ಕಲ್ಯಾಣ ಸಮಿತಿಗಳದ್ದು (ಸಿಡಬ್ಲ್ಯುಸಿ). ಪೊಲೀಸ್ ತನಿಖೆ, ಸಾಮಾಜಿಕ ಹಿನ್ನೆಲೆಯ ಪರಿಶೀಲನೆ ಮತ್ತು ಮಾಧ್ಯಮಗಳಲ್ಲಿ ಜಾಹೀರಾತು ನೀಡುವ ಮೂಲಕ ಮಗುವಿನ ಕುಟುಂಬದ, ಪೋಷಕರು, ಸಂಬಂಧಿಗಳ ಹುಡುಕಾಟ ನಡೆಸಲಾಗುತ್ತದೆ. ದತ್ತು ಪ್ರಕ್ರಿಯೆಯಲ್ಲಿ ಈ ಹಂತದಲ್ಲಿಯೇ ಹೆಚ್ಚು ವಿಳಂಬವಾಗುತ್ತಿದೆ ಎನ್ನಲಾಗುತ್ತಿದೆ. ದತ್ತು ಸಂಬಂಧದ ಕಾನೂನು ಮತ್ತು ಆರೋಗ್ಯ ಪರೀಕ್ಷೆಯ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿ (ಡಿಎಂ) ಮತ್ತು ಮುಖ್ಯ ಆರೋಗ್ಯಾಧಿಕಾರಿ (ಸಿಎಂಒ) ನಿರ್ವಹಿಸುತ್ತಾರೆ. ರಾಜ್ಯಗಳ ಮಟ್ಟದಲ್ಲಿ ಇವುಗಳ ನಡುವೆ ಸಮನ್ವಯಕ್ಕಾಗಿ ವಿಶೇಷ ದತ್ತು ಸಂಸ್ಥೆಗಳು (ಎಸ್‌ಎಎ) ಇರುತ್ತವೆ. ಕರ್ನಾಟಕದ 31 ಜಿಲ್ಲೆಗಳಲ್ಲಿ 42 ವಿಶೇಷ ದತ್ತು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರಕ್ರಿಯೆಯಲ್ಲಿ ಹಲವು ಸಮಿತಿ/ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಕರ್ತವ್ಯ ಮತ್ತು ಉತ್ತರಾಧಿಕಾರದ ವಿಚಾರದಲ್ಲಿ ಗೊಂದಲ, ಸಮಸ್ಯೆಗಳಿವೆ. ಕೆಲವು ಜಿಲ್ಲೆಗಳಲ್ಲಿ ವಿಶೇಷ ದತ್ತು ಸಂಸ್ಥೆಗಳು ನಿಷ್ಕ್ರಿಯವಾಗಿರುವುದರಿಂದಲೂ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಮಕ್ಕಳ ರಕ್ಷಣಾ ಕೇಂದ್ರಗಳಲ್ಲಿ (ಸಿಸಿಐ) ಲಕ್ಷಾಂತರ ಮಕ್ಕಳು ಆಶ್ರಯ ಪಡೆದಿದ್ದಾರೆ. ಮಕ್ಕಳನ್ನು ಬೆಳೆಸುವ ಸಾಮರ್ಥ್ಯ ಇಲ್ಲದ ಪೋಷಕರು, ಪೋಷಕರು/ಬಂಧುಗಳು ಇದ್ದೂ ಆರೈಕೆಯ ಸಮಸ್ಯೆ ಇರುವ ಮಕ್ಕಳೂ ಇದರಲ್ಲಿ ಸೇರಿದ್ದಾರೆ. ಇಂಥ ಮಗುವನ್ನು ದತ್ತು ನೀಡಬಹುದೇ ಇಲ್ಲವೇ ಎನ್ನುವುದನ್ನು ಕಂಡುಕೊಳ್ಳುವುದೇ ಸಮಸ್ಯೆಯಾಗಿ ಪರಿಣಮಿಸಿದೆ. ಇದಕ್ಕೆ ಹಲವು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಒಂದು ವೇಳೆ ಪೋಷಕರು ಜೀವಂತವಿದ್ದು, ಮಗುವನ್ನು ತೊರೆದಿದ್ದರೆ, ಮಗುವನ್ನು ಪುನಃ ಸ್ವೀಕರಿಸಲು ಅವರಿಗೆ ಸಮಯ ನೀಡಲಾಗುತ್ತದೆ. ಈ ರೀತಿಯ ತೊಡಕುಗಳಿಂದಾಗಿ ಇಂಥ ಮಕ್ಕಳ ಪೈಕಿ ಪ್ರಸ್ತುತ 2,756 ಮಕ್ಕಳು ಮಾತ್ರ ದತ್ತು ಸ್ವೀಕಾರಕ್ಕೆ ಅರ್ಹರಾಗಿದ್ದಾರೆ.

ಪಾಲನೆಯಾಗದ ನಿಯಮ: ಈ ಹಿಂದೆ ನ್ಯಾಯಾಲಯಗಳು ದತ್ತು ಆದೇಶವನ್ನು ನೀಡುತ್ತಿದ್ದವು. ವಿಳಂಬವನ್ನು ತಪ್ಪಿಸುವ ಉದ್ದೇಶದಿಂದ ಆ ಅಧಿಕಾರವನ್ನು ಜಿಲ್ಲಾಧಿಕಾರಿಗೆ ನೀಡಲಾಯಿತು. ಜತೆಗೆ, ದತ್ತು ಸಂಬಂಧ ದಾಖಲಾಗುವ ಪ್ರಕರಣವನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಅಗತ್ಯವಾದ ಕ್ರಮ ಕೈಗೊಳ್ಳಲು ವಿಶೇಷ ವ್ಯವಸ್ಥೆ ರೂಪಿಸಲಾಯಿತು. ಒಂದೊಂದು ಪ್ರಕ್ರಿಯೆಗೆ ಇಂತಿಷ್ಟು ಅವಧಿ ಎಂದು ನಿಗದಿಪಡಿಸಲಾಯಿತು. ಆದರೂ ನಿಯಮಗಳು ಪಾಲನೆಯಾಗುತ್ತಿಲ್ಲ. ಪ್ರಕ್ರಿಯೆಯಲ್ಲಿ ಹಲವು ಸಂಸ್ಥೆಗಳು ಭಾಗಿಯಾಗಿರುವುದರಿಂದ ಯಾವ ಸಂಸ್ಥೆಯನ್ನು ಹೊಣೆ ಮಾಡಬೇಕೆನ್ನುವುದೇ ಗೊಂದಲದ ವಿಚಾರವಾಗಿದೆ.

ದತ್ತು ಸ್ವೀಕಾರಕ್ಕೆ ಹೆಚ್ಚು ಪೋಷಕರು ನೋಂದಣಿ ಮಾಡಿಕೊಳ್ಳುವುದು, ಅವರಿಗೆ ಕಡಿಮೆ ಮಕ್ಕಳು ಲಭ್ಯ ಇರುವುದನ್ನು ಕೇಂದ್ರ ಸರ್ಕಾರದ ಸಂಸದೀಯ ಸಮಿತಿಯು (2022) 'ವೈರುಧ್ಯದ ಪರಿಸ್ಥಿತಿ' ಎಂದು ವಿಶ್ಲೇಷಿಸಿದೆ. ದತ್ತು ವ್ಯವಸ್ಥೆಯಲ್ಲಿನ ಲೋಪಗಳ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಅಸಮಾಧಾನ ವ್ಯಕ್ತಪಡಿಸಿದ್ದು, ಹಲವು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಆಧಾರ: ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, ಪಿಟಿಐ, ರಾಜ್ಯಸಭೆಯ 'ರಿವ್ಯೂ ಆಫ್ ಗಾರ್ಡಿಯನ್‌ಶಿಪ್ ಆ್ಯಂಡ್ ಅಡಾಪ್ಷನ್ ಲಾಸ್' ವರದಿ,

ಎರಡು ಕಾಯ್ದೆ, ಎರಡು ವಿಧಾನ

ಬಾಲನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015, ಬಾಲನ್ಯಾಯ (ತಿದ್ದುಪಡಿ) ಕಾಯ್ದೆ (2021) ಮತ್ತು ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ–1956 (ಎಚ್‌ಎಎಂಎ) – ಈ ಕಾಯ್ದೆಗಳಲ್ಲಿ ಮಕ್ಕಳ ದತ್ತು ಸ್ವೀಕಾರಕ್ಕೆ ವಿಭಿನ್ನ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ. ಬಾಲನ್ಯಾಯ ಕಾಯ್ದೆಯ ಅಡಿಯಲ್ಲಿ ಸಿಎಆರ್‌ಎ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ದತ್ತು ಸ್ವೀಕಾರಕ್ಕೆ ಅರ್ಹವಾದ ಮಗುವನ್ನು ನಿಗದಿತ ಪ್ರಕ್ರಿಯೆ ಮೂಲಕ ದತ್ತು ಪಡೆಯಬಹುದು. ಆದರೆ, ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ–1956 (ಎಚ್‌ಎಎಂಎ) ಅಡಿ ಸಿಎಆರ್‌ಎ ಅನ್ನು ಪರಿಗಣಿಸದೆಯೇ ದತ್ತು ಸ್ವೀಕಾರ ಮಾಡಲಾಗುತ್ತಿದೆ. ಈ ಕಾಯ್ದೆಯ ಪ್ರಕಾರ, ದತ್ತು ಸ್ವೀಕಾರ ಎನ್ನುವುದು ವೈಯಕ್ತಿಕ ಕಾರ್ಯವಾಗಿದ್ದು, ಅದಕ್ಕೆ ಸಿಎಆರ್‌ಎನಂಥ ಕೇಂದ್ರೀಕೃತ ಸಂಸ್ಥೆಯ ಅನುಮತಿ ಅಗತ್ಯವಿಲ್ಲ. ಹಿಂದೂ ವಯಸ್ಕನೊಬ್ಬ ಸರಳ ಕಾನೂನು ಪ್ರಕ್ರಿಯೆ ಮೂಲಕ ಮಗುವನ್ನು ದತ್ತು ಪಡೆಯಬಹುದಾಗಿದೆ. ಆದರೆ, ಇವು ಸಿಎಆರ್‌ಎ ಚೌಕಟ್ಟಿನ ಹೊರಗೆ ನಡೆಯುತ್ತಿದ್ದು, ಹಲವು ಲೋಪಗಳಿಂದ ಕೂಡಿವೆ. ಜತೆಗೆ, ದತ್ತಾಂಶ ಸಂಗ್ರಹಣೆಗೂ ಇದರಿಂದ ತೊಡಕುಂಟಾಗುತ್ತಿದೆ ಎನ್ನುವ ಅಭಿಪ್ರಾಯವಿದೆ. ಸಿಎಆರ್‌ಎಯಲ್ಲಿ ನಿರ್ವಹಣೆಯ ಸಮಸ್ಯೆ ಇದ್ದರೆ, ಎಚ್‌ಎಎಂಎ ಅಡಿ ನಡೆಯುತ್ತಿರುವ ದತ್ತು ಸ್ವೀಕಾರದಲ್ಲಿ ನಿಯಂತ್ರಣದ ಕೊರತೆ ಇದೆ ಎನ್ನಲಾಗುತ್ತಿದೆ.

ಭಾರತದಲ್ಲಿ ಮಕ್ಕಳ ದತ್ತು ಪ್ರಮಾಣ



ಕೇಂದ್ರ ಸರ್ಕಾರದ ಸಂಸದೀಯ ಸಮಿತಿಯ ಶಿಫಾರಸುಗಳು

- ಜಿಲ್ಲಾವಾರು ಸಮೀಕ್ಷೆ ಮೂಲಕ ಅನಾಥ, ನಿರ್ಗತಿಕ ಮತ್ತು ಪರಿತ್ಯಕ್ತ ಮಕ್ಕಳ ನಿಖರ ಸಂಖ್ಯೆ ತಿಳಿಯುವುದು ಮತ್ತು ಅದನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು
- ಬೀದಿಗಳಲ್ಲಿ ಭಿಕ್ಷಾಟನೆ ಮಾಡುತ್ತಿರುವ ಮಕ್ಕಳನ್ನು ಹುಡುಕಿ, ಅವರನ್ನು ದತ್ತು ಸ್ವೀಕಾರಕ್ಕೆ ಅರ್ಹರನ್ನಾಗಿಸುವುದು
- ಎಚ್‌ಎಎಂಎ ಕಾಯ್ದೆ ಅಡಿಯಲ್ಲಿ ದತ್ತು ಪ್ರಕ್ರಿಯೆ ಸರಳವಾಗಿದೆ. ಬಾಲನ್ಯಾಯ ಕಾಯ್ದೆಯು ಪಾರದರ್ಶಕವಾದ, ಉತ್ತರದಾಯಿತ್ವ ಇರುವ ಪ್ರಕ್ರಿಯೆಯಾಗಿದೆ. ಆದರೆ, ಹೆಚ್ಚು ಸಮಯ ಬೇಡುವ ಸಂಕೀರ್ಣ ಪ್ರಕ್ರಿಯೆಯಾಗಿದೆ. ಇವೆರಡರ ಅಂಶಗಳನ್ನು ಸೇರಿಸಿ ಸಮಗ್ರವಾದ ಹೊಸ ಕಾಯ್ದೆ ರೂಪಿಸುವುದು. ಎಚ್‌ಎಎಂಎ ಅಡಿ ದತ್ತು ಸ್ವೀಕಾರ ಮಾಡಿದ ಮಕ್ಕಳ ದತ್ತಾಂಶವನ್ನೂ ಸಿಎಆರ್‌ಎ ಒಳಗೊಳ್ಳಬೇಕು
- ಹೊಸ ಕಾಯ್ದೆಯಿಂದ ಅಕ್ರಮ ಸಂತಾನ ಎನ್ನುವ ಪದವನ್ನು ತೆಗೆದುಹಾಕುವುದು. ಯಾವ ಮಗುವೂ ಅಕ್ರಮ ಅಲ್ಲ. ಮದುವೆ ಮೂಲಕ ಅಥವಾ ಮದುವೆ ಆಗದೆ ಹುಟ್ಟಿದ ಮಕ್ಕಳಿಗೆ ಒಂದೇ ರೀತಿಯ ದತ್ತು ಪ್ರಕ್ರಿಯೆ ಅನುಸರಿಸುವುದು. ಮದುವೆಯಾದ, ಏಕಪೋಷಕ ಪುರುಷ, ಏಕಪೋಷಕ ಮಹಿಳೆಯ ಜತೆಗೆ ಲಿಂಗತ್ವ ಅಲ್ಪಸಂಖ್ಯಾತರಿಗೂ ದತ್ತು ಸ್ವೀಕಾರದ ಅವಕಾಶ ನೀಡಬೇಕು
- 18ನೇ ವರ್ಷದವರೆಗೆ ಮಕ್ಕಳನ್ನು ದತ್ತು ಪಡೆಯಲು ಅವಕಾಶ ಇರಬೇಕು. ದೈಹಿಕವಾಗಿ, ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸದೃಢರಾಗಿರುವ ಪುರುಷರು ಮತ್ತು ಮಹಿಳೆಯರು ತಮ್ಮದೇ ಲಿಂಗದವರನ್ನು ದತ್ತು ಪಡೆಯಲು ಸಾಧ್ಯವಾಗಬೇಕು. ದತ್ತು ಸ್ವೀಕಾರವಾಗುವ ಮಗು ಮತ್ತು ಅದನ್ನು ದತ್ತು ಪಡೆಯುವವರ ನಡುವೆ ಕನಿಷ್ಠ 25 ವರ್ಷಗಳ ಅಂತರವಿರಬೇಕು
- ಮಗುವಿಗೆ, ಅದನ್ನು ದತ್ತು ಸ್ವೀಕರಿಸಿದ ಪೋಷಕರ ಆಸ್ತಿಯಲ್ಲಿ ಪಾಲು ಸಿಗಬೇಕು
- ದತ್ತು ಸ್ವೀಕಾರ ಮಾಡಿದ ನಂತರ ಆ ಮಗುವಿನ ಸ್ಥಿತಿಗತಿಗಳನ್ನು ಅವಲೋಕಿಸುತ್ತಿರಬೇಕು

ರಾಷ್ಟ್ರೀಯ

ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ನಿರ್ದೇಶನ

ದೂರಶಿಕ್ಷಣ: ಆರೋಗ್ಯ ರಕ್ಷಣೆ ಕೋರ್ಸ್‌ಗಳ ಸ್ಥಗಿತಕ್ಕೆ ಸೂಚನೆ

ನವದೆಹಲಿ (ಪಿಟಿಐ): '2025ರ ಶೈಕ್ಷಣಿಕ ವರ್ಷದಿಂದ ಮನೋವಿಜ್ಞಾನ, ಪೌಷ್ಟಿಕಾಂಶ, ಆರೋಗ್ಯರಕ್ಷಣೆ ಮತ್ತು ಸಂಬಂಧಿತ ಕೋರ್ಸ್‌ಗಳನ್ನು ಮುಕ್ತ ಮತ್ತು ದೂರಶಿಕ್ಷಣ ಅಥವಾ ಆನ್‌ಲೈನ್ ವಿಧಾನದಲ್ಲಿ ಕಲಿಸುವುದನ್ನು ಸ್ಥಗಿತಗೊಳಿಸುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ.



ಈ ನಿಷೇಧವು ಎನ್‌ಸಿಎಎಚ್‌ಪಿ ಕಾಯ್ದೆ 2021ರ ಶಿಫಾರಸುಗಳನ್ನು ಆಧರಿಸಿದೆ. ಮನೋವಿಜ್ಞಾನ, ಸೂಕ್ಷ್ಮ ಜೀವವಿಜ್ಞಾನ, ಆಹಾರ ಮತ್ತು ಪೌಷ್ಟಿಕಾಂಶ ವಿಜ್ಞಾನ, ಜೈವಿಕ ತಂತ್ರಜ್ಞಾನ, ಕ್ಲಿನಿಕಲ್ ಪೌಷ್ಟಿಕಾಂಶ ಮತ್ತು ಆಹಾರ ಪದ್ಧತಿಗಳು ಈ ಕಾಯ್ದೆಗೆ ಒಳಪಡುತ್ತವೆ.

'ಜುಲೈ–ಆಗಸ್ಟ್ 2025ರ ನಂತರ ಯಾವುದೇ ಉನ್ನತ ಶಿಕ್ಷಣ ಸಂಸ್ಥೆ ಮುಕ್ತ ಹಾಗೂ ದೂರಶಿಕ್ಷಣ ಕಲಿಕೆ ಅಥವಾ ಆನ್‌ಲೈನ್ ವಿಧಾನದಲ್ಲಿ ಎನ್‌ಸಿಎಎಚ್‌ಪಿ 2021 ಕಾಯ್ದೆಗೆ ಒಳಪಡುವ ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ಕೋರ್ಸ್‌ಗಳಿಗೆ ಪ್ರವೇಶವಕಾಶ ನೀಡಬಾರದು. ಒಂದೊಮ್ಮೆ ಕಲಿಕೆಗೆ ಮಾನ್ಯತೆ ನೀಡಿದ್ದರೆ, ಅದನ್ನು ಯುಜಿಸಿ ಹಿಂದಕ್ಕೆ ಪಡೆಯಲಿದೆ' ಎಂದು ಯುಜಿಸಿ ಕಾರ್ಯದರ್ಶಿ ಮನೀಶ್ ಜೋಶಿ ಹೇಳಿದ್ದಾರೆ.

ಬಿ.ಎ ಪದವಿಯ ಕೋರ್ಸ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳಿದ್ದು (ಇಂಗ್ಲಿಷ್, ಹಿಂದಿ, ಪಂಜಾಬಿ, ಅರ್ಥಶಾಸ್ತ್ರ, ಇತಿಹಾಸ, ಗಣಿತ, ಸಾರ್ವಜನಿಕ ಆಡಳಿತ, ತತ್ವಶಾಸ್ತ್ರ, ರಾಜಕೀಯ ವಿಜ್ಞಾನ, ಸಂಖ್ಯಾಶಾಸ್ತ್ರ, ಮಾನವ ಹಕ್ಕುಗಳು ಮತ್ತು ಕರ್ತ್ಯವಗಳು, ಸಂಸ್ಕೃತ, ಮನೋವಿಜ್ಞಾನ, ಭೂಗರ್ಭವಿಜ್ಞಾನ, ಮಹಿಳಾ ಸಂಬಂಧಿ ಅಧ್ಯಯನಗಳು) ಇದರಲ್ಲಿ ಎನ್‌ಸಿಎಎಚ್‌ಪಿ ಕಾಯ್ದೆ 2021ಕ್ಕೆ ಒಳಪಡುವ ವಿಷಯಗಳಿದ್ದರೆ, ಅವುಗಳನ್ನು ಮಾತ್ರ ಹಿಂದಕ್ಕೆ ಪಡೆಯಲಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

ವೃತ್ತಿಪರ ತರಬೇತಿಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಮುಂಬರುವ ಶೈಕ್ಷಣಿಕ ವರ್ಷದಿಂದ ಎನ್‌ಸಿಎಎಚ್‌ಪಿ ಕಾಯ್ದೆಗೆ ಒಳಪಡುವ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡದಂತೆ ಸಂಸ್ಥೆಗಳಿಗೆ ಯುಜಿಸಿ ನಿರ್ದೇಶಿಸಿದೆ.

ಲೈಂಗಿಕ ಕಿರುಕುಳ: ನ್ಯಾಯಾಧೀಶ, ಐಪಿಎಸ್ ಅಧಿಕಾರಿ ವಿರುದ್ಧ ತನಿಖೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಒಬ್ಬ ನ್ಯಾಯಾಂಗ ಅಧಿಕಾರಿ ಮತ್ತು ಒಬ್ಬ ಐಪಿಎಸ್ ಅಧಿಕಾರಿ ಪ್ರತ್ಯೇಕ ಲೈಂಗಿಕ ಕಿರುಕುಳ ಪ್ರಕರಣಗಳಲ್ಲಿ ತನಿಖೆ ಎದುರಿಸುತ್ತಿದ್ದಾರೆ.

ಕೊಲ್ಲಂ ಜಿಲ್ಲೆಯ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶ ವಿ. ಉದಯಕುಮಾರ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಮರಿನ್ ಜೋಸೆಫ್ ತನಿಖೆ ಎದುರಿಸುತ್ತಿರುವ ಅಧಿಕಾರಿಗಳು.

ನ್ಯಾಯಾಧೀಶ ಉದಯಕುಮಾರ್ ಅವರು ತಮ್ಮ ಕೊಠಡಿಯಲ್ಲಿ ಲೈಂಗಿಕ ದುರ್ವರ್ತನೆ ತೋರಿದ್ದಾರೆ ಎಂದು ಆರೋಪಿಸಿ ಮಹಿಳಾ ಅರ್ಜಿದಾರರೊಬ್ಬರು ದೂರು ನೀಡಿದ್ದಾರೆ. ಈ ಸಂಬಂಧ ಕೇರಳ ಹೈಕೋರ್ಟ್ ನ್ಯಾಯಾಧೀಶರ ವಿರುದ್ಧ ವಿಚಾರಣೆಗೆ ಆದೇಶಿಸಿದೆ. ಅಲ್ಲದೆ ಆ ನ್ಯಾಯಾಧೀಶರನ್ನು ಕೊಲ್ಲಂನ ಮೋಟಾರು ಅಪಘಾತಗಳ ಕ್ಲೇಮು ನ್ಯಾಯಮಂಡಳಿಗೆ ವರ್ಗಾಯಿಸಿದೆ.

ಮಹಿಳಾ ಎಸ್‌ಐಗಳಿಂದ ದೂರು: ಐಪಿಎಸ್ ಅಧಿಕಾರಿ ಮರಿನ್ ಜೋಸೆಫ್ ಅವರು ಲೈಂಗಿಕ ಸ್ವರೂಪದ ಸಂದೇಶಗಳನ್ನು ಕಳುಹಿಸಿದ್ದಾರೆ ಎಂದು ಆರೋಪಿಸಿ ಇಬ್ಬರು ಮಹಿಳಾ ಸಬ್‌–ಇನ್‌ಸ್ಪೆಕ್ಟರ್‌ಗಳು (ಎಸ್‌ಐ) ದೂರು ನೀಡಿದ್ದಾರೆ. ದಾಖಲೆಗಳನ್ನು ಗಮನಿಸಿದರೆ ಆರೋಪಗಳು ಮೇಲ್ನೋಟಕ್ಕೆ ಸತ್ಯ ಎಂದು ಕಂಡು ಬಂದಿವೆ. ಇದರ ಬೆನ್ನಲ್ಲೇ, ರಾಜ್ಯ ಪೊಲೀಸ್ ಮುಖ್ಯಸ್ಥರಾದ ಚಂದ್ರಶೇಖರ್ ಅವರು ತನಿಖೆಗೆ ಆದೇಶಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬೀದಿ ನಾಯಿಗಳನ್ನು ಜನವಸತಿ ಪ್ರದೇಶಗಳಿಂದ ತೊಲಗಿಸಿ, ಆಶ್ರಯ ತಾಣಗಳಿಗೆ ಸ್ಥಳಾಂತರಿಸಬೇಕು ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ನಿರ್ದೇಶನ ನೀಡಿತ್ತು. ಈ ದಿಸೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಒಂದು ವಿಡಿಯೊ ಹರಿದಾಡುತ್ತಿದೆ. ಮರುಭೂಮಿಯಂತೆ ಕಾಣುವ ನಿರ್ಬಂಧಿತ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯ ನಾಯಿಗಳು ಒಂದೆಡೆ ಓಡಾಡುತ್ತಿರುವುದು ವಿಡಿಯೊದಲ್ಲಿದೆ. ನ್ಯಾಯಾಲಯದ ಆದೇಶದಂತೆ ಸರ್ಕಾರವು ಬೀದಿನಾಯಿಗಳಿಗಾಗಿ ಆಶ್ರಯ ತಾಣವನ್ನು ರೂಪಿಸಿದೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಇದೇ ವಿಡಿಯೊ 'ಗಿವ್‌ಮಿಯುವರ್‌ವಾಯ್ಸ್' ಎನ್ನುವ ಪ್ರಾಣಿಹಕ್ಕುಗಳ ಚಾನೆಲ್‌ನಲ್ಲಿ 2025ರ ಮಾರ್ಚ್ 10ರಂದು ಅಪ್‌ಲೋಡ್ ಆಗಿರುವುದು ಕಂಡಿತು. ಇರಾಕ್‌ನ ಎರ್ಬಿಲ್‌ನಲ್ಲಿ ಸುಮಾರು 3 ಸಾವಿರ ಬೀದಿ ನಾಯಿಗಳನ್ನು ಹಿಡಿದು ಆಶ್ರಯ ತಾಣಕ್ಕೆ ಸ್ಥಳಾಂತರಿಸಲಾಯಿತು ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ. ಜತೆಗೆ, ಭಾರತದಲ್ಲಿ ಬೀದಿ ನಾಯಿಗಳಿಗಾಗಿ ಆಶ್ರಯ ತಾಣವನ್ನು ರೂಪಿಸಿರುವ ಬಗ್ಗೆ ಯಾವುದೇ ವರದಿ ಕಾಣಲಿಲ್ಲ. ಇರಾಕ್‌ನ ವಿಡಿಯೊ ಅನ್ನು ಹಂಚಿಕೊಂಡು ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಮತಬಿತ್ತನೆಯ ಸುಗ್ಗಿಮೂಲವಾಗದಿರಲಿ ಹಬ್ಬ

ಊರಿನಲ್ಲಿ ಹಬ್ಬದ ಆಚರಣೆಗೆ ಸಿದ್ಧತೆಗಳು ಶುರುವಾದವು. ಹರೆಯದ ಯುವಕರೇ ತುಂಬಿದ ಸಭೆಯಲ್ಲಿ ಹಬ್ಬಕ್ಕೆ ಬೇಕಾದ ತೋರಣ, ಮೈಕು, ಸಾಲುದೀಪ, ಶಾಮಿಯಾನ, ಸಂಗೀತ, ನೃತ್ಯ, ಆಟೋಟಗಳ ಸ್ಪರ್ಧೆ, ನಾಟಕ ಪ್ರದರ್ಶನ, ಮೆರವಣಿಗೆ ಮುಂತಾಗಿ ಹಬ್ಬದ ಸಾಂಸ್ಕೃತಿಕ ಸ್ವರೂಪ ಹೇಗಿರಬೇಕು ಎಂಬ ಚರ್ಚೆ ನಡೆದು ಹಲವರಿಗೆ ಹಲವು ಬಗೆಯ ಜವಾಬ್ದಾರಿಗಳನ್ನು ನಿಗದಿಪಡಿಸಲಾಯಿತು. ಕೊನೆಯ ದಿನ ಊರಿನ ಜನರಿಗೆ ಭರ್ಜರಿ ಹೋಳಿಗೆ ಭೋಜನದ ವ್ಯವಸ್ಥೆ ಮಾಡಬೇಕೆಂದು ನಿರ್ಧಾರವಾಯಿತು. ಊರಿನ ಜನರಿಂದ ಅವರವರ ಶಕ್ತ್ಯಾನುಸಾರ ಹಣದ ರೂಪದಲ್ಲಿ ದೇಣಿಗೆಯನ್ನು ಪಡೆದು ಸೂಕ್ತ ಲೆಕ್ಕಾಚಾರ ನಿರ್ವಹಣೆಗೂ ವ್ಯವಸ್ಥೆಯಾಯಿತು. ಅಂತೂ ಅದ್ದೂರಿಯಾಗಿ ಹಬ್ಬ ಆಚರಿಸಿ ಜನರಲ್ಲಿ ಹೊಸ ಬಗೆಯ ಚೈತನ್ಯ ತುಂಬುವ ಆಶಯದೊಂದಿಗೆ ಊರು ಸಿಂಗಾರಗೊಳ್ಳತೊಡಗಿತು. ಹಿರಿಯರು ಎನ್ನಿಸಿಕೊಂಡ ಕೆಲವರು ಈ ಹುಡುಗರ ಉತ್ಸಾಹವನ್ನು ಮೆಚ್ಚಿಕೊಂಡರೆ ಮತ್ತೆ ಕೆಲವರು ಹಬ್ಬ ಸುಸೂತ್ರವಾಗಿ ಮುಗಿದರೆ ಸಾಕು ಅಂತ ಕಾಯತೊಡಗಿದರು.

ಹುರುಪಿನ ಓಡಾಟಗಳೆಲ್ಲ ಶುರುವಾದಂತೆ ಹುಡುಗರ ಗುಂಪಿನ ಒಳಗೇ ಸಣ್ಣಮಟ್ಟದ ಬಿರುಕೊಂದು ಕಾಣಿಸಿಕೊಂಡಿತು. ಯಾವುದೋ ಪಕ್ಷದವರೊಬ್ಬರಿಂದ ದೊಡ್ಡ ಮೊತ್ತವನ್ನು ವಸೂಲಿ ಮಾಡಿ ಅವರ ಕಟೌಟು ಮತ್ತು ಫ್ಲೆಕ್ಸ್ ಹಾಕುವ ವಿಷಯದಲ್ಲಿ ಉಂಟಾದ ಭಿನ್ನಾಭಿಪ್ರಾಯ ಪಕ್ಷ, ಜಾತಿ, ಧರ್ಮಗಳನ್ನೆಲ್ಲಾ ಆವರಿಸಿಕೊಂಡು ಸಾಂಸ್ಕೃತಿಕ ವಾತಾವರಣ ವಿಷಮಯವಾಗತೊಡಗಿತು. ಕೊನೆಯ ದಿನದ ಹೊತ್ತಿಗೆ ಅದು ವಿಕೋಪಕ್ಕೆ ತಿರುಗಿ ಮಾಧ್ಯಮಗಳ ಕಿವಿಗೆ ಬಿದ್ದು ಜಿಲ್ಲಾಡಳಿತದ ಮಧ್ಯಪ್ರವೇಶದಿಂದ ನಿಷೇಧಾಜ್ಞೆ ಜಾರಿಯಾಗಿ ಇಡೀ ಊರು ಪೊಲೀಸರ ಗಸ್ತಿನಲ್ಲಿ ಸ್ತಬ್ಧವಾಗಿಬಿಟ್ಟಿತು. ಹಬ್ಬಕ್ಕೆ ಬಂದಿದ್ದವರು ಅಸಮಾಧಾನದಿಂದ ವಾಪಸ್ಸಾದರು. ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲ ಆದರ್ಶದಂತಿದ್ದ ಊರಿನ ಸಾಂಸ್ಕೃತಿಕ ಪ್ರಜ್ಞೆಗೆ ಇದೊಂದು ಘಟನೆಯಿಂದ ಕಳಂಕ ತಟ್ಟಿತು. ವಿನೋದ ವ್ಯಂಗ್ಯಗಳಿಂದ ಸ್ನೇಹಮಯವಾಗಿದ್ದ ಮುಖಗಳು ಬಿಗಿದುಕೊಂಡವು.

ಹಬ್ಬಗಳು ನಮ್ಮ ಹಳ್ಳಿಗಳ ಜೀವಂತಿಕೆಯ ಸಂಕೇತಗಳು, ಎಲ್ಲರನ್ನೂ ಒಳಗೊಳ್ಳುವ ಸಾಮೂಹಿಕ ಉತ್ಸವಗಳು. ಹಳ್ಳಿಗರ ದೈವಭಕ್ತಿ ಪ್ರಕಟಗೊಳ್ಳುವುದೇ ಹಿರಿತನದ ನೈತಿಕ ಪ್ರಭೆಯಲ್ಲಿ. ಪಾರದರ್ಶಕತೆ ಮತ್ತು ಸಾಮರಸ್ಯ ಹಳ್ಳಿಯ ಸಾಮಾಜಿಕ ಆರ್ಥಿಕ ಸದೃಢತೆಯನ್ನು ಕಾಪಾಡುವ ಜೀವನ ಮೌಲ್ಯಗಳು. ಯಾವ್ಯಾವುದೋ ಜಂಜಾಟದಲ್ಲಿ ಊರುಕೇರಿ ಮರೆತು ಎಲ್ಲೆಲ್ಲೋ ಕಾಲ ತಳ್ಳುವವರು ವರ್ಷಕ್ಕೊಮ್ಮೆ ಬಂದು ತಮ್ಮವರೊಂದಿಗೆ ಕುಳಿತು ಉಣ್ಣುವ ಸಡಗರದಲ್ಲಿ ಮಿಂದೇಳುವ ಕ್ಷಣಗಳು ಮನುಷ್ಯ ಸಂಬಂಧಗಳ ನವೀಕರಣಕ್ಕೆ, ಬಾಂಧವ್ಯವೃದ್ಧಿಗೆ ಕಾರಣವಾಗುತ್ತವೆ.

ವರ್ಷದುದ್ದಕ್ಕೂ ದೇವರ ಸಹವಾಸಕ್ಕೆ ಬರದಿರುವ ಕೆಲವರಿಗೆ ಹಬ್ಬ ಬಂತೆಂದರೆ ಇದ್ದಕ್ಕಿದ್ದಂತೆ ದೈವಭಕ್ತಿ ಉಕ್ಕಿ ಹರಿಯುತ್ತದೆ. ಇಂಥವರನ್ನು ಹದ್ದುಬಸ್ತಿನಲ್ಲಿಡಲು ಊರ ಹಿರಿಯರು ಹಿಂದೆ ಬೀಳಬಾರದು. ನ್ಯಾಯವಲ್ಲದ ಮಾರ್ಗದಲ್ಲಿ ಸಂಪಾದಿಸಿದ ಯಾರದ್ದೋ ದುಡ್ಡು ಬಹುಜನರ ನೆಮ್ಮದಿಯನ್ನು ಕಸಿದುಕೊಳ್ಳಲು ಬಿಡಬಾರದು. ಹಬ್ಬ ಎಲ್ಲರದ್ದು. ಸಂಭ್ರಮವೂ ಎಲ್ಲರದ್ದಾಗಬೇಕು. ಯಾರೋ ಒಬ್ಬರನ್ನು ಮೆರೆಸುವುದಕ್ಕಾಗಿ ಊರು ಮೂರಾಬಟ್ಟೆಯಾಗಬಾರದು. ಕುಡಿದು ಕುಪ್ಪಳಿಸುವ ಕರಡಿ ಕುಣಿತದಲ್ಲಿ ಹಬ್ಬಗಳ ಸಾಂಸ್ಕೃತಿಕ ಚಹರೆ ಕಳೆಗುಂದಬಾರದು.

ಹಾಡು, ಕುಣಿತ, ಆಟೋಟಗಳು ನಮ್ಮ ಶ್ರಮಮೂಲ ಸಂಸ್ಕೃತಿಯ ಉತ್ಪನ್ನಗಳು. ಸಡಗರಗಳನ್ನು ಬೆಸೆಯುವ ಅವುಗಳ ಪ್ರದರ್ಶನಕ್ಕೆ ಅಪಮಾರ್ಗಿಗಳ ಪ್ರಾಯೋಜಕತ್ವ ಬೇಕೇ? ನಮ್ಮ ಹಬ್ಬಗಳ ಸಂಭ್ರಮ ನಮ್ಮೊಳಗಿನ ವಿವೇಕವನ್ನು ಎಚ್ಚರಿಸಿ ಹೊಣೆಗಾರಿಕೆಯನ್ನು ಹೆಚ್ಚಿಸಬೇಕು. ಪ್ರಾಯೋಜನೆಯ ಆಕರ್ಷಣೆಗೆ ಒಳಗಾಗಿ ಹುಡುಗರು ಸಗಟು ವ್ಯಾಪಾರದ ಸರಕುಗಳಂತಾಗುವುದರಿಂದ ದೂರ ನಿಲ್ಲಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಹಬ್ಬಗಳು ಮತಬಿತ್ತನೆಯ ಸುಗ್ಗಿಮೂಲಗಳಾಗುವ ಅಪಾಯವನ್ನು ಎಲ್ಲರೂ ಸೇರಿ ತಡೆದು ಕೂಡಿಬಾಳುವ ಸ್ವರ್ಗಸುಖದಲ್ಲಿ ಒಂದಾಗಬೇಕು. ❖

ಪದಬಂಧ 6145

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಅಂದವಾಗಿ ಮಾಡಿಕೊಂಡಿರುವ ಒಡಂಬಡಿಕೆ (3)
4.ಮರದ ಹತ್ತಿರವೇ ಸಾವು! (3)
5.ತಳದಿಂದ ಹಾಕಿರುವ ಬುನಾದಿ (4)
6.ಅನೇಕ ಜನರ ಭೀಕರ ಕೊಲೆ (4)
8.ಸುಳ್ಳು ಇಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
10.ಹಿಸ್ಸೆಯು ತಿರುಗುಮುರುಗು ಆಗಿದೆ (2)
13.ದ್ರವದಿಂದ ತುಂಬಿರುವುದು (4)
14.ದ್ರವ ರೂಪದ ಲೋಹವಿದು (4)
15.ಹಳ್ಳಿಯವನ ಬಾಯಲ್ಲಿ ಗ್ರಹಚಾರ (3)
16.ಮಣ್ಣಿನಿಂದ ಪಾತ್ರೆಗಳನ್ನು ಮಾಡುವವನು (3)

ಮೇಲಿಂದ ಕೆಳಕ್ಕೆ

1.ಎಲ್ಲಾ ಅವಕಾಶಗಳನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವವನು (6)
2.ಕೆಲಸಕ್ಕೆ ಬಾರದ ಮಾತು (5)
3.ಉದ್ದವಾಗಿ ಬಾಗಿರುವ ತುತ್ತೂರಿ (3)
5.ತಡವಾಗಿ ಕಾಣಿಸಿದ ಅಬ್ಬಿ (4)
7.ಹೊಟ್ಟೆ ಹೊರೆಯುವುದು (6)
9.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
11.ಈತ ಸಣ್ಣ ಪ್ರಾಂತ್ಯದ ಮುಖಂಡ (5)
12.ಮನದೊಳಗಿರುವ ಮನ್ಮಥ (3)

6144ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಾತ
3.ವಸನ 5.ವರೋಪಚಾರ
6.ಶರ 8.ನಾಕ
9.ಅಂಕೆ 10.ಕದ
14.ಗಾಳಿಗೋಪುರ 15.ಕಮರಿ
16.ಹಾರೈಕೆ

ಮೇಲಿಂದ ಕೆಳಕ್ಕೆ:
1.ಪರವಶ 2.ತವರು
3.ವರಹ 4.ನಕ್ಷತ್ರಿಕ
7.ರಸಿಕೆ 8.ನಾಸಿಕ
9.ಅಂಗಾರಕ 11.ದಬ್ಬಾಳಿಕೆ
12.ನಗಾರಿ 13.ವರಹಾ

ಸುಡೊಕು 6529

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
	1	6	4		5		2	
				2		7		4
		4	1		9		3	

6528 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಆಗಸ್ಟ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದ್ವಿತೀಯ ಗಂ.12-35 **ನಕ್ಷತ್ರ:** ಉತ್ತರಾಫಲ್ಗುಣಿ ಗಂ. 27-50 **ಯೋಗ:** ಸಿದ್ಧ ಗಂ. 12-06 **ಕರಣ:** ಕೌಲವ ಗಂ. 12-35 ಸಿಂಹ ಮಾಸದ 08 ನೇ ದಿನ. **ಮಳೆ ನಕ್ಷತ್ರ :** ಮಘಾ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 ,09-00, **ಸೂರ್ಯೋದಯ :** 06-22, **ಸೂರ್ಯಾಸ್ತ :** 06-43, **ಮುಸ್ಲಿಂ ದಿನಾಂಕ :** 01 ರಬಿಉಲ್ಲಾವಲ್, **ಅದೃಷ್ಟ ಸಂಖ್ಯೆ :** 2, 7

ಮೇಷ: ಕಚೇರಿಯಲ್ಲಿ ಸಹೋದ್ಯೋಗಿಗಳ ನಡುವೆ ಇದ್ದ ಮನಸ್ತಾಪವನ್ನು ಮುಕ್ತ ಹಾಗೂ ಸ್ಪಷ್ಟ ಮಾತುಕತೆಗಳಿಂದ ಬಗೆಹರಿಸಿಕೊಳ್ಳಬಹುದು. ಕಾರ್ಮಿಕರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿವೆ.

ವೃಷಭ: ಪಶುಸಂಗೋಪನೆಯಲ್ಲಿ ಮತ್ತು ಪಶು ಆಹಾರ ಮಾರಾಟಗಾರರಿಗೆ ಅಧಿಕ ಲಾಭ ಕಂಡುಬರಲಿದೆ. ಉದ್ಯೋಗರಂಗದಲ್ಲಿ ಅನಿರೀಕ್ಷಿತ ಘಟನೆಗಳು ವಿಶೇಷ ವ್ಯಕ್ತಿಯಾಗಿ ಗುರುತಿಸುವಂತಾಗಲಿದೆ.

ಮಿಥುನ: ಕೆಲ ನಿರ್ಧಾರಗಳನ್ನು ಬದಲಾಯಿಸಿಕೊಳ್ಳುವುದರಿಂದ ಕಾರ್ಯಗಳು ಸುಲಲಿತವಾಗಿ ನೆರವೇರಲಿವೆ. ಒತ್ತಡವನ್ನು ನಿವಾರಿಸಿಕೊಳ್ಳಲು ವಿಶ್ರಾಂತಿ ಪಡೆಯಿರಿ. ಕುಟುಂಬ ಸಂಬಂಧಗಳು ಗಟ್ಟಿಯಾಗಲಿವೆ.

ಕರ್ಕಾಟಕ: ರಫ್ತು ಉದ್ಯಮದವರಿಗೆ ಅಡೆತಡೆಗಳು ಉಂಟಾಗಬಹುದು. ಗೊಂದಲದ ಪರಿಸ್ಥಿತಿಯಿಂದ ಹೊರಬರಲು ಮಾರ್ಗದರ್ಶಕರ ಸಲಹೆ ತೆಗೆದುಕೊಳ್ಳಿ. ಮಹಾಗಣಪತಿಯನ್ನು ಆರಾಧಿಸಿ.

ಸಿಂಹ: ಹಣಕಾಸು ಪರಿಸ್ಥಿತಿ ದುರ್ಬಲವಾಗುವುದರಿಂದ ಒತ್ತಡ ತರುವಂಥ ಕೆಲಸಗಳಿಂದ ದೂರವಿರಿ. ನೂತನ ಕಟ್ಟಡಗಳ ನಿರ್ಮಾಣದ ಗುತ್ತಿಗೆ ಕೆಲಸವು ಲಭಿಸುತ್ತದೆ. ವಿದ್ಯಾರ್ಥಿಗಳಿಗೆ ಶ್ರೇಯಸ್ಸು, ಮೇಧಾಶಕ್ತಿ ಹೆಚ್ಚಲಿದೆ.

ಕನ್ಯಾ: ಅಧಿಕ ರಕ್ತದೊತ್ತಡದಿಂದ ಬಳಲುವಂತಾಗಬಹುದು. ಸೇವಿಸುವ ಆಹಾರದಲ್ಲಿ ನಿಯಮವಿರಲಿ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ನಿರಾಸಕ್ತಿಯ ದಿನ. ಸಾಹಿತ್ಯ, ಕಾದಂಬರಿ ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು.

ತುಲಾ: ಸಿಹಿತಿಂಡಿ ತಯಾರು ಮಾಡಿ ಮಾರಾಟ ಮಾಡುವವರಿಗೆ ಬೇಡಿಕೆ ಹೆಚ್ಚಲಿದೆ. ರಾಜಕೀಯವಾಗಿ ಒದಗಿ ಬರಲಿರುವ ಅಧಿಕಾರದ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ.

ವೃಶ್ಚಿಕ: ಬಹುದಿನಗಳ ನಿರಂತರ ಔಷಧಿ ಸೇವನೆಯಿಂದ ಕಾಯಿಲೆ ನಿವಾರಣೆಯಾಗಿ ಆರೋಗ್ಯ ಉತ್ತಮ ಸ್ಥಿತಿಗೆ ಬರುವುದು. ನೂತನ ಯೋಜನೆಗೆ ತಂದೆ-ತಾಯಿಯ ಮೂಲಕ ಆರ್ಥಿಕ ಸಹಾಯ ಸಿಗುವುದು.

ಧನು: ಮಕ್ಕಳ ವಿದ್ಯಾಭ್ಯಾಸ ಹಾಗೂ ದಿನಚರಿಯ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುವುದು. ಕೆಟ್ಟ ಸಹವಾಸ ಮಾಡಿ ದಾರಿ ತಪ್ಪದಂತೆ ನೋಡಿಕೊಳ್ಳಿ. ನವಗ್ರಹಗಳ ಆರಾಧನೆ ಶುಭ ತರಲಿದೆ.

ಮಕರ: ಸರ್ಕಾರಿ ನೌಕರರಿಗೆ ಸುಯೋಗವೆಂದು ಹೇಳಬಹುದು. ಸಹೋದ್ಯೋಗಿಗಳೊಂದಿಗಿನ ಬಾಂಧವ್ಯ ಉತ್ತಮಗೊಳ್ಳಲಿದೆ. ಅವಶ್ಯಕವಾಗಿರುವ ವಸ್ತುಗಳ ಖರೀದಿಯಿಂದ ಮನಸ್ಸಿಗೆ ನೆಮ್ಮದಿ ಮತ್ತು ಸಂತೋಷ ಸಿಗುವುದು.

ಕುಂಭ: ವಿದೇಶಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುವುದು. ಆಸ್ಪತ್ರೆ ಸಿಬ್ಬಂದಿಗೆ ಸರ್ಕಾರದಿಂದ ಅನುಕೂಲ ಲಭಿಸುವ ಲಕ್ಷಣವಿದೆ. ಕಫ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು.

ಮೀನ: ವ್ಯಾಪಾರ ವ್ಯವಹಾರಗಳಿಗೆ ಹೊಸ ತಿರುವು ಮೂಡಲಿದೆ. ಸಮಯ ಪರಿಪಾಲನೆಯ ಬಗ್ಗೆ ಗಮನವಿರಲಿ. ಸಮಯವನ್ನು ವ್ಯವಸ್ಥಿತ ರೀತಿಯಲ್ಲಿ ವಿಭಾಗಿಸಿ, ಸಮಯೋಚಿತವಾಗಿ ಕೆಲಸ ನಿರ್ವಹಿಸಿದರೆ ಬುದ್ಧಿವಂತರಾಗುವಿರಿ.

ಗುಂಡಣ್ಣ



ವಂಚನೆ ಪಟ್ಟಿಗೆ ಆರ್ ಕಾಂ: ಬಿಒಐ

ಅನಿಲ್ ಅಂಬಾನಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾ (ಬಿಒಐ) ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್ ಕಾಂ) ಕಂಪನಿಯ ಸಾಲದ ಖಾತೆಯನ್ನು 'ವಂಚನೆ' ಎಂದು ವರ್ಗೀಕರಿಸಿದೆ. ಕಂಪನಿಯ ನಿರ್ದೇಶಕರಾಗಿದ್ದ ಅನಿಲ್ ಅಂಬಾನಿ ಅವರನ್ನು ಸಹ ಅದರಲ್ಲಿ ಹೆಸರಿಸಿದೆ.

2016ರ ಆಗಸ್ಟ್‌ನಲ್ಲಿ ಬ್ಯಾಂಕ್ ಆಫ್ ಇಂಡಿಯಾದಿಂದ ₹700 ಕೋಟಿ ಸಾಲವನ್ನು ರಿಲಯನ್ಸ್ ಕಮ್ಯುನಿಕೇಷನ್ಸ್ ಪಡೆದುಕೊಂಡಿತ್ತು. ಈ ಹಣವನ್ನು ಕಂಪನಿಯ ಬಂಡವಾಳ, ಕಾರ್ಯಾಚರಣೆ ವೆಚ್ಚ ಮತ್ತು ಸಾಲದ ಮರುಪಾವತಿಗೆ ಬಳಸುವುದಾಗಿ ಹೇಳಿತ್ತು. ಆದರೆ, ಪಡೆದ ಹಣದಲ್ಲಿ ಅರ್ಧದಷ್ಟನ್ನು ಅದೇ ವರ್ಷದ ಅಕ್ಟೋಬರ್‌ನಲ್ಲಿ ನಿಶ್ಚಿತ ಠೇವಣಿಯಾಗಿ ಹೂಡಿಕೆ ಮಾಡಿತ್ತು. ಇದಕ್ಕೆ ಬ್ಯಾಂಕ್‌ನ ಒಪ್ಪಿಗೆ ಇರಲಿಲ್ಲ. ಈ ಸಂಗತಿಯು 'ಆರ್ ಕಾಂ' ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ಉಲ್ಲೇಖವಾಗಿದೆ.

'ಆರ್ ಕಾಂ'ಗೆ ನೀಡಿರುವ ಸಾಲ 2017ರ ಜೂನ್ 30ರಂದು ಎನ್‌ಪಿಎ ಆಗಿದೆ. ಒಟ್ಟು ಸಾಲ ₹724 ಕೋಟಿ ಆಗಿದೆ. ಸಾಲ ತೆಗೆದುಕೊಂಡಿರುವವರು ಮತ್ತು ಖಾತರಿ ನೀಡಿದವರನ್ನು ಸಂರ್ಪಕಿಸಿ ಸಾಲದ ಮರುಪಾವತಿಗೆ ತಿಳಿಸಲಾಗಿತ್ತು. ಆದರೂ, ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿದ್ದಾರೆ ಎಂದು ಬ್ಯಾಂಕ್ ಹೇಳಿದೆ.

ಜೂನ್‌ನಲ್ಲಿ ಎಸ್‌ಬಿಐ, ರಿಲಯನ್ಸ್ ಕಮ್ಯುನಿಕೇಷನ್ಸ್ ಕಂಪನಿಯು ಪಡೆದಿರುವ ಸಾಲವನ್ನು 'ವಂಚನೆ' ಎಂದು ವರ್ಗೀಕರಿಸಲು ತೀರ್ಮಾನಿಸಿತ್ತು. ಅಲ್ಲದೆ, ಕಂಪನಿಯ ನಿರ್ದೇಶಕರಾಗಿದ್ದ ಅನಿಲ್ ಅಂಬಾನಿ ಅವರ ಹೆಸರನ್ನು ಆರ್‌ಬಿಐಗೆ ಕಳುಹಿಸಲು ಕೂಡ ಬ್ಯಾಂಕ್ ನಿರ್ಧರಿಸಿದೆ ಎಂದು ತಿಳಿಸಿತ್ತು. ಇದೀಗ ಸರ್ಕಾರಿ ವಲಯದ ಮತ್ತೊಂದು ಬ್ಯಾಂಕ್ ಕಂಪನಿ ಹಾಗೂ ಅದರ ಪ್ರವರ್ತಕರನ್ನು ವಂಚನೆ ಪಟ್ಟಿಗೆ ಸೇರಿಸಿದೆ.

ಸೆಣಬಿನ ಸಂಸ್ಕರಣೆ

ಪಿಟಿಐ ಚಿತ್ರ

ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಸೆಣಬಿನ ಸಂಸ್ಕರಣೆಯಲ್ಲಿ ರೈತರು ಭಾನುವಾರ ತೊಡಗಿದ್ದರು

ಇ20 ಪೆಟ್ರೋಲ್: ಇಂಧನ ದಕ್ಷತೆ ಹಾಳು

ಎಥೆನಾಲ್ ಬೆರೆಸಿದ ಪೆಟ್ರೋಲ್ ಬಳಕೆಯ ಬಗ್ಗೆ ಪರಿಣತರ ವಿವರಣೆ

ಮುಖ್ಯಾಂಶಗಳು

- ಎಥೆನಾಲ್‌ನ ಇಂಧನ ಸಾಂದ್ರತೆ ಕಡಿಮೆ
- ತಕ್ಷಣಕ್ಕೆ ಯಾವುದೇ ಸಮಸ್ಯೆ ಎದುರಾಗದು
- ದೀರ್ಘಾವಧಿಯಲ್ಲಿ ಬಿಡಿಭಾಗಗಳ ಸವಕಳಿ ಸಮಸ್ಯೆ

ನವದೆಹಲಿ (ಪಿಟಿಐ): ಶೇಕಡ 20ರಷ್ಟು ಎಥೆನಾಲ್ ಮಿಶ್ರಣದ ಪೆಟ್ರೋಲ್ ಬಳಕೆಯು ವಾಹನದ ಇಂಧನ ದಕ್ಷತೆಯನ್ನು ಶೇ 2ರಿಂದ ಶೇ 5ರವರೆಗೆ ಕಡಿಮೆ ಮಾಡಬಹುದು ಎಂದು ಆಟೊಮೊಬೈಲ್ ಉದ್ಯಮದ ಪರಿಣತರು ಹೇಳಿದ್ದಾರೆ.

ಇಂಧನ ದಕ್ಷತೆಯಲ್ಲಿ ಆಗುವ ಇಳಿಕೆಯ ಪ್ರಮಾಣವು ವಾಹನದ ಮಾದರಿಯನ್ನು ಅವಲಂಬಿಸಿರುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಶೇ 20ರಷ್ಟು ಎಥೆನಾಲ್ ಬೆರೆಸಿರುವ (ಇ20) ಪೆಟ್ರೋಲ್ ಬಳಕೆಯಿಂದ ವಾಹನಗಳ ಮೇಲೆ ಆಗುವ ಪರಿಣಾಮದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಚರ್ಚೆ ಆಗುತ್ತಿದೆ. ಇ20 ಪೆಟ್ರೋಲ್‌ಗೆ ಸರಿಹೊಂದುವ ಎಂಜಿನ್ ಇಲ್ಲದ ಹಳೆಯ ವಾಹನಗಳ ಗ್ಯಾಸ್ಕೆಟ್, ಇಂಧನದ ರಬ್ಬರ್ ಹೋಸ್ ಮತ್ತು ಪೈಪ್‌ಗಳು ದೀರ್ಘಾವಧಿಯಲ್ಲಿ ಸವೆಯಬಹುದು ಎಂದು ದೇಶದ ಪ್ರಮುಖ ಆಟೊಮೊಬೈಲ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಆಟೊಮೊಟಿವ್ ಎಂಜಿನಿಯರ್‌ಗಳು ಹೇಳಿದ್ದಾರೆ.

ಈ ಪರಿಣಾಮಗಳು ದೀರ್ಘಾವಧಿಯಲ್ಲಿ ಕಾಣಿಸಿಕೊಳ್ಳುತ್ತವೆಯೇ ವಿನಾ ತಕ್ಷಣಕ್ಕೆ ಅಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. 'ವಾಹನ ಯಾವುದು ಎಂಬುದನ್ನು ಆಧರಿಸಿ ಇಂಧನ ದಕ್ಷತೆಯು (ಮೈಲೇಜ್) ಶೇ 2-5ರವರೆಗೆ ತಗ್ಗಬಹುದು. ಪೆಟ್ರೋಲ್‌ಗೆ ಹೋಲಿಸಿದರೆ ಎಥೆನಾಲ್‌ನ ಶಾಖಾಂಶ ಮೌಲ್ಯವು (ಇಂಧನವನ್ನು ದಹಿಸಿದಾಗ ಸಿಗುವ ಶಾಖದ ಶಕ್ತಿ) ಕಡಿಮೆ ಇರುವುದು ಹೀಗಾಗುವುದಕ್ಕೆ ಕಾರಣ' ಎಂದು ತಜ್ಞರೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ತಿಳಿಸಿದರು.

'ಇ20 ಪೆಟ್ರೋಲ್ ಬಳಕೆಯಿಂದಾಗಿ ಇಂಧನ ದಕ್ಷತೆಯು ಬಹಳ ಕಡಿಮೆ ಆಗುತ್ತದೆ ಎಂಬುದು ಸರಿಯಲ್ಲ' ಎಂದು ಕೇಂದ್ರ ಇಂಧನ ಸಚಿವಾಲಯವು ಈಚೆಗೆ ಹೇಳಿತ್ತು. ಆದರೆ ಇಂಧನ ದಕ್ಷತೆಯು ಎಷ್ಟರಮಟ್ಟಿಗೆ ಕಡಿಮೆ ಆಗುತ್ತದೆ ಎಂಬುದನ್ನು ಅದು ಹೇಳಿರಲಿಲ್ಲ.

'ಇಂಧನ ದಕ್ಷತೆ ಕಡಿಮೆ ಆಗುವುದಾಗಿದ್ದರೆ, ಅದು ಇ10 (ಶೇ 10ರಷ್ಟು ಎಥೆನಾಲ್ ಮಿಶ್ರಣದ ಪೆಟ್ರೋಲ್ ಬಳಸಲು ರೂಪಿಸಿರುವ ಎಂಜಿನ್) ವಾಹನಗಳಲ್ಲಿ ಬಹಳ ಕಡಿಮೆ. ಕೆಲವು ವಾಹನ ತಯಾರಿಕಾ ಕಂಪನಿಗಳು 2009ರಿಂದ ಇ20 ವಾಹನಗಳನ್ನು ತಯಾರಿಸುತ್ತಿವೆ. ಇಂತಹ ವಾಹನಗಳಲ್ಲಿ ಇಂಧನ ದಕ್ಷತೆಯು ಕಡಿಮೆ ಆಗುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ಸಚಿವಾಲಯವು ಹೇಳಿತ್ತು.

'ಇ20 ಎಂಜಿನ್ ಹೊಂದಿರುವ ವಾಹನಗಳು ಹೆಚ್ಚು ಉತ್ತಮವಾದ ವೇಗೋತ್ಕರ್ಷವನ್ನು ನೀಡುತ್ತವೆ. ಇದು ನಗರಗಳಲ್ಲಿ ಚಾಲನೆ ಮಾಡುವಾಗ ಬಹಳ ಮುಖ್ಯವಾಗುತ್ತದೆ' ಎಂದು ಕೂಡ ಸಚಿವಾಲಯವು ವಿವರಿಸಿತ್ತು.

ಆಗಸ್ಟ್ 4ರಂದು ಎಕ್ಸ್ ಮೂಲಕ ಇನ್ನೊಂದು ಹೇಳಿಕೆ ನೀಡಿದ್ದ ಸಚಿವಾಲಯವು, 'ಪೆಟ್ರೋಲ್‌ಗೆ ಹೋಲಿಸಿದರೆ ಎಥೆನಾಲ್‌ನ ಇಂಧನ ಸಾಂದ್ರತೆಯು ಕಡಿಮೆ ಇರುವ ಕಾರಣಕ್ಕೆ, ಇಂಧನ ದಕ್ಷತೆಯು ತುಸು ಕಡಿಮೆ ಆಗುತ್ತದೆ. ಇ10 ಪೆಟ್ರೋಲ್‌ಗೆ ವಿನ್ಯಾಸಗೊಳಿಸಿ ಇ20 ಪೆಟ್ರೋಲ್‌ಗೆ ಮರುಹೊಂದಿಸಿರುವ ಎಂಜಿನ್‌ಗಳಲ್ಲಿ ಇಂಧನ ದಕ್ಷತೆಯು ಶೇ 1ರಿಂದ ಶೇ 2ರಷ್ಟು ಕಡಿಮೆ ಆಗಬಹುದು. ಇನ್ನುಳಿದ ಎಂಜಿನ್‌ಗಳಲ್ಲಿ ಶೇ 3-6ರಷ್ಟು ಕಡಿಮೆ ಆಗಬಹುದು' ಎಂದಿತ್ತು.

ಈ ಕುರಿತಾಗಿ ಪ್ರತಿಕ್ರಿಯೆ ನೀಡಲು ಮಾರುತಿ ಸುಜುಕಿ ಮತ್ತು ಹುಂಡೈ ಮೋಟರ್ ಇಂಡಿಯಾ ನಿರಾಕರಿಸಿವೆ. 'ನಮ್ಮ ವಾಹನಗಳು ಇ20 ಪೆಟ್ರೋಲ್‌ಗೆ ವಿನ್ಯಾಸಗೊಂಡಿವೆ' ಎಂದು ಟಾಟಾ ಮೋಟರ್ಸ್‌ನ ವಕ್ತಾರರೊಬ್ಬರು ತಿಳಿಸಿದ್ದಾರೆ.

'ಇ20 ಇಂಧನಕ್ಕೆ ಸೂಕ್ತವಾಗಿ ರೂಪುಗೊಂಡಿರುವ ಎಂಜಿನ್‌ಗಳಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ. ಆದರೆ ಅದಕ್ಕೆ ಸರಿಹೊಂದದ ಎಂಜಿನ್‌ಗಳಲ್ಲಿನ ಗ್ಯಾಸ್ಕೆಟ್, ಇಂಧನದ ರಬ್ಬರ್ ಹೋಸ್, ಪೈಪ್ ದೀರ್ಘಾವಧಿಯಲ್ಲಿ ಸವೆಯಬಹುದು' ಎಂದು ಇನ್ನೊಬ್ಬ ತಜ್ಞ ಕೂಡ ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ಹೇಳಿದ್ದಾರೆ.

ಅವಧಿಗೆ ಮೊದಲೇ ಸಾಲ ತೀರಿಸಿದರೆ ಇಲ್ಲ ದಂಡ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಚಾರ್ಟರ್ಡ್ ಅಕೌಂಟೆಂಟ್

ಯಾವುದೇ ಸಾಲವನ್ನು ಅವಧಿಗಿಂತ ಮುಂಚಿತವಾಗಿ ತೀರಿಸಿದರೆ ದೊಡ್ಡ ಪ್ರಮಾಣದ ಬಡ್ಡಿ ಹಣ ಉಳಿತಾಯ ಆಗುತ್ತದೆ. ಆದರೆ ಬಹುತೇಕ ಬ್ಯಾಂಕ್‌ಗಳು, ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ), ಸಹಕಾರಿ ಬ್ಯಾಂಕ್‌ಗಳು ನಿಗದಿತ ಸಮಯಕ್ಕಿಂತ ಮೊದಲು ಸಾಲ ಮರುಪಾವತಿಸಿದರೆ ಅಥವಾ ಭಾಗಶಃ ಸಾಲ ಕಟ್ಟಿದರೆ ದಂಡ ಹೇರುತ್ತವೆ. ಸಾಲ ಪಡೆದ ಗ್ರಾಹಕರಿಗೆ ಆಗುತ್ತಿರುವ ಈ ಸಮಸ್ಯೆ ಮನಗಂಡಿರುವ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 2026ರ ಜನವರಿಯಿಂದ ಸಾಲ ಮರುಪಾವತಿಗೆ ಸಂಬಂಧಿಸಿದಂತೆ ಹೊಸ ನಿಯಮಗಳನ್ನು ಜಾರಿಗೆ ತರುತ್ತಿದೆ. ಆ ಹೊಸ ನಿಯಮದಿಂದಾಗಿ ಸಾಲ ಮರುಪಾವತಿ ಪ್ರಕ್ರಿಯೆ ಸರಳಗೊಳ್ಳುವ ಜೊತೆಗೆ ಗ್ರಾಹಕನಿಗೆ ಅನುಕೂಲವಾಗಲಿದೆ.

ಹೊಸ ನಿಯಮ ಏನು?: ಆರ್‌ಬಿಐನ ಹೊಸ ನಿಯಮದ ಪ್ರಕಾರ ಸಾಲ ಮರುಪಾವತಿ ಪ್ರಕ್ರಿಯೆ ಇನ್ನಷ್ಟು ಸರಳವಾಗಲಿದೆ. ಬದಲಾಗುವ ಬಡ್ಡಿ ದರದಲ್ಲಿ (ಫ್ಲೋಟಿಂಗ್ ಇಂಟರೆಸ್ಟ್ ರೇಟ್) ಪಡೆದ ವಿವಿಧ ಸಾಲಗಳನ್ನು ಅವಧಿಗೂ ಮುನ್ನ ಕಟ್ಟಿದಾಗ ವಿಧಿಸುವ ದಂಡವನ್ನು ಆರ್‌ಬಿಐ ರದ್ದು ಮಾಡಲಿದೆ. ಆರ್‌ಬಿಐ ಹೇಳಿರುವಂತೆ ಎಲ್ಲ ವಾಣಿಜ್ಯ ಬ್ಯಾಂಕ್‌ಗಳು (ಪೇಮೆಂಟ್ಸ್ ಬ್ಯಾಂಕ್ ಹೊರತುಪಡಿಸಿ), ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (ಆರ್‌ಆರ್‌ಬಿ), ಬ್ಯಾಂಕೇತರ ಹಣಕಾಸು ಕಂಪನಿಗಳು ಮತ್ತು ಸಹಕಾರಿ ಬ್ಯಾಂಕ್‌ಗಳಿಂದ ಪಡೆಯುವ ಸಾಲಗಳಿಗೆ ಈ ನಿಯಮ ಅನ್ವಯಿಸುತ್ತದೆ.

ಅವಧಿಗೂ ಮುನ್ನ ಸಾಲ ಕಟ್ಟಿದಾಗ ಯಾವ ಸಾಲಗಳಿಗೆ ದಂಡದ ಇರುವುದಿಲ್ಲ?

ಸಾಲದ ಮಾದರಿ	ಉದಾಹರಣೆ	ದಂಡ ಶುಲ್ಕ?
ಗೃಹಸಾಲ	ಮನೆ ಖರೀದಿ, ಮನೆ ನವೀಕರಣ, ಗೃಹ ಸಾಲ ವರ್ಗಾವಣೆ	ಇಲ್ಲ
ವೈಯಕ್ತಿಕ ಸಾಲ	ವೈದ್ಯಕೀಯ ತುರ್ತು, ಮಕ್ಕಳ ಶಾಲಾ ಶುಲ್ಕ ಪಾವತಿ ಇತ್ಯಾದಿ	
ವಾಹನ ಸಾಲ	ಬೈಕ್, ಕಾರು, ವಾಣಿಜ್ಯ ವಾಹನ ಖರೀದಿ	
ಶಿಕ್ಷಣ ಸಾಲ	ದೇಶ ಮತ್ತು ವಿದೇಶಗಳಲ್ಲಿ ವಿದ್ಯಾಭ್ಯಾಸಕ್ಕೆ	
ಗೃಹಬಳಕೆ ವಸ್ತು ಖರೀದಿ ಸಾಲ	ಟಿ.ವಿ, ಫ್ರಿಜ್, ಮೊಬೈಲ್, ವಾಶಿಂಗ್ ಮಷೀನ್ ಇತ್ಯಾದಿ	
ವಾಣಿಜ್ಯೋದ್ಯಮ ಸಾಲ	ಉದ್ಯಮ ವಿಸ್ತರಣೆ, ಉದ್ಯಮ ನಿರ್ವಹಣೆ	

(ಗಮನಿಸಿ: ಬದಲಾಗುವ ಬಡ್ಡಿ ದರದಲ್ಲಿ (ಫ್ಲೋಟಿಂಗ್ ಇಂಟರೆಸ್ಟ್ ರೇಟ್) ಪಡೆದ ಸಾಲಕ್ಕೆ ಮಾತ್ರ ಈ ನಿಯಮ ಅನ್ವಯ)

ಯಾರಿಗೆ ಅನುಕೂಲ?: ಬದಲಾಗುವ ಬಡ್ಡಿ ದರದಲ್ಲಿ ಪಡೆಯುವ ಗೃಹಸಾಲ, ವೈಯಕ್ತಿಕ ಸಾಲ, ವಾಹನ ಸಾಲ, ಶಿಕ್ಷಣ ಸಾಲ, ಗ್ರಾಹಕ ಬಳಕೆ ಉಪಕರಣಗಳ ಸಾಲ, ಉದ್ಯಮ ಚಟುವಟಿಕೆಗಳಿಗೆ ಸಂಬಂಧಿಸಿದ ಸಾಲವನ್ನು ಅವಧಿಗೆ ಮುಂಚಿತವಾಗಿ ಮರುಪಾವತಿಸಿದರೆ ಅಥವಾ ಆ ಸಾಲಗಳನ್ನು ಭಾಗಶಃ ಮರುಪಾವತಿ ಮಾಡಿದರೆ 2026ರ ಜನವರಿಯಿಂದ ದಂಡ ಕಟ್ಟಬೇಕಾಗಿ ಬರುವುದಿಲ್ಲ.

ಈ ರೀತಿಯ ಸಾಲ ಪಡೆಯುವ ಎಲ್ಲರಿಗೂ ಹೊಸ ನಿಯಮದಿಂದ ಅನುಕೂಲ ಆಗಲಿದೆ. ಹೊಸ ಮಾನದಂಡದ ಪ್ರಕಾರ ಬದಲಾಗುವ ಬಡ್ಡಿ ದರದಲ್ಲಿ ಪಡೆಯುವ ಯಾವುದೇ ಸಾಲ ಮರುಪಾವತಿಗೆ ಲಾಕ್-ಇನ್ ಅವಧಿ ನಿಗದಿ ಮಾಡುವಂತಿಲ್ಲ. ಗ್ರಾಹಕ ತನ್ನ ಸ್ವಂತ ಹಣದಿಂದ, ಮತ್ತೊಂದು ಬ್ಯಾಂಕ್ ಆರ್ಥಿಕ ನೆರವು ಪಡೆದು ಅಥವಾ ಬ್ಯಾಲೆನ್ಸ್ ಟ್ರಾನ್ಸ್‌ಫರ್ (ಸಾಲ ವರ್ಗಾವಣೆ) ಮೂಲಕ ಅವಧಿಗೆ ಮೊದಲು ಸಾಲ ತೀರಿಸಲು ಮುಂದಾದಾಗ ಆತನಿಗೆ ದಂಡ ವಿಧಿಸುವಂತಿಲ್ಲ. ವಾಣಿಜ್ಯೋದ್ಯಮಕ್ಕೆ ಪಡೆದ ಸಾಲ, ಕಿರು ಮತ್ತು ಸಣ್ಣ ಉದ್ಯಮ ಸಾಲ ಮತ್ತು ಸ್ಪೆಷಲ್ ಫೈನಾನ್ಸ್ ಸಾಲ ಪಡೆದವರಿಗೂ ಒಂದಷ್ಟು ಮಿತಿಗಳೊಂದಿಗೆ ಈ ಅನುಕೂಲ ಸಿಗಲಿದೆ.

ಯಾವ ಸಾಲಗಳಿಗೆ ಶುಲ್ಕ ಅನ್ವಯಿಸುತ್ತದೆ?: ಸ್ಥಿರ ಬಡ್ಡಿ ದರದಲ್ಲಿ ಪಡೆಯುವ ಸಾಲಗಳಿಗೆ ಅವಧಿಗೂ ಮುನ್ನ ಮರುಪಾವತಿ ಶುಲ್ಕ (ಪ್ರಿಪೇಮೆಂಟ್ ಚಾರ್ಜಸ್) ಅನ್ವಯವಾಗುವ ಸಾಧ್ಯತೆ ಹೆಚ್ಚಿದೆ. ಆದರೆ ಸಾಲ ಮಂಜೂರಾತಿ ದಾಖಲೆಯಲ್ಲಿ ಅವಧಿಗೂ ಮುನ್ನ ಸಾಲ ಕಟ್ಟಿದರೆ ಶುಲ್ಕ ವಿಧಿಸುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳಿದ್ದರೆ ಮಾತ್ರ ಶುಲ್ಕ ಹಾಕಬಹುದಾಗಿದೆ. ಇದಲ್ಲದೆ ಕೆಲವು ಸಂದರ್ಭಗಳಲ್ಲಿ ಸಣ್ಣ ಫೈನಾನ್ಸ್ ಬ್ಯಾಂಕ್‌ಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳಿಂದ ಪಡೆಯುವ ₹50 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಲವನ್ನು ಅವಧಿಗೆ ಮುನ್ನ ಮರುಪಾವತಿ ಮಾಡಿದರೂ ಬ್ಯಾಂಕ್‌ಗಳಿಗೆ ಶುಲ್ಕ ಹಾಕುವ ಸಾಧ್ಯತೆ ಇರುತ್ತದೆ.

ಏಕೆ ಈ ನಿಯಮಕ್ಕೆ ಮಹತ್ವ: ಎಷ್ಟೋ ಸಂದರ್ಭಗಳಲ್ಲಿ ಗ್ರಾಹಕರ ಕೈಯಲ್ಲಿ ಒಂದಿಷ್ಟು ಹಣವಿದ್ದಾಗ, ಅದನ್ನು ಬಳಸಿ ಸಾಲ ಮರುಪಾವತಿ ಮಾಡಲು ಹೋದರೆ ಬ್ಯಾಂಕ್‌ಗಳು ಅವಧಿಪೂರ್ವ ಮರುಪಾವತಿ ದಂಡ ಹಾಕುವುದಾಗಿ ಹೇಳುತ್ತಿದ್ದವು. ಇದರ ಪರಿಣಾಮವಾಗಿ, ಕೆಲವು ಗ್ರಾಹಕರು ಅವಧಿಗೆ ಮೊದಲೇ ಸಾಲ ಮರುಪಾವತಿಯಿಂದ ಹಿಂದೆ ಸರಿಯುತ್ತಿದ್ದರು. ಆದರೆ ಆರ್‌ಬಿಐನ ಈ ಹೊಸ ನಿಯಮದಿಂದ ಗ್ರಾಹಕರು ಸಾಲದ ಹೊರೆಯಿಂದ ಪಾರಾಗುವುದು ಸುಲಭವಾಗಲಿದೆ. ಕೈಯಲ್ಲಿ ದುಡ್ಡಿದ್ದಾಗ ಸಾಲದ ಬಾಬ್ತಿಗೆ ಹೆಚ್ಚುವರಿ ಮೊತ್ತ ಕಟ್ಟಿ ಸಾಲದಿಂದ ಬೇಗ ಹೊರಬರಲು ಸಾಧ್ಯವಾಗುತ್ತದೆ.

ಚಿಟಿಕೆ ಸುದ್ದಿ

ಅಣು ಸ್ಥಾವರ ಮೇಲೆ ಉಕ್ರೇನ್ ದಾಳಿ: ರಷ್ಯಾ ಆರೋಪ

ಮಾಸ್ಕೊ (ಎಪಿ): ಉಕ್ರೇನ್ ಪಡೆಗಳು ಡ್ರೋನ್ ಬಳಸಿ ನಡೆಸಿದ ದಾಳಿಯಿಂದ ದೇಶದ ಪಶ್ಚಿಮ ಭಾಗದ ಕುರ್ಸ್ಕ್ ಪ್ರದೇಶದಲ್ಲಿನ ಅಣು ವಿದ್ಯುತ್ ಸ್ಥಾವರದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು ಎಂದು ರಷ್ಯಾ ಭಾನುವಾರ ಆರೋಪಿಸಿದೆ.

ತನ್ನ 34ನೇ ಸ್ವಾತಂತ್ರ್ಯೋತ್ಸವ ಆಚರಣೆಯ ಸಂದರ್ಭದಲ್ಲೇ ರಾತ್ರೋರಾತ್ರಿ ಉಕ್ರೇನ್ ಈ ದಾಳಿಗಳನ್ನು ನಡೆಸಿದ್ದು, ಹಲವು ವಿದ್ಯುತ್ ಉತ್ಪಾದನೆ ಮತ್ತು ಇಂಧನ ಘಟಕಗಳನ್ನು ಗುರಿಯಾಗಿಸಿತ್ತು ಎಂದು ರಷ್ಯಾ ಅಧಿಕಾರಿಗಳು ಹೇಳಿದ್ದಾರೆ. ರಷ್ಯಾದ ಈ ಆರೋಪಗಳ ಕುರಿತು ಉಕ್ರೇನ್ ಪ್ರತಿಕ್ರಿಯಿಸಿಲ್ಲ.

ಅಣು ವಿದ್ಯುತ್ ಸ್ಥಾವರದಲ್ಲಿ ಕಂಡುಬಂದ ಬೆಂಕಿಯನ್ನು ತಕ್ಷಣವೇ ನಂದಿಸಲಾಯಿತು. ಈ ದಾಳಿಯಲ್ಲಿ ಯಾರಿಗೂ ಗಾಯಗಳಾದ ವರದಿಗಳಿಲ್ಲ ಎಂದು ಸಾಮಾಜಿಕ ಮಾಧ್ಯಮ ಟೆಲಿಗ್ರಾಮ್‌ನ ತನ್ನ ಖಾತೆಯಲ್ಲಿ ಸ್ಥಾವರದ ಸಂವಹನ ವಿಭಾಗ ತಿಳಿಸಿದೆ.

'ವ್ಯಾಪಾರ ಪುನರಾರಂಭಕ್ಕೆ ಚೀನಾ ತಾತ್ವಿಕ ಒಪ್ಪಿಗೆ'

ಶಿಮ್ಲಾ (ಪಿಟಿಐ): ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರು ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯ ಶಿಪ್ಕಿ-ಲಾ ಮೂಲಕ ವ್ಯಾಪಾರವನ್ನು ಪುನರಾರಂಭಿಸುವ ಪ್ರಸ್ತಾವಕ್ಕೆ ಚೀನಾ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ರಾಜ್ಯ ಸರ್ಕಾರ ಭಾನುವಾರ ಹೇಳಿದೆ.

ಶಿಪ್ಕಿ-ಲಾ (ಹಿಮಾಚಲ ಪ್ರದೇಶ), ಲಿಪುಲೇಖ್ (ಉತ್ತರಾಖಂಡ) ಹಾಗೂ ನಾಥು ಲಾ (ಸಿಕ್ಕಿಂ) ಗಡಿಭಾಗದ ಮೂಲಕ ವ್ಯಾಪಾರವನ್ನು ಪುನರಾರಂಭಿಸಲು ಭಾರತ ಸರ್ಕಾರವು ಚೀನಾದೊಂದಿಗೆ ಚರ್ಚೆಯನ್ನು ಪ್ರಾರಂಭಿಸಿದೆ ಎಂದು ಸಚಿವ ಎಸ್. ಜೈಶಂಕರ್ ಅವರು ರಾಜ್ಯ ಸರ್ಕಾರಕ್ಕೆ ತಿಳಿಸಿದ್ದಾರೆ. ಕೋವಿಡ್‌ನಿಂದಾಗಿ ವ್ಯಾಪಾರವನ್ನು ಸ್ಥಗಿತಗೊಳಿಸಲಾಗಿತ್ತು.

ಕೆಲಸದ ಅವಧಿ ವಿಸ್ತರಣೆ ಆರೋಗ್ಯದ ಮೇಲೆ ಪರಿಣಾಮ

ಮುಂಬೈ (ಪಿಟಿಐ): ಕೆಲಸದ ಅವಧಿಯ ವಿಸ್ತರಣೆಯು ಆರೋಗ್ಯ ಮತ್ತು ವೃತ್ತಿ–ಜೀವನದ ಸಮತೋಲನದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು 'ಜೀನಿಯಸ್ ಎಚ್‌ಆರ್‌ಟೆಕ್' ನಡೆಸಿದ ಸಮೀಕ್ಷೆಯು ಕಂಡುಕೊಂಡಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡವರ ಪೈಕಿ ಶೇ 44ರಷ್ಟು ಉದ್ಯೋಗಿಗಳು ಹೆಚ್ಚುವರಿ ಪ್ರಯೋಜನ ಇಲ್ಲದೇ ಕೆಲಸದ ಅವಧಿಯನ್ನು ವಿಸ್ತರಿಸುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಕೆಲಸ ಅವಧಿಯ ವಿಸ್ತರಣೆಯು ವೈಯಕ್ತಿಕ ಸಮಯ, ಆರೋಗ್ಯ ಮತ್ತು ಒಟ್ಟಾರೆ ಕ್ಷೇಮದ ಮೇಲೆ ಪರಿಣಾಮ ಬೀರಲಿದೆ ಎಂದು ಅವರು ಹೇಳಿದ್ದಾರೆ.

ಸೂಕ್ತ ಪರಿಹಾರ ನೀಡಿದರೆ ಹೆಚ್ಚಿನ ಅವಧಿಗೆ ಕೆಲಸ ಮಾಡುವುದನ್ನು ಪರಿಗಣಿಸುವುದಾಗಿ ಶೇ 40ರಷ್ಟು ಉದ್ಯೋಗಿಗಳು ಹೇಳಿದ್ದಾರೆ. ಉಳಿದ ಶೇ 16ರಷ್ಟು ಉದ್ಯೋಗಿಗಳು ಹೆಚ್ಚಿನ ಅವಧಿಗೆ ಕೆಲಸ ಮಾಡಲು ಸಿದ್ಧರಿದ್ದಾರೆ ಅಥವಾ ಹೆಚ್ಚಿನ ಅವಧಿಗೆ ಕೆಲಸ ಮಾಡಿದರೆ ಉತ್ಪಾದನೆ ಹೆಚ್ಚುತ್ತದೆ ಎಂದು ನಂಬಿದ್ದಾರೆ.

ಆನ್‌ಲೈನ್ ಮೂಲಕ ಜುಲೈ 1ರಿಂದ 31ರ ವರೆಗೆ ಸಮೀಕ್ಷೆ ನಡೆಸಲಾಗಿತ್ತು. ವಿವಿಧ ವಲಯದಿಂದ 2,076 ಉದ್ಯೋಗಿ ಗಳು ಸಮೀಕ್ಷೆಯಲ್ಲಿ ಭಾಗವಹಿಸಿದ್ದರು.

ಯೆಮನ್ ರಾಜಧಾನಿ ಸನಾದಲ್ಲಿರುವ ಹುಥಿ ಬಂಡುಕೋರರ ಸೇನಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ಪಡೆಗಳು ಭಾನುವಾರ ದಾಳಿ ನಡೆಸಿವೆ ಎಎಫ್‌ಪಿ ಚಿತ್ರ

ಯೆಮನ್ ರಾಜಧಾನಿ ಸನಾ ಮೇಲೆ ಇಸ್ರೇಲ್ ದಾಳಿ, ಇಬ್ಬರ ಸಾವು

ಸನಾ(ಯೆಮನ್)(ಎಎಫ್‌ಪಿ): ಇಸ್ರೇಲ್ ಪಡೆಗಳು ಯೆಮನ್ ರಾಜಧಾನಿ ಸನಾ ಮೇಲೆ ಭಾನುವಾರ ದಾಳಿ ನಡೆಸಿದ್ದು, ಕನಿಷ್ಠ ಇಬ್ಬರು ಮೃತಪಟ್ಟು, ಇತರ 35 ಮಂದಿ ಗಾಯಗೊಂಡಿದ್ದಾರೆ ಎಂದು ಇರಾನ್ ಬೆಂಬಲಿತ ಹುಥಿ ಬಂಡುಕೋರರು ಹೇಳಿದ್ದಾರೆ.

ಬಂಡುಕೋರರ ಹಿಡಿತದಲ್ಲಿರುವ ಸನಾ ನಗರದ ಆಗಸದಲ್ಲಿ ಬೃಹದಾಕಾರದ ಬೆಂಕಿ ಚೆಂಡುಗಳು ಅಬ್ಬರಿಸುತ್ತಿರುವುದು, ದಟ್ಟವಾದ ಕಪ್ಪು ಹೊಗೆ ಹೊರಹೊಮ್ಮುತ್ತಿರುವ ದೃಶ್ಯಗಳು ಕಂಡುಬಂದಿವೆ ಎಂದು ಎಎಫ್‌ಪಿ ವರದಿ ಮಾಡಿದೆ.

'ಸನಾದಲ್ಲಿರುವ ಹುಥಿ ಬಂಡುಕೋರರ ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಅಧ್ಯಕ್ಷರ ಅರಮನೆ, ಎರಡು ವಿದ್ಯುತ್ ಸ್ಥಾವರಗಳು ಹಾಗೂ ಇಂಧನ ಸಂಗ್ರಹಾಗಾರ ಮೇಲೂ ದಾಳಿ ಮಾಡಲಾಗಿದೆ' ಎಂದು ಇಸ್ರೇಲ್ ಸೇನೆ ಹೇಳಿದೆ.

ರಫ್ತುದಾರರಿಗೆ 6 ವರ್ಷ ನೆರವು ಸಾಧ್ಯತೆ

ನವದೆಹಲಿ (ಪಿಟಿಐ): ರಫ್ತು ವಹಿವಾಟಿನಲ್ಲಿ ತೊಡಗಿರುವವರಿಗೆ 'ರಫ್ತು ಉತ್ತೇಜನಾ ಮಿಷನ್' ಅಡಿಯಲ್ಲಿ ಆರು ಹಣಕಾಸು ವರ್ಷಗಳವರೆಗೆ ₹25 ಸಾವಿರ ಕೋಟಿ ಮೊತ್ತದ ಬೆಂಬಲ ಕ್ರಮ ಘೋಷಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಈ ಮಿಷನ್‌ಅನ್ನು ಫೆಬ್ರುವರಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಘೋಷಿಸಲಾಗಿದೆ.

'ರಫ್ತುದಾರರಿಗೆ ಸಾಲವು ಸುಲಭವಾಗಿ ಹಾಗೂ ಕೈಗೆಟಕುವ ದರದಲ್ಲಿ ಸಿಗುವಂತೆ ಮಾಡುವುದು ಮುಖ್ಯ ಆದ್ಯತೆಯಾಗಿ ಇರಲಿದೆ' ಎಂದು ಮೂಲಗಳು ಹೇಳಿವೆ. ಪ್ರಸ್ತಾವನೆಯನ್ನು ಕೇಂದ್ರ ವಾಣಿಜ್ಯ ಸಚಿವಾಲಯವು ಹಣಕಾಸು ಸಚಿವಾಲಯಕ್ಕೆ ರವಾನಿಸಿದೆ.

ವಾಣಿಜ್ಯ ಸಚಿವಾಲಯದ ಪ್ರಸ್ತಾವಕ್ಕೆ ಅನುಮತಿ ದೊರೆತು, ಅದು ಅನುಷ್ಠಾನಕ್ಕೆ ಬಂದರೆ ರಫ್ತು ವಹಿವಾಟಿನಲ್ಲಿ ತೊಡಗಿರುವವರಿಗೆ ಜಾಗತಿಕ ಮಟ್ಟದ ವ್ಯಾಪಾರ ಅನಿಶ್ಚಿತತೆಗಳಿಂದ ತುಸುಮಟ್ಟಿಗೆ ರಕ್ಷಣೆ ಸಿಕ್ಕಂತೆ ಆಗುತ್ತದೆ. ಅಮೆರಿಕವು ಭಾರತದ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ವಿಧಿಸಿದೆ. ಶೇ 25ರಷ್ಟು ಸುಂಕವು ಈಗಾಗಲೇ ಜಾರಿಗೆ ಬಂದಿದೆ, ಇನ್ನುಳಿದ ಶೇ 25ರಷ್ಟು ಸುಂಕವು ಆಗಸ್ಟ್ 27ರಿಂದ ಅನ್ವಯ ಆಗಲಿದೆ.

ಹಣಕಾಸು ಸಚಿವಾಲಯದಿಂದ ಅನುಮತಿ ದೊರೆತ ನಂತರದಲ್ಲಿ ವಾಣಿಜ್ಯ ಸಚಿವಾಲಯವು ತನ್ನ ಪ್ರಸ್ತಾವನೆಯನ್ನು ಕೇಂದ್ರ ಸಂಪುಟದ ಮುಂದೆ ಇರಿಸಲಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹540	100 ಕ್ಕೆ	₹548
12 ಕ್ಕೆ	₹72		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹312-616
ದ್ವಿತಳಿ (ಬಿ.ವಿ)	₹371-770

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪಾಕಿಸ್ತಾನದ ಕ್ಷಮೆಯಾಚನೆಗೆ ಬಾಂಗ್ಲಾ ಆಗ್ರಹ

ಇಶಾಖ್ ಡಾರ್

ಢಾಕಾ (ಪಿಟಿಐ): 1971ರ ನರಮೇಧದ ಕುರಿತು ಪಾಕಿಸ್ತಾನ ಕ್ಷಮೆ ಯಾಚಿಸಬೇಕು ಎಂಬ ಆಗ್ರಹವೂ ಸೇರಿದಂತೆ ಪಾಕಿಸ್ತಾನದೊಂದಿಗೆ ಬಹುಕಾಲದಿಂದ ಇತ್ಯರ್ಥವಾಗದೆ ಉಳಿದಿರುವ ವಿವಿಧ ವಿಚಾರಗಳನ್ನು ಬಾಂಗ್ಲಾದೇಶ ಪ್ರಸ್ತಾಪಿಸಿದೆ.

ಬಾಂಗ್ಲಾದೇಶ ಪ್ರವಾಸ ಕೈಗೊಂಡಿರುವ ಪಾಕಿಸ್ತಾನಿ ವಿದೇಶಾಂಗ ಸಚಿವ ಇಶಾಖ್ ಡಾರ್ ಅವರೊಂದಿಗೆ ಮಧ್ಯಂತರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಲಹೆಗಾರ ಎಂ.ತೌಶಿದ್ ಹುಸೈನ್ ಅವರು ಈ ವಿಚಾರಗಳ ಕುರಿತು ಚರ್ಚೆ ನಡೆಸಿದ್ದಾರೆ.

'1971ರ ಘಟನೆ ಕುರಿತ ಕ್ಷಮೆಯಾಚನೆ ಸೇರಿದಂತೆ ಬಹುಕಾಲದಿಂದ ಇತ್ಯರ್ಥವಾಗದೆ ಉಳಿದಿರುವ ವಿವಿಧ ವಿಚಾರಗಳ ಬಗ್ಗೆ ಸಚಿವ ಡಾರ್ ಅವರೊಂದಿಗೆ ಮಾತುಕತೆ ನಡೆಸಿದ್ದೇವೆ. 54 ವರ್ಷಗಳಿಂದ ಬಗೆಹರಿಯದ ಸಮಸ್ಯೆಗಳು ಒಂದೇ ದಿನದಲ್ಲಿ ಬಗೆಹರಿಯಲಿ ಎಂದು ಬಯಸುವುದು ತಪ್ಪು. ಆದರೂ, ಈ ವಿಚಾರಗಳಿಗೆ ಸಂಬಂಧಿಸಿದಂತೆ ಎರಡೂ ರಾಷ್ಟ್ರಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಿವೆ' ಎಂದೂ ಹುಸೈನ್ ತಿಳಿಸಿದ್ದಾರೆ.

ಡಾರ್ ಅವರೂ ಈ ಬಗ್ಗೆ ಪ್ರತಿಕ್ರಿಯಿಸಿ,'1974ರಲ್ಲಿ ಭಾರತವು ಒಳಗೊಂಡಂತೆ ನಡೆದ ತ್ರಿಪಕ್ಷೀಯ ಸಭೆ ಹಾಗೂ ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಪರ್ವೇಜ್ ಮುಷರಫ್ ಅವರು ಢಾಕಾಗೆ ಭೇಟಿ ನೀಡಿದ್ದ ಸಂದರ್ಭದಲ್ಲಿಯೇ ನರಮೇಧದ ವಿಚಾರವನ್ನು ಇತ್ಯರ್ಥಗೊಳಿಸಲಾಗಿದೆ' ಎಂದು ಹೇಳಿದ್ದಾರೆ.

ಬಾಂಗ್ಲಾ ನಾಯಕರ ಜತೆ ಡಾರ್ ಸಭೆ

ಉಭಯ ರಾಷ್ಟ್ರಗಳ ನಡುವಿನ ಸಂಬಂಧ ವೃದ್ಧಿಗೊಳಿಸುವ ನಿಟ್ಟಿನಲ್ಲಿ ಬಾಂಗ್ಲಾದ ಎಲ್ಲಾ ರಾಜಕೀಯ ಪಕ್ಷಗಳ ನಾಯಕರ ಜತೆಗೆ ಇಶಾಖ್ ಡಾರ್ ಅವರು ಸರಣಿ ಮಾತುಕತೆ, ಸಭೆಗಳನ್ನು ನಡೆಸಿದ್ದಾರೆ.

ಬಾಂಗ್ಲಾದ ಮಾಜಿ ಪ್ರಧಾನಿ ಖಲೀದಾ ಜಿಯಾ ನೇತೃತ್ವದ ಬಿಎನ್‌ಪಿ ಪಕ್ಷದ ನಾಯಕರ ಜತೆಗೆ ಹಾಗೂ ದೇಶದ ಅತಿದೊಡ್ಡ ರಾಜಕೀಯ ಪಕ್ಷವಾಗಿರುವ ಜಮಾತ್–ಇ–ಇಸ್ಲಾಮಿ ನಾಯಕರ ಜತೆಗೆ ಸಭೆ ನಡೆಸಿದ್ದಾರೆ.

ಖಾಲಿ ಹುದ್ದೆ ಭರ್ತಿಗೆ ಆಮೆಗತಿ

ಒಂದನೇ ಪುಟದಿಂದ...

ಕಳೆದ ಐದು ವರ್ಷಗಳಲ್ಲಿ (2020–2024) ಕರ್ನಾಟಕ ಲೋಕಸೇವಾ ಆಯೋಗವು ಖಾಲಿ ಇರುವ ವಿವಿಧ ವೃಂದಗಳ 9,467 ಹುದ್ದೆಗಳಿಗೆ ನೇಮಕಾತಿಗಾಗಿ 67 ಅಧಿಸೂಚನೆ ಗಳನ್ನು ಹೊರಡಿಸಿದೆ. ಅದರಲ್ಲಿ ಲಿಖಿತ ಪರೀಕ್ಷೆ, ಮೌಖಿಕ ಸಂದರ್ಶನ ಪೂರ್ಣಗೊಂಡಿರುವ ಹುದ್ದೆಗಳ ಸಂಖ್ಯೆ 6,055. 2,850 ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಬಾಕಿಯಿದೆ.

ಹುದ್ದೆಗಳ ಭರ್ತಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಡುವಂತೆ ನೇಮಕಾತಿ ಪ್ರಾಧಿಕಾರಿಗಳಿಗೆ ಪ್ರಸ್ತಾವಗಳನ್ನು ಕಳುಹಿಸಿದರೂ ಅಧಿಸೂಚನೆ ಹೊರಡಿಸುವುದು, ಲಿಖಿತ ಪರೀಕ್ಷೆ, ಸಂದರ್ಶನ ಮತ್ತಿತರ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬದಿಂದ ಹುದ್ದೆಗಳ ಭರ್ತಿಗೆ ಸುದೀರ್ಘ ಅವಧಿ ತೆಗೆದು ಕೊಳ್ಳುತ್ತಿದೆ ಎನ್ನುವುದು ಕೆಲವು ಇಲಾಖೆಗಳ ಮುಖ್ಯಸ್ಥರ ಆರೋಪ.

ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದರೂ ನೇರ ನೇಮಕಾತಿ ಹುದ್ದೆಗಳಿಗೆ ಸಂಬಂಧಿಸಿದಂತೆ ಇಲಾಖೆಗಳಿಂದ ಸ್ವೀಕೃತವಾಗುವ ಪ್ರಸ್ತಾವ ಪರಿಶೀಲಿಸಿ, ಸಾರ್ವಜನಿಕ ಕೆಲಸ ಕಾರ್ಯಗಳಿಗೆ ತೊಂದರೆ ಆಗದಂತೆ ಮತ್ತು ಇಲಾಖೆಗೆ ನಿಗದಿಪಡಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ ಅಗತ್ಯಕ್ಕೆ ಅನುಗುಣವಾಗಿ ಹುದ್ದೆಗಳ ಭರ್ತಿಗೆ ಅನುಮತಿ ನೀಡ ಲಾಗುತ್ತಿದೆ ಎಂದು ಆರ್ಥಿಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಗ್ರೂಪ್ ಸಿ ವೃಂದದ ಕೆಲವು ಹುದ್ದೆ (ಶೀಘ್ರ ಲಿಪಿಗಾರರು, ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್ ಡಿ ವೃಂದ) ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಕೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) 2005ರಲ್ಲಿಯೇ ಸೂಚನೆ ನೀಡಿದೆ. ಅದರಂತೆ ಮಂಜೂರಾದ ಖಾಲಿ ಹುದ್ದೆಗಳಿಗೆ ಎದುರಾಗಿ ಅಂದಾಜು 80,005 ಹುದ್ದೆಗಳನ್ನು ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ. ಅಲ್ಲದೆ, ಮಂಜೂರಾಗಿ ಖಾಲಿ ಇರುವ ಹುದ್ದೆಗಳ ಎದುರಾಗಿ ಅರ್ಹ ಸಿಬ್ಬಂದಿ, ಅಧಿಕಾರಿ ಗಳನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ, ಪ್ರಭಾರ ಭತ್ಯೆಯನ್ನೂ ನೀಡಲಾಗುತ್ತಿದೆ ಎಂದರು.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲು ಕಾರಣಕ್ಕೆ, ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸತಾಗಿ ಯಾವುದೇ ಅಧಿಸೂಚನೆ ಹೊರಡಿಸಬಾರದೆಂದು ಡಿಪಿಎಆರ್ 2024ರ ನ. 25ರಂದು ಸುತ್ತೋಲೆ ಹೊರಡಿಸಿದೆ. ಹೀಗಾಗಿ ಕಳೆದ ಒಂಬತ್ತು ತಿಂಗಳಿನಿಂದ ಯಾವುದೇ ಇಲಾಖೆಗಳು ಹೊಸ ನೇಮಕಾತಿ ಪ್ರಕ್ರಿಯೆ ನಡೆಸಿಲ್ಲ. ಅಲ್ಲದೆ, ನೇಮಕಾತಿ ಪ್ರಾಧಿಕಾರಗಳು ಹೊಸ ಅಧಿಸೂಚನೆಯನ್ನು ಹೊರಡಿಸಿಲ್ಲ. ನ. 25ಕ್ಕೂ ಮೊದಲು ಹೊರಡಿಸಿದ್ದ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ಮಾತ್ರ ನೇಮಕಾತಿ ಪ್ರಕ್ರಿಯೆಗಳು ನಡೆಯುತ್ತಿವೆ ಎಂದೂ ತಿಳಿಸಿದರು.

'ಕೆಪಿಎಸ್‌ಸಿಯಲ್ಲಿ ಸದಸ್ಯರ ನಡುವಿನ ಭಿನ್ನಮತದಿಂದಾಗಿ ನಿಯಮಿತವಾಗಿ ಸಭೆ ನಡೆಯದ ಕಾರಣ ಹುದ್ದೆಗಳ ಭರ್ತಿಗೆ ತೊಂದರೆ ಆಗಿತ್ತು. ಆದರೆ, ಸದ್ಯ ಅಂತಹ ಯಾವುದೇ ಭಿನ್ನಮತ ಇಲ್ಲ. ಹೀಗಾಗಿ ಪ್ರತಿ ಮಂಗಳವಾರ ಆಯೋಗದ ಸಭೆ ನಡೆಯುತ್ತಿದೆ. ಈಗಾಗಲೇ ನೇಮಕಾತಿ ಪ್ರಕ್ರಿಯೆಗಳು ಪೂರ್ಣಗೊಂಡಿರುವ ಹುದ್ದೆಗಳ ತಾತ್ಕಾಲಿಕ, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಚಟುವಟಿಕೆ ಮುಂದುವರಿದಿದೆ' ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಭಾರತೀಯ ವಾಯುಪಡೆ ಕಾರ್ಯಕ್ರಮದಲ್ಲಿ ಗಗನಯಾತ್ರಿ ಶುಭಾಂಶು ಶುಕ್ಲಾ

'ರಾಕೇಶ್ ಶರ್ಮಾ ಕಥೆ ಕೇಳುತ್ತಾ ಬೆಳೆದೆ'

ಶುಭಾಂಶು ಶುಕ್ಲಾ

ನವದೆಹಲಿ/ಲಖನೌ (ಪಿಟಿಐ): ನಾನು ನಾಚಿಕೆ, ಸಂಕೋಚ ಸ್ವಭಾವದ ವ್ಯಕ್ತಿಯಾಗಿ ಬೆಳೆದೆ. ಆದರೆ, ಚಿಕ್ಕವನಿದ್ದಾಗಿನಿಂದಲೂ ಬಾಹ್ಯಾಕಾಶಕ್ಕೆ ಹಾರುವ ಕನಸು ಕಂಡಿರಲಿಲ್ಲ' ಎಂದು ಗಗನಯಾತ್ರಿ ಶುಭಾಂಶು ಶುಕ್ಲಾ ಹೇಳಿದರು.

ಭಾರತೀಯ ವಾಯುಪಡೆ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಶುಕ್ಲಾ ಅವರು 'ಬಾಹ್ಯಾಕಾಶಕ್ಕೆ ಹಾರುವ ಕನಸಿಲ್ಲದಿದ್ದರೂ, ಬಾಲ್ಯದಿಂದ ಗಗನಯಾನಿ ರಾಕೇಶ್ ಶರ್ಮಾ ಅವರ ಬಾಹ್ಯಾಕಾಶಯಾನದ ಕಥೆಗಳನ್ನು ಕೇಳುತ್ತಾ ಬೆಳೆದೆ' ಎಂದು ವಿವರಿಸಿದರು.

ಶುಕ್ಲಾ ಅವರು, 'ಆಕ್ಸಿಯಂ–4'ರ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದಾಗಿನ ಅನುಭವಗಳನ್ನು ಕಾರ್ಯಕ್ರಮದಲ್ಲಿ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಶುಕ್ಲಾ ಸೇರಿ ನಾಲ್ವರು ಗಗನಯಾತ್ರಿಗಳನ್ನು ಸನ್ಮಾನಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, 'ಗಗನಯಾನ ಮಿಷನ್, ಆತ್ಮನಿರ್ಭರ ಭಾರತದ ಪ್ರಯಾಣದಲ್ಲಿ 'ಹೊಸ ಅಧ್ಯಾಯ'ವನ್ನು ಸೂಚಿಸುತ್ತಿದೆ' ಎಂದು ಪ್ರತಿಪಾದಿಸಿದರು.

ಶುಕ್ಲಾ ಸ್ವಾಗತಕ್ಕೆ ಅದ್ದೂರಿ ಸಿದ್ಧತೆ: ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಭೂಮಿಗೆ ಮರಳಿದ ನಂತರ ಇದೇ ಮೊದಲ ಬಾರಿಗೆ ತವರು ಜಿಲ್ಲೆ ಲಖನೌಗೆ ಸೋಮವಾರ ಭೇಟಿ ನೀಡುತ್ತಿರುವ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಸ್ವಾಗತಿಸಲು ಇಲ್ಲಿ ಅದ್ದೂರಿ ಸಿದ್ಧತೆ ನಡೆದಿದೆ.

ತಮ್ಮೂರಿನ ಹುಡುಗನನ್ನು ಸ್ವಾಗತಿಸಲು ಸ್ಥಳೀಯರು, ಕುಟುಂಬದ ಸದಸ್ಯರು ಉತ್ಸುಕರಾಗಿದ್ದಾರೆ. ಬೆಳಿಗ್ಗೆ 8.45ಕ್ಕೆ ಲಖನೌ ವಿಮಾನ ನಿಲ್ದಾಣ ತಲುಪಲಿರುವ ಶುಕ್ಲಾ ಅವರು ಮೂರು ದಿನ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಶುಕ್ಲಾ ವಿದ್ಯಾಭ್ಯಾಸ ಮಾಡಿದ 'ದಿ ಸಿಟಿ ಮಾಂಟೆಸ್ಸರಿ ಶಾಲೆ' (ಸಿಎಂಎಸ್) ಯವರು, ತಮ್ಮ ವಿದ್ಯಾರ್ಥಿಯ ಸಾಧನೆಯನ್ನು ಗೌರವಿಸಲು 'ಗ್ರಾಂಡ್ ವಿಕ್ಟರಿ ಪರೇಡ್' ಆಯೋಜಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಅನುಭವವುಳ್ಳ ವಾಹನ_ಚಾಲಕರು ಬೇಕಾಗಿದ್ದಾರೆ. Heavy vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ: ಗಾಯತ್ರಿ ಅಸೋಸಿಯೆಟ್ಸ್ ಬೈರತಿ, ಬೆಂಗಳೂರು_560077. 8453353646/ 6362872796/ 9448488536.

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Multiple Vacancy

REQUIRED EXPERIENCED Telecaller (BOYS & GIRLS) FieldExecutive, Team leader For MNC bank collection. 9886553838, 7019700755.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಕರ್ನಾಟಕದಾದ್ಯಂತ ಕಂಪನಿಗಳಿಗೆ work from Home ಕೆಲಸಕ್ಕೆ ಯುವಕ & ಯುವತಿಯರು ಬೇಕಾಗಿದ್ದಾರೆ. (18,000/-) 7th,10th,Any Degree. 9019427194, 6364595602

Wanted

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, TVS, ಹಿಮಾಲಯ ಬ್ರಿಟಾನಿಯಾಗಳಿಗೆ SSLC, PUC, Degree ITI Degree, Diploma ಆದವರು 18K/86K (ವಿದ್ಯಾರ್ಹತೆಯಿಲ್ಲದವರಿಗೂ ವಸತಿಯೂಟವಿದೆ) 7204412304/ 7625020184

ಸೌಂದರ್ಯ-ಆರೋಗ್ಯ

Health Clinic

ಮಂಡಿನೋವು, ಬೆನ್ನುನೋವು, ಕತ್ತುನೋವು, ಲಕ್ವ, ಕೀಲುನೋವು, ಔಷಧಿ ಶಸ್ತ್ರ ಚಿಕಿತ್ಸೆ ಇಲ್ಲದೇ, ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಾದ ಸಂಪೂರ್ಣ ಉಚಿತ ಚಿಕಿತ್ಸೆ ದೇವನಹಳ್ಳಿಯಲ್ಲಿ ಕೊಡಲಾಗುವುದು. Ph:9036316959.

ಭವಿಷ್ಯ

Astrology

ಕುಟ್ಟಿಚಾತನ್ . ವ್ಯಾಪಾರ, ಜಗಳ, ಜಾಗಮಾರಾಟ, ಮದುವೆ, ವಶೀಕರಣ ನಿಮ್ಮೆಲ್ಲಾ ಸಮಸ್ಯೆಗಳಿಗೆ ಕೇರಳದ ಚಾತನ್ ಶಕ್ತಿಯಿಂದ ಪರಿಹಾರ. ಕೇರಳ–9539594369

ವೈಯಕ್ತಿಕ

Change of Name

ನಾವು, ಜಿ ಶ್ರೀನಿವಾಸ ರೆಡ್ಡಿ ಮತ್ತು ಜಿ ಹರಿತಾ, #13, ಆರ್ಕಿಡ್, 8ನೇ ಕ್ರಾಸ್, ನಂಜಪ್ಪ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು-560097 ರಲ್ಲಿ ವಾಸಿಸುತ್ತಿದ್ದೇವೆ, ನಮ್ಮ ಮಗಳ ಹೆಸರನ್ನು ಎಲ್ಲಾ ಉದ್ದೇಶಗಳಿಗಾಗಿ ಸಾಯಿ ಸಾನ್ವಿ ರೆಡ್ಡಿಯಿಂದ ಜಿ ಸಾಯಿ ಇಶಾನ್ವಿ ರೆಡ್ಡಿ ಎಂದು ಬದಲಾಯಿಸಿದ್ದೇವೆ, ಜುಲೈ 17, 2018 ರಂದು ಬೆಂಗಳೂರಿನ ನೋಟರಿ ಪಬ್ಲಿಕ್ ಶ್ರೀಮತಿ ವತ್ಸಲಾ ಅವರ ಮುಂದೆ ಪ್ರಮಾಣವಚನ ಸ್ವೀಕರಿಸಿದ್ದೇವೆ.

ಪ್ರವಾಸ

Travel Agencies

ಕಾಮಾಕ್ಯ ಪ್ರವಾಸ 8 ದಿನಗಳು 23/9/2025 ಗುವಾಹಟಿ, ಶಿಲ್ಲೊಂಗ್, ಮೇಘಾಲಯ, ಅಸ್ಸಾಂ, ಕಾಜಿರಂಗ ನ್ಯಾಷನಲ್ ಪಾರ್ಕ್, ಚಿರಾಪುಂಜಿ, ರೂಟ್ ಬ್ರಿಡ್ಜ್ ಇತರೆ ಸ್ಥಳಗಳು ಸುವರ್ಣಯಾತ್ರಾ 9019462508 9480843945

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಡಿ.12ಕ್ಕೆ ಡೆವಿಲ್ ದರ್ಶನ



ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತೆ ಜೈಲು ಸೇರಿರುವುದರಿಂದ ಅವರ 'ಡೆವಿಲ್' ಚಿತ್ರದ ಕಥೆ ಏನಾಗಬಹುದೆಂಬ ಕುತೂಹಲವಿತ್ತು. ಇದೀಗ ಆ ಕುತೂಹಲಕ್ಕೆ ತೆರೆ ಬಿದ್ದಿದ್ದು, ಬಹು ನಿರೀಕ್ಷಿತ 'ದಿ ಡೆವಿಲ್' ಚಿತ್ರ ಡಿಸೆಂಬರ್ 12ರಂದು ತೆರೆ ಕಾಣಲಿದೆ. ಜತೆಗೆ ಚಿತ್ರದ ಮೊದಲ ಹಾಡು 'ಇದ್ರೆ ನೆಮ್ಮದಿಯಾಗ್ ಇರ್ಬೇಕ್' ಕೂಡ ಬಿಡುಗಡೆಗೊಂಡಿದೆ.

ದರ್ಶನ್ ಹಿಂದಿನ ಚಿತ್ರ 'ಕಾಟೇರ' 2023ರ ಡಿಸೆಂಬರ್‌ನಲ್ಲಿ ತೆರೆ ಕಂಡಿದ್ದು. ಅದಕ್ಕೂ ಒಂದು ತಿಂಗಳ ಮೊದಲೇ ದರ್ಶನ್ 'ಡೆವಿಲ್' ತಮ್ಮ ಮುಂದಿನ ಚಿತ್ರ ಎಂದು ಘೋಷಿಸಿದ್ದರು. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ 2024ರ ಡಿಸೆಂಬರ್‌ನಲ್ಲಿ ಈ ಚಿತ್ರ ತೆರೆಯಲ್ಲಿರಬೇಕಿತ್ತು. 2024ರ ಪ್ರಾರಂಭದಿಂದಲೇ ಚಿತ್ರೀಕರಣ ಶುರುವಾಗಿತ್ತು. ಆದರೆ ಜೂನ್‌ನಲ್ಲಿ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಬಂಧನವಾಗಿ ಚಿತ್ರೀಕರಣ ಸ್ಥಗಿತಗೊಂಡಿತು.

ಅಲ್ಲಿಂದ ಈ ಚಿತ್ರದ ಭವಿಷ್ಯ ಒಂದು ರೀತಿ ಮುಳ್ಳು ತಂತಿ ಮೇಲಿನ ನಡಿಗೆಯಂತೆಯೇ ಇತ್ತು. ದರ್ಶನ್‌ಗೆ ಜಾಮೀನು ದೊರೆತು ಎಲ್ಲವೂ ಒಂದು ಹಂತಕ್ಕೆ ಬಂದ ಬಳಿಕ ಫೆಬ್ರವರಿ 2025ರಲ್ಲಿ ಚಿತ್ರೀಕರಣ ಪುನರಾರಂಭವಾಯಿತು. ಚಿತ್ರೀಕರಣ ಮುಗಿಸಿ, ಪೋಸ್ಟ್ ಪ್ರೊಡಕ್ಷನ್ ಜತೆಗೆ ಪ್ರಚಾರ ಕಾರ್ಯ ಪ್ರಾರಂಭಿಸಬೇಕೆಂದು ತಂಡ ಸಿದ್ಧತೆ ನಡೆಸುತ್ತಿದ್ದಾಗ ದರ್ಶನ್ ಜಾಮೀನು ರದ್ದುಗೊಂಡು ತಂಡಕ್ಕೆ ಮತ್ತೆ ಸಂಕಷ್ಟ ಎದುರಾಯ್ತು.

ಹಾಡು ಬಿಡುಗಡೆ

2025ರ ಆ.15ರಂದು 'ಇದ್ರೆ ನೆಮ್ಮದಿಯಾಗ್ ಇರ್ಬೇಕ್' ಹಾಡನ್ನು ಬಿಡುಗಡೆ ಮಾಡಿ ಚಿತ್ರ ಪ್ರಚಾರಕ್ಕೆ ಚಾಲನೆ ನೀಡುವುದಾಗಿ ತಂಡ ಘೋಷಿಸಿತ್ತು. ಆದರೆ ಅದೇ ವೇಳೆಗೆ ದರ್ಶನ್ ಮತ್ತೆ ಬಂಧಿತರಾಗಿದ್ದು, ಆ.24ರಂದು ಅಂತಿಮವಾಗಿ ಹಾಡು ಬಿಡುಗಡೆಗೊಂಡಿದೆ. ಇದರ ಜತೆಜತೆಗೆ ಚಿತ್ರ ಬಿಡುಗಡೆ ದಿನಾಂಕವನ್ನೂ ತಂಡ ಪ್ರಕಟಿಸಿದೆ.

ದರ್ಶನ್, ರಚನಾ ರೈ, ಶರ್ಮಿಳಾ ಮಾಂಡ್ರೆ ಮುಂತಾದವರು ಚಿತ್ರದಲ್ಲಿದ್ದಾರೆ. 'ಮಿಲನ' ಪ್ರಕಾಶ್ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ, ಸುಧಾಕರ್ ರಾಜ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

ಪ್ರಚಾರಕ್ಕೆ ವಿಜಯಲಕ್ಷ್ಮಿ ಸಾಥ್

ದರ್ಶನ್ ಪತ್ನಿ ವಿಜಯಲಕ್ಷ್ಮಿ ಚಿತ್ರ ಪ್ರಚಾರಕ್ಕೆ ಸಾಥ್ ನೀಡುತ್ತಿದ್ದಾರೆ. ಚಿತ್ರ ಬಿಡುಗಡೆ ದಿನಾಂಕದ ಪೋಸ್ಟರ್ ಕೂಡ ದರ್ಶನ್ ಹಾಗೂ ವಿಜಯಲಕ್ಷ್ಮಿ ಅವರ ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕವೇ ಬಿಡುಗಡೆಗೊಂಡಿದೆ.

'ನಿಮ್ಮ ಚಾಲೆಂಜಿಂಗ್ ಸ್ಟಾರ್ ದರ್ಶನ್ ಹೃದಯದಲ್ಲಿ ನೀವೆಲ್ಲರೂ ಇದ್ದೀರಿ. ಅವರು ಮರಳಿ ಬಂದು ನೇರವಾಗಿ ನಿಮ್ಮನ್ನು ಸಂಪರ್ಕಿಸುವ ತನಕ ನಾನು ಅವರ ಸಾಮಾಜಿಕ ಮಾಧ್ಯಮವನ್ನು ನಾನು ನಿರ್ವಹಿಸುತ್ತೇನೆ. ಅವರ ಪರವಾಗಿ ಅಪ್‌ಡೇಟ್ ನೀಡುತ್ತೇನೆ ಮತ್ತು ಸಿನಿಮಾ ಪ್ರಚಾರ ಮಾಡುತ್ತೇನೆ' ಎಂದು ಕೆಲ ದಿನಗಳ ಹಿಂದೆ ವಿಜಯಲಕ್ಷ್ಮಿ ದರ್ಶನ್ ಹೇಳಿದ್ದರು. ಜತೆಗೆ 'ಡೆವಿಲ್' ಹೊಸ ಪೋಸ್ಟರ್ ಹಂಚಿಕೊಂಡು ಚಿತ್ರ ಬಿಡುಗಡೆ ಮುನ್ಸೂಚನೆ ನೀಡಿದ್ದರು.

ಸೆಟ್ಟೇರಿದ ಭೈರಾ

ಶ್ವೇತಾ ಸುರೇಂದ್ರ

'ಗೂಳಿಹಟ್ಟಿ' ಖ್ಯಾತಿಯ ಮಹೇಶ್ ಸಿದ್ದು ನಾಯಕನಾಗಿ ನಟಿಸುತ್ತಿರುವ 'ಭೈರಾ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ನಟ ಪ್ರೇಮ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಅಕುಲ್.ಎನ್ ಸಿನಿಮಾಕ್ಕೆ ಕಥೆ ಬರೆದು, ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 200ಕ್ಕೂ ಹೆಚ್ಚು ಚಿತ್ರಗಳಿಗೆ ನೃತ್ಯ ಸಂಯೋಜಕರಾಗಿ ಕೆಲಸ ಮಾಡಿರುವ ಇವರ ನಿರ್ದೇಶನದ ನಾಲ್ಕನೇ ಚಿತ್ರವಿದು.

'ಬೆಂಗಳೂರಿನ ಸ್ಥಳೀಯ ರೌಡಿಗಳ ಚಟುವಟಿಕೆಗಳ ಕುರಿತಾದ ಕಥೆ ಹೊಂದಿರುವ ಚಿತ್ರವಿದು. ರೌಡಿಗಳ ಕೆಂಗಣ್ಣಿಗೆ ಬಿದ್ದ ಅಮಾಯಕ ಹುಡುಗ ಯಾವ ರೀತಿ ಸಿಡಿದೇಳುತ್ತಾನೆ ಎನ್ನುವುದರ ಸುತ್ತ ಕಥೆ ಸಾಗುತ್ತದೆ. ಜತೆಗೆ ಸುಂದರ ಪ್ರೇಮಕಥೆ, ಅಮ್ಮನ ಬಾಂಧವ್ಯದ ಮನಕಲುಕುವ ಸನ್ನಿವೇಶಗಳಿವೆ. ಬೆಂಗಳೂರು ಸುತ್ತಮುತ್ತ, ಅದರಲ್ಲೂ ಹೆಚ್ಚಾಗಿ ಕಲಾಸಿಪಾಳ್ಯ, ಓಕಳಿಪುರ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗುವುದು' ಎಂದರು ನಿರ್ದೇಶಕರು.

ಖುಷಿ ಕನಸು ಕ್ರಿಯೇಶನ್ಸ್ ಅಡಿಯಲ್ಲಿ ಅಮಿತ್ ಪೂಜಾರಿ ಬಂಡವಾಳ ಹೂಡುತ್ತಿದ್ದಾರೆ. ಶ್ವೇತಾ ಸುರೇಂದ್ರ ನಾಯಕಿ. ಜಾಕ್ ಜಾಲಿಜಾಲಿ, ಯಶ್ ಶೆಟ್ಟಿ, ರವಿಕಾಳೆ, ವರ್ಧನ್, ಸಂಪತ್‌ಕುಮಾರ್, ಕಾಕ್ರೋಚ್ ಸುಧಿ ಮುಂತಾದವರು ಚಿತ್ರದಲ್ಲಿದ್ದಾರೆ.

ಭರ್ಜರಿ ಚೇತನ್, ಅನಿರುದ್ದ್ ಶಾಸ್ತ್ರೀ, ನಾಗಾರ್ಜುನ ಶರ್ಮ ಸಾಹಿತ್ಯದ ಗೀತೆಗಳಿಗೆ ಮಂಜು ಮಹದೇವ್ ಸಂಗೀತ ಸಂಯೋಜಿಸಿದ್ದಾರೆ. ಎಸ್.ಹಾಲೇಶ್ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ. ❖

ಜಿಂಕೆ ಗೋಪಣ್ಣನಾದ ಧನಂಜಯ

ಸ್ಟಾರ್ ನಟನೊಬ್ಬನ ಜನ್ಮದಿನದಂದು ಆತನ ಎಲ್ಲ ಸಿನಿಮಾ ತಂಡಗಳು ವಿಭಿನ್ನ ರೀತಿಯಲ್ಲಿ ಶುಭ ಕೋರುವುದು ವಾಡಿಕೆ. ಅದರಂತೆ ಇತ್ತೀಚೆಗೆ ಜನ್ಮದಿನ ಆಚರಿಸಿಕೊಂಡ ನಟ ಡಾಲಿ ಧನಂಜಯ ಅವರಿಗೆ ಹಲವು ತಂಡಗಳು ಶುಭ ಕೋರಿವೆ. ನಿಂತೇ ಹೋಯಿತು ಎಂದು ಸುದ್ದಿಯಾಗಿದ್ದ 'ಉತ್ತರಕಾಂಡ' ಚಿತ್ರಕ್ಕೆ ಪೋಸ್ಟರ್‌ನಿಂದ ಮತ್ತೆ ಮರುಜೀವ ಬಂದಿದೆ. ಹೇಮಂತ್ ರಾವ್ ನಿರ್ದೇಶನದಲ್ಲಿ ಡಾಲಿ–ಶಿವಣ್ಣ ನಟಿಸುತ್ತಿರುವ '666 ಆಪರೇಷನ್' ಚಿತ್ರೀಕರಣ ಚಾಲ್ತಿಯಲ್ಲಿದೆ. 'ಹಲಗಲಿ' ಚಿತ್ರತಂಡ ಟೀಸರ್ ಬಿಡುಗಡೆಗೊಳಿಸಿದೆ. 'ಅಣ್ಣ ಫ್ರಂ ಮೆಕ್ಸಿಕೋ' ತಂಡದಿಂದ ಯಾವುದೇ ಅಪ್‌ಡೇಟ್ ಬರದಿದ್ದರೂ, ಚಿತ್ರೀಕರಣ ಅಂತಿಮ ಹಂತದಲ್ಲಿದೆ.

ಸದ್ಯಕ್ಕೆ ಸೆಟ್ಟೇರುವುದಿಲ್ಲ ಎನ್ನಲಾಗುತ್ತಿದ್ದ 'ಜಿಂಗೋ' ಚಿತ್ರದ ಹೊಸ ಪೋಸ್ಟರ್ ಗಮನ ಸೆಳೆಯುತ್ತಿದೆ. ಡಾಲಿ ಪಿಕ್ಚರ್ಸ್ ಮತ್ತು ತ್ರಿಶೂಲ್ ವಿಜನರಿ ಸ್ಟುಡಿಯೋಸ್ ನಿರ್ಮಾಣದ ಈ ಚಿತ್ರ ಕಳೆದ ವರ್ಷ ಘೋಷಣೆಗೊಂಡಿತ್ತು. ಚಿತ್ರ ಇನ್ನೂ ಸೆಟ್ಟೇರದ ಕುರಿತು ಹಬ್ಬಿದ್ದ ವದಂತಿಗಳಿಗೆ ಚಿತ್ರತಂಡವೀಗ ಎರಡನೆ ಪೋಸ್ಟರ್‌ನೊಂದಿಗೆ ಉತ್ತರ ನೀಡಿದೆ.

'ಡೇರ್ ಡೇವಿಲ್ ಮುಸ್ತಾಫಾ' ಚಿತ್ರದ ಮೂಲಕ ಗುರುತಿಸಿಕೊಂಡಿರುವ ಶಶಾಂಕ್ ಸೋಗಾಲ್ ನಿರ್ದೇಶನದ ಚಿತ್ರವಿದು. 'ಪ್ರೇಕ್ಷಕರ ಅಗಾಧ ಪ್ರತಿಕ್ರಿಯೆಯಿಂದ ಉತ್ಸಾಹಗೊಂಡ ಚಿತ್ರ ನಿರ್ಮಾಪಕರು ಕಥೆಯ ವ್ಯಾಪ್ತಿ ಮತ್ತು ಚಿತ್ರದ ಕ್ಯಾನ್ವಾಸ್ ಅನ್ನು ಗಣನೀಯವಾಗಿ ವಿಸ್ತರಿಸಿದ್ದಾರೆ. ಸಣ್ಣ ಪಟ್ಟಣದ ಕಥೆಯಾಗಿ ಆರಂಭವಾದ ಚಿತ್ರ ತನ್ನ ಕ್ಯಾನ್ವಾಸ್ ಅನ್ನು ವಿಸ್ತರಿಸಿಕೊಂಡಿದೆ' ಎಂದು ಚಿತ್ರತಂಡ ಹೇಳಿದೆ.

'2026ರಲ್ಲಿ ವೀಕ್ಷಕರಿಗೆ ಈ ಚಿತ್ರ ವಿಶಿಷ್ಟ ಚಿತ್ರರಂಗದ ಅನುಭವವನ್ನು ನೀಡುತ್ತದೆ. ರಾಜಕೀಯ ವಿಡಂಬನೆ, ಹಾಸ್ಯ, ಆ್ಯಕ್ಷನ್, ಥ್ರಿಲ್ಲರ್ ಎಲ್ಲ ಅಂಶಗಳನ್ನು ಹದವಾಗಿ ಬೆರೆಸಿ ಪ್ರೇಕ್ಷಕರಿಗೆ ಅತ್ಯುತ್ತಮ ಮನರಂಜನೆ ಕೊಡಬೇಕು ಎಂಬುದೇ ನಮ್ಮ ಗುರಿ. ಸದ್ಯ ಕನ್ನಡ, ತೆಲುಗು ಭಾಷೆಗಳಲ್ಲಿ ನಿರ್ಮಾಣವಾಗುತ್ತಿದ್ದು, ಅತ್ಯುತ್ತಮ ನಟರ ತಾರಾ ಬಳಗವಿರುತ್ತದೆ' ಎಂದು ನಿರ್ಮಾಣ ಸಂಸ್ಥೆ ತಿಳಿಸಿದೆ. ❖

'ವಾಯುಪ್ರದೇಶ ರಕ್ಷಣಾ ವ್ಯವಸ್ಥೆ' ಪರೀಕ್ಷೆ ಯಶಸ್ವಿ

ಒಡಿಶಾ ಕರಾವಳಿಯ ಚಾಂದಿಪುರದಲ್ಲಿರುವ 'ಸಮಗ್ರ ಪರೀಕ್ಷಾ ವಲಯ'ದಲ್ಲಿ ನಡೆದ ಪ್ರಯೋಗ

ನವದೆಹಲಿ(ಪಿಟಿಐ): ಭಾರತೀಯ ವಾಯುಪಡೆಯು ಇದೇ ಮೊದಲ ಬಾರಿಗೆ 'ಸಮಗ್ರ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ'ಯ (ಐಎಡಬ್ಲುಎಸ್) ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನೆರವೇರಿಸಿದೆ.

ಒಡಿಶಾದ ಕರಾವಳಿಯ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಶನಿವಾರ ನಡೆದ ಈ ಪರೀಕ್ಷಾರ್ಥ ಪ್ರಯೋಗವು, ಐಎಡಬ್ಲುಎಸ್ ಕ್ಷಮತೆಯನ್ನು ಸಾಬೀತುಪಡಿಸಿತು. ಪ್ರಾದೇಶಿಕ ಭದ್ರತೆ ವಿಚಾರದಲ್ಲಿ ಸವಾಲುಗಳನ್ನು ಎದುರಿಸಲು ಸೇನೆಯ ಸಾಮರ್ಥ್ಯ ವೃದ್ಧಿಸುವ ಅಗತ್ಯತೆಯನ್ನು ಕೂಡ ಈ ಪ್ರಾತ್ಯಕ್ಷಿಕೆ ಪ್ರಸ್ತುತಪಡಿಸಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

'ಆಪರೇಷನ್ ಸಿಂಧೂರ' ನಡೆದ ಮೂರು ತಿಂಗಳ ನಂತರ ಈ ಪರೀಕ್ಷೆ ನಡೆಸಲಾಗಿದೆ. ಈ ವ್ಯವಸ್ಥೆ ಅಭಿವೃದ್ಧಿಪಡಿಸಿರುವ ಡಿಆರ್‌ಡಿಒ, ಸಶಸ್ತ್ರ ಪಡೆಗಳು ಹಾಗೂ ಪೂರಕ ಕಾರ್ಯ ಕೈಗೊಂಡಿರುವ ಉದ್ಯಮಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಭಿನಂದಿಸಿದ್ದಾರೆ.

ಒಡಿಶಾದ ಕರಾವಳಿಯಲ್ಲಿ 'ಸಮಗ್ರ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ'ಯ (ಐಎಡಿಡಬ್ಲುಎಸ್) ಯಶಸ್ವಿ ಪರೀಕ್ಷೆಯನ್ನು ನೆರವೇರಿಸಲಾಯಿತು –ಪಿಟಿಐ ಚಿತ್ರ

ವೈಶಿಷ್ಟ್ಯಗಳು

- ಐಎಡಿಡಬ್ಲುಎಸ್, ಬಹು ಹಂತದ ವಾಯುಪ್ರದೇಶ ರಕ್ಷಣಾ ವ್ಯವಸ್ಥೆಯಾಗಿದ್ದು, ದೇಶೀಯವಾಗಿಯೇ ಅಭಿವೃದ್ಧಿಪಡಿಸಿರುವ ಕ್ಷಿಪಣಿಗಳನ್ನು ಒಳಗೊಂಡಿದೆ
- ನೆಲದಿಂದ ಆಗಸಕ್ಕೆ ಕ್ಷಿಪ್ರವಾಗಿ ಚಿಮ್ಮಿ ಗುರಿಯನ್ನು ನಾಶ ಮಾಡಬಲ್ಲ ಕ್ಷಿಪಣಿಗಳು (ಕ್ಯೂಆರ್‌ಎಸ್‌ಎಎಂ), ಕಡಿಮೆ ವ್ಯಾಪ್ತಿಯ ವಾಯು ಪ್ರದೇಶದಲ್ಲಿನ ಗುರಿ ನಾಶ ಮಾಡಬಲ್ಲ ರಕ್ಷಣಾ ವ್ಯವಸ್ಥೆ (ವಿಶಾರ್ಡ್ಸ್), ಲೇಸರ್ ನಿರ್ದೇಶಿತ ಅಧಿಕ ಶಕ್ತಿ ಹೊಂದಿರುವ ಶಸ್ತ್ರಗಳನ್ನು (ಡಿಇಡಬ್ಲ್ಯು) ಈ ರಕ್ಷಣಾ ವ್ಯವಸ್ಥೆ ಒಳಗೊಂಡಿದೆ
- ಈ ಎಲ್ಲ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಕೇಂದ್ರೀಕೃತ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರದ ಮೂಲಕ ನಿಯಂತ್ರಿಸಲಾಗುತ್ತದೆ. ಕಮಾಂಡ್ ಹಾಗೂ ನಿಯಂತ್ರಣ ಕೇಂದ್ರವನ್ನು ಕೂಡ ಡಿಆರ್‌ಡಿಒ ಅಭಿವೃದ್ಧಿಪಡಿಸಿದೆ
- ವಿಶಾರ್ಡ್ಸ್ ಮತ್ತು ಡಿಇಡಬ್ಲು ಗಳನ್ನು ಕ್ರಮವಾಗಿ ರಿಸರ್ಚ್ ಸೆಂಟರ್ ಇಮಾರತ್ ಹಾಗೂ ಸೆಂಟರ್ ಫಾರ್ ಹೈಎನರ್ಜಿ ಸಿಸ್ಟಮ್ಸ್ ಆ್ಯಂಡ್ ಸೈನ್ಸಸ್ ಅಭಿವೃದ್ಧಿಪಡಿಸಿವೆ

ಪರೀಕ್ಷೆ ಹೇಗೆ?

ಈ ಪರೀಕ್ಷೆ ವೇಳೆ, ಮೂರು ವಿಭಿನ್ನ ಗುರಿಗಳನ್ನು ಸಮಗ್ರ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ ನಾಶಪಡಿಸಿದೆ.

ಎರಡು ಅತಿ ವೇಗವಾಗಿ ಚಲಿಸುತ್ತಿದ್ದ ಡ್ರೋನ್(ಯುಎವಿ) ಹಾಗೂ ಮಲ್ಟಿಕಾಪ್ಟರ್ ಡ್ರೋನ್ ಗುರಿಗಳಾಗಿದ್ದವು.

ಬೇರೆ ಬೇರೆ ಎತ್ತರದಲ್ಲಿ ಹಾರಾಡುತ್ತಿದ್ದ ಈ ಗುರಿಗಳನ್ನು ಕ್ಯೂಆರ್‌ಎಸ್‌ಎಎಂ, ವಿಶಾರ್ಡ್ಸ್ ಮತ್ತು ಡಿಇಡಬ್ಲು ಅತ್ಯಂತ ನಿಖರವಾಗಿ ಹೊಡೆದುರುಳಿಸಿದವು.

ಈ ರಕ್ಷಣಾ ವ್ಯವಸ್ಥೆಯ ಎಲ್ಲ ಭಾಗಗಳು ಯಾವುದೇ ದೋಷಗಳಿಲ್ಲದೆಯೇ ಕಾರ್ಯನಿರ್ವಹಿಸಿದವು ಎಂದು ರಕ್ಷಣಾ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ಧಾರ್ಮಿಕ ಉಗ್ರವಾದದ ಮತ್ತೊಂದು ಅಲೆಯ ಭೀತಿ'

ಶ್ರೀನಗರ(ಪಿಟಿಐ): ಜಮ್ಮು–ಕಾಶ್ಮೀರದಲ್ಲಿ ಕೆಲ ಮತಾಂಧ ಧರ್ಮಗುರುಗಳು ಇಸ್ಲಾಂ ತತ್ವಗಳನ್ನು ತಿರುಚಿ ಬೋಧಿಸುವ ಮೂಲಕ ಯುವ ಸಮುದಾಯದ ದಾರಿ ತಪ್ಪಿಸುತ್ತಿದ್ದಾರೆ. ಅದರಲ್ಲೂ, ಖಾಸಗಿ ಶಾಲೆಗಳಲ್ಲಿನ ಬಾಲಕಿಯರನ್ನು ತೀವ್ರಗಾಮಿಗಳನ್ನಾಗಿ ಮಾಡಲಾಗುತ್ತಿದೆ. ಮಾಜಿ ಪ್ರತ್ಯೇಕತಾವಾದಿಗಳಲ್ಲಿ ಈ ಬೆಳವಣಿಗೆ ದಿಗಿಲು ಮೂಡಿಸಿದೆ.

ಈ ಬೆಳವಣಿಗೆ ಜಮ್ಮು–ಕಾಶ್ಮೀರದಲ್ಲಿ ಮತ್ತೊಂದು ಧಾರ್ಮಿಕ ಉಗ್ರವಾದದ ಅಲೆ ಏಳಲು ಕಾರಣವಾಗುತ್ತಿದೆಯೇ ಎಂಬ ಆತಂಕವನ್ನು ಕೂಡ ಮಾಜಿ ಪ್ರತ್ಯೇಕತಾವಾದಿಗಳು ವ್ಯಕ್ತಪಡಿಸುತ್ತಿದ್ದಾರೆ.

ಇನ್ನೊಂದೆಡೆ, ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ, ವಿಶೇಷವಾಗಿ ಖಾಸಗಿ ಶಾಲೆಗಳ ಬಾಲಕಿಯರನ್ನು ತೀವ್ರಗಾಮಿಗಳನ್ನಾಗಿ ಮಾಡಲಾಗುತ್ತಿರುವ ಕುರಿತು ಕೈಗೊಂಡಿರುವ ತನಿಖೆಯನ್ನು ಭದ್ರತಾ ಪಡೆಗಳು ಚುರುಕುಗೊಳಿಸಿವೆ.

ಕೆಲ ಖಾಸಗಿ ಶಾಲೆಗಳಲ್ಲಿ, ಮಾದಕ ದ್ರವ್ಯಗಳ ಬಳಕೆ ಹೆಚ್ಚುತ್ತಿದೆ ಎಂಬ ಬಗ್ಗೆಯೂ ವ್ಯಾಪಕ ಕಳವಳ ವ್ಯಕ್ತವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜಮ್ಮು–ಕಾಶ್ಮೀರದ ಬೇರುಮಟ್ಟದಲ್ಲಿ ಉಗ್ರವಾದದ ಕುರಿತು ಸಂಕಥನಗಳನ್ನು ಪ್ರಚುರಪಡಿಸಲಾಗುತ್ತಿದೆ. ಇದರ ವಿರುದ್ಧದ ಹೋರಾಟದ ಭಾಗವಾಗಿ ಶಾಲೆಗಳಲ್ಲಿ ನಡೆಯುತ್ತಿರುವ ಇಂತಹ ಚಟುವಟಿಕೆಗಳ ಮೇಲೆ ನಿಗಾ ಇಡಲಾಗುತ್ತಿದೆ. ಈ ಕುರಿತು ಖಾಸಗಿ ಶಾಲೆಗಳ ಆಡಳಿತ ಮಂಡಳಿಗೆ ಎಚ್ಚರಿಕೆಯನ್ನೂ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭದ್ರತಾ ಪಡೆಗಳು ಮಾತ್ರವಲ್ಲ, ಈಗಾಗಲೇ ಪ್ರತ್ಯೇಕತಾವಾದದಿಂದ ದೂರವಾಗಿರುವ ಗುಂಪುಗಳಲ್ಲಿ ಕೂಡ ಈ ವಿದ್ಯಮಾನ ಆತಂಕ ಮೂಡಿಸಿದೆ.

'ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಆಚೆ ಕಡೆಯಿಂದ ನುಗ್ಗಿ ಬರುತ್ತಿರುವ ಧಾರ್ಮಿಕ ಉಗ್ರವಾದದ ಮತ್ತೊಂದು ಅಲೆಯು, ಶತಮಾನಗಳಿಂದ ಕಣಿವೆಯಲ್ಲಿ ನೆಲೆಯೂರಿರುವ ಸೂಫಿ ಪರಂಪರೆಯನ್ನು ನಾಶ ಮಾಡಲಿದೆಯೇ ಎಂಬ ಆತಂಕ ಕಾಡುತ್ತಿದೆ' ಎಂದು ಮಾಜಿ ಪ್ರತ್ಯೇಕತಾವಾದಿಗಳು ಹೇಳುತ್ತಾರೆ.

ಕೆಲ ಸಂಸ್ಥೆಗಳು ಹಾಗೂ 'ಅನಧಿಕೃತ' ಮದರಸಾಗಳು ಕೂಡ ಯುವ ಸಮುದಾಯವನ್ನು ಉಗ್ರವಾದದತ್ತ ಸೆಳೆಯುವ ಕಾರ್ಯದಲ್ಲಿ ತೊಡಗಿವೆ ಎಂದು ಇವೇ ಮೂಲಗಳು ಹೇಳುತ್ತವೆ.

'ಸೂಫಿ ಸಂತರು ಹಾಗೂ ಋಷಿಗಳ ಹೆಸರಿನಲ್ಲಿ ನಿರ್ಮಿಸಿರುವ ಶ್ರದ್ಧಾಕೇಂದ್ರಗಳಿಗೆ ಭೇಟಿ ನೀಡುವುದು, ಪ್ರಾರ್ಥನೆ ಸಲ್ಲಿಸುವುದು ಸೇರಿ ಪರಂಪರಾಗತವಾಗಿ ರೂಢಿಯಲ್ಲಿರುವ ಕಾಶ್ಮೀರಿ ಜನರ ಪದ್ಧತಿ ಗಳನ್ನು ಧಿಕ್ಕರಿಸುವಂತೆ ಪ್ರಚೋದಿಲಾಗುತ್ತಿದೆ. ಇಂತಹ ಪದ್ಧತಿಗಳ ಪಾಲನೆ ಇಸ್ಲಾಂ ಬೋಧನೆಗಳ ಉಲ್ಲಂಘನೆ ಎಂಬುದಾಗಿ ಬೋಧಿಸಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

'ಉಗ್ರರು ಸಾಮಾಜಿಕ ಮಾಧ್ಯಮಗಳನ್ನು ದುರ್ಬಳಕೆ ಮಾಡುತ್ತಿರುವುದು ಈ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವಂತೆ ಮಾಡಿದೆ. ಇದು, ಜಮ್ಮು–ಕಾಶ್ಮೀರದಲ್ಲಿನ ಭದ್ರತೆಗೆ ಹೊಸ ಸವಾಲಾಗಿ ಪರಿಣಮಿಸಿದೆ' ಎಂದು ಅಧಿಕಾರಿಗಳು ಹೇಳುತ್ತಾರೆ.

ಗರ್ಭಿಣಿಯ ದೇಹ ತುಂಡರಿಸಿ ನದಿಗೆಸೆದ ಪತಿ

ಹೈದರಾಬಾದ್ (ಪಿಟಿಐ): ಐದು ತಿಂಗಳ ಗರ್ಭಿಣಿ ಪತ್ನಿಯನ್ನು ಪತಿಯೇ ಹತ್ಯೆ ಮಾಡಿ, ಮೃತದೇಹವನ್ನು ತುಂಡು ತುಂಡಾಗಿ ಕತ್ತರಿಸಿ ನಂತರ 'ಮೂಸಿ' ನದಿಗೆ ಎಸೆದ ಪ್ರಕರಣ ಹೈದರಾಬಾದ್‌ನಲ್ಲಿ ನಡೆದಿದೆ.

ಶನಿವಾರ ಸಂಜೆ 4.30ಕ್ಕೆ ಪ್ರಕರಣ ನಡೆದಿದೆ. 27 ವರ್ಷದ ವ್ಯಕ್ತಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. 21 ವರ್ಷದ ಪತ್ನಿ ಜೊತೆಗೆ ನಿರಂತರ ಜಗಳ ನಡೆದಿದ್ದರಿದ ಈ ಕುಕೃತ್ಯ ಎಸಗಿದ್ದಾನೆ.

'ಸಾಕ್ಷಿಯನ್ನು ಮರೆಮಾಚುವ ಉದ್ದೇಶದಿಂದ ಹೆಕ್ಸಾ ಬ್ಲೇಡ್‌ನಿಂದ ಪತ್ನಿಯ ತಲೆ, ಕಾಲು ಹಾಗೂ ಕೈ ಕತ್ತರಿಸಿ ಮೂಸಿ ನದಿಗೆ ಎಸೆದಿದ್ದಾನೆ. ಟ್ರಂಕ್‌ನಲ್ಲಿ ತುಂಬಿಟ್ಟಿದ್ದ ಮೃತದೇಹದ ಉಳಿದ ಭಾಗವನ್ನು ಆತನ ಕೊಠಡಿಯಿಂದ ವಶಕ್ಕೆ ಪಡೆಯಲಾಗಿದೆ' ಎಂದು ಡಿಸಿಪಿ (ಮಲ್ಕಾಜ್‌ಗಿರಿ ವಲಯ) ಪಿ.ವಿ. ಪದ್ಮಜಾ ತಿಳಿಸಿದ್ದಾರೆ.

'ಅಧಿಕಾರ ಕಳ್ಳತನ'ಕ್ಕೆ ಬಿಜೆಪಿ ಯತ್ನ: ಖರ್ಗೆ

ನವದೆಹಲಿ: 'ಮತ ಕಳ್ಳತನದ ಬಳಿಕ ಈಗ ಅಧಿಕಾರ ಕಳ್ಳತನಕ್ಕೆ ಬಿಜೆಪಿ ಮುಂದಾಗಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ. 'ಪ್ರಧಾನಿ, ಮುಖ್ಯಮಂತ್ರಿ, ರಾಜ್ಯ ಹಾಗೂ ಕೇಂದ್ರ ಸಚಿವರು ಗಂಭೀರ ಅಪರಾಧ ಪ್ರಕರಣಗಳಲ್ಲಿ ಸತತ 30 ದಿನಗಳವರೆಗೆ ಜೈಲಿನಲ್ಲಿದ್ದರೆ ಅವರನ್ನು ಪದಚ್ಯುತಗೊಳಿಸಲು ಸಂವಿಧಾನಕ್ಕೆ ತಿದ್ದುಪಡಿ ಸೇರಿದಂತೆ ಮೂರು ಮಸೂದೆಗಳ ಜಾರಿಯು 'ಪ್ರಜಾಪ್ರಭುತ್ವದ ಮೇಲೆ ಬುಲ್ಡೋಜರ್ ಹರಿಸಿದಂತೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮದುವೆ: ರಾಹುಲ್ ತಮಾಷೆ

ಅರಾರಿಯಾ (ಬಿಹಾರ)(ಪಿಟಿಐ): 'ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರು ಎರಡು ವರ್ಷಗಳ ಹಿಂದೆ ನನಗೆ ವಿವಾಹವಾಗುವಂತೆ ಸಲಹೆ ನೀಡಿದ್ದರು. ಅವರ ಸಲಹೆ ಬಗ್ಗೆ ತಮ್ಮ ರಾಜಕೀಯ ಮಿತ್ರರು ಮತ್ತು ಕುಟುಂಬದ ಸ್ನೇಹಿತರ ಜತೆ ಮಾತುಕತೆ ನಡೆಯುತ್ತಿದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ (55) ಲಘುದಾಟಿಯಲ್ಲಿ ತಮಾಷೆ ಮಾಡಿದರು.

'ಮತದಾರರ ಅಧಿಕಾರ ಯಾತ್ರೆ'ಯು ಅರಾರಿಯಾ ತಲುಪಿದಾಗ ನಡೆದ ಸುದ್ದಿಗೋಷ್ಠಿಯಲ್ಲಿ, ಅವರು ಈ ಕುರಿತು ಹಾಸ್ಯ ಮಾಡಿದರು.

ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರು ಇತ್ತೀಚೆಗೆ ಆರ್‌ಜೆಡಿ ಅನ್ನು ತೀವ್ರವಾಗಿ ಟೀಕಿಸಿದ ಕುರಿತು ಸುದ್ದಿಗಾರರೊಬ್ಬರು ಲಾಲು ಅವರ ಪುತ್ರ ತೇಜಸ್ವಿ ಯಾದವ್ ಅವರನ್ನು ಪ್ರಶ್ನಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ತೇಜಸ್ವಿ, 'ಚಿರಾಗ್ ಅವರು ಮೊದಲು ಮದುವೆ ಆಗುವುದನ್ನು ಪರಿಗಣಿಸಬೇಕು' ಎಂದು ಸಲಹೆ ನೀಡಿದರು. ಆಗ ತೇಜಸ್ವಿ ಅವರಿಂದ ಮೈಕ್ ಕಸಿದುಕೊಂಡ ರಾಹುಲ್, 'ಇದೇ ರೀತಿಯ ಸಲಹೆಯನ್ನು ಎರಡು ವರ್ಷಗಳ ಹಿಂದೆ ತೇಜಸ್ವಿ ಅವರ ತಂದೆ ನನಗೆ ನೀಡಿದ್ದರು' ಎಂದು ನಗೆ ಚಟಾಕಿ ಹಾರಿಸಿದರು.

ಆಕ್ಷೇಪಣೆ ಸಲ್ಲಿಸಲು ಇನ್ನೂ 8 ದಿನ ಅವಕಾಶ– ಚುನಾವಣಾ ಆಯೋಗ

ಎಸ್‌ಐಆರ್: ಶೇ 98 ಮತದಾರರ ಅರ್ಜಿ ಸ್ವೀಕೃತ

ನವದೆಹಲಿ: ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ, 7.24 ಕೋಟಿ ಮತದಾರರ ಪೈಕಿ ಶೇ 98.2ರಷ್ಟು ಜನರು ಸಲ್ಲಿಸಿದ್ದ ದಾಖಲೆಗಳನ್ನು ಸ್ವೀಕರಿಸಲಾಗಿದೆ ಎಂದು ಚುನಾವಣಾ ಆಯೋಗ ಭಾನುವಾರ ಹೇಳಿದೆ.

ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ಒದಗಿಸಿರುವ ವಿವರಗಳನ್ನು ಉಲ್ಲೇಖಿಸಿ ಆಯೋಗವು ಈ ಮಾಹಿತಿ ನೀಡಿದೆ. ಕರಡು ಮತದಾರರ ಪಟ್ಟಿ ಕುರಿತು ಬೇಡಿಕೆಗಳು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಇನ್ನೂ 8 ದಿನಗಳು ಬಾಕಿ ಇವೆ. ಮತದಾರರ ಪಟ್ಟಿಗೆ ತಮ್ಮ ಹೆಸರು ಸೇರ್ಪಡೆ ಕೋರಿ ಅರ್ಜಿ ಸಲ್ಲಿಸುವ ವೇಳೆ, ಆಕ್ಷೇಪಣೆ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಮತದಾರರು ಸಲ್ಲಿಸಬಹುದು ಎಂದು ಆಯೋಗ ತಿಳಿಸಿದೆ.

> ಈಗ ಸ್ವೀಕರಿಸಲಾಗಿರುವ ಅರ್ಜಿಗಳು ಹಾಗೂ ಆಕ್ಷೇಪಣೆಗಳ ಕುರಿತು ಸೆಪ್ಟೆಂಬರ್ 25ರ ಒಳಗಾಗಿ ಅಂತಿಮ ನಿರ್ಧಾರ ತೆಗೆದುಕೊಂಡು, ಸೆಪ್ಟೆಂಬರ್ 30ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುವುದು
> **ಚುನಾವಣಾ ಆಯೋಗ**

'ಜೂನ್ 24ರಿಂದ ಆಗಸ್ಟ್ 24ರ ವರೆಗೆ, ಪ್ರತಿ ದಿನ ಸರಾಸರಿ ಶೇ 1.64ರಷ್ಟು ಮತದಾರರು ದಾಖಲೆಗಳನ್ನು ಸಲ್ಲಿಸಿದಂತಾಗಿದೆ. ಇನ್ನೂ ಶೇ1.8ರಷ್ಟು ಮತದಾರರು ದಾಖಲೆಗಳನ್ನು ಸಲ್ಲಿಸಬೇಕಿದ್ದು ಸೆಪ್ಟೆಂಬರ್ 1ರವರೆಗೆ ಅವಕಾಶ ಇದೆ' 18 ವರ್ಷ ತುಂಬಿರುವ 3,28,847 ಹೊಸ ಮತ ದಾರರು ಅರ್ಜಿ ಸಲ್ಲಿಸಿದ್ದಾರೆ ಎಂದೂ ಹೇಳಿದೆ.

'ಆಧಾರ್‌ನಿಂದಷ್ಟೆ ಮತದಾನ ಹಕ್ಕು ಸಿಗದು'

ನವದೆಹಲಿ(ಪಿಟಿಐ): 'ಮತದಾನದ ಹಕ್ಕು ಪಡೆಯಲು ಆಧಾರ್ ಕಾರ್ಡ್ ಏಕೈಕ ಮಾನ್ಯವಾದ ದಾಖಲೆಯಾಗಲಿದೆ ಎಂದು ಸುಪ್ರೀಂ ಕೋರ್ಟ್ ಹೇಳಿಲ್ಲ. ಈ ವಿಚಾರದಲ್ಲಿ ವಿರೋಧ ಪಕ್ಷಗಳು ಅಪಪ್ರಚಾರದಲ್ಲಿ ತೊಡಗಿವೆ' ಎಂದು ಬಿಜೆಪಿ ಭಾನುವಾರ ಟೀಕಿಸಿದೆ.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ'(ಎಸ್‌ಐಆರ್) ವೇಳೆ, ಪಟ್ಟಿಯಿಂದ ತಮ್ಮ ಹೆಸರು ಕೈಬಿಡಲಾಗಿರುವ ಮತದಾರರು ಇತರ ಮಾನ್ಯ ದಾಖಲೆಗಳೊಂದಿಗೆ ಆಧಾರ್ ಸಂಖ್ಯೆ ಸಲ್ಲಿಸುವ ಮೂಲಕ ತಮ್ಮ ಹೆಸರನ್ನು ಮತ್ತೆ ಸೇರ್ಪಡೆ ಮಾಡುವುದಕ್ಕೆ ಅರ್ಜಿ ಸಲ್ಲಿಸಲು ಸುಪ್ರೀಂ ಕೋರ್ಟ್ ಅವಕಾಶ ನೀಡಿದೆಯಷ್ಟೆ ಎಂದು ಹೇಳಿದೆ.

'ಆಧಾರ್, ಕೇವಲ ಗುರುತು ಮತ್ತು ವಾಸಸ್ಥಳ ಕುರಿತ ದಾಖಲೆಯಾಗಿದೆ. ಇದು ಒಬ್ಬ ವ್ಯಕ್ತಿಯ ಪೌರತ್ವ ಸಾಬೀತುಪಡಿಸುವ ದಾಖಲೆಯಲ್ಲ' ಎಂದು ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ. 'ಮತದಾರರ ಪಟ್ಟಿಯ ಎಸ್‌ಐಆರ್ ವೇಳೆ, ಆಧಾರ್ ಅನ್ನು ಮಾನ್ಯ ಮಾಡಿದ ದಾಖಲೆಯಾಗಿ ಬಳಕೆ ಮಾಡಬಹುದು ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಎಲ್ಲಿಯೂ ಹೇಳಿಲ್ಲ' ಎಂದಿದ್ದಾರೆ.

ರಾಹುಲ್ ತಬ್ಬಿ, ಚುಂಬಿಸಿದ ವ್ಯಕ್ತಿ

ಪುರ್ನಿಯಾ (ಪಿಟಿಐ): 'ಮತದಾರರ ಅಧಿಕಾರ ಯಾತ್ರೆ'ಯ ಅಂಗವಾಗಿ ಕಾಂಗ್ರೆಸ್ ಬಿಹಾರದ ಪುರ್ನಿಯಾ ಜಿಲ್ಲೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬೈಕ್ ರ‍್ಯಾಲಿಯಲ್ಲಿ ಭಾಗವಹಿಸಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಅಪರಿಚಿತ ವ್ಯಕ್ತಿಯೊಬ್ಬ ಅಪ್ಪಿಕೊಂಡು, ಭುಜಕ್ಕೆ ಮುತ್ತಿಟ್ಟ ಪ್ರಸಂಗ ನಡೆದಿದೆ.

ಈ ಘಟನೆಯು ರಾಹುಲ್ ಅವರನ್ನು ಕ್ಷಣಕಾಲ ಆಶ್ಚರ್ಯಚಕಿತರನ್ನಾಗಿ ಮಾಡಿತ್ತು.

ನಡೆದದ್ದೇನು: ಪುರ್ನಿಯಾದಿಂದ ಅರಾರಿಯಾಗೆ ಬೈಕ್ ರ‍್ಯಾಲಿಯಲ್ಲಿ ರಾಹುಲ್ ಸಾಗುತ್ತಿದ್ದರು. ಅವರ ಪಕ್ಕದಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಸೇರಿದಂತೆ ನೂರಾರು ಸವಾರರು ಬೈಕ್ ಚಲಾಯಿಸುತ್ತಿದ್ದರು. ಈ ವೇಳೆ ಕಪ್ಪು ಪ್ಯಾಂಟ್ ಮತ್ತು ಕೆಂಪು ಶರ್ಟ್ ಧರಿಸಿದ್ದ ಯುವಕನೊಬ್ಬ ರ‍್ಯಾಲಿಯ ಒಳನುಗ್ಗಿ ರಾಹುಲ್ ಅವರ ಬಳಿ ಓಡಿ ಬಂದು ಅವರನ್ನು ಅಪ್ಪಿಕೊಂಡು, ಭುಜಕ್ಕೆ ಮುತ್ತು ಕೊಟ್ಟರು.

ಇದರಿಂದ ಕಕ್ಕಾಬಿಕ್ಕಿಯಾದ ರಾಹುಲ್ ಬೈಕ್ ಅನ್ನು ಸಮತೋಲನಕ್ಕೆ ತರಲು ಯತ್ನಿಸುತ್ತಿದ್ದರು. ಅಷ್ಟರಲ್ಲಿ ಧಾವಿಸಿ ಬಂದ ಭದ್ರತಾ ಸಿಬ್ಬಂದಿ, ಮುತ್ತುಕೊಟ್ಟ ಯುವಕನ ಕೆನ್ನೆಗೆ ಥಳಿಸಿ ಪಕ್ಕಕ್ಕೆ ತಳ್ಳಿದರು.

ಬೈಕ್ ರ‍್ಯಾಲಿ ವೇಳೆ ಒಳನುಗ್ಗಿದ ಅಪರಿಚಿತ ವ್ಯಕ್ತಿ ರಾಹುಲ್ ಗಾಂಧಿ ಅವರನ್ನು ತಬ್ಬಿ, ಭುಜಕ್ಕೆ ಮುತ್ತುಕೊಟ್ಟರು –ಪಿಟಿಐ ಚಿತ್ರ

ಎಸ್.ಪಿ ಪ್ರತಿಕ್ರಿಯೆ: ಭದ್ರತಾ ಉಲ್ಲಂಘನೆ ಕುರಿತು ಪ್ರತಿಕ್ರಿಯಿಸಿರುವ ಪುರ್ನಿಯಾದ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ) ಸ್ವಿಟಿ ಸೆಹ್ರಾವತ್, ರಾಹುಲ್ ಗಾಂಧಿ ಅವರನ್ನು 'ಕ್ಲೋಸ್ ಪ್ರೊಟೆಕ್ಷನ್ ತಂಡ'(ಸಿಪಿಟಿ) ಕರೆದೊಯ್ಯುತ್ತಿತ್ತು. ಅದು ಪರಿಸ್ಥಿತಿಯನ್ನು ನಿಭಾಯಿಸಿದಂತೆ ತೋರುತ್ತಿದೆ. ಒಂದು ವೇಳೆ ಸಿಪಿಟಿ ಅವರು ಸ್ಥಳೀಯ ಪೊಲೀಸರನ್ನು ಸಂಪರ್ಕಿಸಿ ವಿವರ ನೀಡಿದರೆ ಸಂಬಂಧಪಟ್ಟ ವ್ಯಕ್ತಿಯನ್ನು ಪತ್ತೆಹಚ್ಚಿ, ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

'ಮತ ಕಳವು: ಆಯೋಗ–ಬಿಜೆಪಿ ಪಾಲುದಾರಿಕೆ'

ಅರಾರಿಯಾ (ಪಿಟಿಐ): ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಚುನಾವಣಾ ಆಯೋಗದ ಮೂಲಕ ನಡೆಯುತ್ತಿರುವ ಸಾಂಸ್ಥಿಕ ಮತ ಕಳ್ಳತನವಾಗಿದೆ. ಈ ವಿಚಾರದಲ್ಲಿ ಆಯೋಗವು ಈಗ ಬಿಜೆಪಿಯೊಂದಿಗೆ ಪಾಲುದಾರಿಕೆಯನ್ನು ಹೊಂದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಆರೋಪಿಸಿದರು.

ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಸೇರಿದಂತೆ 'ಇಂಡಿಯಾ'ದ ಇತರ ನಾಯಕರೊಂದಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿದ ರಾಹುಲ್ 'ಸಾರ್ವಜನಿಕ ವಲಯಗಳನ್ನು ಖಾಸಗೀಕರಣಗೊಳಿಸಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಈಗ 'ಎಸ್‌ಐಆರ್' ಮೂಲಕ ಬಡ ಜನರ ಮತವನ್ನು ಕಳವು ಮಾಡಲು ಯತ್ನಿಸುತ್ತಿದೆ' ಎಂದು ಹೇಳಿದರು.

'ಬಿಹಾರದಲ್ಲಿ ಮತ ಕಳ್ಳತನ ನಡೆಸಲು ನಾವು ಯಾವುದೇ ಕಾರಣಕ್ಕೂ ಬಿಡುವುದಿಲ್ಲ' ಎಂದು ಅವರು ಹೇಳಿದರು.

ಮಗನ ಮುಂದೆಯೇ ಕೃತ್ಯ: ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿಗೆ ಗುಂಡೇಟು

ವರದಕ್ಷಿಣೆ; ಮಹಿಳೆಯ ಜೀವಂತ ದಹನ

ಪ್ರಜಾವಾಣಿ ವಾರ್ತೆ

ಲಖನೌ: ವರದಕ್ಷಿಣೆ ತರುವಂತೆ ಕಿರುಕುಳ ನೀಡಿದ ಪತಿ, ತಾಯಿ ಜೊತೆ ಸೇರಿಕೊಂಡು ಪತ್ನಿಗೆ ಬೆಂಕಿ ಹಚ್ಚಿದ ಪ್ರಕರಣ ಇಲ್ಲಿನ ಗ್ರೇಟರ್ ನೋಯ್ಡಾದಲ್ಲಿ ನಡೆದಿದೆ.

ಮಗನ ಮುಂದೆಯೇ ಈ ಕೃತ್ಯ ನಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಮಹಿಳೆಯು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದರು. ಶನಿವಾರ ವೈದ್ಯಕೀಯ ಪರೀಕ್ಷೆಗೆ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ವೇಳೆ ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ವೇಳೆ ಗುಂಡು ಹೊಡೆದಿದ್ದು, ಕಾಲಿಗೆ ಗಾಯವಾಗಿದೆ.

ಪ್ರಕರಣ ಏನು?: ನೋಯ್ಡಾದ ಸಿರ್ಸಾ ಗ್ರಾಮದ ವಿಪಿನ್ ಅವರನ್ನು ನಿಕ್ಕಿ ಎಂಬುವವರು 2016ರಲ್ಲಿ ಮದುವೆಯಾಗಿದ್ದರು. ಸಂತ್ರಸ್ತೆಯ ಸಹೋದರಿ ಕಾಂಚನ್ ಅವರು ವಿಪಿನ್ ಸಹೋದರ ರೋಹಿತ್ ಅವರನ್ನು ವರಿಸಿದ್ದರು.

ಮೃತ ನಿಕ್ಕಿ ಜೊತೆ ವಿಪಿನ್

ವರದಕ್ಷಿಣೆ ವಿಚಾರವಾಗಿ ವಿಪಿನ್ ಹಾಗೂ ಆಕೆಯ ತಾಯಿ ಸೇರಿಕೊಂಡು ಗುರುವಾರ ನಿಕ್ಕಿ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ನಂತರ, ಆಕೆಯ ಮೇಲೆ ಉರಿಯುವ ದ್ರವವನ್ನು ಚೆಲ್ಲಿ, ಲೈಟರ್‌ನಿಂದ ಬೆಂಕಿ ಹಚ್ಚಿದ್ದಾರೆ. ಮೈ ಮೇಲೆ ಬೆಂಕಿ ಹತ್ತಿದ್ದರಿಂದ ತಪ್ಪಿಸಿಕೊಂಡು ಮೆಟ್ಟಿಲಿನಿಂದ ಕೆಳಗಿಳಿದು ಬರುವ ವೇಳೆ, ಕುಸಿದು ಬಿದ್ದಿದ್ದಾರೆ. ನಂತರ ಅವರನ್ನು ಆಸ್ಪತ್ರೆಗೆ ದಾಖಲಿಸಿದರೂ ಕೂಡ ತೀವ್ರವಾದ ಗಾಯಗಳಿಂದ ಗುರುವಾರ ರಾತ್ರಿ ಕೊನೆಯುಸಿರೆಳೆದಿದ್ದಾರೆ.

'ಸ್ಕಾರ್ಪಿಯೊ, ಬೈಕ್ ಉಡುಗೊರೆ'

'ಮದುವೆ ವೇಳೆ ಅಳಿಯನಿಗೆ ಸ್ಕಾರ್ಪಿಯೊ ಎಸ್‌ಯುವಿ, ಮನೆ ಬಳಕೆಯ ವಸ್ತುಗಳನ್ನು ವರದಕ್ಷಿಣೆಯಾಗಿ ನೀಡಲಾಗಿತ್ತು. ಇದಾದ ಬಳಿಕವೂ ₹36 ಲಕ್ಷ ನಗದು ತರುವಂತೆ, ಪತಿ ಹಾಗೂ ಆಕೆಯ ಕುಟುಂಬದ ಸದಸ್ಯರು ಮಗಳಿಗೆ ಕಿರುಕುಳ ನೀಡುತ್ತಿದ್ದರು' ಎಂದು ನಿಕ್ಕಿಯ ತಂದೆ ಭಿಕಾರಿ ಸಿಂಗ್ ತಿಳಿಸಿದ್ದಾರೆ.

ಪರಾರಿ ಯತ್ನ: 'ಪ್ರಕರಣಕ್ಕೆ ಸಂಬಂಧಿಸಿದಂತೆ ವಿಪಿನ್ ಅನ್ನು ವಶಕ್ಕೆ ಪಡೆದು ಆತನ ಮನೆಯಿಂದ ಸಂತ್ರಸ್ತೆಯ ಮೈ ಮೇಲೆ ಚೆಲ್ಲಲಾದ ದಹಿಸುವ ದ್ರವವನ್ನು ವಶಕ್ಕೆ ಪಡೆಯಲಾಗಿತ್ತು. ವಿಚಾರಣೆ ನಡೆಸಿದ್ದ ಪೊಲೀಸರು ಶನಿವಾರ ವೈದ್ಯಕೀಯ ಪರೀಕ್ಷೆಗೆ ಆರೋಪಿಯನ್ನು ಕರೆದೊಯ್ಯುತ್ತಿದ್ದ ವೇಳೆ ಪಿಸ್ತೂಲ್ ಕಿತ್ತುಕೊಂಡು, ಗಾಳಿಯಲ್ಲಿ ಗುಂಡು ಹಾರಿಸಿದ್ದಾನೆ. ಪೊಲೀಸರು ಪ್ರತಿ ದಾಳಿ ನಡೆಸಿ ಆತನ ಕಾಲಿಗೆ ಗುಂಡು ಹೊಡೆದು ವಶಕ್ಕೆ ಪಡೆದಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಪತ್ನಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ವಿಪಿನ್ ಹೇಳಿಕೆ ನೀಡಿದ್ದಾನೆ. ವಿಪಿನ್ ತಾಯಿ ದಯಾವತಿ (55) ಅವರನ್ನು ಕಾಸನಾ ಪೊಲೀಸರು ಬಂಧಿಸಿದ್ದಾರೆ.

'ನನಗೆ ಹಾಗೂ ಸಹೋದರಿಗೆ ವರದಕ್ಷಿಣೆ ವಿಚಾರವಾಗಿ ಹಿಂಸೆ ನೀಡಲಾಗುತ್ತಿತ್ತು. 'ಸಹೋದರಿ ಮೇಲೆ ಹಲ್ಲೆ ನಡೆಸುತ್ತಿದ್ದಾಗ ಮಧ್ಯಪ್ರವೇಶಿಸಲು ಮುಂದಾದೆ. ಆ ವೇಳೆ, ನನ್ನ ಮೇಲೂ ಹಲ್ಲೆ ನಡೆಸಿದರು, ಇದರಿಂದ ಅನಿವಾರ್ಯವಾಗಿ ವಿಡಿಯೊ ಚಿತ್ರೀಕರಿಸಿ, ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದೇನೆ' ಎಂದು ನಿಕ್ಕಿ ಸಹೋದರಿ ಕಾಂಚನ ಹೇಳಿದ್ದಾರೆ.

ಕಲಾತ್ಮಕ ಬ್ಯಾಟಿಂಗ್ ಸರದಾರ ಪೂಜಾರ

ಟೆಸ್ಟ್ ಕ್ರಿಕೆಟ್‌ನ 'ಬಂಡೆ', ಛಲದಂಕಮಲ್ಲ ಚೇತೇಶ್ವರ್‌ಗೆ ಅಪ್ಪನೇ ಮೊದಲ ಗುರು

• ಗಿರೀಶ ದೊಡ್ಡಮನಿ

ಬೆಂಗಳೂರು: ಚೇತೇಶ್ವರ್ ಪೂಜಾರ ಅವರು ಟೆಸ್ಟ್ ಕ್ರಿಕೆಟ್ ರಂಗಕ್ಕೆ ಪದಾರ್ಪಣೆ ಮಾಡುವ ಹೊತ್ತಿಗೆ ಭಾರತವು ಟ್ವೆಂಟಿ–20 ವಿಶ್ವಕಪ್ ಗೆದ್ದು ಮೂರು ವರ್ಷಗಳಾಗಿದ್ದವು. ಇಂಡಿಯನ್ ಪ್ರೀಮಿಯರ್ ಲೀಗ್ ಎಂಬ ಶ್ರೀಮಂತ ಟೂರ್ನಿಯ ಭರಾಟೆ ಆರಂಭವಾಗಿ ಎರಡು ವರ್ಷಗಳು ಕಳೆದಿದ್ದವು. ಅದಾಗಲೇ ಕ್ರಿಕೆಟ್ ಅಂಗಳದತ್ತ ಬರುವ ಹುಡುಗರು 'ಹೊಡಿ ಬಡಿ' ವೀರರಾಗಿ ಬೆಳೆಯುವ ಕನಸು ಕಾಣುತ್ತಿದ್ದರು.

ಆದರೆ 22ರ ಹರೆಯದ ಪೂಜಾರ ಅವರನ್ನು ಮಾತ್ರ ಚುಟುಕು ಕ್ರಿಕೆಟ್‌ನ ತಳಕು, ಬಳಕು ಆಕರ್ಷಿಸಲೇ ಇಲ್ಲ. ಅದರಲ್ಲೂ ಕಳೆದ 15 ವರ್ಷಗಳಲ್ಲಿ ಟಿ20 ಕ್ರಿಕೆಟ್ ಮತ್ತು ಐಪಿಎಲ್ ಟೂರ್ನಿಯ ಜನಪ್ರಿಯತೆ ಅಗಾಧವಾಗಿ ಬೆಳೆದಿದೆ. ಈ ಅವಧಿಯಲ್ಲಿ ಹಲವು ಆಟಗಾರರು ಐಪಿಎಲ್‌ನಲ್ಲಿ ದೊಡ್ಡ ಮೊತ್ತವನ್ನು ತಮ್ಮ ಜೇಬಿಗಿಳಿಸಿದ್ದಾರೆ. 14 ವರ್ಷದ ವೈಭವ್ ಸೂರ್ಯವಂಶಿ ಅಂತಹ ಪೋರರೂ ಕೋಟಿ ರೂಪಾಯಿ ಗಳಿಸಿದ್ದಾರೆ. ಈ ಎಲ್ಲ ಆಕರ್ಷಣೆ, ಆಮಿಷಗಳ ನಡುವೆಯೂ 'ಬಂಡೆ'ಯಂತೆ ನಿಂತು 'ಟೆಸ್ಟ್ ಪರಿಣತ' ಎಂಬ ಹೆಗ್ಗಳಿಕೆಯೊಂದಿಗೆ ವೃತ್ತಿಜೀವನಕ್ಕೆ ವಿದಾಯ ಹೇಳಲು ಎಂಟೆದೆಯೇ ಬೇಕಲ್ಲವೇ?

ಹೌದು; ಪೂಜಾರ ಅವರ ಮನೋ-ದಾರ್ಢ್ಯಕ್ಕೆ ಹಲವು ಉದಾಹರಣೆಗಳಿವೆ. 2021ರಲ್ಲಿ ಗಾಬಾ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾದ ವೇಗಿಗಳು ಹಾಕಿದ 135 ರಿಂದ 145 ಕಿ.ಮೀ ವೇಗದ ಎಸೆತಗಳು ಪೂಜಾರ ಅವರ ತಲೆ, ತೋಳು, ಮುಂಗೈ, ಹೊಟ್ಟೆ, ಸೊಂಟಗಳಿಗೆ ಅಪ್ಪಳಿಸಿದ್ದವು. ಹಲ್ಲುಕಚ್ಚಿ ನೋವು ಸಹಿಸಿಕೊಂಡ ಪೂಜಾರ ಅರ್ಧಶತಕ ಗಳಿಸಿದರು. 319 ನಿಮಿಷಗಳ ವರೆಗೆ ಕ್ರೀಸ್‌ನಲ್ಲಿದ್ದು 211 ಎಸೆತಗಳನ್ನು ಎದುರಿಸಿದ್ದು ಅವರ ದೈಹಿಕ ಶಕ್ತಿಯಷ್ಟೇ ಅಲ್ಲ. ಅವರ ಗಟ್ಟಿ ಮನೋಬಲದ ಪ್ರತೀಕವೂ ಆಗಿತ್ತು. ಗಾಬಾದಲ್ಲಿ ಭಾರತವು ಮೊಟ್ಟ ಮೊದಲ ಬಾರಿ ಟೆಸ್ಟ್ ಗೆದ್ದು ಇತಿಹಾಸ ಬರೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅದಕ್ಕಾಗಿಯೇ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿರುವ 19 ಶತಕಗಳು ಒಂದು ತೂಕವಾದರೆ, ಗಾಬಾದ ಅರ್ಧಶತಕದ್ದೇ ಒಂದು ತೂಕ.

ರಾಜಕೋಟ್‌ನಲ್ಲಿ ಜನಿಸಿದ ಚೇತೇಶ್ವರ್ ಅವರು ಅಪ್ಪ ಅರವಿಂದ್ ಅವರಿಂದ ಕ್ರಿಕೆಟ್ ಕಲಿತರು. ಅಮ್ಮ ರೀನಾ ಅವರಿಂದ ಆಧ್ಯಾತ್ಮ ರೂಢಿಸಿಕೊಂಡರು. ತಮ್ಮ ಹದಿವಯದಲ್ಲಿಯೇ ಚೇತೇಶ್ವರ್ ಅವರಿಗೆ ಅಮ್ಮನ ಅಗಲಿಕೆಯ ನೋವು ಕಾಡಿತು. ಆದರೆ ಅಪ್ಪನ ನೆರಳಲ್ಲಿ ಕ್ರಿಕೆಟ್ ಮೇಲೆ ಸಂಪೂರ್ಣ ಗಮನ ಹರಿಸಿದರು. ಅಮ್ಮನಿಂದ ಬಂದ ಸಮಚಿತ್ತದ ಗುಣ ಅವರನ್ನು ಎತ್ತರಕ್ಕೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಸುಳ್ಳಲ್ಲ.

ಸೌರಾಷ್ಟ್ರ ತಂಡದಲ್ಲಿ ರನ್‌ಗಳ ಹೊಳೆ, ಶತಕಗಳ ಮಳೆ ಸುರಿಸಿದ ಚೇತೇಶ್ವರ್ ಅವರಿಗೆ 2010ರಲ್ಲಿ ಭಾರತ ಟೆಸ್ಟ್ ತಂಡದ ಬಾಗಿಲು ತೆರೆಯಿತು. ಆಸ್ಟ್ರೇಲಿಯಾ ಎದುರಿನ ಸರಣಿಯ ಮೊದಲ ಪಂದ್ಯ ಮೊಹಾಲಿಯಲ್ಲಿ ನಡೆದಿತ್ತು. ಆ ಪಂದ್ಯದಲ್ಲಿ ತಮ್ಮ ಗಾಯದ ನೋವಿನಲ್ಲಿಯೂ ವಿವಿಎಸ್ ಲಕ್ಷ್ಮಣ್ ಅವರು ತಂಡವನ್ನು ರೋಚಕ ಗೆಲುವಿನತ್ತ ಮುನ್ನಡೆಸಿದ್ದರು. ಆ ಪಂದ್ಯದಲ್ಲಿ ಪೂಜಾರ ಡ್ರೆಸಿಂಗ್ ರೂಮ್‌ನಲ್ಲಿದ್ದು ಆಟ ಕಣ್ತುಂಬಿಕೊಂಡಿದ್ದರು. ಅದರ ನಂತರದ ಪಂದ್ಯ ಬೆಂಗಳೂರಿನಲ್ಲಿತ್ತು. ಲಕ್ಷ್ಮಣ್ ಗಾಯ ಉಲ್ಬಣಿಸಿದ್ದರಿಂದ ಪೂಜಾರಗೆ ಅವಕಾಶ ಒಲಿಯಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪದಾರ್ಪಣೆ ಮಾಡಿದರು. ಎಂ.ಎಸ್. ಧೋನಿ ನಾಯಕತ್ವದ ಆ ತಂಡದಲ್ಲಿ ಮುರಳಿ ವಿಜಯ್, ವೀರೇಂದ್ರ ಸೆಹ್ವಾಗ್, ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್ ಅವರಂತಹ ಅನುಭವಿ ಬ್ಯಾಟರ್‌ಗಳಿದ್ದರು. ಅವರ ನಡುವೆ ತಮ್ಮ ಹೆಜ್ಜೆಗುರುತು ಮೂಡಿಸುವಲ್ಲಿ ಪೂಜಾರ ಯಶಸ್ವಿಯಾದರು. ಆ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ 129 ನಿಮಿಷ ಬ್ಯಾಟಿಂಗ್ ಮಾಡಿ 72 ರನ್ ಗಳಿಸಿದರು. ಸಚಿನ್ ಜೊತೆಗೆ ಚೆಂದದ ಜತೆಯಾಟವಾಡಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಅಂದು ಮೂಡಿಸಿದ್ದ ಭರವಸೆಯನ್ನು ಕಳೆದ ಒಂದೂವರೆ ದಶಕ ಕೂಡ ಉಳಿಸಿಕೊಂಡರು. ಸುನಿಲ್ ಗಾವಸ್ಕರ್, ಸಚಿನ್, ವಿವಿಎಸ್ ಲಕ್ಷ್ಮಣ್, ದ್ರಾವಿಡ್ ಅವರ ನಂತರ 'ಕಲಾತ್ಮಕ ಬ್ಯಾಟಿಂಗ್' ಸೊಬಗನ್ನು ಚುಟುಕು ಕ್ರಿಕೆಟ್ ಅಬ್ಬರದ ಕಾಲದಲ್ಲಿಯೂ ಜೀವಂತವಾಗಿಟ್ಟರು. 'ಗೋಡೆ' ಖ್ಯಾತಿಯ ದ್ರಾವಿಡ್ ಅವರ ತವರಿನಂಗಳದಲ್ಲಿ ಪೂಜಾರ ಟೆಸ್ಟ್ ಪಯಣ ಅರಂಭವಾಗಿದ್ದು ಕಾಕತಾಳೀಯವಿರಬಹುದು. ಆದರೆ, ನಂತರದ ವರ್ಷಗಳಲ್ಲಿ ದ್ರಾವಿಡ್ ಅವರ ಸ್ಥಾನ ತುಂಬುವಲ್ಲಿ ಪೂಜಾರ ಬಹುತೇಕ ಯಶಸ್ವಿಯಾದರು.

ಆದರೆ 2023ರ ವಿಶ್ವ ಟೆಸ್ಟ್ ಫೈನಲ್ ಪಂದ್ಯದಲ್ಲಿ ಆಡಿದ ನಂತರ ಅವರಿಗೆ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಸಿಗಲಿಲ್ಲ. ಕಳೆದೆರಡು ವರ್ಷಗಳಲ್ಲಿ ದೇಶಿ ಕ್ರಿಕೆಟ್ ಟೂರ್ನಿ ಮತ್ತು ಇಂಗ್ಲಿಷ್ ಕೌಂಟಿಯಲ್ಲಿ ಆಡಿದರು. ತಮಲ್ಲಿನ್ನೂ ಕ್ರಿಕೆಟ್ ಇದೆ ಎಂದು ಆಟದ ಮೂಲಕವೇ ಸಂದೇಶ ನೀಡಿದರು. ಆದರೂ ಆಯ್ಕೆ ಸಮಿತಿಯ ಚಿತ್ತ ಅವರತ್ತ ಹೊರಳಲಿಲ್ಲ. ಹಾಗಾಗಿ, 37 ವರ್ಷ ವಯಸ್ಸಿನ ಪೂಜಾರ ಭಾನುವಾರ ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಇನ್ನೇನಿದ್ದರೂ ಅವರನ್ನು 'ಮಾತಿನ ಮಂಟಪ'ದಲ್ಲಿ ಕಾಣಬಹುದು.

ಚೇತೇಶ್ವರ್ ಪೂಜಾರ

ಹುಬ್ಬಳ್ಳಿಯಲ್ಲಿ ತ್ರಿಶತಕ ಬಾರಿಸಿದ್ದ ಪೂಜಾರ

• ಬಿ. ಸತೀಶ್

ಹುಬ್ಬಳ್ಳಿ: ಚೇತೇಶ್ವರ್ ಪೂಜಾರ ಅವರಿಗೆ ಕರ್ನಾಟಕದ ನೆಲದಲ್ಲಿ ಚೆಂದದ ನೆನಪುಗಳಿವೆ. ಬೆಂಗಳೂರು ಅವರ ಪದಾರ್ಪಣೆಯ ತಾಣ. ಅಲ್ಲದೇ ಹುಬ್ಬಳ್ಳಿಯಲ್ಲಿ ತ್ರಿಶತಕ ಗಳಿಸಿದ ಸವಿನೆನಪು ಕೂಡ ಇದೆ.

ಅವರು 2013ರ ಅಕ್ಟೋಬರ್‌ನಲ್ಲಿ ಹುಬ್ಬಳ್ಳಿಯ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ತ್ರಿಶತಕ (306) ದಾಖಲಿಸಿದ್ದರು. ವೆಸ್ಟ್ ಇಂಡೀಸ್ 'ಎ' ಮತ್ತು ಭಾರತ 'ಎ' ತಂಡಗಳ ನಡುವೆ ನಡೆದಿದ್ದ ನಾಲ್ಕು ದಿನಗಳ ಟೆಸ್ಟ್ ಪಂದ್ಯದ ನಾಯಕತ್ವವನ್ನು ಚೇತೇಶ್ವರ ಪೂಜಾರ ವಹಿಸಿದ್ದರು. ಗೌತಮ್ ಗಂಭೀರ್, ವೀರೇಂದ್ರ ಸೆಹ್ವಾಗ್, ಜಹೀರ್ ಖಾನ್ ಅವರಂತಹ ಖ್ಯಾತ ಆಟಗಾರರೂ ಈ ಸರಣಿಯಲ್ಲಿ ಆಡಿದ್ದರು. ಆ ಪಂದ್ಯದಲ್ಲಿ ಆತಿಥೇಯ ತಂಡ ಇನಿಂಗ್ಸ್ ಹಾಗೂ 54 ರನ್‌ಗಳಿಂದ ಗೆದ್ದಿತ್ತು. ಒಂಬತ್ತು ತಾಸು ಕ್ರೀಸ್‌ನಲ್ಲಿದ್ದ ಪೂಜಾರ, 415 ಎಸೆತ ಎದುರಿಸಿ, 33 ಬೌಂಡರಿ ಸಿಡಿಸಿದ್ದರು. ಪಂದ್ಯದ ಬಳಿಕ ಮಾತನಾಡಿದ್ದ ಪೂಜಾರ, 'ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ನನ್ನ ಅತ್ಯುತ್ತಮ ಇನಿಂಗ್ಸ್. ಹುಬ್ಬಳ್ಳಿಯ ಕ್ರೀಡಾಂಗಣ ಉತ್ತಮ ಪಿಚ್ ಹೊಂದಿದ್ದು, ಇಲ್ಲಿ ಇನ್ನೂ ಹೆಚ್ಚು ಪ್ರಥಮ ದರ್ಜೆ ಪಂದ್ಯಗಳನ್ನು ಆಯೋಜಿಸಬಹುದು' ಎಂದಿದ್ದರು.

'ಫಾರ್ಮ್ ಕೊರತೆ ಎದುರಿಸುತ್ತಿದ್ದ ಚೇತೇಶ್ವರ ಪೂಜಾರ, ಇಲ್ಲಿ ನಡೆದಿದ್ದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು. ಇಲ್ಲಿನ ಪಂದ್ಯದ ಬಳಿಕ ಭಾರತ ತಂಡಕ್ಕೆ ಪುನರಾಗಮನ ಮಾಡಿದರು' ಎಂದು ಕೆಎಸ್‌ಸಿಎ ಧಾರವಾಡ ವಲಯದ ಮಾಜಿ ನಿಮಂತ್ರಕ ಬಾಬಾ ಭೂಸದ ಸ್ಮರಿಸಿದರು.

ಟಿ20 ಆಡಲಿಲ್ಲ..!

ಪೂಜಾರ ಅವರಿಗೆ ವೃತ್ತಿಜೀವನದುದ್ದಕ್ಕೂ ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಆಡುವ ಅವಕಾಶ ಸಿಗಲಿಲ್ಲ. ಕೇವಲ 5 ಏಕದಿನ ಪಂದ್ಯಗಳಲ್ಲಿ ಆಡಿದ್ದಾರೆ. ಆದರೆ, ಐಪಿಎಲ್‌ನಲ್ಲಿ 30 ಪಂದ್ಯಗಳನ್ನು ಆಡಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು, ಪಂಜಾಬ್ ಕಿಂಗ್ಸ್, ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳಲ್ಲಿ ಆಡಿದ್ದರು.

ಮಾದರಿ	ಪಂದ್ಯ	ರನ್	ಶ್ರೇಷ್ಠ	ಸರಾಸರಿ	ಶತಕ	ಅರ್ಧಶತಕ
ಟೆಸ್ಟ್	103	7,195	206	44.37	19	35
ಏಕದಿನ	5	51	27	10.2	0	0
ಪ್ರಥಮದರ್ಜೆ	278	21,301	352	51.82	66	81
ಐಪಿಎಲ್	30	390	51	20.53	0	1

ರಾಜ್ಯ ಜೂನಿಯರ್, 23 ವರ್ಷದೊಳಗಿನವರ ಅಥ್ಲೆಟಿಕ್ಸ್

ಬೆಳಗಾವಿಯ ವೈಷ್ಣವಿ 'ಡಬಲ್' ದಾಖಲೆ

ಪ್ರಜಾವಾಣಿ ವಾರ್ತೆ

23 ವರ್ಷದೊಳಗಿನ ಪುರುಷರ 400 ಮೀ. ಓಟದಲ್ಲಿ ಚಿನ್ನ ಗೆದ್ದ ಬೆಳಗಾವಿಯ ಶ್ರೀನಾಥ್ ಗಣಪತ್ (316) ಮತ್ತು ಬೆಳ್ಳಿ ಗಳಿಸಿದ ಭುವನ್ ಪೂಜೇರಿ (303) ಅಂತಿಮ ಗೆರೆಯತ್ತ ಮುನ್ನುಗ್ಗಿದ ರೀತಿ ಚಿತ್ರ ಉಮೇಶ್ ಮಾರ್ಪಳ್ಳಿ

ಉಡುಪಿ: ಟ್ರ್ಯಾಕ್‌ನಲ್ಲಿ ಮತ್ತೊಮ್ಮೆ ಸಾಮರ್ಥ್ಯ ಪ್ರದರ್ಶಿಸಿದ ಬೆಳಗಾವಿಯ ವೈಷ್ಣವಿ ರಾವಲ್ ಇಲ್ಲಿನ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಜ್ಯ ಜೂನಿಯರ್ ಮತ್ತು 23 ವರ್ಷದೊಳಗಿನವರ ಅಥ್ಲೆಟಿಕ್ ಕೂಟದಲ್ಲಿ ಎರಡನೇ ದಿನವಾದ ಭಾನುವಾರವೂ ದಾಖಲೆ ಬರೆದು ಚಿನ್ನದ ಒಡತಿಯಾದರು.

ರಾಜ್ಯ ಅಥ್ಲೆಟಿಕ್ ಸಂಸ್ಥೆಯ ಸಹಯೋಗದಲ್ಲಿ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಆಯೋಜಿಸಿರುವ ಕೂಟದ ಮೊದಲ ದಿನ ವೈಷ್ಣವಿ 20 ವರ್ಷದೊಳಗಿನ ಬಾಲಕಿಯರ 800 ಮೀಟರ್ಸ್ ಓಟದಲ್ಲಿ ದಾಖಲೆ (2ನಿ 12.42 ಸೆ) ಮಾಡಿದ್ದರು. ಭಾನುವಾರ 1500 ಮೀ ಓಟದಲ್ಲಿ ದಾಖಲೆ ಮಾಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಣತಿ ಮತ್ತು ಧಾರವಾಡದ ಶಿಲ್ಪಾ ರಾಕೇಶ್ ಅವರನ್ನು ಹಿಂದಿಕ್ಕಿದ ಅವರು 4 ನಿಮಿಷ 32.93 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ ಪ್ರಿಯಾಂಕಾ ಸಿ. (4:37.94) ಅವರ ದಾಖಲೆಯನ್ನು ಮುರಿದರು.

23 ವರ್ಷದೊಳಗಿನವರ ವಿಭಾಗದಲ್ಲಿ ಭಾನುವಾರ 5 ದಾಖಲೆಗಳು ನಿರ್ಮಾಣವಾದವು. ಪುರುಷರ 1500 ಮೀ ಓಟದಲ್ಲಿ ಧಾರವಾಡದ ಕೊರಪಾಟಿ (3ನಿ 57.99ಸೆ) ಲೋಕೇಶ್ ಹೆಸರಿನಲ್ಲಿದ್ದ (3:58.23) ದಾಖಲೆ ಮುರಿದರು. ಹ್ಯಾಮರ್ ಥ್ರೋದಲ್ಲಿ ಕೊಪ್ಪಳದ ಸಚಿನ್ (61.39ಮೀ) ತಮ್ಮದೇ ಹೆಸರಿನಲ್ಲಿದ್ದ ದಾಖಲೆ ಉತ್ತಮಪಡಿಸಿಕೊಂಡರು. ಡಿಸ್ಕಸ್ ಥ್ರೋದಲ್ಲಿ ದಕ್ಷಿಣ ಕನ್ನಡದ ನಾಗೇಂದ್ರ ಅಣ್ಣಪ್ಪ (52.77ಮೀ) ತಮ್ಮದೇ ದಾಖಲೆ ಉತ್ತಮಪಡಿಸಿಕೊಂಡರು. ಪೋಲ್‌ವಾಲ್ಟ್‌ನಲ್ಲಿ ಬೆಂಗಳೂರಿನ ಆದಿತ್ಯ ವಿ.ಎಂ (4.20) ಲೋಕೇಶ್ ರಾಥೋಡ್ (3.90ಮೀ) ಅವರ ದಾಖಲೆ ಮುರಿದರು. ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ದಕ್ಷಿಣ ಕನ್ನಡದ ಸಿಂಚನಾ ಎಂ.ಎಸ್ (6.02ಮೀ) ಶ್ರೀದೇವಿಕಾ ವಿ.ಎಸ್ (5.76) ಅವರ ದಾಖಲೆ ಹಿಂದಿಕ್ಕಿದರು. 20 ವರ್ಷದೊಳಗಿನ ಪುರುಷರ 1500 ಮೀ. ನಲ್ಲಿ ದಕ್ಷಿಣ ಕನ್ನಡದ ರಂಗಣ್ಣ ನಾಯಕ (3:52.05) ಶಶಿಧರ್ ಬಿ.ಎಲ್ (4:00.7) ದಾಖಲೆಯನ್ನು ಮೀರಿದರು.



ಸಿಂಚನಾ

23 ವರ್ಷದೊಳಗಿನವರ ಫಲಿತಾಂಶಗಳು: ಪುರುಷರು:400 ಮೀ ಓಟ: ಶ್ರೀನಾಥ್ ಗಣಪತ್ (ಬೆಳಗಾವಿ)-1. ಕಾಲ: 48.14ಸೆ, ಭುವನ್ ಪೂಜೇರಿ (ಬೆಳಗಾವಿ)_2, ಸ್ಯಾಮ್ಯುಯೆಲ್ (ಬೆಂಗಳೂರು)_3; 1500 ಮೀ ಓಟ: ಕೊರಪಾಟಿ (ಧಾರವಾಡ)-1. ಕಾಲ: 3ನಿ 57.99ಸೆ, ಬಾಲು (ಧಾರವಾಡ)-2, ಸಂಗಮೇಶ್ (ಧಾರವಾಡ)-3; 110 ಮೀ ಹರ್ಡಲ್ಸ್: ಕೃಷಿಕ್ ಎಂ (ತುಮಕೂರು)-1. ಕಾಲ: 14.72ಸೆ, ಸಂತೋಷ್ ಕುಮಾರ್ (ಬೆಂಗಳೂರು)-2, ಈಶ್ವರ್ ಗೌಡ (ಉತ್ತರ ಕನ್ನಡ)-3; ಟ್ರಿಪ್ ಜಂಪ್: ಜಾಫರ್ ಖಾನ್ ಮೊಹಮ್ಮದ್ (ಬೆಳಗಾವಿ)-1. ಅಂತರ: 14.55ಮೀ, ರಮೇಶ್ ನಾಯಕ (ಮೈಸೂರು) -2, ಯಶಸ್ ಗೌಡ (ಮೈಸೂರು)-3; ಹ್ಯಾಮರ್ ಥ್ರೋ: ಸಚಿನ್ (ಕೊಪ್ಪಳ)-1. ದೂರ: 61.39ಮೀ, ಧೀರಜ್ ಪೂಜಾರಿ (ಉಡುಪಿ)-2, ಸುದೀಪ್ ಎಸ್.ಎಂ (ಶಿವಮೊಗ್ಗ)-3; ಡಿಸ್ಕಸ್ ಥ್ರೋ: ನಾಗೇಂದ್ರ ಅಣ್ಣಪ್ಪ (ದಕ್ಷಿಣ ಕನ್ನಡ)-1. ದೂರ: 52.77ಮೀ, ಮೋಹನ್ ಕುಮಾರ್ (ಬೆಂಗಳೂರು)-2, ಪ್ರೀತಂ ರಜಪೂತ್ (ವಿಜಯಪುರ)-3; ಪೋಲ್‌ವಾಲ್ಟ್: ಆದಿತ್ಯ ವಿ (ಬೆಂಗಳೂರು)-1. ಎತ್ತರ: 4.20ಮೀ, ಮೊಹಮ್ಮದ್ ಆಸಿಫ್ (ಶಿವಮೊಗ್ಗ)-2; ಡೆಕಾಥ್ಲಾನ್: ಬಿ.ಎಸ್. ಸನತ್ (ದಕ್ಷಿಣ ಕನ್ನಡ)-1. ಪಾಯಿಂಟ್ಸ್: 5371, ಲೋಹಿಯಾ (ಬೆಂಗಳೂರು)-2, ತ್ರಿಲೋಕ್ ಒಡೆಯರ್ (ಯಾದಗಿರಿ)-3.

ಮಹಿಳೆಯರು: 400 ಮೀ ಓಟ: ಮಾನಸ (ಕೊಡಗು)-1. ಕಾಲ: 57.66ಸೆ, ರೇಖಾ ಬಸಪ್ಪ ಪೈರೋಜಿ (ದಕ್ಷಿಣ ಕನ್ನಡ)-2, ಶ್ರಾವಣಿ ಸತೀಶ್ ಭಟ್ (ದಕ್ಷಿಣ ಕನ್ನಡ)-3; 1500 ಮೀ ಓಟ: ಶ್ರೇಯಾ (ದಕ್ಷಿಣ ಕನ್ನಡ)-1. ಕಾಲ: 5ನಿ12.69ಸೆ, ಸುಜಾತಾ ಲಮಾಣಿ (ಉಡುಪಿ)-2; 100 ಮೀ ಹರ್ಡಲ್ಸ್: ಶ್ರೀಯಾ ರಾಜೇಶ್ (ಬೆಂಗಳೂರು)-1. ಕಾಲ: 14.45ಸೆ; ಲಾಂಗ್ ಜಂಪ್: ಸಿಂಚನಾ (ದಕ್ಷಿಣ ಕನ್ನಡ)-1. ಅಂತರ: 6.02ಮೀ, ದೀಶಾ (ಮೈಸೂರು)-2, ಐಶ್ವರ್ಯಾ ಪಾಟೀಲ (ಉಡುಪಿ)-3; ಜಾವೆಲಿನ್ ಥ್ರೋ: ಶ್ರಾವ್ಯಾ (ಉಡುಪಿ)-1. ದೂರ: 41.76 ಮೀ, ಜೀವಿತಾ (ದಕ್ಷಿಣ ಕನ್ನಡ)-2, ಮುಸ್ಕಾನ್ ಸುಬೇದಾರ್ (ಬಾಗಲಕೋಟೆ)-3; ಹ್ಯಾಮರ್ ಥ್ರೋ: ನಿಶೆಲ್ (ದಕ್ಷಿಣ ಕನ್ನಡ)-1. ದೂರ: 40.01ಮೀ, ರೇವತಿ ಚಂದ್ರ (ಉಡುಪಿ)-2, ಖುಷಿ ಸಾಲ್ಯಾನ್ (ದಕ್ಷಿಣ ಕನ್ನಡ)-3.

ಚಿಟಿಕೆ ಸುದ್ದಿ

ಭಾರತಕ್ಕೆ ಮಣಿದ ಭೂತಾನ್

ಥಿಂಪು (ಪಿಟಿಐ): ಅನುಷ್ಕಾ ಕುಮಾರಿ ಅವರ ಹ್ಯಾಟ್ರಿಕ್ ಗೋಲುಗಳ (53ನೇ ನಿ., 61ನೇ ನಿ. ಹಾಗೂ 73ನೇ ನಿ.) ನೆರವಿನಿಂದ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಸ್ಯಾಫ್ 17 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಆತಿಥೇಯ ಭೂತಾನ್ ತಂಡವನ್ನು ಭಾನುವಾರ 8–0 ಗೋಲುಗಳಿಂದ ಸುಲಭವಾಗಿ ಮಣಿಸಿತು. ಇದು ಭಾರತ ತಂಡಕ್ಕೆ ಸತತ ಮೂರನೇ ಜಯ. ಅಭಿಷ್ತಾ ಬಸ್‌ನೆಟ್ ಎರಡು ಗೋಲು ಹೊಡೆದರೆ, ಪರ್ಲ್ ಫೆರ್ನಾಂಡಿಸ್, ದಿವ್ಯಾ ಲಿಂಡಾ ಹಾಗೂ ವಲ್ಲೆನಾ ಜೆ. ಫೆರ್ನಾಂಡಿಸ್ ತಲಾ ಒಂದು ಗೋಲು ಗಳಿಸಿದರು.

'ಡ್ರೀಮ್ 11' ಪ್ರಾಯೋಜಕತ್ವಕ್ಕೆ ಕುತ್ತು?

ನವದೆಹಲಿ (ಪಿಟಿಐ): ಆನ್‌ಲೈನ್ ಗೇಮಿಂಗ್ ನಿಯಂತ್ರಣ ಕುರಿತ ಮಸೂದೆಯು ಇತ್ತೀಚೆಗೆ ಸಂಸತ್‌ನಲ್ಲಿ ಅನುಮೋದನೆ ಪಡೆದ ಬೆನ್ನಲ್ಲೇ ತನ್ನ ಗೇಮಿಂಗ್ ಚಟುವಟಿಕೆಗಳನ್ನು ನಿಲ್ಲಿಸಿರುವ 'ಡ್ರೀಮ್ 11' ಫ್ಯಾಂಟಸಿ ಸ್ಪೋರ್ಟ್ಸ್ ಕಂಪನಿಯ ಪ್ರಾಯೋಜಕತ್ವವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಕಳೆದುಕೊಳ್ಳುವ ಸಾಧ್ಯತೆ ಇದೆ.

ಇನ್ನು ಮುಂದೆ ಭಾರತ ಕ್ರಿಕೆಟ್ ತಂಡದ ಪ್ರಮುಖ ಪ್ರಾಯೋಜಕ ಕಂಪನಿಯಾಗಿ ಮುಂದುವರಿಯುವುದು ತನ್ನಿಂದ ಸಾಧ್ಯವಿಲ್ಲ ಎಂದು ಬಿಸಿಸಿಐಗೆ ಕಂಪನಿ ಪತ್ರ ಬರೆದಿದೆ.

ಕಾನೂನುಬದ್ಧವಾಗಿಯೇ ಈವರೆಗೆ ವಹಿವಾಟು ನಡೆಸಿಕೊಂಡು ಬಂದಿದ್ದು, ಅದನ್ನು ಮೀರಲಾಗದು ಎಂದು ಪತ್ರದಲ್ಲಿ ಉಲ್ಲೇಖಿಸಿದೆ.

ತವರಿನಲ್ಲಿ ದಾಖಲೆ ಮೊತ್ತ ಗಳಿಸಿದ ಆಸ್ಟ್ರೇಲಿಯಾ

ಮ್ಯಾಕೆ (ಆಸ್ಟ್ರೇಲಿಯಾ) (ಎಎಫ್‌ಪಿ): ಆರಂಭ ಆಟಗಾರರಾದ ಟ್ರಾವಿಸ್ ಹೆಡ್ ಮತ್ತು ಮಿಚೆಲ್ ಮಾರ್ಷ್ ಅವರೂ ಶತಕಗಳನ್ನು ಬಾರಿಸಿದ ನಂತರ ಕ್ಯಾಮರಾನ್ ಗ್ರೀನ್ ಅವರು 47 ಎಸೆತಗಳಲ್ಲಿ ಶತಕ ಸಿಡಿಸಿದರು. ಆಸ್ಟ್ರೇಲಿಯಾ ತಂಡ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಭಾನುವಾರ 276 ರನ್‌ಗಳಿಂದ ಸದೆಬಡಿಯಿತು.

ಇದರಿಂದ ಮೊದಲೆರಡು ಪಂದ್ಯಗಳನ್ನು ಸುಲಭವಾಗಿ ಗೆದ್ದುಕೊಂಡಿದ್ದ ದಕ್ಷಿಣ ಆಫ್ರಿಕಾ ತಂಡದ ಸರಣಿ ಗೆಲುವಿನ ಅಂತರ 2–1ಕ್ಕೆ ಇಳಿಯಿತು. ಟಾಸ್ ಗೆದ್ದ ಆಸ್ಟ್ರೇಲಿಯಾ 50 ಓವರುಗಳಲ್ಲಿ 2 ವಿಕೆಟ್‌ಗೆ 431 ರನ್ ಕಲೆಹಾಕಿ ತವರಿನಲ್ಲಿ ಅತ್ಯಧಿಕ ಮೊತ್ತದ ದಾಖಲೆ ಬರೆಯಿತು. ಈ ಹಿಂದೆ ಜೊಹಾನೆಸ್‌ಬರ್ಗ್‌ನಲ್ಲಿ ಇದೇ ತಂಡದ ವಿರುದ್ಧ 4 ವಿಕೆಟ್‌ಗೆ 434 ರನ್ ಬಾರಿಸಿದ್ದು, ಈ ತಂಡದ ಸರ್ವಾಧಿಕ ಮೊತ್ತವಾಗಿದೆ.

ಮಹಾರಾಜ ಟ್ರೋಫಿ: ಮಂಗಳೂರು ತಂಡದ ಶರತ್ ಅಜೇಯ ಅರ್ಧಶತಕ

ಡ್ರ್ಯಾಗನ್ಸ್‌ಗೆ ಮಣಿದ ಬ್ಲಾಸ್ಟರ್ಸ್

• ಆರ್. ಜಿತೇಂದ್ರ

ಮೈಸೂರು: ಬೆಂಗಳೂರು ಬ್ಲಾಸ್ಟರ್ಸ್ ಬೌಲರ್‌ಗಳನ್ನು ದಂಡಿಸಿದ ಮಂಗಳೂರು ಡ್ರ್ಯಾಗನ್ಸ್‌ನ ಆರಂಭಿಕ ಬ್ಯಾಟರ್‌ಗಳು 9 ವಿಕೆಟ್‌ಗಳ ಗೆಲುವು ತಂದಿತ್ತರು. ಈ ಮೂಲಕ ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಜಿಗಿಯಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ 'ಮಹಾರಾಜ ಕಪ್' ಟ್ವೆಂಟಿ20 ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮಂಗಳೂರು ತಂಡದ ಬಿ.ಆರ್. ಶರತ್ ಹಾಗೂ ಲೋಚನ್ ಗೌಡರ 99 ರನ್ (56 ಎಸೆತ) ಜೊತೆಯಾಟದ ಎದುರು ಬ್ಲಾಸ್ಟರ್ಸ್ ಬೌಲರ್‌ಗಳು ಬಸವಳಿದರು. ಇನ್ನೂ 3.5 ಓವರ್ ಬಾಕಿ ಇರುವಂತೆಯೇ ಪಂದ್ಯ ಮುಗಿಯಿತು.

146 ರನ್‌ಗಳ ಗುರಿ ಬೆನ್ನತ್ತಿದ್ದ ಮಂಗಳೂರು ಪರ ಇಂಪ್ಯಾಕ್ಟ್ ಆಟಗಾರನಾಗಿ ಕಣಕ್ಕಿಳಿದ ಬಿ.ಆರ್. ಶರತ್ (72 ರನ್, 47 ಎ, 4X9, 6X1) ಬೌಂಡರಿಗಳ ಮೂಲಕವೇ ಗೆಲುವಿನ ಕೋಟೆ ಕಟ್ಟಿ ಅಜೇಯರಾಗಿ ಉಳಿದರು. ಅವರಿಗೆ ಲೋಚನ್ ಗೌಡ (55 ರನ್, 32 ಎ, 4X6, 6X2) ಅರ್ಧಶತಕದ ಮೂಲಕ ಸಾಥ್ ನೀಡಿದರು. ಈ ಇಬ್ಬರೇ ಪಂದ್ಯ ಮುಗಿಸುವ ಉತ್ಸಾಹದಲ್ಲಿದ್ದಾಗ ವೇಗಿ ರೋಹನ್ ರಾಜು ಜೊತೆಯಾಟ ಮುರಿದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಬೆಂಗಳೂರು ಬ್ಲಾಸ್ಟರ್ಸ್ ನಾಯಕ ಶುಭಾಂಗ್ ಹೆಗಡೆ ನಿರ್ಧಾರ ಫಲ ನೀಡಲಿಲ್ಲ. 2ನೇ ಎಸೆತದಲ್ಲೇ ಎಲ್.ಆರ್. ಚೇತನ್ (2) ಅಭಿಲಾಷ್‌ಗೆ ವಿಕೆಟ್ ಒಪ್ಪಿಸಿದರು. ರೋಹನ್ ಪಾಟೀಲ ಸೊನ್ನೆ ಸುತ್ತಿದರೆ, ಮಯಂಕ್ ಕೂಡ ಒಂದಂಕಿ (5) ಸ್ಕೋರ್ ದಾಟಲಿಲ್ಲ. ಸಂಕಷ್ಟಕ್ಕೆ ಸಿಲುಕಿದ್ದ ತಂಡಕ್ಕೆ ಶುಭಾಂಗ್ (39), ಸೂರಜ್ ಅಹುಜಾ (35) ಉಪಯುಕ್ತ ಕಾಣಿಕೆ ನೀಡಿ ರನೌಟ್ ಆದರು. ಕಡೆಯಲ್ಲಿ ವಿದ್ಯಾಧರ ಪಾಟೀಲ (25) ಮೂರು ಸಿಕ್ಸರ್ ಸಿಡಿಸಿ ಅಬ್ಬರಿಸಿದರು.

ಮಂಗಳೂರು ಡ್ರ್ಯಾಗನ್ಸ್ ಪರ 99 ರನ್‌ಗಳ ಜೊತೆಯಾಟದಲ್ಲಿ ಪಾಲ್ಗೊಂಡ ಬಿ.ಆರ್. ಶರತ್– ಲೋಚನ್ ಗೌಡ ಚಿತ್ರ: ಅನೂಪ್ ರಾಘ ಟಿ.

ಮಂಗಳೂರು ಪರ ಸ್ಪಿನ್ ಕೈಚಳಕ ತೋರಿದ ನಾಯಕ ಶ್ರೇಯಸ್ ಗೋಪಾಲ್ 29ಕ್ಕೆ3 ವಿಕೆಟ್ ಪಡೆದು ಸಂಭ್ರಮಿಸಿದರು. ಅಭಿಲಾಷ್ 2 ವಿಕೆಟ್ ಮೂಲಕ ಸಾಥ್ ನೀಡಿದರು.

ಈ ಗೆಲುವಿನೊಂದಿಗೆ ಮಂಗಳೂರು ಒಟ್ಟು 13 ಅಂಕದೊಂದಿಗೆ ಅಗ್ರಸ್ಥಾನ ಪಡೆದಿದ್ದು, ಸೋಮವಾರ ಗುಲ್ಬರ್ಗ ಮಿಸ್ಟಿಕ್ಸ್ ಎದುರು ಲೀಗ್ ಹಂತದ ಕೊನೆಯ ಪಂದ್ಯ ಆಡಲಿದೆ. ಬೆಂಗಳೂರು ತನ್ನೆಲ್ಲ ಪಂದ್ಯಗಳನ್ನು ಮುಗಿಸಿದ್ದು, ತಲಾ ಐದು ಗೆಲುವು–ಸೋಲಿನೊಂದಿಗೆ 10 ಅಂಕ ಗಳಿಸಿ 4ನೇ ಸ್ಥಾನಕ್ಕೆ ಇಳಿದಿದೆ.

ಸಂಕ್ಷಿಪ್ತ ಸ್ಕೋರ್: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 146 (ಶುಭಾಂಗ್ ಹೆಗಡೆ 39, ಸೂರಜ್ ಅಹುಜಾ 26, ವಿದ್ಯಾಧರ ಪಾಟೀಲ 25, ಭುವನ್ ರಾಜ್ 25. ಶ್ರೇಯಸ್ ಗೋಪಾಲ್ 29ಕ್ಕೆ 3, ಅಭಿಲಾಷ್ ಶೆಟ್ಟಿ 27ಕ್ಕೆ 2)

ಮಂಗಳೂರು ಡ್ರ್ಯಾಗನ್ಸ್: 16.1 ಓವರ್‌ಗಳಲ್ಲಿ 1 ವಿಕೆಟ್‌ಗೆ 149 (ಬಿ.ಆರ್. ಶರತ್ ಔಟಾಗದೇ 72 , ಲೋಚನ್ ಗೌಡ 55, ರೋಹನ್ ರಾಜು 33ಕ್ಕೆ1)

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಮಂಗಳೂರು ಡ್ರ್ಯಾಗನ್ಸ್	9	6	2	13
ಹುಬ್ಬಳ್ಳಿ ಟೈಗರ್ಸ್	9	6	3	12
ಗುಲ್ಬರ್ಗ ಮಿಸ್ಟಿಕ್ಸ್	9	6	3	12
ಬೆಂಗಳೂರು ಬ್ಲಾಸ್ಟರ್ಸ್	10	5	5	10
ಮೈಸೂರು ವಾರಿಯರ್ಸ್	10	2	7	6
ಶಿವಮೊಗ್ಗ ಲಯನ್ಸ್	8	1	7	3

ಕಡೆಯ ಎಸೆತದಲ್ಲಿ ಲಯನ್ಸ್‌ಗೆ ರೋಚಕ ಜಯ

ಮೈಸೂರು: ಕಡೆಯ ಎಸೆತದಲ್ಲಿ ಸಿಕ್ಸರ್ ಸಿಡಿಸುವ ಮೂಲಕ ಡಿ. ಅವಿನಾಶ್ (45 ರನ್, 21 ಎ, 4X3, 6X3) ಶಿವಮೊಗ್ಗ ಲಯನ್ಸ್‌ಗೆ ಟೂರ್ನಿಯಲ್ಲಿ ಮೊದಲ ಜಯ ತಂದುಕೊಟ್ಟರು. 3 ವಿಕೆಟ್ ಸೋಲಿನೊಂದಿಗೆ ಮೈಸೂರು ವಾರಿಯರ್ಸ್ ಅಭಿಯಾನ ಮುಗಿಸಿತು.

ವಾರಿಯರ್ಸ್ ನೀಡಿದ 181 ರನ್‌ಗಳ ಗುರಿ ಬೆನ್ನತ್ತಿದ ಶಿವಮೊಗ್ಗಕ್ಕೆ ಕಡೆಯ ಓವರ್‌ನಲ್ಲಿ 24ರನ್ ಬೇಕಿತ್ತು. ಎಲ್.ಆರ್. ಕುಮಾರ್ ಅವರ ಮೊದಲ ಎಸೆತವನ್ನು ಬೌಂಡರಿ ದಾಟಿಸಿದ ಅವಿನಾಶ್, ಎರಡನೇ ಎಸೆತದಲ್ಲಿ ಸಿಕ್ಸರ್, ಮೂರನೇ ಎಸೆತದಲ್ಲಿ ಬೌಂಡರಿ ಸಿಡಿಸಿ ಭರವಸೆ ಮೂಡಿಸಿದರು. ನಾಲ್ಕು ಹಾಗೂ ಐದನೇ ಎಸೆತದಲ್ಲಿ ತಲಾ ಎರಡು ರನ್ ಹೊಡೆದು, ಕಡೆಯ ಎಸೆತವನ್ನು ಸಿಕ್ಸರ್ ಸಿಡಿಸುತ್ತಿದ್ದಂತೆ ಶಿವಮೊಗ್ಗ ಆಟಗಾರರು ಮೈದಾನಕ್ಕೆ ನುಗ್ಗಿ ಸಂಭ್ರಮಿಸಿದರು.

ಶಿವಮೊಗ್ಗ ಪರ ಅನೀಶ್ವರ್ ಗೌತಮ್ (49) ಹಾಗೂ ಆನಂದ ದೊಡ್ಡಮನಿ (46) ಉಪಯುಕ್ತ ಕೊಡುಗೆ ನೀಡಿದರು. ಮೈಸೂರು ಪರ ವೆಂಕಟೇಶ್ 3 ಹಾಗೂ ಪ್ರಸಿದ್ಧ ಕೃಷ್ಣ 2 ವಿಕೆಟ್ ಉರುಳಿಸಿದರು.

ಮೊದಲು ಬ್ಯಾಟ್ ಮಾಡಿದ ಮೈಸೂರಿಗೆ ಆರಂಭಿಕ ಎಸ್.ಯು. ಕಾರ್ತಿಕ್ (53) ಆಸರೆ ಆದರು. ಕಡೆಯ ಓವರ್‌ಗಳಲ್ಲಿ ಹರ್ಷಿಲ್ (37) ಹಾಗೂ ಗೌತಮ್ ಸಾಗರ್ (30) ಅಜೇಯ ಆಟದ ಮೂಲಕ ತಂಡ 180 ರನ್ ಗಳಿಸಲು ನೆರವಾದರು.

ಸಂಕ್ಷಿಪ್ತ ಸ್ಕೋರ್: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 180 (ಎಸ್.ಯು.ಕಾರ್ತಿಕ್ 53, ಹರ್ಷಿಲ್ ಔಟಾಗದೇ 37, ಪಿ. ಧ್ರುವ್ 27ಕ್ಕೆ 2, ಎಂ.ಬಿ. ದರ್ಶನ್ 36ಕ್ಕೆ 2)

ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 7ಕ್ಕೆ181 (ಅನೀಶ್ವರ್ ಗೌತಮ್ 49, ಆನಂದ ದೊಡ್ಡಮನಿ 46, ಡಿ. ಅವಿನಾಶ್ ಔಟಾಗದೇ 45, ವೆಂಕಟೇಶ್ 23ಕ್ಕೆ3, ಪ್ರಸಿದ್ಧ ಕೃಷ್ಣ 26ಕ್ಕೆ2)

ಪಂದ್ಯದ ಆಟಗಾರ: ಡಿ. ಅವಿನಾಶ್

ಪ್ರಶಸ್ತಿಯೊಂದಿಗೆ (ಎಡದಿಂದ) ಆಕಾಶ್ ಕೆ.ಜೆ., ಅಥರ್ವ ನವರಂಗೆ, ತನಿಷ್ಕಾ ಕಪಿಲ್ ಕಾಲಭೈರವ ಮತ್ತು ಹಿಮಾಂಶಿ ಚೌಧರಿ

ಟಿ.ಟಿ: ತನಿಷ್ಕಾ, ಆಕಾಶ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ: ಅಥರ್ವ ನವರಂಗೆ, ತನಿಷ್ಕಾ ಕಪಿಲ್ ಕಾಲಭೈರವ, ಆಕಾಶ್ ಕೆ.ಜೆ., ಮತ್ತು ಹಿಮಾಂಶಿ ಚೌಧರಿ ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಹಾಗೂ ಪುರುಷ, ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ವಿಜಯನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಇಲ್ಲಿನ ತುಂಗಭದ್ರಾ ಬೋರ್ಡ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಅಥರ್ವ 11-8, 11-5, 12-10, 11-7 ರಿಂದ ಶುಭಂ ತ್ರಿವೇದಿ ಅವರನ್ನು ಮಣಿಸಿದರು. ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ತನಿಷ್ಕಾ ಅವರು 11-7, 11-4, 11-5, 11-8ರಿಂದ ರಾಶಿ ವಿ.ರಾವ್ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಆಕಾಶ್ ಕೆ.ಜೆ. ಅವರು 11-5, 15-13, 13-11, 5-11, 6-11, 11-4 ರಿಂದ ಶ್ರೀಕಾಂತ್ ಕಶ್ಯಪ್ ಅವರನ್ನು ಸೋಲಿಸಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ಹಿಮಾಂಶಿ ಚೌಧರಿ 13-11, 11-9, 11-6, 1-11, 11- 8 ರಿಂದ ತನಿಷ್ಕಾ ಕಪಿಲ್ ಕಾಲಭೈರವ ವಿರುದ್ಧ ಗೆಲುವು ಸಾಧಿಸಿದರು.

ತಂಡ ವಿಭಾಗದಲ್ಲಿ ಕೆನರಾ ಬ್ಯಾಂಕ್ ತಂಡವು 3-0ರಿಂದ ವಿನ್ನರ್ಸ್ ಕ್ಲೌಡ್ ತಂಡವನ್ನು ಮಣಿಸಿ ಪ್ರಶಸ್ತಿ ಗಳಿಸಿತು.

4x400 ಮೀ. ರಿಲೇ: ಕರ್ನಾಟಕಕ್ಕೆ ಚಿನ್ನ

ಕರ್ನಾಟಕ ಮಹಿಳಾ ರಿಲೇ ತಂಡದ (ಎಡದಿಂದ) ಪ್ರಿಯಾ ಮೋಹನ್, ದಿಶಾ ಎ., ದೀಕ್ಷಿತಾ ಗೌಡ ಹಾಗೂ ಪಿ.ಆರ್.ಪೂವಮ್ಮ

ಬೆಂಗಳೂರು: ತಾರಾ ಓಟಗಾರ್ತಿ ಪಿ.ಆರ್.ಪೂವಮ್ಮ, ದಿಶಾ ಎ., ದೀಕ್ಷಿತಾ ಗೌಡ ಹಾಗೂ ಪ್ರಿಯಾ ಮೋಹನ್ ಅವರಿದ್ದ ಕರ್ನಾಟಕ ತಂಡವು ಚೆನ್ನೈನಲ್ಲಿ ಭಾನುವಾರ ಮುಕ್ತಾಯಗೊಂಡ ರಾಷ್ಟ್ರೀಯ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 4x400 ಮೀ. ರಿಲೇ ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು.

ಆದರೆ, ಪುರುಷರ ತಂಡವು ಕಂಚಿನ ಪದಕಕ್ಕೆ ತೃಪ್ತಿಪಡಬೇಕಾಯಿತು.

ಮಹಿಳೆಯರ ಹೈಜಂಪ್‌ನಲ್ಲಿ ಪಲ್ಲವಿ ಪಾಟೀಲ ಹಾಗೂ ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಎಸ್. ಲೋಕೇಶ್ ಬೆಳ್ಳಿ ಪದಕವನ್ನು ಗೆದ್ದುಕೊಂಡರು.

ಟೆಸ್ಟ್: ಆಸ್ಟ್ರೇಲಿಯಾ ಎ ತಂಡದ ಜಯಭೇರಿ

ಬ್ರಿಸ್ಬೇನ್ (ಪಿಟಿಐ): ಅಗ್ರಕ್ರಮಾಂಕದ ಬ್ಯಾಟರ್‌ಗಳ ಜವಾಬ್ದಾರಿಯುತ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ಎ ತಂಡವು ಭಾರತ ಎ ವಿರುದ್ಧದ ಏಕೈಕ 'ಟೆಸ್ಟ್' ಪಂದ್ಯವನ್ನು ಗೆದ್ದುಕೊಂಡಿತು.

ಅಲನ್ ಬಾರ್ಡರ್ ಫೀಲ್ಡ್‌ನಲ್ಲಿ ಭಾನುವಾರ ನಡೆದ ನಾಲ್ಕನೇ ದಿನದಾಟದಲ್ಲಿ 280 ರನ್‌ಗಳ ಗುರಿ ಬೆನ್ನಟ್ಟಿದ್ದ ಆಸ್ಟ್ರೇಲಿಯಾ ಎ ತಂಡವು 6 ವಿಕೆಟ್‌ಗಳಿಂದ ಜಯಿಸಿತು. 85.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 283 ರನ್ ಗಳಿಸಿತು.

ಆತಿಥೇಯ ತಂಡದ ಆರಂಭಿಕ ಜೋಡಿ ರಚೆಲ್ ಟ್ರೆನ್‌ಮ್ಯಾನ್ (64; 143ಎ), ನಾಯಕಿ ತಹಲಿಯಾ ವಿಲ್ಸನ್ (46; 104ಎ) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 117 ರನ್ ಸೇರಿಸಿದರು. ಈ ಗಟ್ಟಿ ಬುನಾದಿಯ ಮೇಲೆ ಮ್ಯಾಡಿ ಡಾರ್ಕಿ (68; 116ಎ) ಹಾಗೂ ಅನಿಕಾ ಲೆರಾಯ್ಡ್ (72; 125ಎ) ಅವರು ಗೆಲುವಿನ ಸೌಧ ಕಟ್ಟಿದರು. ಭಾರತ ಎ ತಂಡದ ಎಂಟು ಬೌಲರ್‌ಗಳು ಮಾಡಿದ ಪ್ರಯತ್ನಕ್ಕೆ ಗೆಲುವಿನ ಫಲ ಸಿಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 89.1 ಓವರ್‌ಗಳಲ್ಲಿ 299. ಆಸ್ಟ್ರೇಲಿಯಾ ಎ: 76.2 ಓವರ್‌ಗಳಲ್ಲಿ 305. ಎರಡನೇ ಇನಿಂಗ್ಸ್: ಭಾರತ ಎ: 81.4 ಓವರ್‌ಗಳಲ್ಲಿ 286 (ತಿತಾಸ್ ಸಾಧು ಔಟಾಗದೇ 22, ಅಮಿ ಎಡ್ಗರ್ 57ಕ್ಕೆ5) ಆಸ್ಟ್ರೇಲಿಯಾ ಎ: 85.3 ಓವರ್‌ಗಳಲ್ಲಿ 4ಕ್ಕೆ283 (ರಚೆಲ್ ಟ್ರೆನ್‌ಮ್ಯಾನ್ 64, ಅನಿಕಾ ಲೆರಾಯ್ಡ್ 72, ಸೈಮಾ ಠಾಕೂರ್ 63ಕ್ಕೆ2)

ಶೂಟಿಂಗ್: ಐಶ್ವರಿ ಪ್ರತಾಪ್‌ಗೆ ಚಿನ್ನ

ಶಿಮ್ಕೆಂಟ್ (ಕಜಾಕಸ್ತಾನ) (ಪಿಟಿಐ): ಭಾರತದ ತಾರಾ ಶೂಟರ್ ಐಶ್ವರಿ ಪ್ರತಾಪ್ ಸಿಂಗ್ ತೋಮಾರ್ ಅವರು ಇಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ (3ಪಿ) ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

24 ವರ್ಷ ವಯಸ್ಸಿನ ಐಶ್ವರಿ ಅವರು ಭಾನುವಾರ ನಡೆದ ಫೈನಲ್ ಸ್ಪರ್ಧೆಯಲ್ಲಿ 462.5 ಅಂಕಗಳನ್ನು ಗಳಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು. ಅವರು 2023ರ ಟೂರ್ನಿಯ ಇದೇ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದರು.

ಚೀನಾದ ವೆನ್ಯು ಝೂಒ (462) ಬೆಳ್ಳಿ ಗೆದ್ದರೆ, ಜಪಾನ್‌ನ ನಯೋಕಾ ಒಕಾಡಾ (445.8) ಕಂಚಿನ ಪದಕ ಜಯಿಸಿದರು. ಸ್ಪರ್ಧೆಯಲ್ಲಿದ್ದ ಮತ್ತಿಬ್ಬರು ಭಾರತೀಯರಾದ ಚೈನ್ ಸಿಂಗ್ (435.7) ಹಾಗೂ ಅಖಿಲ್ ಶಿಯೊರಾಣ್ (424.9) ಅವರು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದು, ಪದಕ ಗೆಲ್ಲುವಲ್ಲಿ ವಿಫಲರಾದರು.

ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯ ತಂಡ ವಿಭಾಗದಲ್ಲಿ ಐಶ್ವರಿ, ಚೈನ್ ಸಿಂಗ್ ಹಾಗೂ ಶಿಯೊರಾಣ್ ಅವರು ಒಟ್ಟು 1,747 ಅಂಕಗಳೊಡನೆ ಬೆಳ್ಳಿ ಪದಕ ಗೆದ್ದುಕೊಂಡರು. 1,750 ಅಂಕಗಳಿಸಿದ್ದ ಚೀನಾ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿತು.

ಐಶ್ವರಿ ಪ್ರತಾಪ್ ಸಿಂಗ್ ತೋಮಾರ್

ಅದ್ರಿಯಾನ್‌ಗೆ ಸ್ವರ್ಣ: ಉದಯೋನ್ಮುಖ ಶೂಟರ್ ಅದ್ರಿಯಾನ್ ಕರ್ಮಾಕರ್ ಅವರು (463.8 ಅಂಕ) ಜೂನಿಯರ್ ಪುರುಷರ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಏಷ್ಯನ್ ಜೂನಿಯರ್ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದುಕೊಂಡರು. ಚೀನಾದ ಹಾನ್ ಯಿನಾನ್ (459.6) ಬೆಳ್ಳಿ ಗೆದ್ದರೆ, ಕಣದಲ್ಲಿದ್ದ ಮತ್ತೊಬ್ಬ ಭಾರತೀಯ ವೇದಾಂತ್ ನಿತಿನ್ (448.8) ಕಂಚಿಗೆ ತೃಪ್ತಿಪಟ್ಟರು.

ಅದ್ರಿಯಾನ್

ಅದ್ರಿಯಾನ್ ಹಾಗೂ ವೇದಾಂತ್ ಅವರು ರೋಹಿತ್ ಕನ್ಯಾನ್ ಜೊತೆಗೂಡಿ ಜೂನಿಯರ್ ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯ ತಂಡ ವಿಭಾಗದಲ್ಲಿ ಸ್ವರ್ಣ ಪದಕ ಜಯಿಸಿದರು. ಭಾರತ ತಂಡ 1,733 ಅಂಕ ಗಳಿಸಿದರೆ, ಕೊರಿಯಾ 1,722 ಅಂಕಗಳೊಂದಿಗೆ ಬೆಳ್ಳಿ ಪದಕವನ್ನು ತನ್ನದಾಗಿಸಿಕೊಂಡಿತು.

ಕನ್ನಡತಿ ಹೃದ್ಯಾ ಶ್ರೀ ಕೊಂಡೂರುಗೆ ಚಿನ್ನ

ಕನ್ನಡತಿ ಹೃದ್ಯಾ ಶ್ರೀ ಕೊಂಡೂರು, ಶಾಂಭವಿ ಶ್ರವಣ್ ಹಾಗೂ ಇಶಾ ಅನಿಲ್ ಅವರು ಜೂನಿಯರ್ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯ ತಂಡ ವಿಭಾಗದಲ್ಲಿ ಸ್ವರ್ಣ ಪದಕ ಜಯಿಸಿದರು.

ಹೃದ್ಯಾ ಶ್ರೀ

ಪ್ರಶಸ್ತಿ ಸುತ್ತಿನಲ್ಲಿ ಒಟ್ಟು 1896.2 ಅಂಕಗಳನ್ನು ಸಂಪಾದಿಸಿದ ಅವರು ಜೂನಿಯರ್ ವಿಶ್ವದಾಖಲೆ ಹಾಗೂ ಏಷ್ಯನ್ ದಾಖಲೆಯನ್ನು ನಿರ್ಮಿಸಿದರು.

ಅ.14ರಂದು ಭಾರತ–ಸಿಂಗಪುರ ನಡುವೆ ಎಎಫ್‌ಸಿ ಏಷ್ಯನ್ ಕಪ್ ಕ್ವಾಲಿಫೈಯರ್ ಪಂದ್ಯ

ಕಂಠೀರವ ಕ್ರೀಡಾಂಗಣಕ್ಕಿಲ್ಲ ಅತಿಥ್ಯದ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಸಿಂಗಪುರ ನಡುವೆ ಅಕ್ಟೋಬರ್ 14ರಂದು ನಡೆಯಲಿರುವ ಎಎಫ್‌ಸಿ ಏಷ್ಯನ್ ಕಪ್ 2027ರ ಕ್ವಾಲಿಫೈಯರ್ ಪಂದ್ಯದ ಆತಿಥ್ಯದ ಅವಕಾಶವನ್ನು ಕಂಠೀರವ ಕ್ರೀಡಾಂಗಣ ಕಳೆದುಕೊಂಡಿದೆ. ಈ ಕ್ರೀಡಾಂಗಣದ ಹುಲ್ಲಿನಂಕಣ ಮತ್ತಿತರ ಸೌಲಭ್ಯಗಳ ಕೊರತೆಯ ಕಾರಣಕ್ಕೆ ಏಷ್ಯನ್ ಫುಟ್‌ಬಾಲ್ ಒಕ್ಕೂಟ (ಎಎಫ್‌ಸಿ) ಅನುಮತಿ ನಿರಾಕರಿಸಿದೆ.

ಭಾರತ ಪುರುಷರ ತಂಡವು ಗುಂಪು ಹಂತದ ಪಂದ್ಯದಲ್ಲಿ ಸಿಂಗಪುರ ತಂಡವನ್ನು ಎದುರಿಸಲಿದೆ. ಈ ಪಂದ್ಯಕ್ಕಾಗಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಕಂಠೀರವ ಕ್ರೀಡಾಂಗಣವನ್ನು ಎಎಫ್‌ಸಿಗೆ ಶಿಫಾರಸು ಮಾಡಿತ್ತು. ಅದನ್ನು ಎಎಫ್‌ಸಿ ತಿರಸ್ಕರಿಸಿದ್ದು, ಪರ್ಯಾಯ ತಾಣಕ್ಕೆ ಹುಡುಕಾಟ ನಡೆಯುತ್ತಿದೆ.

ನೈಸರ್ಗಿಕ ಪಿಚ್ ಸೇರಿದಂತೆ ಕಂಠೀರವ ಕ್ರೀಡಾಂಗಣದಲ್ಲಿ ಹಲವು ಸೌಲಭ್ಯಗಳ ಕೊರತೆಯಿದೆ. ಹೀಗಾಗಿ, ಅಂತರರಾಷ್ಟ್ರೀಯ ಪಂದ್ಯವನ್ನು ಆಯೋಜಿಸಲು ಈ ತಾಣ ಅನುಕೂಲಕರವಾಗಿಲ್ಲ ಎಂದು ಕ್ರೀಡಾಂಗಣ ಪರಿಶೀಲನೆಗೆ ಬಂದಿದ್ದ ಸಮಿತಿಯು ಎಎಫ್‌ಸಿಗೆ ವರದಿ ಮಾಡಿತ್ತು ಎನ್ನಲಾಗಿದೆ.

ಕಂಠೀರವ ಕ್ರೀಡಾಂಗಣ ಪ್ರಜಾವಾಣಿ ಸಂಗ್ರಹ ಚಿತ್ರ

ಸಾಮಾನ್ಯವಾಗಿ ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್) ಬೆಂಗಳೂರು ಎಫ್‌ಸಿ ತಂಡವು ತಮ್ಮ ಪಂದ್ಯಗಳಿಗೆ ತವರಿನ ಕ್ರೀಡಾಂಗಣದ ಸುಸ್ಥಿತಿಗೆ ಮುತುವರ್ಜಿ ವಹಿಸುತ್ತಿತ್ತು. ಆದರೆ ಈ ಬಾರಿ ಐಎಸ್‌ಎಲ್ ಅನಿಶ್ಚಿತತೆಯಿಂದ ಕೂಡಿರುವ ಕಾರಣ, ಬಿಎಫ್‌ಸಿ ಈ ಬಾರಿ ಆಸಕ್ತಿ ಹೊಂದಿಲ್ಲ.

ಗೋವಾ ಮತ್ತು ಶಿಲ್ಲಾಂಗ್ ತಾಣಗಳು ಎಐಎಫ್‌ಎಫ್ ಮುಂದಿರುವ ಆಯ್ಕೆಗಳಾಗಿವೆ. ಶಿಲ್ಲಾಂಗ್‌ನಲ್ಲಿ ಈ ವರ್ಷದ ಆರಂಭದಲ್ಲಿ ಬಾಂಗ್ಲಾದೇಶ ವಿರುದ್ಧ ಏಷ್ಯನ್ ಕಪ್ ಅಂತಿಮ ಸುತ್ತಿನ ಅರ್ಹತಾ ಪಂದ್ಯವನ್ನು ಭಾರತ ಆಡಿತ್ತು. ಡುರಾಂಡ್ ಕಪ್‌ನ ಗುಂಪು ಹಂತದ ಪಂದ್ಯಗಳೂ ಅಲ್ಲಿ ನಡೆದಿದ್ದವು. ಗೋವಾದಲ್ಲಿ ಎಎಫ್‌ಸಿ ಚಾಂಪಿಯನ್ಸ್ ಲೀಗ್‌ನ ಕ್ವಾಲಿಫೈಯರ್ ಪಂದ್ಯಗಳು ನಡೆದಿವೆ.

ಖಾಲಿದ್ ಜಮೀಲ್ ಅವರು ಭಾರತ ಫುಟ್‌ಬಾಲ್ ತಂಡದ ಕೋಚ್ ಆಗಿ ಈಚೆಗೆ ನೇಮಕಗೊಂಡಿದ್ದು, ಸಿಂಗಪುರ ವಿರುದ್ಧದ ಎಎಫ್‌ಸಿ ಏಷ್ಯನ್ ಕಪ್ ಕ್ವಾಲಿಫೈಯರ್ ಅವರಿಗೆ ಮೊದಲ ಸವಾಲಾಗಿದೆ. ನಾಲ್ಕು ತಂಡಗಳಿರುವ ಸಿ ಗುಂಪಿನಲ್ಲಿ ಭಾರತ ಎರಡು ಪಂದ್ಯಗಳಲ್ಲಿ ಒಂದನ್ನು ಸೋತು, ಮತ್ತೊಂದರಲ್ಲಿ ಡ್ರಾ ಸಾಧಿಸಿ 1 ಅಂಕದೊಂದಿಗೆ ಕೊನೆಯ ಸ್ಥಾನದಲ್ಲಿದೆ. ಸಿಂಗಪುರ ತಂಡವು 4 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

'ಬೇಸರ ತಂದಿದೆ'

ಕಂಠೀರವ ಕ್ರೀಡಾಂಗಣದಲ್ಲಿ ನೈಸರ್ಗಿಕ ಹುಲ್ಲಿನ ಪಿಚ್ ಸೇರಿದಂತೆ ಸೌಲಭ್ಯಗಳ ಕೊರತೆಯ ಕಾರಣ ನೀಡಿ ಪಂದ್ಯಕ್ಕೆ ಅವಕಾಶ ನಿರಾಕರಿಸಲಾಗಿದೆ. ಬೆಂಗಳೂರಿಗೆ ಸಿಗಬೇಕಿದ್ದ ಅಂತರರಾಷ್ಟ್ರೀಯ ಪಂದ್ಯವೊಂದರ ಆತಿಥ್ಯ ಕೈತಪ್ಪಿರುವುದು ಬೇಸರ ತಂದಿದೆ. ಇದೇ ಕ್ರೀಡಾಂಗಣದಲ್ಲಿ ಈ ಹಿಂದೆ ಸ್ಯಾಫ್ ಪಂದ್ಯಗಳು ನಡೆದಿದ್ದವು.

ಎಂ. ಕುಮಾರ್, ಕಾರ್ಯದರ್ಶಿ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ